ಪುಸ್ತಕ ಪ್ರಪಂಚ

ಸೆಪ್ಟೆಂಬರ್ ೧೯೮೭



ಕಮಲಾ ದಾಸ್: ವಿಶೇಷ ಸಂಚಿಕೆ

ಪುಸ್ತಕ ಪ್ರಪಂಚ
ಮಾಸಿಕ

ಪರಿವಿಡಿ

೧. ಕಮಲಾ ದಾಸ್—ಒಂದು ಪರಿಚಯ
—ಸಿಡ್ ಹ್ಯಾರಿಕ್ಸ್
ಕನ್ನಡಕ್ಕೆ : ಡಾ॥ ಕೃಷ್ಣಮೂರ್ತಿ ಚಂದರ್ ೧

೨. ನನ್ನ ಕತೆ
—ಕಮಲಾ ದಾಸ್
ಅನು : ಶಂಸ ಐತಾಳ ... ೧೬

೩. ಎರಡು ಕತೆಗಳು
—ಕಮಲಾ ದಾಸ್
ಅನು : ಡಾ॥ ಸಿ. ಪಿ. ಕೆ. ... ೨೩

೪. ಜಿ. ಎಸ್. ಶಿವರುದ್ರಪ್ಪ : ಬದುಕು-ಬರಹ
—ಲಕ್ಷ್ಮೀನಾರಾಯಣ ಅರೋರಾ ... ೨೮

೫. ಐದು ಕವನಗಳು
—ಜಿ. ಎಸ್. ಶಿವರುದ್ರಪ್ಪ ... ೩೮

೬. ಮಕ್ಕಳಿವರೇನಮ್ಮಾ ನಾ ಹಡೆದ ?
—ಜಿ. ಟಿ. ನಾರಾಯಣರಾವ್ ... ೪೫

೭. ಶಂಕರಾಚಾರ್ಯರ ಕೃತಿಗಳಲ್ಲಿ ಕಾವ್ಯಗುಣ
—ಡಾ॥ ಸಿ. ಪಿ. ಕೆ. ... ೫೧

೮. ಸ್ವಾಮಿ ವಿವೇಕಾನಂದ : ಶಕ್ತಿಯ ಸಂಕೇತ
—ಕೆ. ಎಸ್. ಭಗವಾನ್ ... ೫೭

೯. ವಯಸ್ಕರ ಶಿಕ್ಷಣ ಮತ್ತು ಖುಷ್ಕಿ ಬೇಸಾಯ
ತಂತ್ರಜ್ಞಾನ—ಟಿ. ಎಸ್. ಶಂಕರಲಿಂಗಪ್ಪ ೬೩

೧೦. ಎಲ್ಲರೂ ಶಿಕ್ಷಣ ಪಡೆಯುವರೆ ?
—ರಾಜಾಹೊಸಮಾಳ ... ೭೦

೧೧. ಶ್ರೀಸಾಮಾನ್ಯ ಉವಾಚ-ಸಂಜೆಗಣ್ಣಿನ
ಹಿನ್ನೋಟ
—ಪ್ರೊ॥ ಎ. ಎನ್. ಮೂರ್ತಿರಾವ್ ... ೭೬

ಪುಸ್ತಕ ವಿಭಾಗ

೧೨. ಯುದ್ಧ ಮತ್ತು ಶಾಂತಿ
—ಲಿಯೋ ಟಾಲ್‌ಸ್ಟಾಯ್
ಅನು : ಪ್ರೊ॥ ದೇಜಗೌ ... ೮೯

ಸಂಪುಟ : ೪೨ ಸಂಚಿಕೆ-೨

PUSTAKA PRAPANCHA : Monthly

Published and printed by Karnataka State Adult Eductaion Council, Mysore-4 Pages 128. Price : Rupees three

ಬಿಡಿಪ್ರತಿ : ರೂ. 5

ವಾರ್ಷಿಕ ಚಂದಾ : ರೂ. 30

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 300

ಸಂಸ್ಥೆಗೆ : ರೂ. 500

ಪ್ರಕಟಣೆ ೧೨.೮.೮೨

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು–570 004

ಕಮಲಾ ದಾಸ್—ಒಂದು ಪರಿಚಯ

ಸಿಡ್ ಹ್ಯಾರೆಕ್ಸ್

ಈ ಲೇಖನದಲ್ಲಿ ನಾನು ಕಮಲಾ ದಾಸ್ ಎಂಬ ಸಮಕಾಲೀನ ಭಾರತೀಯ ಕವಿಯಿತ್ರಿಯ ಬಗ್ಗೆ ಕೇಂದ್ರೀಕರಿಸುತ್ತ ಭಾರತೀಯ ಸಾಹಿತ್ಯ ಪರಂಪರೆಯ ಅರಿವು ಕಮಲಾ ದಾಸ್‌ಳ ಓದುಗಾರನ ಓದುವಿಕೆಯನ್ನು ಶ್ರೀಮಂತಗೊಳಿಸುವ ಕೆಲವು ಮಾರ್ಗಗಳನ್ನು ಸೂಚಿಸಬಯಸುತ್ತೇನೆ. ಕಮಲಾ ದಾಸ್‌ಳ ಕವಿತೆಯಲ್ಲಿದ್ದ ವೈಯುಕ್ತಿಕ ಜೀವನದಲ್ಲಿನ ಸೆಳೆತಗಳನ್ನು, ಬಿಕ್ಕಟ್ಟುಗಳನ್ನು ನಿರೂಪಿಸುವಾಗ ಆಕೆ ಬಳಸುವ ಕವಿತಾ ವಿಧಾನಗಳನ್ನು ಈ ವಿಧಾನ ಗಮನಕ್ಕೆ ತೆಗೆದುಕೊಳ್ಳುತ್ತದೆ; ಹಾಗೂ ಇವು ಭಾರತದಲ್ಲಿನ ಇಂಗ್ಲಿಷ್ ಕಾವ್ಯದ ಕೆಲವು ತೊಡಕುಗಳನ್ನು ಅಥವಾ ಪ್ರವೃತ್ತಿಗಳನ್ನು ಬಿಂಬಿಸುತ್ತವೆಂದು ಗಮನಿಸುತ್ತದೆ. ಕಮಲಾ ದಾಸಳ ವೈಯುಕ್ತತೆ ಅಥವಾ ನವ್ಯತೆ ಪ್ರಾಯಶಃ ಆಕೆ ಅರಿವಿಲ್ಲದೆಯೇ ನಿಯುತವಲ್ಲದ ಸಮಸ್ಯೆಗಳಿಗೂ, ಸಾಂಸ್ಕೃತಿಕ ಅಸಂಬದ್ಧತೆಗೂ ಪ್ರತಿಕ್ರಿಯಿಸುವುದರಲ್ಲೇ ಕೊಂಚ ಭಾಗವಾದರೂ ಇದೆ ಎಂದು ಸೂಚಿಸಬಯಸುತ್ತೇನೆ. ಈ ರೀತಿಯ ಕವಿತಾ ಭೂತಕ್ಕೂ ಸೇರಿದಂತೆ ಕಮಲಾ ದಾಸ್ ಕವಿತೆಯಲ್ಲಿ ಭೂತಕಾಲ ಇನ್ನೊಂದು ವಿಧದಲ್ಲಿ ಮುಖ್ಯವಾದ ಅಂಶವಾಗುತ್ತದೆ. ಏಕೆಂದರೆ ಬಹಳಷ್ಟು ಕವಿತೆಯಲ್ಲಿ ಆಕೆಯ ವೈಯುಕ್ತಿಕ ಹಾಗೂ ಮನೆತನದ ಚರಿತ್ರೆಯ ಲಂಬಿತ ಇರುವಿಕೆ ಕಂಡುಬರುತ್ತದೆ.

ಭಾರತ ದೇಶದ ಇಂಗ್ಲಿಷ್ ಕಾವ್ಯದ ಮೂಲ ಎರಡು ಸಾಂಸ್ಕೃತಿಕ ಘಟನೆಗಳನ್ನು ಸೇರಿಕೊಂಡಿದ್ದಾಗಿದೆ. ೧) ಕೆಲವೇ ಭಾರತೀಯರಿಗಾಗಿದ್ದ ಆಂಗ್ಲ ಶಿಕ್ಷಣದ ರಾಜಕೀಯ ಸಮರ್ಥನೆಯ ಯಶಸ್ಸು ೨) ೧೮೨೦ ರಲ್ಲಿ ಹೆನ್ರಿ ಡೆರೋಜಿಯೇನ (೧೮೦೬–೧೮೩೧) ಕಾವ್ಯ. ಹತ್ತೊಂಭತ್ತನೇ ಶತಮಾನದ ಮೊದಮೊದಲಲ್ಲಿ ಮುಖ್ಯವಾಗಿ ಕಲಕತ್ತದಲ್ಲಿ, ಪೌರಸ್ತ್ಯರಿಗೂ ಹಾಗೂ ಆಂಗ್ಲೀಕರಿಗೂ ದೊಡ್ಡ ವಾಗ್ವಾದವೇ ನಡೆಯುತ್ತಿತ್ತು. ಬ್ರಿಟೀಷರು

ಪೌರಸ್ತ್ಯ ಶಿಕ್ಷಣ ನೀತಿಯನ್ನೇ ಮುಂದುವರೆಸುತ್ತ ಅದಕ್ಕೇ ಸಂಪೂರ್ಣ ಬೆಂಬಲ ಹಾಗೂ ಆರ್ಥಿಕ ಬೆಂಬಲವನ್ನು ಕೊಡಬೇಕೆಂದೂ ಅದು ಸಂಸ್ಕೃತ ಪರ್ಷಿಯನ್ ಹಾಗೂ ಅರೇಬಿಕ್ ವ್ಯಾಸಂಗದ ಮೂಲ ಹೊಂದಿರಬೇಕೆಂದು ಪೌರಸ್ತ್ಯರು ಇಚ್ಛಿಸಿದ್ದರು. ಆಂಗ್ಲೀಕರು ಬ್ರಿಟೀಷರು ಇಂಗ್ಲಿಷ್ ಪದ್ಧತಿಯ ಶಿಕ್ಷಣ ಪದ್ಧತಿಯನ್ನು ಐರೋಪ್ಯ ಚಿಂತನೆಗಳಾದ ಜ್ಞಾನ, ಉದರಾಭಿಪ್ರಾಯ, (ಎನ್‌ಲೈಟನ್‌ಮೆಂಟ್, ಲಿಬರಲಿಸಂ) ವಿಜ್ಞಾನ ಹಾಗೂ ಯಂತ್ರ ಕಲಾಶಾಸ್ತ್ರ ಆಧಾರಿತ ಇಂಗ್ಲಿಷ್ ಶಿಕ್ಷಣ ಪದ್ಧತಿಯನ್ನು ಇಚ್ಛಿಸಿದ್ದರು. ಪ್ರಾಯಶಃ ಈ ಆಂಗ್ಲೀಕರ ಬಹಳ ಹೆಸರಾಂತವಾದಿ ರಾಜಾರಾಮ್ ಮೋಹನ್‌ರಾಯ್ (೧೭೭೨–೧೮೩೩) ಆಗಿದ್ದನು. ಇಂಡಿಯಾದಲ್ಲಿ ಐರೋಪ್ಯ ಶಿಕ್ಷಣದ ಅವಶ್ಯಕತೆಯ ಬಗ್ಗೆ ೧೮೨೩ ರಲ್ಲಿ ಆತ ಲಾರ್ಡ್ ಆಮ್‌ಹರ್ಸ್ಟ್‌ರಿಗೆ ಕಾಗದವೊಂದನ್ನು ಬರೆದನು.

ರಾಯರ ಕಾಗದದ ಫಲವೇ ಥಾಮಸ್ ಮಕ್ಕಾಲೆಯ ಪ್ರಸಿದ್ಧ ೧೮೩೫ ರ 'ಮಿನಿಟ್ ಆನ್ ಎಡುಕೇಷನ್', 'ಶಿಕ್ಷಣದ ಕರಡುಲೇಖನ'. ಆಂಗ್ಲಭಾಷೆಯ ಕುಶಲಿಯಾಗಿದ್ದ ಆತ ಬರೆದ ಈ ಕರಡು ಲೇಖನ', ರಾಯನ ಕಾಗದದ ತರಹವೇ ಅನೇಕ ಅರ್ಥ ವಿಶೇಷಗಳನ್ನು ಒಳಗೊಂಡ ಭಾಷೆಯಿಂದ ಕೂಡಿದದ್ದಾಗಿತ್ತು. ಆತನ ಶ್ರೋತೃಗಳು ಆಂಗ್ಲೀಕ ಸಂಸ್ಕೃತಿಯ ನಗಾರಿಯ ಜಲಪಾತದ ಧಾರೆಯ ನಂತರ ಬ್ರಿಟೀಷರ ವಾಸ್ತವ ನಿರೂಪಣೆಯ (ಪ್ರಾಗ್ಮಾಟಿಸಂ) ಸೌಂದರ್ಯವನ್ನು ಅರಿಯುವಂತೆ ಮನಬರಿಸುವಂತಿತ್ತು ಅಥವಾ ಗಡುಸಾಗಿ ಮನಬರಿಸುವಂತಿತ್ತು. ಮೆಕಾಲೆ ಬರೆಯುತ್ತಾನೆ.

> ನಮ್ಮ ಹಾಗೂ ನಾವು ಆಳುವ ಅಸಂಖ್ಯಾತರ ಮಧ್ಯೆ ದುಭಾಷಿಗಳಾಗಬಲ್ಲ ಇನ್ನೊಂದು ವರ್ಗವನ್ನು ನಾವು ರೂಪಿಸಲು ಸಾಧ್ಯವಾದಷ್ಟುಮಟ್ಟಿಗೆ ಪ್ರಯತ್ನಿಸಬೇಕು; ವರ್ಣದಲ್ಲಿ, ನರನಾಡಿಗಳಲ್ಲಿ ಭಾರತೀಯರಾಗಿದ್ದರೂ, ಬುದ್ಧಿಯಲ್ಲಿ, ನೈತಿಕತೆಯಲ್ಲಿ, ಇಷ್ಟಾನಿಷ್ಟಗಳಲ್ಲಿ, ನಂಬಿಕೆಗಳಲ್ಲಿ ಇಂಗ್ಲಿಷರಾಗಿರತಕ್ಕದ್ದು.

ಈ ರೀತಿಯ ಅಂತರ–ಸಾಂಸ್ಕೃತಿಕ ಘಟ್ಟದಲ್ಲಿ ಹುಟ್ಟಿದ ಕವಿಯಿತ್ರಿ ತೋರುದತ್ (೧೮೫೬–೧೮೭೭) ಆಕೆಯ (ಏನ್‌ಷಿಯೆಂಟ್ ಬ್ಯಾಲೆಡ್ಸ್ ಅಂಡ್ ಲೆಜೆಂಡ್ಸ್ ಆಫ್ ಹಿಂದೂಸ್ತಾನ್) ಪುರಾತನ ಭಾರತೀಯ ಲಾವಣಿಗಳು ಮತ್ತು ಜೀವನಕಥೆಯಲ್ಲಿ ಆಕೆ ತನ್ನ ಸಂಸ್ಕೃತದ ಪುರಾತನತೆಯನ್ನು ಇಂಗ್ಲಿಷ್ ಭಾಷಾ ಮಾಧ್ಯಮದ ಮುಖಾಂತರ ಪುನರ್ ಪ್ರವೇಶಿಸುತ್ತಾಳೆ. ಆಕೆಯ ಮುಖ್ಯ ಗುರಿ ಇಂಗ್ಲಿಷ್‌ಭಾಷೆ ನವ್ಯ ಹಾಗೂ ಪುರಾತನ, ಸಮಕಾಲೀನ ಕವಿತಾ ಶಕ್ತಿ ಹಾಗೂ ಹಳೆಯ ಪುರಾಣಕತೆಯ ಮಧ್ಯೆ ಹಾಯುವುದೇ ಆಗಿದೆ. ಭಾರತಕ್ಕೆ ಒಂದು ಹೊಸ ಐರೋಪ್ಯ ಕವಿತ್ವವನ್ನು, ಆಂಗ್ಲ ಸಾಹಿತ್ಯಕ್ಕೆ ಹೊಸದಾದ ಒಂದು ಪುರಾತನ ಪುರಾಣತೆಯನ್ನೂ ತಂದು ಕೊಡುವುದೇ ಆಗಿದೆ. ಈ ಅಭಿಲಾಷೆಗಳು ನವ್ಯ ಕವಿಗಳಾದ ನಿಸಿಂ ಎಸೆಕೀಲ್, ಕಮಲಾ ದಾಸ್, ಪಿಲಾಲ್, ಹಾಗೂ ಎ. ಕೆ. ರಾಮಾನುಜಮ್‌ರಂತಹ ಹೊಸ ಭಾರತದ ಇಂಗ್ಲಿಷ್

ಕವಿಗಳಲ್ಲಿ ವಾಸ್ತವವಾಗಿವೆ. ಆದರೆ ಕೆಲವಷ್ಟಾದರೂ ಅವರ ಕವಿತೆಯಲ್ಲಿನ ಅಭಿಮತಗಳು ತೋರುದತ್ತಳಿಂದ ಬಂದವು ಎಂಬುದನ್ನು ಕೊಂಚಮಟ್ಟಿಗಾದರೂ ಹೇಳಬಹುದಾಗಿದೆ.

ಕಮಲಾ ದಾಸ್ ವೈಲಕ್ಷಣ್ಯವಾದ ಯಥಾರ್ಥವಾದಿಯಾದ ಪದ್ಯ ಬಿಂಬಿತ ಗಾಜು (ದಿ ಲುಕಿಂಗ್ ಗ್ಲಾಸ್) ಪ್ರಾರಂಭವಾಗುವುದು ಹೀಗೆ ;

ಗಂಡಸೊಬ್ಬನನ್ನು ನಿನ್ನನ್ನು ಒಲಿಸುವಂತೆ ಮಾಡುವುದು ಸುಲಭ
ಹೆಂಗಸಾಗಿ ನಿನ್ನ ಬೇಕುಬೇಡಗಳ ಬಗ್ಗೆ ನೇರವಾಗಿದ್ದರೆ
ಸಾಕು.
ಆತನೊಂದಿಗೆ ಕನ್ನಡಿಯ ಮುಂದೆ ಬೆತ್ತಲಾಗು
ತಾನೇ ಬಲಿಷ್ಠನೆಂಬುದ ಆತ ಕಂಡು
ನಂಬಿಬಿಡುತ್ತಾನೆ, ಕೂಡ, ಮತ್ತು, ನೀನು, ಮತ್ತೂ ಹೆಚ್ಚೆಚ್ಚು
ಮೃದುವಾಗಿ, ಚಿಕ್ಕವಳಾಗಿ, ಸುಂದರವಾಗಿ...
ನಿನ್ನ ಮೆಚ್ಚುಗೆಯನ್ನು ಒಪ್ಪಿಕೊ
ಆತನ ಕೈಕಾಲುಗಳಲ್ಲಿನ ಪರಿಪೂರ್ಣತೆಯನ್ನು
ತುಂತುರು ನೀರಿನ ಕೆಳಗೆ ಆತನ ಕಣ್ಣುಗಳು
ಕೆಂಪಾಗುವುದು, ಬಚ್ಚಲ ಮನೆಯಲ್ಲಿನ ನಾಚಿನ ನಡೆತ,
ಟವೆಲ್ಲುಗಳ ಬೀಳುವಿಕೆ ಹಾಗೂ ಚುರಚುರ್‍ರನೆ ಆತ
ಉಚ್ಚೆಹುಯ್ಯುವುದನ್ನೂ, ಕಾಣು.

ಈ ಕವಿತೆ ಯಾವ ಆಡಂಬರವೂ ಇಲ್ಲದೆ, ನೇರವಾಗಿ, ತಕ್ಷಣದಲ್ಲಿ ಪ್ರಚಲಿತ ಕಲ್ಪನೆಗಳನ್ನು ಮುರಿದೊಗೆಯುವ ಕಮಲಾ ದಾಸ್‌ಳ ವಸ್ತುಗಳನ್ನೂ ಪರಿಚಯಿಸುತ್ತದೆ. ಇವುಗಳು ಭಾರತದ ಸಮಾಜದಲ್ಲಿನ ಮದುವೆ ಎಂಬ ಸಂಸ್ಥೆಯಲ್ಲಿ ಹೆಣ್ಣಿನ ಕಷ್ಟಗಳು, ಹಾಗೂ ಪ್ರೀತಿ, ಒಲವಿನ ಬದಲಾಗಿ ಗಂಡಿನ ಕಾಮ ಹಾಗೂ ನಿರ್ಲಕ್ಷ್ಯ. ಈ ವಸ್ತುಗಳ ಬಗ್ಗೆ ಇರುವ ಪದ್ಯಗಳಲ್ಲಿ ಆಕೆ ಭಾರತೀಯ ಸ್ತ್ರೀಯ ಬಗ್ಗೆ ಸಾವಿತ್ರಿ ಹಾಗೂ ಸೀತೆಯ ಮಾದರಿಯ ತ್ಯಾಗ ಹಾಗೂ ಭಕ್ತಿಯಂತೆ ಇರುವ ಮಹಾ ಸಂಪ್ರದಾಯೀ ಮತನಿಷ್ಠೆಯ ಆದರ್ಶಗಳನ್ನು ತಲೆಕೆಳಗಾಗಿಸಿ, ತಿರುಮುರುಗಿಸುತ್ತಾಳೆ. ಇದನ್ನು ಆಕೆ ತೃಪ್ತಳಾದಂತೆ ಇರುವ ಮಾದರಿ ಎಂಬಂತಿರುವ ಹೆಣ್ಣುತನಕ್ಕೆ ವಿರುದ್ಧವಾಗಿ ಲೈಂಗಿಕ ಅನುಭವ ಹಾಗೂ ಹೆಣ್ಣಿನ ನರಳುವಿಕೆಯ ಪಾಡನ್ನು ಇಟ್ಟು ತೋರುತ್ತಾಳೆ. ಈ ಪದ್ಯಗಳನ್ನು ಆಕೆ ಇಂಗ್ಲೀಷಿನಲ್ಲಿ ಬರೆಯುವುದರಿಂದ ಆಕೆ ಸಾಂಸ್ಕೃತಿಕ ಆಗುಹೋಗುಗಳಿಂದ ದೂರವಾಗಿಸಬಲ್ಲ, ಹಾಗೂ ಆ ಕ್ರಿಯೆಯಿಂದ ಮುಚ್ಚುಮರೆಯಿಲ್ಲದೆ, ನೇರವಾಗಿ, ವಿಮರ್ಶಾತ್ಮಕವಾಗಬಲ್ಲ ಎಚ್ಚರಿಕೆಯ ಭಾಷೆಗೆ ಏರುತ್ತಾಳೆ. ಇದರಿಂದಾಗಿ ಆಕೆ ನೀತಿ ನಿಯಮಗಳಿಂದ ಅಸಾಂಪ್ರದಾಯಿಕವಾಗುವುದೂ ಹೌದು. 'ಬಿಂಬಿತ ಗಾಜು' (ದಿ ಲುಕಿಂಗ್ ಗ್ಲಾಸ್) ನಲ್ಲಿ ಆಕೆ ವ್ಯಂಗ್ಯವಾಗಿ ಭಾರತೀಯ ಗಂಡಿನ ಅಹಂಭಾವದ ಹಾತೊರಿಕೆಗಳನ್ನೂ ಜೊತೆಗೇ ದೀನಭಾವದ ಹೆಣ್ಣಿನ ಲೈಂಗಿಕ ರಾಜಕೀಯದ ಬಗ್ಗೆ ಕಹಿ ವ್ಯಂಗ್ಯದಲ್ಲೂ ಕಾಣಬಹುದು. ಈ ಇರುವಿನ ನೆಲೆ ಪಾಡುಗಳು ವಿಧಿಯಿಲ್ಲವೇನೋ ಎಂಬಂತೆ ಹೆಣ್ಣುಶಕ್ತಿಯ ಒಂಟಿತನಕ್ಕೂ, ನರಳುವಿಕೆಗೂ, ನಾಶಕ್ಕೂ ಕಾರಣವಾಗುವುದು ಸಹಜ. ಕಮಲಾ ದಾಸಳ ಬಹಳಷ್ಟು

ಪದ್ಯಗಳು ಗತಕಾಲದ ಬಂಧನಗಳಿಂದ, ಲೈಂಗಿಕವಾಗಿಯೂ ಮನೆ ವಾತಾವರಣ ದಿಂದಲೂ ವಿಮುಕ್ತಳಾಗ ಬಯಸುವ ನವ್ಯ ಭಾರತದ ಹೆಣ್ಣಿನ ದ್ವಂದ್ವವನ್ನು ಎತ್ತಿ ತೋರಿಸುತ್ತವೆ.

ಆಕೆಯ ಈ ಎಲ್ಲ ನೋವಿನ ಕಷ್ಟಗಳಿಂದಾಗಿ ಆಕೆ ಸಮಾಜದ ಕೋಪ, ಬಹಿಷ್ಕಾರ ಹಾಗೂ ಕುಪ್ರಸಿದ್ಧಿಯನ್ನು ಪಡೆಯಬೇಕಾಯಿತು. ಆಕೆಯ ಆತ್ಮಚರಿತ್ರೆ "ನನ್ನ ಕತೆ" (ಮೈ ಸ್ಟೋರಿ, ೧೯೭೬)ರಲ್ಲಿ ಇದ್ದು ತುಟ್ಟತುದಿಗೇರಿತು. ಅದರಲ್ಲಿನ 'ಸಾಹಿತ್ಯಕ ವಿವಸ್ತ್ರ', 'ಕಮಲಾದಾಸ್‌ಳ ಕಾಮಸೂತ್ರ' ಇತ್ಯಾದಿ ಮುಖ್ಯ ಶೀರ್ಷಿಕೆಗಳ ಸ್ವಯಂ ವರ್ಣನೆಯಿಂದ ಇವು ಕ್ರೂರತೆಯ ಶಿಖರವನ್ನೇರಿತು. ಟೈಮ್ ಅಂತೂ 'ಕಮಲಾ ದಾಸಳ ಕಾಮಸೂತ್ರ'ವನ್ನಾಕೆಯ ಮೇಲಿನ ಲೇಖನದ ಶೀರ್ಷಿಕೆಯನ್ನಾಗಿಯೇ ಬಳಸಿತು ಕೂಡ. ಇದೇ ಪತ್ರಿಕೋದ್ಯಮ ಆಕೆಯ ಭಾವಚಿತ್ರದ ಜೊತೆಗೆ 'ಬಾಂಬೆಯ ಅಪಾರ್ಟ್‌ಮೆಂಟಿನ ಮಲಗುವ ಕೋಣೆಯಲ್ಲಿರುವ' ಶೀರ್ಷಿಕೆಯನ್ನೂ ಪ್ರಕಟಿಸಿತು. ಆ ಚಿತ್ರದಲ್ಲಾಕೆ ಸೀರೆಯನ್ನು ಉಟ್ಟಿಲ್ಲ, ಬದಲಾಗಿ ಗೌರವಾನ್ವಿತ ಉಡುಪನ್ನು ಧರಿಸಿದ್ದಾಳೆ. ಅದೇ ಹಾಳೆಯಲ್ಲಿನ ಆಕೆಯ ಜೊತೆಗಿನ ಸಂದರ್ಶನ ಆಕೆಯ ಚಿಂತನೆಯ ಹಾದಿಯನ್ನು ತೋರಿಸುತ್ತದೆ ;

> ಪ್ರೇಮ ಎನ್ನುವುದು ಸಂತೋಷದ ವಸ್ತು. ಪ್ರೇಮ ಕೆಡುಕಾದಾಗ,
> ಮುಚ್ಚುಮರೆಯದಾಗ ನಾನದನ್ನು ದ್ವೇಷಿಸುತ್ತೇನೆ...
> ನಾವು ನಮ್ಮ ಹೆಣ್ಣುಮಕ್ಕಳಲ್ಲಿ ಪಾಪ ಪ್ರಜ್ಞೆ ಮೂಡಿಸುತ್ತೇವೆ
> ಪ್ರತಿ ಮಧ್ಯಮ ದರ್ಜೆಯ ಹಾಸಿಗೆಯಲ್ಲೂ ಹೆಂಗಸು
> ಶಿಲುಬೆಗೇರುತ್ತಾಳೆ. ನಾನು ಕೇರಳದ ಹೆಣ್ಣಿನ
> ಅನಾಗರೀಕ, ದೌರ್ಜನ್ಯದ ಬಾಳತ್ತ ಬಾಣಗಳನ್ನು
> ಎಸೆಯುತ್ತೇನೆ. ಧರ್ಮಶುದ್ಧಿಗಳ ಮೂಗನ್ನು ಜುಂಗಿಸುತ್ತೇನೆ.
> ಹೆಣ್ಣೊಬ್ಬಳಿಗೆ ಗಂಡಿನ ತೊಡೆಯಸಂದಿಯಿಂದ ಮಾತ್ರ ಆತನ ಹೃದಯವನ್ನು
> ತಲುಪಸಾಧ್ಯ

ಕಮಲಾ ದಾಸ್ ಈ ಎಲ್ಲ ಭಾವನೆಗಳನ್ನು, ವಿಷಮುಗಳನ್ನು ತನ್ನ ಕವಿತೆಯ ಮೂಲಕ ವ್ಯಕ್ತಪಡಿಸುತ್ತಾಳೆ. ಏಟ್ಸ್‌ಕವಿಯ ಕವಿತೆಯ ಗುರಿಯಾದ

> ಬೆತ್ತಲೆ ನಡೆಯುವುದರಲ್ಲಿ
> ಹೆಚ್ಚು
> ಕೆಚ್ಚಿದೆ

ಎಂಬುದನ್ನು ತನ್ನದೇ ಆದ ರೀತಿಯಲ್ಲಿ ತನ್ನದಾಗಿ ಮಾಡಿಕೊಳ್ಳುತ್ತಾಳೆ. ಆಕೆಯ ನನ್ನ ಕತೆಯಲ್ಲಿ ವಿವಾದಾತ್ಮಕವಾದ ತನ್ನ ಆಸೆ ಆಕಾಂಕ್ಷೆಗಳನ್ನು ಓದುಗಾರರ ಜೊತೆ ಹಂಚಿಕೊಳ್ಳುವುದಾಗಿಯೂ, ಅದರಿಂದಾಗಿ ಅವರು ಪ್ರಯೋಜನ ಪಡೆಯಬಹು ದಾಗಿ ಆಕೆ ಹೇಳಿಕೊಳ್ಳುತ್ತಾಳೆ. ಇದಕ್ಕಾಗಿ ಆಕೆ ತಾನು ನಿವೇದನಾಕವಿಯಿತ್ರಿಯೆಂಬ

(ಕನ್‌ಪೆಷನ್ ಪ್ರೊಯೆಟ್) ಕಲ್ಪನೆಯನ್ನು ವಿಶೇಷ ಉಪಮೆಯ ಮೂಲಕ ಎತ್ತಿ ಹಿಡಿಯುತ್ತಾಳೆ.

ನಾನು ಆಗ್ಗಾಗ್ಗೆ ನನ್ನನ್ನೇ ವಿಭಿನ್ನಗೊಳಿಸುತ್ತ
ಹೊರತೆಗೆದು, ನನ್ನೆಲ್ಲ ಚೂರುಗಳನ್ನು ಹೃದಯ
ಕರಳುಗಳು, ಪಿತ್ತಜನಕಾಂಗ, ಜನನೇಂದ್ರಿಯಗಳು,
ಚರ್ಮ, ಕೂದಲು ಹಾಗೂ ಮತ್ತೆಲ್ಲವನ್ನು ದೊಡ್ಡ
ಹಿನ್ನೆಲೆಯಲ್ಲಿಟ್ಟು ನನ್ನ ಓದುಗರಿಗೆ ಕಾಣಿಕೆಯಾಗಿ
ಅರ್ಪಿಸಬೇಕೆಂದು ಇಚ್ಛಿಸುತ್ತೇನೆ.

ಕಮಲಾ ದಾಸಳ ಪದ್ಯ "ಒಂದು ಪರಿಚಯ"ದಲ್ಲಿ ನಮಗೆ ಒಬ್ಬ ವ್ಯಕ್ತಿಯಾಗಿಯೂ ಹಾಗೂ ಕವಯಿತ್ರಿಯಾಗಿಯೂ ಒಂದು ಪರಿಚಯ ಸಿಗುತ್ತದೆ. ಈ ಪದ್ಯ ವ್ಯಕ್ತಿತ್ವದ ಅನನ್ಯತೆಯ ಬಗೆಗಿದ್ದು, ಅದರಲ್ಲಿ ಆಕೆ ತನ್ನನ್ನು, ಮಿತ್ರರಿಗೂ, ಓದುಗರಿಗೂ, ಮನೆ ತನಕ್ಕೂ ಅರ್ಥೈಸುತ್ತ, ಜೊತೆಗೇ ತನಗೆ ತಾನೇ ವಿವರಿಸಿಕೊಳ್ಳುತ್ತ ಸಾಗುತ್ತಾಳೆ. ಆಕೆಯ ಸಾಹಿತ್ಯಿಕ 'ಅನನ್ಯತೆ ಆಕೆ ದುಭಾಷಿ ಲೇಖಕಿಯಾದ್ದರಿಂದ ಕ್ಲಿಷ್ಟವಾಗಿದೆ. ಆಕೆ ಮುಖ್ಯವಾಗಿ ಕಾವ್ಯಕ್ಕೆ ಇಂಗ್ಲೀಷನ್ನೂ, ಮಾತೃಭಾಷೆಯಾದ ಮಲೆಯಾಳಂ ಅನ್ನು ಆಕೆಯ ಗದ್ಯದಲ್ಲೂ ಬಳಸುತ್ತಾಳೆ. ಆಕೆ ತನ್ನ ಮಲೆಯಾಳಂನಲ್ಲಿ ಬಳಸುವ ಕಾವ್ಯ ನಾಮವಾದ ಮಾಧವಿಕುಟ್ಟಿಗೆ ಸಂಬೋಧಿತವಾದ ಪದ್ಯದಲ್ಲಿ ಕಾಣಸಿಗುತ್ತದೆ. ಪದ್ಯದ ಮಂಚೂಣಿಯಲ್ಲೇ ತಾನು ಇಂಗ್ಲಿಷ್ ಬಳಸುತ್ತಿರುವುದರಿಂದ ತಾನು ಬೇರೆ ದೇಶದ ಹಾಗೂ ಭಾರತದಲ್ಲೇ ಆಕೆಯ ಪರಿಚಯ ಇರದ ವಿಭಿನ್ನ ಓದುಗರನ್ನ ಸಂಬೋಧಿಸುತ್ತಿರುವುದನ್ನು ಕಾಣುತ್ತಾಳೆ; ಆಕೆಯ ಭಾಷೆಯನ್ನು ಭಾರತೀಯ ಇಂಗ್ಲಿಷ್ ಎಂದೂ, ಆಕೆಯ ವ್ಯಕ್ತಿತ್ವದ ಸಹಜ ತಡೆಯಿಲ್ಲದ ಹೊರಹೊಮ್ಮುವಿಕೆಯನ್ನು ತಿಳಿಸುತ್ತಾಳೆ:

ಇಂಗ್ಲಿಷಲ್ಲಿ ಬರೆಯಬೇಡ, ಅಂದರು ಅವರು,
ನಿನ್ನ ಮಾತೃಭಾಷೆಯಂತೂ ಅಲ್ಲ, ಇಂಗ್ಲಿಷು
ನನ್ನ ಪಾಡಿಗೆ ನನ್ನ ಬಿಟ್ಟುಬಿಡಿ,
ವಿಮರ್ಶಕರೆ, ಮಿತ್ರರೇ,
ನೋಡಬಂದಿರುವ ಸಂಬಂಧಿಗಳೇ.
ನನಗಿಷ್ಟವಾದ ಯಾವುದೇ ಭಾಷೆಯಲ್ಲಿ
ಆಡಲು ನನ್ನನ್ನೇಕೆ ಬಿಡಬಾರದು?
ನಾನಾಡುವ ಭಾಷೆ
ನನ್ನದಾಗುತ್ತದೆ ಆದರ
ಪವಿತ್ರತೆ, ವಿಲಕ್ಷಣತೆ ಎಲ್ಲ
ನನ್ನದು, ನನ್ನದು ಮಾತ್ರ. ಅರ್ಧ
ಇಂಗ್ಲಿಷು, ಇನ್ನರ್ಧ ಭಾರತೀಯ
ತಮಾಷೆಯಾಗಿ ಕಾಣಬಹುದು, ಆದರದು
ಪ್ರಾಮಾಣಿಕ, ನನ್ನಂತೆಯೇ ಮಾನವೀಯ,
ಕಾಣುವುದಿಲ್ಲವೇ?

ಕಮಲಾ ದಾಸ್ ಓದುತ್ತಿದ್ದಂತೆ ಮೂಡುವ ಮೊದಲ ಅಭಿಪ್ರಾಯ ಏನೆಂದರೆ ಆಕೆಯ ವ್ಯಕ್ತಿತ್ವದ ಮಾಧ್ಯಮದಿಂದ ಆಕೆಯ ಓದುಗರೊಡನೆಯ ಸಂಬಂಧ, ಅಥವಾ ಅದರ ಸಾಹಿತ್ಯಿಕ ಅಭಿವ್ಯಕ್ತಿ. ನನ್ನ ಕತೆಯಲ್ಲಿ ಆಕೆ 'ಕವಿಯ ಮೂಲ ಸಾಮಾಗ್ರಿ ಕವಿಯ ವ್ಯಕ್ತಿತ್ವವೇ' ಎಂದು ಘೋಷಿಸುತ್ತಾಳೆ. ಆಕೆಯ ಸಾಹಿತ್ಯ ಗದ್ಯವಾಗಲೀ, ಕಾವ್ಯವಾಗಲೀ—ಅದರಲ್ಲಿ ಬರುವ ವಸ್ತು, ದನಿ, ಕವಿ ಲಕ್ಷಣ, ಸಾಂಸ್ಕೃತಿಕ ವ್ಯಾಪಾರ—ಇವೆಲ್ಲವೂ ಆಕೆಯ ವ್ಯಕ್ತಿತ್ವ ಹಾಗೂ ಕವಿಯ ದನಿಯ ಮಾಧ್ಯಮದಿಂದ ಬೇರ್ಪಡಿಸಲು ಸಾಧ್ಯವಾಗದ್ದಾಗಿದೆ. ಆದ್ದರಿಂದಲೇ ಕಮಲಾ ದಾಸ್‌ಳ ವ್ಯಕ್ತಿತ್ವ ಹಾಗೂ ಕಲೆಯ ಗುಣವಿಶೇಷಗಳು (ಅಂತಃಪ್ರವೃತ್ತತೆ, ನೇರ ಮನಸ್ಸು, ಸ್ಪಷ್ಟ–ಪರೀಕ್ಷೆ ಹಾಗೂ ಒಪ್ಪಿಕೆ, ಒಡಂಬಡಿಕೆ, ಹೊರ ಸೌಂದರ್ಯ ಹಾಗೂ ನಾಜೂಕುಗಿಂತ ಮುಚ್ಚುಮರೆ ಇಲ್ಲದಿರುವಿಕೆ ಹಾಗೂ ರಸ) ಒಂದೇ ಎಂಬಂತೆ ತೋರುತ್ತವೆ. ದಾಸಳ ಕಾವ್ಯದ ರೂಪುಗಳು ಆತ್ಮದನಿಯ ನೇರ ಅಭಿವ್ಯಕ್ತಿಗಳಾಗಿವೆ. ಆದರೆ ಆ ವ್ಯಕ್ತಿದನಿಯೇ ತನ್ನನ್ನು ಸಂಕೇತವಾಗೂ ಹಾಗೂ ಪ್ರತಿನಿಧಿ ಸ್ವರೂಪವಾಗೂ ಕಾಣಬೇಕೆಂದು ಬಿನ್ನೈಸುತ್ತದೆ. ಹಾಗಾಗಿ, ಭಾರತೀಯ ಸಾಹಿತ್ಯದಲ್ಲಿನ ಹೆಣ್ಣುಧ್ವನಿಗೆ ಸಂಬಂಧಿಸಬಹುದಾದರೆ, ಭಾರತೀಯ ಇಂಗ್ಲಿಷ್ ಕಾವ್ಯದಲ್ಲಿ ಕಮಲಾ ದಾಸ್‌ಗಳ ಕಾವ್ಯ ಸಾಂಸ್ಕೃತಿಕ ನೆಲೆಯಾಗಿಯೂ, ಭಾರತೀಯ ಹೆಣ್ಣುತನದ ಆದರ್ಶದ ಸ್ತುತಿಯಾಗಿಯೂಹೊರ ಹೊಮ್ಮುತ್ತದೆ.

ಪ್ರಾಯಶಃ ಕಮಲಾ ದಾಸಳ ಕಾವ್ಯದಲ್ಲಿ ಕಂಡುಬರುವ ಆತ್ಮಕತೆಯ ಸತ್ಯಸಂಧತೆಯೇ ಅವಳ ಕಾವ್ಯವನ್ನು ರೂಪಿಸುವ ಆಖ್ಯಾನದನಿ. ಆಕೆಯ ಕಾವ್ಯದ ಓದುಗರು ಅದರ ಬಿಚ್ಚುಮನಸ್ಸು ಹಾಗೂ ನೇರ ಸರಳತೆಯನ್ನು ಗೌರವಿಸುತ್ತಲೇ ಕಮಲಾದಾಸಳ ಜೊತೆಗೆ ಬರುವ 'ನನ್ನಲ್ಲಿ ಯಾವ ಗುಟ್ಟುಗಳೂ ಇಲ್ಲ' ಎಂಬುವ ಹೇಳಿಕೆಯನ್ನು ಸಂಶಯಿಸಬಹುದು. ಆಕೆಯ ಕಾವ್ಯದಲ್ಲಿ ಆರೋಪಿಸಲಾದ ಶಕ್ತಿಶಾಲೀ ಭಾವನಾತ್ಮಕ ವಿಚಾರಗಳೂ ಆತ್ಮತೃಪ್ತಿಯ ಭಾವನೆಗಳ ಮಧ್ಯೆಯೂ, ಮರೆಯಾಗುವಂತೆ ಕಂಡುಬರುವ ಪ್ರತ್ಯೇಕತೆಯ ಗೆರೆಯ ಬಗೆಗಿನ ವಿಚಾರವೆನಿಸಬಹುದು.

ಕಮಲಾ ದಾಸಳ ಕಾವ್ಯದಲ್ಲಿನ ಆತ್ಮಕತೆಯ ಒಂದು ವೈಶಿಷ್ಟ್ಯತೆ ಏನೆಂದರೆ ಕೇಂದ್ರಾಪಗಾಮಿ ಹಾಗೂ ಕೇಂದ್ರಾಭಿಗಾಮಿ ದರ್ಶನಗಳನ್ನು ಒಡಂಬಡಿಸುವುದು (ಸೆಂಟ್ರಿಫ್ಯೂಗಲ್ ಹಾಗೂ ಸೆಂಟ್ರಿಪೀಟಲ್). ಇದನ್ನು ನಾವು

"ನಾನಿಂದು ಅಂತಃಭಾಗವೆಲ್ಲ
ಹೊರಹೊಮ್ಮಿದ ಪ್ರಾಣಿ"

ಮತ್ತು

"ಬಹಳ ವರ್ಷಗಳು ನಾ ನನ್ನ ಮನವರಿಯಲು
ಕಳದೆ, ಹೊರ
ಚರ್ಮದ ಕೆಳಗೆ
ಒಳಮೂಳೆಯ ಕೆಳಗೆ"

ರೀತಿಯ ಸಾಲುಗಳಲ್ಲಿ ಕಾಣಬಹುದು. ಈ ವಿಧಾನ ಆಕೆಯೇ ಹೆಸರಿಡುವ "ನನ್ನ ಅಂತರ್‌ದನಿ"ಗೆ ಅದರ ಚೈತನ್ಯಭರಿತ ಹೊರಹೊಮ್ಮುವ, ಬಹಿರ್ಮುಖ ವೈಶಿಷ್ಟ್ಯತೆಯನ್ನು ತಂದುಕೊಡುತ್ತದೆ; ಲೈಂಗಿಕ 'ಮನಃಸ್ಥಿರತೆಯನ್ನೂ', ಮಾನಸಿಕ ವಿವಸ್ತ್ರತೆಯನ್ನು ಈ ಕೆಳಗಿನ ಸಾಲುಗಳು ಎತ್ತಿತೋರುತ್ತವೆ :

ನಾನೊಂದು ವೈಚಿತ್ರ್ಯ
ನೋರೆ ಉಳಿಸಿಕೊಳ್ಳುವುದಕ್ಕೆಂದೇ
ಆಗ್ಗಾಗ್ಗೆ
ಮಹಾನ್ ಜ್ವಾಲಾಮಾಲೆಯ
ಕಾಮುವ ಎತ್ತು
ತೋರುತ್ತೇನೆ

(ದಿ ಫ್ರೀಕ್ಸ್)

ಪ್ರೇಮವೆನ್ನುವುದು
ತಿರುತಿರುಗುವ ಗಾಜಿನ ಬಾಗಿಲಾಯ್ತು;
ಒಂದು ಒಳನುಗ್ಗಿದರೆ
ಹೊರಹೊಮ್ಮಿತ್ತು ಮತ್ತೊಂದು

(ಸಬ್‌ಸ್ಟಿಟ್ಯೂಟ್)

ಕಮಲಾ ದಾಸಳ ದನಿಯ ರೀತಿಯ ಮತ್ತೊಂದು ವಿಶಿಷ್ಟತೆ ಅದರ ನೈತಿಕ ಗಾಢ ಭಾವೋದ್ದೀಪ್ತತೆ; ಹೆಣ್ಣಿನ ಉದ್ಧಾರಕ್ಕಾಗಿಯೇ ಒಡಂಬಡಿಕೆಯ ಆಕೆಯ ಬರವಣಿಗೆ, ತಲತಲಾಂತರದಿಂದ ಬಂದಿರುವ ನೈತಿಕತೆಯ ಢಂಬತೆಯನ್ನು ಟೀಕಿಸಿದರೂ, ಆರಿಸಿಕೊಂಡ ಕೆಲವು ಸಾಂಪ್ರದಾಯಿಕ ಮೌಲ್ಯಗಳ ನೆಲೆಯಲ್ಲಿ ಕೈಗೂಡುವುದನ್ನು ಬಯಸುವುದನ್ನು ಕಾಣಬಹುದು.

ಕಮಲಾ ದಾಸಳ ಅಂತಃರ್ದನಿ ವ್ಯತಿರಿಕ್ತವಾದ ಮಾನಸಿಕ ಹಾದಿಗಳನ್ನೂ ಒಡಂಬಡಿಸುವುದನ್ನೂ ಎರಡು ಪದ್ಯಗಳ ಹೋಲಿಕೆಯಿಂದ ತೋರಿಸಬಹುದು ; ಅಂತರ್ಮುಖತ್ವ ಹಾಗೂ ಬಹಿರ್ಮುಖತ್ವದ ಈ ಎರಡು ವಿಧಾನಗಳನ್ನು ಶಿಲಾಯುಗ (ದಿ ಸ್ಟೋನ್ ಏಜ್) ಹಾಗೂ ಕಾಡ್ಗಿಚ್ಚು (ಫಾರೆಸ್ಟ್ ಫೈರ್) ಎಂದೆರಡು ಪದ್ಯದಳಲ್ಲಿ, ಮೊದಲದರಲ್ಲಿ ವೈಯುಕ್ತಿಕ ಅನುಭವದ ವಾಸ್ತವತೆಯನ್ನು, ಎರಡನೆಯದರಲ್ಲಿ ಹೊರಾನುಭವದ ಅಂತರತೆಯ ಪ್ರಯತ್ನವನ್ನು ಕಾಣಬಹುದು. 'ಶಿಲಾಯುಗ' ಕವಿಯ ಗಂಡ ಹಾಗೂ ಪ್ರೇಮಿಗಳ ಸಂಬಂಧದ ಕುರಿತಾಗಿದ್ದು, ಹತ್ತಿಕ್ಕುವ ಸಮಾಜದ ಕಟ್ಟಳೆಗಳಿಂದಾಗಿ ಅದರಲ್ಲಿರುವ ಲೈಂಗಿಕತೆಯ ಬಗೆಗಿನ ಮಾತು ಹಾಗೂ ಅನೈತಿಕ ಸಂಬಂಧದ ಉಲ್ಲೇಖದಿಂದ ಕುಪ್ರಸಿದ್ಧತೆಯನ್ನು ಪಡೆದಿದೆ. ಪ್ರೇಮ ಹಾಗೂ ಲೈಂಗಿಕ ನೈತಿಕತೆಯಮೇಲಿನ ಆಕೆಯ ಪದ್ಯಗಳು ಹೆಚ್ಚೆಚ್ಚು ನಿವೇದಿತ ಪ್ರವೃತ್ತಿಯನ್ನು ಎದುರಿಸುವ ಪ್ರದರ್ಶನಗಳೇ ಆಗಿವೆ.

‘ಶಿಲಾಯುಗ’ದಲ್ಲಿನ ‘ನಾನು’ ಎಂಬುದು ಅದರಲ್ಲಿನ ಸಾರ್ವಜನಿಕತೆಯ ಹೊರ ಹೊಮ್ಮುವಿಕೆಯ ಮೊದಲವಿಷಯ :

“ಸಂದಿ, ಕೊಂಡಿಗಳಿಂದ
ನೆರೆಹೊರೆಯವರು ಇಣಕಿಣಕಿ
ನೋಡುತ್ತಾರೆ”

ಈ ದನಿ ಮೊದಲು ನೇರವಾಗಿ ಗಂಡನಿಗೂ ಕಡೆಗೆ “ಪ್ರತಿಯೊಬ್ಬರನ್ನೂ” ಸಂಬೋಧಿಸುತ್ತದೆ. ಮಿಗಿಲಾಗಿ, ಪದ್ಯದ ಏರಿಳಿತ ಬರವಣಿಗೆಯ ಭಾಷೆಗಿಂತ ಆಡು ಭಾಷೆಯ ನೆಲೆಯನ್ನು ಹೊಂದಿರುವುದರಿಂದ ಕಡೆಗೆ ಉತ್ತೇಜಿತ ತುರ್ತಾದ ನಟನಾತ್ಮಕತೆಯನ್ನು ಪಡೆದುಕೊಳ್ಳುತ್ತದೆ; ಕವಿ ಹೊರಪ್ರಪಂಚವನ್ನು ತನ್ನನ್ನು ಕೇಳುವಂತೆ ಆಹ್ವಾನಿಸುವ ಪ್ರಶ್ನೆಗಳು ಹಾಗಾಗಿ ಉತ್ತರಿಸದೆಯೇ ಹೋಗಿ ವಿಮರ್ಶಾತ್ಮಕವಾಗಲ್ಲದೆ ಉದ್ವೇಗದಿಂದ ಕೊನೆಗೊಳ್ಳುತ್ತವೆ. ಭಿನ್ನೈಸಿದ ಅನುಭವದಿಂದ ನಮಗೆ ತಿಳಿಯುವುದು ಪ್ರೇಮವೆನ್ನುವುದು ಕ್ಷಣಿಕ ಹಾಗೂ ಆ “ಮನೋಲ್ಲಾಸ”ಕ್ಕೆ ಯಾವುದೋ ಒಂದು ರೀತಿಯ ಬೆಲೆ ತೆರಬೇಕಾಗುತ್ತದೆ ಎಂಬುದು. “ಆ ಬೆಲೆ” ಯಾವ ಬಗೆಯದು ಎಂಬುದು ನಮಗೆ ತಿಳಿಸಿಗುವುದಿಲ್ಲ. ಪದ್ಯದ ದನಿಯ ಲಯ, ಅದರ ಸಾಮಗ್ರಿಯಂತೆಯೇ ಲೈಂಗಿಕ ಕ್ರಿಯೆ ಹಾಗೂ ಅದರ ನಂತರದ ಅನುಭವವನ್ನು ಉತ್ತೇಜಿಸುವುದರಿಂದ ಓದುಗರಲ್ಲಿ ತಾತ್ವಿಕ ಶೂನ್ಯತೆಯಲ್ಲಿನ ಪ್ರಾಪಂಚಿಕ, ದೈಹಿಕ ಮುಕ್ತಾಯವೊಂದು ಸಿಗಬಹುದು. ಅಂತರ್ದನಿ ಪ್ರೇಮಿಯಿಂದ ಆಲಂಗಿಸಪಟ್ಟರೂ, ಕವಿ ದನಿ ಪ್ರಪಂಚವನ್ನು ವಿಟ್‌ಮನ್ನಿನ ತರಹದ ಉತ್ಸಾಹದಿಂದ ಆಲಂಗಿಸುತ್ತದೆ.

ಕಾಡ್ಗಿಚ್ಚಿನಲ್ಲಿ (ಫಾರೆಸ್ಟ್ ಫೈರ್) ಬೇರೆ ರೀತಿಯ ಒಳದನಿಯ ಪ್ರದರ್ಶನವನ್ನು ಕಾಣಬಹುದು. ಶಿಲಾಯುಗದಲ್ಲಿ ಕವಿಯ ಸೂಕ್ಷ್ಮಪ್ರಜ್ಞೆ ಪ್ರೇಮಿಯ ತರಹ ಪ್ರೇಮವನ್ನು ಹಂಬಲಿಸುವುದಾದರೆ ಅದನ್ನು ಹೊರ ಪ್ರಪಂಚಕ್ಕೇ ಘೋಷಿಸುವುದಾದರೆ, ಕಾಡ್ಗಿಚ್ಚು ಸೂಕ್ಷ್ಮಪ್ರಜ್ಞೆಯ ಬೇರೆ ಬೇರೆ ಬೇಡಿಕೆಗಳನ್ನು ಕಾವ್ಯಕ್ಕೆ ಇಳಿಸುತ್ತದೆ. ಈ ದೃಷ್ಟಿಕೋನ ಕವಿ ತನ್ನನ್ನು ತಾನು ಕಂಡುಕೊಳ್ಳುವುದರ ಬದಲಾಗಿ ಹೊರ ಪ್ರಪಂಚವನ್ನು ನೋಡುವುದೇ ಆಗಿದೆ. “ಕಾಡ್ಗಿಚ್ಚು” ಹಾಗೂ “ಶಿಲಾಯುಗ”ದ ದೃಷ್ಟಿಕೋನಗಳು ಆರ್. ಕೆ. ನಾರಾಯಣ್‌ರ ಕೃತಿಗಳಂತೆ ಕಮಲಾ ದಾಸ್‌ಳ ಕಾವ್ಯವೂ ಹೊರಮೈನಲ್ಲಿನ ಸರಳತೆಯ ಕೆಳಗೆ ಕ್ಲಿಷ್ಟ ಸಂಕೀರ್ಣತೆ ಕಂಡುಬರುತ್ತದೆ. ಜೊತೆಗೆ ನಾರಾಯಣ್ ತರಹ ಭಾರತೀಯ ಪ್ರಜ್ಞೆಗಳು ಮಾನವತೆಯ ಸಂಕೀರ್ಣತೆ ಜೊತೆ ಸೇರುತ್ತವೆ. ಕೊಂಚ ತಾತ್ವಿಕ ಆಯಾಮವೂ ಇರುವ ‘ಕಾಡ್ಗಿಚ್ಚು’ವಿನಂತರ ಪದ್ಯದ ಜೊತೆಗೆ, ದಾಸ್‌ಳ ಕಾವ್ಯದ ಮತ್ತೊಂದು ವೈಶಿಷ್ಟ್ಯವೇನೆಂದರೆ ಕಾವ್ಯರಚನೆಯ ಕ್ರಮದ ಬಗ್ಗೆಯೂ ಆಕೆಯ ಕಾವ್ಯ ಕೇಂದ್ರೀಕರಿಸುವುದು. ಹೊರ ವಾಸ್ತವತೆಯನ್ನು ಚಿತ್ರಣಗೊಳಿಸುವ ಮೊದಲು, ಅದರ ವಸ್ತುಗಳಾದ—ಮಗು, ಮಕ್ಕಳ ನೂಕುವ ಗಾಡಿ, ಪ್ರೇಮಿಗಳು, ವೃದ್ಧ, ರಸ್ತೆಯ ದೀಪಗಳು, ನರ್ತಿಸುವ ಹೆಣ್ಣುಗಳು, ಮದುವೆಯ ಮನೆಯ ತಮಟೆಗಳು, ಶಿಖಂಡಿಗಳು, ಗಾಯಗೊಂಡಿರುವರು, ಸಾವಿನಂಚಿನಲ್ಲಿರುವವರು









—ಇವೆಲ್ಲವನ್ನೂ ಒಳಗಾಗಿಸಿಕೊಂಡು, ಕವಿಯ ಚೈತನ್ಯ ಅದನ್ನು ತನ್ನದಾಗಿಸಿಕೊಂಡು, ಕಾವ್ಯ ಚಿಂತನೆಯ ಪ್ರಪಂಚದಲ್ಲಿ ಆ ವಸ್ತುಗಳು ವಾಸ್ತವವಾಗಿಸಬೇಕೆಂದು ಆಕೆ ವಾದಿಸುತ್ತಾಳೆ. ಕಾವ್ಯಭಾಷೆಯಲ್ಲಿ ಹೇಳುವುದಾದರೆ ಕವಿಯ ಈ ಚಿಂತನೆ ಡಿಲಾನ್ ಥಾಮಸ್ ಆತನ "ನನ್ನ ಕಲೆ ಅಥವಾ ಮುಗಿಸಿಕೊಂಡ ಕಲೆ"ಯಲ್ಲಿ ಹೇಳುವಂತೆ ನಾನು ಬರೆಯುವುದು

"ಪ್ರೇಮಿಗಳು
ಅವರ ಕೈಗಳು
ಯುಗಯುಗಗಳ ಶೋಕದ ಸುತ್ತಸುತ್ತ" —ಕ್ಕೆ ಹತ್ತಿರವಾಗಿದೆ.

ಇದೇ ರೀತಿ ಕಮಲಾ ದಾಸ್‌ಳ ಪ್ರೇಮ ಕಾವ್ಯ 'ದ್ವೇಷದ' ಪದ್ಯಗಳಲ್ಲವಾದರೂ ಪ್ರೀತಿ ಇಲ್ಲದ ಪದ್ಯಗಳೆಂದು ಚಿತ್ರಿಸಬಹುದು. ಕಾಮದ ಸುಳ್ಳುತನ, ಪ್ರೇಮದ ನುಸಳುವಿಕೆ ಅತಿ ಸಾಮಾನ್ಯವಾಗಬಹುದಾದರೂ ಭಾರತದ ಸಂಬಂಧದಲ್ಲಿ ಕಮಲಾ ದಾಸ್ ಈ ವಸ್ತುವನ್ನು ಬಳಸುವುದು ಅತಿಭಾವುಕತೆಯ ಬಗೆಗಿನ ಇಂಗ್ಲಿಷ್ ಸಂದರ್ಭತೆಯ ಬಳಸುವಿಕೆಯಿಂದಾಗಿ ಆಕೆಯ ಕಾವ್ಯದ ಓದನ್ನು ಸಂಕೀರ್ಣಗೊಳಿಸುತ್ತದೆ. ಬಹಳಷ್ಟು ಭಾರತೀಯ ಸಾಹಿತ್ಯಕ್ಕೆ ಪಾಶ್ಚಾತ್ಯ ಪ್ರತಿಕ್ರಿಯೆಯ ಭಾಗ ಇದೇ ಆಗಿದೆ. ಜೀವನ–ಬೆಂಬಲ ಚೈತನ್ಯ ದಾಸ್‌ಳ ಕಾವ್ಯದ ಹಾದಿಯಷ್ಟೇ ಅಲ್ಲದೆ, ಹೆಚ್ಚಾಗಿ, ಗುರಿಯೂ ಆಗಿಬಿಡುತ್ತದೆ. ಇದು ಕನಿಷ್ಠ ಮೂರು ಸುಲಭವಾಗಿ ಕಾಣ್ಬುವ ವಿಧಗಳು. ೧) ಪ್ರೇಮಿಸದೇ ಹೋಗುವುದು. ೨) ಹೆಣ್ತನವನ್ನು ಹತ್ತಿಕ್ಕುವ ಹಾಗೂ "ಸ್ವಚ್ಛಂದ" ನಡತೆಯನ್ನು ಹುರಿದುಂಬಿಸುವ ಭಿನ್ನದರ್ಜೆಯ ಮೌಲ್ಯಗಳನ್ನು ಹುರಿದುಂಬಿಸುವ ನಡತೆ ಹಾಗೂ ೩) ಆತ್ಮದ ಹಾಗೂ ಸ್ವಜಾತಿ ಸ್ವರೂಪದ ಪೂರ್ಣತೆಯ ಗುರಿಗಟ್ಟುವ ದೃಢನಿರ್ಧಾರ.

ಭಾರತದ ಪ್ರೇಮ ಕಾವ್ಯದ ಈ ವಿಚಾರಸರಣಿಯಲ್ಲಿ ಬಿಡಲಾಗದಂತಹ ಹಾಗೂ ಮುಜುಗರಪಡದ ಹೆಣ್ತನದ ಅರಿವಿದೆ (ಫೆಮಿನಿಸಂನ ಕುರುಹು) ಇದರಿಂದಾಗಿಯೇ ಕಮಲಾ ದಾಸಳ ಪದ್ಯ "ಶಿಥಿಲ ಆಟದಮನೆ" ವೈವಾಹಿಕ ಜೀವನದ ಅಸಂಗತೆ, ಗಂಡಿನ ದಬ್ಬಾಳಿಕೆ, ಹೆಣ್ಣ ಸೂಕ್ಷ್ಮಸಂಪಜ್ಞತೆ ಬೂದೀಪಟವಾಗುವುದು ಹಾಗೂ ಅಂಧಕಾರದಲ್ಲಿ ಮುಳುಗಿದ ಹೃದಯದ ನಾಟಕರಂಗ ಇವೆಲ್ಲವನ್ನೂ ಒಡಂಬಡಿಸಿರುವುದಾಗಿರುತ್ತದೆ.

ನನ್ನ ಮನವೊಂದು ಶಿಥಿಲ,
ಎಲ್ಲಿ ದೀಪಗಳೂ ನಂದಿಹೋದ
ಆಟದ ಮನೆ

ಸ್ವಾರ್ಥಿ ಹಾಗೂ ದೌರ್ಜನ್ಯಕಾರೀ ಗಂಡಸು ಕೆಳಗೆ ನರಳುತ್ತಿರುವ ಯಾವುದೇ ಹೆಣ್ಣು ಈ ಕೆಳಗಿನ ಸಾಲುಗಳಲ್ಲಿ ಕಂಡುಬರುವ ವ್ಯಂಗ್ಯ ಹಾಗೂ ನೋವಿನಿಂದ ಕಹಿ ಕಹಿಯಾದ ತೃಪ್ತಿಯನ್ನು ಪಡೆಯುತ್ತಾಳೆ.

ಪತ್ನಿಯೆಂದು ಕರೆದೆ ನೀ ನನ್ನ
ನಿನ್ನ ಟೀ ಯೊಳಗೆ ಸಿಹಿಗುಳಿಗೆ ಹಾಕಿ
ಸರಿಸರಿ ಗಳಿಗೆಗೆ ವಿಟಮಿನ್ನುಗಳ ಕೊಡುವ
ಪಾಠ ಕಲಿಸಿದರು ನನಗೆ
ನಿನ್ನ ಭೀಕರ ಸ್ವಾರ್ಥದ ಕೆಳಗೆ ಅಂಜಂಜಿ
ಯಕ್ಷಣೀ ಚೂರ ತಿಂದಿಂದು
ಕುಬ್ಜಳಾಗಿ ಹೋದೆ ನಾನು

“ಶಿಥಿಲ ಆಟದಮನೆ” ಪ್ರೇಮದ ಸೋಲು ಮದುವೆ ಅಥವಾ ಮದುವೆಯಿಂದ ಹೊರತಾದ ಸಂಬಂಧದಲ್ಲಿ ಪಾತೊರೆಯುವ ಪ್ರೇಮದ ಸೋಲ ಬಗ್ಗೆ ಇರುವ ಪ್ರೇಮ ಕಾವ್ಯದ ಸಾಧ್ಯತೆಗಳನ್ನೆಲ್ಲ ಇಂಗಿಸುವಂತೆ ಕಾಣುತ್ತದೆ. ಅಥವಾ, ಸಾಧ್ಯವಿದ್ದಷ್ಟು ಮಟ್ಟಿಗೆ ನೋವಿನ ಪಥ್ಯದ ಹಾದಿಯನ್ನೇ ತೆಗೆದುಕೊಳ್ಳುವಂತೆ ಕಾಣುತ್ತದೆ.

ಬಲಿಷ್ಠ ಗಂಡಿನ ತಂತ್ರ ಯಾವಾಗಲೂ ಒಂದೇ,
ಆತನ ಪ್ರೇಮವನ್ನ ಪಾಷಾಣ ಮಾಡಿಕೊಡುತ್ತದೆ
ಏಕೆಂದರೆ
ಪ್ರೇಮ ನೀರತುದಿಯಲ್ಲಿನ ನಾರ್ಸಿಸಸ್ಸು,
ಅದರದೇ ಏಕಾಂತತೆಯ ಚಹರೆಯಿಂದ
ಕಾಡುತ್ತದೆ.
ಆದರೂ ಅದು ಕಡೆಗೆ ಕೊನೆಯನ್ನು,
ಪವಿತ್ರ, ಪೂರ್ಣ ಸ್ವಾತಂತ್ರ್ಯವನ್ನು ಹುಡುಕಬೇಕು;
ಕನ್ನಡಿಗಳನ್ನು ಛಿದ್ರಿಸಿ, ನೀರ ಗುರುತಾರಿಸಲು
ಕರುಣಾ ರಾತ್ರಿಯನ್ನು ಅರಸಬೇಕು.

ಕವಿಯ ಈ ಸಾಲುಗಳಲ್ಲಿ ಕಂಡುಬರುವ ಸಂಕೀರ್ಣ ಸ್ಥಾನ ವಿಮರ್ಶಾತ್ಮಕವಾದ ಮರು ಓದುವಿಕೆಯನ್ನು ಅರಸುತ್ತದೆ. ಪದ್ಯದ ಮೊದಲಿನಿಂದ ಹಿಡಿದು ‘ಪಾಷಾಣ’ದ ವರೆಗೂ ಇದು ಕಮಲಾ ದಾಸಳ ಅಂತರಂಗದ (ಈಗ ಬಹಿರಂಗವಾದ) ಅಂತರ್ದನಿಯ ಹೊರಹೊಮ್ಮುವಿಕೆಯೆಂದು ತಿಳಿಯಲು ಯಾವ ಕಾರಣವೂ ಇಲ್ಲ. ಆದರೆ ಪದ್ಯದ ಕಡೆಭಾಗದಿಂದ ಸ್ವಸಂಬೋಧನೆಯನ್ನು ಎದ್ದು ಕಾಣುವಂತೆ ತೆಗೆದುಹಾಕಿರುವುದರಿಂದ ಬೇರೆ ರೀತಿಯ ಅಥವಾ ಬದಲಾಗಿರುವ ಧ್ವನಿ ಮುಂಚೂಣಿಯಲ್ಲಿ ನಿಲ್ಲುತ್ತದೆ. ಈ ಅಂತರಂಗದ ದನಿ, ನೇರ ವ್ಯಕ್ತಿಯ ಸಮ್ಮಿಳಿತ ಇರುವುದಾಗಿದೆ (“ನೀನು”, “ನಿನ್ನ”, “ನಾನು”, “ನನ್ನದು”, “ನನಗೆ”) ಕಡೆಯ ಸಾಲುಗಳ ಮೊದಲು ಬರುವ ಇಪ್ಪತ್ತನಾಲ್ಕು ಸಾಲುಗಳಲ್ಲಿ ಈ ರೀತಿಯ ಮೂವತ್ತು ಸಂಬೋಧನೆಗಳು ಕಂಡುಬರುತ್ತವೆ. ಇದು ಕಮಲಾ ದಾಸಳ ಕಾವ್ಯದಲ್ಲಿನ ಅಂತರ್ದನಿ ನಿಧಾನವಾಗಿ ವ್ಯಕ್ತಿಕೋನದಿಂದ ಮಾರ್ಪಾಡುಗೊಂಡು ಕೀಟ್ಸ್‌ನ ನಕಾರಕ ಸಾಮರ್ಥ್ಯ ದೃಷ್ಟಿಕೋನದತ್ತ ತಿರುಗುವಂತಹ ವಿರಳವಾದ ಪ್ರಸಂಗವನ್ನು ಕಾಣುತ್ತೇವೆ. ಮಾನಸಿಕವಾಗಿ ಅಂತರಂಗದ ‘ನಾನು’ಗೂ ಕವಿಯ ಧ್ವನಿಯನ್ನು ವಿಭಿನ್ನಗೊಳಿಸಬಹುದೇ ಎಂಬುದು ಸೊಲ್ಲಿಲ್ಲದ ವಿಷಯವಾದರೂ ಈ ಸಂದರ್ಭ

ಗಲ್ಲಿ ಪೂರ್ಣವಾಗಿ ಅಂತರಂಗದ ನಾಸು ಧ್ವನಿ ಬರೆದಿರುವ ಯಾವುದೇ ಪದ್ಯ ಸ್ವ-ಚಿಂತನೆಗೆ ಸೀಮಿತವಾದರೂ, ಈ ಪದ್ಯದಲ್ಲಿ ಅದು ವೈಯುಕ್ತಿಕವಾದ ಸ್ವಂತಧ್ವನಿಯ ಜೊತೆಗೆ, ವಿಭಿನ್ನವಾದ, ಇನ್ನೂ ಹೆಚ್ಚು ನಿಷ್ಪಕ್ಷವಾದ ದೃಷ್ಟಿಕೋನವನ್ನು ಹೊಂದಿದೆ.

"ಶಿಥಿಲ ಆಟದಮನೆ" (ದಿ ಓಲ್ಡ್ ಪ್ಲೇಹೌಸ್)ನಲ್ಲಿ ಕಾಣಸಿಗುವ ಪ್ರೇಮದ ಸ್ವಪ್ರೇಮದ ಚಿತ್ರಣ (ನಾರ್ಸಿಸಿಸ್ಟಿಕ್ ಪಿಕ್ಚರ್) ಕುತೂಹಲಕಾರಿಯಾದ ವಸ್ತುಗಳನ್ನು ಪರಿಚಯಿಸುತ್ತದೆ, ಅವು ಲೈಂಗಿಕ ಉದ್ವೇಗ ಹಾಗೂ ಕೊಟ್ಟುತೆಗೆದುಕೊಳ್ಳುವ ಪ್ರೇಮದ ಮುಖಾಂತರದಿಂದ ಅನನ್ಯತೆಯನ್ನು ಅರಸುವುದನ್ನೂ ಕಾಣಬಹುದು; ಪೂರ್ಣವಾಗಿ ಸ್ವಾರ್ಥಿಯಾದ್ದರಿಂದ, ಪದ್ಯದಲ್ಲಿ ಕಾಣಬರುವ "ಬಲಿಷ್ಠ ಗಂಡನ ತಂತ್ರವನ್ನು ಉದಾಹರಿಸಬಲ್ಲದಾದ ಗಂಡೂ ನಾರ್ಸಿಸಸ್ ಚಿತ್ರಣಕೂಡ ಆಗಿರುವುದರಿಂದ, ಪ್ರಶ್ನೆ ಉದ್ಭವಿಸುತ್ತದೆ.

"ನೀ ಕಲಿಸಿದ ಪ್ರತಿ
ಪಾಠವೂ
ನಿನ್ನ ಬಗ್ಗೆಯದೇ" ಇತ್ಯಾದಿ

ಹಾಗಾದಲ್ಲಿ, ಪೆಟ್ಟುತಿಂದ ಹಾಗೂ ಕಹಿಕಹಿಯಾದ ಭಾವನೆಗಳ ನೆಲೆಯಿಂದ ಅರ್ಥೈಸಿಕೊಳ್ಳಬಹುದಾದ, ಆಶಾಪೂರಿತ ("ಏಕಾಂಗಿ", "ಹಾಂಟೆಡ್") ನೆಲೆಯಾದ ನಿರೀಕ್ಷಿಸದ, ಬದಲಾವಣೆಯನ್ನು ಕಾಣುತ್ತೇವೆ, ಹೀಗಾಗಿ ಈ ನಾರ್ಸಿಸಸ್ಸು ಆತನ ಸ್ವಪ್ರತಿಷ್ಠೆಯನ್ನು ಬದಿಗೊತ್ತಿ ಪೂರ್ಣವಾದ, ನಿಷ್ಕಲ್ಮಷವಾದ ಸ್ವಾತಂತ್ರ್ಯವನ್ನು ಪಡೆಯುತ್ತಾನೆ. ಬದಲಾಗಿ, ನಾರ್ಸಿಸಸ್ಸು ತಾನು ತೋರುವ ಸ್ವಾರ್ಥಪ್ರೀತಿಯನ್ನು ತೋರುವ ಗಂಡನ ಚಿತ್ರಣವಲ್ಲ, ಬರೀ ವಿಚಾರದಲ್ಲಿ ಪ್ರೇಮದ ವಾಸ್ತವೀಕರಣವಾದಲ್ಲಿ, ಅವು ಕಮಲಾ ದಾಸ್‌ಳ ವೈಯುಕ್ತಿಕ ಗುರಿಗಳಾದ ಸ್ವಾತಂತ್ರ್ಯ ಹಾಗೂ ಹೆಣ್ಣು ಅನನ್ಯತೆಗೆ ತುಂಬ ಪ್ರಸಕ್ತತೆಯನ್ನು ಹೊಂದಿದೆ.

'ದಿ ಲುಕಿಂಗ್ ಗ್ಲಾಸ್'ನಲ್ಲಿ ಪ್ರೇಮ, ಮೇಲೆ ಕಂಡ ನಾರ್ಸಿಸಸ್‌ನ ಮೂಲಕ್ಕೂ ಲೈಂಗಿಕ ಕಾರ್ಯಾಚರಣೆಯ ತಂತ್ರಕ್ಕೂ ದೈಹಿಕ ಸಾಮೀಪ್ಯಕ್ಕೂ ಮತ್ತು ಕೊಡುಗೆಗೂ ಸೇರಿದ ಸಂಕೀರ್ಣತೆಯನ್ನು ಒಡಂಬಡಿಸುತ್ತದೆ. ಹೆಣ್ಣಿನ ಸ್ವಾತಂತ್ರದ ಹಾದಿಯಲ್ಲಿ ತೃಪ್ತವಾಗುವ "ಹೆಣ್ಣು ಹಸಿವುಗಳ" ಎಡೆ ಕಷ್ಟವಾದ ನೋವನ್ನುಂಟುಮಾಡುವ ಹಾಗೂ ನೇರವಾಗಿರದ ಜ್ಞಾನೋದಯದತ್ತವಿರುವ ಪ್ರಯಾಣ. "ಐ ಶಲ್ ಸಂ ಡೇ" ನಲ್ಲಿನ ಆತ್ಮದ ದನಿ ಮನೆಯ ಗೂಡ "ಬಸವಳಿದ ಕಾಮು"ವನ್ನು ತೊರೆದು "ರೆಕ್ಕೆ ಪುಕ್ಕ ಧರಿಸಿ ಸ್ವಚ್ಛಂದವಾಗಿ ಗಾಳಿಯಲ್ಲಿ" ಹಾರುವೆ ಎಂದೆನ್ನುತ್ತದೆ; ಆದರೆ ವಾಪಸಾಗುತ್ತದೆ ಕೂಡ.

ಧಿಡೀರ್ ಸಂತಸದಿಂದ ಬಲು ನೊಂದು
ಮತ್ತೂ ಮುನ್ನುಗ್ಗುವ, ಇನ್ನೂ ನೋಡಿಯ
ಸ್ವಚ್ಛಂದತೆಯತ್ತ, ಮತ್ತು

ನಾನಾವುದೋ ಒಂದು ದಿನ ನನ್ನದೇ
ಪ್ರಪಂಚವ ಕಾಣುವೆ,
ರಕ್ತನಾಳ ನರಗಳ ಮಾಂಸಗಳ ಕಿತ್ತೊಗೆದು
ಬರೀ ಮೂಳೆ, ಅಸ್ಥಿ,
ನಂತರ ಕಣ್‌ಮುಚ್ಚಿ, ಎಲ್ಲ ಅಲ್ಲದಿದ್ದರೂ
ನಿನ್ನ ಚಿರಪರಿಚಿತ ತಿರಸ್ಕಾರದಲ್ಲಾದರೂ
ಆಶ್ರಯ ಪಡೆವೆ.

ಮೇಲ್ಕಂಡ ಸಾಲುಗಳಲ್ಲಿ ಕಂಡುಬರುವ ಅಮಾನುಷ ಅಮಾನವೀಯತೆಯಿಂದ ಹೊರಬರುವ ಹಾದಿಯನ್ನು ಹುಡುಕುವುದೇ ಕಮಲಾ ದಾಸಳ ಕಾವ್ಯದ ಮುಖ್ಯ ಉದ್ದೇಶ. ಅವಳ ಕೆಲವಷ್ಟು ಪದ್ಯಗಳಲ್ಲಿ ಇದು ಗತಕಾಲದತ್ತ, ಆಕೆಯ ಬಾಲ್ಯಾವ್ಯವಸ್ಥೆಗೂ ಆಕೆಯ ತಲತಲಾಂತರದ ಮನೆತನದ ಮನೆಗೂ, ನೈತಿಕ ಶಕ್ತಿಗೂ, ದಿಕ್ಸೂಚಿಗೂ, ಅನನ್ಯತೆಗೂ ಮೊರೆ ಬೀಳುವುದು ಕಾಣಸಿಗುತ್ತದೆ. ಮಧ್ಯಾಹ್ನದ ಸೂರ್ಯನಿಂದ ಉದ್ಭವಿಸುವ ಉಲ್ಬಣಗಳು, ತೀವ್ರತೆ "ಮಲಬಾರ್‌ನ ಮಧ್ಯಾಹ್ನದ ಬಿಸಿಲು (ಎ ಹಾಟ್‌ನೂನ್ ಇನ್ ಮಲಬಾರ್)ನಲ್ಲಿ ಸ್ಪಷ್ಟವಾಗಿ ಮರುಕಳಿಸಿಕೊಳ್ಳುತ್ತವೆ; ಕಲಕತ್ತೆಯಲ್ಲಿ ಏಕಾಂಗಿಯಾಗಿ ಆಕೆಯ ಗತ, ದಕ್ಷಿಣಭಾರತದ ಪ್ರಪಂಚದೊಡನೆ ಪುನರ್‌ಮಿಲನಗೊಳ್ಳುವುದನ್ನು ಆಕೆ ಬಯಸುತ್ತಾಳೆ. ಬಾಲ್ಯಾವಸ್ಥೆಯ ಅನುಭವಗಳ ಹಿನ್ನೆಲೆಯಲ್ಲಿ, ಕವಿಯು ಗತಕಾಲದ ಸಂಬಂಧ ಆತ್ಮಗೌರವದ ತಪ್ಪೊಪ್ಪಿಕೆಯ ಹಾದಿಯಿಂದ ಅನನ್ಯತೆಯ ಅಡಿಪಾಯವಾಗುತ್ತದೆ. (ಕವಿಯ ಮುತ್ತಜ್ಜಿ ವಯಸ್ಸಿಗೆ ಬಂದಾಗ ಶಿವನ ದೇವಸ್ಥಾನಕ್ಕೆ ಆನೆಯಮೇಲೆ ಸವಾರಿ ಹೋದದ್ದು, ಬಹಳವಾಗಿ ಪ್ರೀತಿಸುತ್ತಿದ್ದ ರಾಜಕುಮಾರನ ಜೊತೆ ಆಕೆಯ ವಿವಾಹ, ವರ್ಷದ ಬಳಿಕ ಆತನ ಅಕಾಲಿಕ ಸಾವು, ಆ ಮನೆತನದ ತಲೆಮಾರಿನ "ತೆಳು, ಮೃದು, ಸ್ಪಷ್ಟ" ದತ್ತ ಕಡೆಗೆ ಪುರಾತನ ಮನೆತನದ ಮನೆಯ ಶಿಥಿಲತೆ, ಇತ್ಯಾದಿ)

ಕಮಲಾ ದಾಸ್ "ಹೆಸರ ಕೆಡುಸುವಿಕೆ"ಯಲ್ಲಿ ಸೂಚಿಸುವಂತೆ, ಆತ್ಮವಂಚನೆ ಮಾಡಿಕೊಳ್ಳದೆ, ತಲಾಂತರದ ಜೀವಶಕ್ತಿಗೆ, ಜೀವಕ್ಕೆ, ಅದರ ಅಗ್ನಿಗೆ, ಪ್ರಾಮಾಣಿಕವಾಗಿರುವುದು ಆತ್ಮ ಸಾಕ್ಷಾತ್ಕಾರದ ಆರೋಗ್ಯಕರ ಹಾದಿ. ಅನನ್ಯತೆ ಪಡೆದುಕೊಳ್ಳುವುದು ಹೊರ ಲಾಂಛನದಿಂದಲ್ಲ ಬದಲು ಜೀವನಕ್ಕೆ ಮಾಡಿಕೊಳ್ಳುವ ಒಳ ಬದ್ಧತೆ; ಮಧ್ಯದ ಹಾದಿಗಿಂತ ಕಮಲಾ ದಾಸ್ ಎರಡು ಧ್ರುವದ ಗಾಢತೆಯ ಕವಿ. ಆಕೆ 'ಮಧ್ಯಾಹ್ನದ ಆರೆನಿದ್ದೆ' (ದಿ ಸಿಯಸ್ತ)ದಲ್ಲಿ ಹೇಳುವ "ಸಾಧಾರಣ. ಅನನ್ಯತೆ"ಯಿಂದ ಬಹಳಷ್ಟು ತೃಪ್ತಿಗೊಳ್ಳುವುದಿಲ್ಲ. ಆಕೆ "ಜೀವನ ಜ್ವಾಲೆ"ಯಿಂದ ಅವಳಾಗಿಯೇ ಇರುವುದು ಸಾಧ್ಯವಿಲ್ಲದ ಪಕ್ಷದಲ್ಲಿ, ಅದು ಆಕೆಯ ವ್ಯಕ್ತಿತ್ವ ಕರಗಿ ಹೋಗಿರುವ ಸ್ಥಿತಿಯಲ್ಲಿ ತನ್ನನ್ನು ತಾನು ಕಂಡುಕೊಳ್ಳುವುದರಿಂದಲೇ ಆಕೆ ಹೊಸ ವ್ಯಕ್ತಿತ್ವದ ಅನನ್ಯತೆಯನ್ನು ಹುಡುಕುವ ದೆಸೆಯಲ್ಲಿರುವಂತೆ ಆಕೆಯ "ಸಂಯೋಗ" ಹಾಗೂ "ಆತ್ಮಹತ್ಯೆ" ಎಂಬ ಕವಿತೆಗಳು ಎದ್ದು ತೋರುತ್ತವೆ.

ಈ ಎರಡೂ ಪದ್ಯಗಳಲ್ಲೂ ಇರುವ ಮುಖ್ಯವಾದ ಸಂಕೇತ 'ಸಮುದ್ರ'

(ಕಲಕತ್ತೆಯ ಬೇಸಗೆಯಲ್ಲಿ ಸೂರ್ಯ ಮುಖ್ಯವಾದ ಸಂಕೇತ); ಅನುಭವಕ್ಕೆ ಕವಿಯ ಮನೋಭಾವ ಜೀವನವನ್ನು ಪೂರ್ಣವಾಗಿ ಸಂತಸದಿಂದ ಅನುಭವಿಸುವ ಬದಲಾಗಿ "ಸಂಯೋಗ"ದಲ್ಲಿ ಕಂಡುಬರುವ

"ಜೀವನದ ಪ್ರಮಾದ
ಸಾವಲ್ಲ, ಬದಲು
ಬೆಳವಣಿಗೆ"

ಎಂಬಂತಹ ಮನವರಿಕೆ ಮತ್ತು ವೈಯುಕ್ತಿಕ ಜೀವನದ ಲೋಪದೋಷ ಗಳೊಂದಿಗೆ ಸೇರಿಹೋಗುವುದು ಹಾಗೂ ಅಂತಃದೈವೀಕ ಶಕ್ತಿಯ ಮೇರೆ ಹೋಗು ವುದರ ಅವಶ್ಯಕತೆಗೂ ಮಧ್ಯೆ ಉದ್ವೇಗದ ತುಡಿತವಿದೆ.

ಈ ಎರಡು ಪದ್ಯಗಳನ್ನು ಹಿಂದೆ ಉಲ್ಲೇಖಿಸಿದ ಪ್ರೇಮ, ಕಾಮದ ಬಗೆಗಿನ ಪದ್ಯಗಳೊಂದಿಗೆ ಹೋಲಿಸಿ ನೋಡಿದಾಗ, ಆದರ್ಶೀಕೃತವಾದ ಸಂಕೇತ ಹಾಗೂ ಉಪಮೆಗಳನ್ನು ಎದುರಿಸುವುದರಿಂದ ಪ್ರಾರಂಭವಾಗಿ, ಪುರಾಣಿಕವಾದ ಅಹಂಭಾವ ಹಾಗೂ ವೈಯುಕ್ತಿಕ ಅಹಂಭಾವದ ಸಮ್ಮಿಳನದತ್ತ ನಡೆದಿರುವುದು ಕಾಣಬರುತ್ತದೆ. ಆಕೆ ಎದುರಿಸುವ ಎರಡು ಮುಖ್ಯ ಸಾಂಸ್ಕೃತಿಕ ಸಂಕೇತಗಳು ಹಿಂದೂ ವಿವಾಹ ಪದ್ಧತಿಯ ಕಟ್ಟಳೆಗಳು ಹಾಗೂ ಹೆಣ್ಣಿನಪಾತ್ರ. ನಾವು ಕಂಡಂತೆ ಕಮಲಾ ದಾಸ್‌ಳ ಪ್ರೇಮಕಾವ್ಯ ಸಾಮಾನ್ಯವಾಗಿ ನಂಬಿರುವ ಸಾಂಸ್ಕೃತಿಕ ಅಭಿಪ್ರಾಯಗಳನ್ನು ನಂಬಿಕೆ ಗಳನ್ನು ಟೀಕಿಸುತ್ತದೆ. ಆದರೆ ಆಕೆಯ ಈ ಪ್ರತಿಭಟನೆ ರಾಧಾ-ಕೃಷ್ಣರ ಪರಂಪರೆಯೊಂದಿಗೆ ಹೋಲಿಸಿದಾಗ ಅವು ಭಾರತೀಯ ಸಂಪ್ರೋಜ್ಞತೆಯನ್ನು ಉಳಿಸಿಕೊಂಡಿವೆ ಎಂದೂ ಅರ್ಥೈಸ ಬಹುದಾಗಿದೆ. ಆಕೆ ರಾಧಾಕೃಷ್ಣ ಸಂಪ್ರದಾಯವನ್ನು ಎರಡು ಮುಖ್ಯವಾದ ವಿಧದಲ್ಲಿ ತಲೆಕೆಳಗಾಗಿಸುತ್ತಾಳೆ—ಮೊದಲನೇಯದಾಗಿ ಆಕೆಯ ಪದ್ಯಗಳು ಹೆಣ್ಣಿನ ದೃಷ್ಟಿಕೋನ ದಿಂದ ಮಾತನಾಡುತ್ತವೆ ಮತ್ತು ಎರಡನೇಯದಾಗಿ, ವೈನವಿರೇಳಿಸುವ ಪ್ರೇಮ ಒಳಗಿನ ವೈ-ಅಧ್ಯಾತ್ಮಿಕತೆಯ ಭಾವನೆಗಳನ್ನು ಉತ್ತೇಜಿಸುವ ಬದಲು ಹತ್ತಿಕ್ಕುತ್ತದೆ. ಆದ್ದ ರಿಂದಲೇ ಆಕೆ ಸೌಂದರ್ಯದ ಲಕ್ಷಣಗಳನ್ನು, ತಲೆಕೆಳಗಾಗಿಸಿ ರಾಧಾಕೃಷ್ಣರು ಅವರವರ ಲೈಂಗಿಕತೆಯ ಪೂರ್ಣತೆಯೆಂಬುದನ್ನು ತೋರಿಸುವ ಹಾದಿಯಲ್ಲಿ ಕಾಮವನ್ನು ಪ್ರೇಮ ವೆಂದು ತೋರುವ ಸಾಂಪ್ರದಾಯಿಕ ಬೂಟಾಟಿಕೆಯನ್ನು ಎತ್ತಿಹಿಡಿಯುತ್ತಾಳೆ. ಆಕೆಯ ಚಿಕ್ಕ ಕಹಿಪದ್ಯ "ಸೋಲಿನಸಮರ" ಪೌರಾಣಿಕವಾದ ಭಾರತದ ಪ್ರೇಮವನ್ನು ಶೃಂಗಾರ ಸಂಬಂಧದೊಂದಿಗೆ ಹೋಲಿಸುತ್ತದೆ:

ಮತ್ತೊಂದು
ಹಸಿಕಾಮ ಪ್ರದರ್ಶಿಸುತ್ತಿರುವಾಗ
ನನ್ನ ಪ್ರೀತಿ ಆತನನ್ನು ಒಲಿಸುವುದಾದರೂ
ಹೇಗೆ? ಆತನ ಮೃಗತ್ವಕ್ಕೆ ಆಕೆ ಸಿಂಹಿಣಿ
ಗಂಡಸರು ಸಿಷ್ಟಯೋಜಕರು, ಅವರ ಹಿಡಿಯಲು ತುಚ್ಛ

ಬೆಲೆಯ ಕೊಂಡಿ ಉಪಯೋಗಿಸು ಸಾಕು
ಆದರೆ ಪ್ರೀತಿಸಬೇಡ, ಏಕೆಂದರದು
ಹೆಣ್ಣಿನ
ಕಣ್ಣೀರು
ರಕ್ತದ ನಿಃಶಬ್ಧವೇ

ಈ ರೀತಿಯ ಪದ್ಯಗಳಲ್ಲಿ, ಗಂಡುಪ್ರೇಮಿ ("ಲಿಂಗ"ದ ಸಂಕೇತ)—ಹಾಗೂ ಪ್ರೇಮ ಎರಡೂ ಅವುಗಳ ಅಹಂಭಾವದ ರಾಕ್ಷಸತೆಯಿಂದಲೂ, ಒಡ್ಡುವ ಬಂಧನಗಳಿಂದಲೂ ನಿಷೇಧವಾಗುತ್ತಾರೆ.

ಈ ರೀತಿಯ ಸಾಕ್ಷಾತ್ಕಾರ, ಆತ್ಮಕತೆಯಲ್ಲಿನ ಅಹಂಭಾವಕ್ಕೂ ಹೊಸ ತಿರುಗನ್ನು ಕೊಡುತ್ತದೆ. ಹಿಂದೂ ತತ್ವದ ವಿರುದ್ಧ ಬಡಿದೇಳುವುದಕ್ಕೆ ಹೆಸರು ಗಳಿಸಿದಮೇಲೆ, ಕಮಲಾ ದಾಸ್ ಸ್ವಂತತೆಯನ್ನು ಮೂಲಭೂತವಾಗಿ ಹಿಂದೂ ತಾತ್ವಿಕ ನೆಲೆಯಲ್ಲಿ ಒಪ್ಪತಕ್ಕ ಅನನ್ಯತೆಯನ್ನು ಸಾಧಿಸಲು ತೊಡಗುತ್ತಾಳೆ. "ಸಂಯೋಗ"ದಲ್ಲಿ ಆಕೆ ಉಪಮೆಗಳ ಮೂಲಕ ಜೀವನ ಹಾಗೂ ಪುರಾಣಗಳು ಹೊರಬಂದ ಸ್ಥಾನಕ್ಕೆ ಹಿಂದಿರುಗುತ್ತಾಳೆ—ಅದೇ ಸಮುದ್ರ ತಳ:

ಸಾಗರದ ನೆಲೆಯಲ್ಲಿ ಮಹಾನ್
ಹಸಿವುಗಳು ಅಡಗಿವೆ ಕಟ್ಟ
ಕಡೆಯಲ್ಲಿ
ಬೇರೆ ಹಸಿವುಗಳನ್ನು ಉಪಶಮಿಸಲು
ಹಸಿವನ್ನೇ ಪೋಷಿಸುವೆ—
ಆ ಮೂಲ ಹಸಿವ—
ಪುಡಿಪುಡಿಯಾಗಲು,
ಕರಗಿ ಹೋಗಲು,
ಅನನ್ಯತೆಯ ಛಿದ್ರವಿಚಿದ್ರಗಳ ಚೂರ
ಬೇರೆ ವಸ್ತುಗಳಲ್ಲಿ ಉಳಿಸಿಕೊಳ್ಳಲು
ನಾವೆಲ್ಲ ಅಮರರೆಂಬುದೇ ಕಟ್ಟಕಡೆಯ
ಅರಿವು...

ಮುರುಮುರುಕಳಿಸುವ ಜೀವಾಂಶದ
ಪ್ರತಿಯೊಂದು ಚಲನೆಯೂ
ಶಕ್ತಿಕೊಡುವುದಿಲ್ಲ—ಒಳಹೊಕ್ಕ
ಪಂಜರದಿಂದ ಹಾರಿಹೋಗಲಿಕ್ಕೆ
ನಾನು ಇನ್ನೂ ಇದ್ದಿರಬೇಕು
ಅಮರತ್ವದಲ್ಲಿ ಸಿಕ್ಕಿಬಿದ್ದು,
ನನ್ನ ಒಂದೇ ಸ್ವಾತಂತ್ರ,
ಕೊಳೆತು ಹೋಗಬಲ್ಲ
ಸ್ವಾತಂತ್ರ್ಯ

ಈ ರೀತಿಯ ಅರ್ಪಣೆ ವಿರೋಧಾಭ್ಯಾಸದಿಂದ ಇದೆ—ಅದು ಹಿಂತೆಗೆಯುವುದು ಒತ್ತಿ ಹೇಳುವುದಕ್ಕಾಗಿಯೇ. ಆದರೆ ತಾತ್ವಿಕವಾಗಿ ಅದು ರೂಪುವೆತ್ತಿರುವುದು ಹಿಂದೂ ಧರ್ಮದ ಚಿಂತನೆಯಲ್ಲಿ—ಮೋಕ್ಷ, ಪುನರ್ಜನ್ಮ ಹಾಗೂ 'ಭಗವದ್ಗೀತೆ'ಯಲ್ಲಿ ಉಲ್ಲೇಖ ಸಿಗುವ ಆತ್ಮದ ಚಿಂತನೆ ಇಂತಹುವುಗಳ ಬಗ್ಗೆ ಇರುವ ಅಂತಃಉಲ್ಲೇಖದಿಂದ.

"ಸಂಯೋಗ"ದಲ್ಲಿ ಪ್ರಪಂಚದ ಹಿಂದೂ ಮಾರ್ಗದ ಹಾದಿಯಲ್ಲಿ ಕಮಲಾ ದಾಸ್ ಸಾಕಷ್ಟು ಸಾಗಿದ್ದಾಳೆ. ಪೌರಾಣಿಕವಾದ ಉಲ್ಲೇಖದಲ್ಲಿ ಹೇಳುವುದಾದರೆ, ಸ್ವಾರ್ಥದ ಕನ್ನಡಿಯನ್ನು ನಾರ್ಸಿಸಸ್ ಛಿದ್ರಿಸಿ, ಆತ್ಮತೆಯ "ಅಂತರಾತ್ಮ"ವನ್ನು ಬಿಚ್ಚಿಟ್ಟಿದ್ದಾನೆ.

ಕನ್ನಡಕ್ಕೆ : ಡಾ॥ ಕೃಷ್ಣಮೂರ್ತಿ ಚಂದರ್

ಮನುಷ್ಯ ಎಷ್ಟರ ಮಟ್ಟಿಗೆ ಇತರರ ಒಳ್ಳಿಯದಕ್ಕೆ ದುಡಿಯುತ್ತಾನೆಯೋ ಅಷ್ಟರ ಮಟ್ಟಿಗೆ ಅವನು ದೊಡ್ಡವನಾಗುತ್ತಾನೆ.

ಸತ್ಯವೇ ದೇವರು, ದೇವರೇ ಸತ್ಯ.

ಸೇವೆಯೇ ಜೀವನ.

ಗಾಂಧೀಜಿ

ನನ್ನ ಕತೆ

ಕಮಲಾ ದಾಸ್

[ಕಮಲಾದಾಸಳ ಆತ್ಮಕತೆ ಮಲಯಾಳಂ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರಕಟವಾಗಿ, ಪ್ರಕಟನಾ ಇತಿಹಾಸದಲ್ಲೇ ದಾಖಲೆಯನ್ನು ಸೃಷ್ಟಿಸಿದೆ. ಅತ್ಯಂತ ರೋಚಕವಾದ, ರೋಮಾಂಚಕವಾದ ಮಿಗಿಲಾಗಿ ಸೂಕ್ಷ್ಮ ಕವಯಿತ್ರಿಯೊಬ್ಬಳ ಕಲಾತ್ಮಕ ಸಂವೇದನೆಯಾದ ಈ ಕೃತಿಯ ಎರಡು ಅಧ್ಯಾಯಗಳು ಇಲ್ಲಿವೆ.]

೧. ಸಭ್ಯ ನಾಯರ್ ಕುಟುಂಬಗಳಿಗೆ ಸೇರಿದ ಮಹಿಳೆಯರು ಸೆಕ್ಸ್ ಬಗ್ಗೆ ಎಂದೂ ಮಾತನಾಡುತ್ತಿರಲಿಲ್ಲ.

ಸಂತಾನೋತ್ಪತ್ತಿ ಕ್ರಿಯೆಯಲ್ಲಿ ಸ್ತ್ರೀಪುರುಷರ ನಡುವಣ ಸಂಬಂಧವನ್ನು ಕುರಿತಂತೆ, ಮದುವೆಯ ದಿನದ ರಾತ್ರಿಯವರೆಗೆ ನನಗೆ ಸ್ವಲ್ಪವೂ ತಿಳಿದಿರಲಿಲ್ಲ. ಸೆಕ್ಸ್ ಎಂಬುದು, ಆಗ ಈಗಿನಂತೆ ಮೋಹಕ ಶಬ್ದವಾಗಿರಲಿಲ್ಲ. ಆದರೆ ಅದರ ಹಿಂಬಾಲಕರು ಮಾತ್ರ ಆಗಲೂ ನಿಷ್ಕ್ರಿಯರಾಗಿರಲಿಲ್ಲ ಎಂಬುದು ಸ್ಪಷ್ಟ.

ನಮ್ಮ ನಲಾಪತ್ ಮನೆಯಲ್ಲಿ ಅಡಿಗೆಮನೆಯಲ್ಲಿ ಕೆಲಸ ಮಾಡುವವಳೊಬ್ಬಳಿದ್ದಳು. ಅವಳು ಅಡಿಗೆಯವನೊಂದಿಗೆ ಯಾವಾಗಲೂ ಚೆಲ್ಲುಚೆಲ್ಲಾಗಿ ವರ್ತಿಸುತ್ತಿದ್ದಳು. ಹೇಗಾದರೂ ಮಾಡಿ ಅವಳನ್ನು ಮದುವೆಯಾಗಬೇಕೆಂದು ಅಡಿಗೆಯವನೂ ನಿರ್ಧರಿಸಿದ್ದ. ತನ್ನ ಚಿಟ್‌ಫಂಡಿನ ಅವಧಿ ಮುಗಿದು ಕೈಗೆ ಹಣ ಬರುವುದನ್ನೇ ಅವನು ಕಾಯುತ್ತಿದ್ದ. ಮದುವೆಗಾಗಿ ಆಡಂಬರದ ಬಟ್ಟೆಬರೆಗಳನ್ನು ಖರೀದಿಸುವುದು ಆಗಮಾತ್ರ ಆವನಿಗೆ ಸಾಧ್ಯವಾಗುತ್ತಿತ್ತು. ನಾಯರ್‌ಗಳಲ್ಲಿ, ಅದೂ ಮುಖ್ಯವಾಗಿ ಬಡವರಲ್ಲಿ ನಡೆಯುವ ಮದುವೆ ತುಂಬ ಸರಳವಾಗಿರುತ್ತದೆ. ಈ ಸಂಬಂಧವಾದ ಧಾರ್ಮಿಕ ಕ್ರಿಯೆಗಳೆಲ್ಲ ಒಂದೆರಡು ನಿಮಿಷಗಳಲ್ಲಿಯೆ ಕೊನೆಗೊಳ್ಳುತ್ತವೆ. ಉದ್ದನೆಯ ಬಟ್ಟೆಯೊಂದನ್ನು ಹುಡುಗಿಯ ಕೈಗೆ ಕೊಡುವುದಷ್ಟೆ ಇಲ್ಲಿ ಹುಡುಗ ಮಾಡಬೇಕಾದ ಕೆಲಸ. ಅದನ್ನು ತೆಗೆದುಕೊಂಡ ಹುಡುಗಿ ಅವನ ಮಡದಿಯಾಗುತ್ತಿದ್ದಳು.

ಹಿಂದಿನ ಕಾಲದಲ್ಲಿ, ಮಲಬಾರಿನಲ್ಲಿ, ನಿಶ್ಚಯವಾಗಿಯೂ ಬಟ್ಟೆ ಅತ್ಯಧಿಕ ಬೆಲೆಯಿರುವ ಹಾಗೂ ಅಮೂಲ್ಯವಾದ ವಸ್ತುವಾಗಿತ್ತು. ಮನೆಯಲ್ಲಿರುವ ಚಿಕ್ಕ ಹೆಣ್ಣು ಮಕ್ಕಳಿಗೆ ಎರಡೂವರೆ ಅಡಿಗಳಷ್ಟು ಒಳಬಟ್ಟೆ ಹಾಗೂ ಎರಡು ಅಡಿಗಳಷ್ಟು ಹೊರಬಟ್ಟೆಗಳೇ ಸಾಕಾಗುತ್ತಿದ್ದರೂ, ಅವರಿಗೆ ಒಳ್ಳೆಯ ಬಟ್ಟೆಗಳನ್ನು ತಂದುಕೊಡುವುದು, ಮಾತೃಪ್ರಧಾನ ಪದ್ಧತಿಯ ಕುಟುಂಬಗಳ ಯಜಮಾನರಿಗೆ ಆಗ ಸುಲಭವಾಗುತ್ತಿರಲಿಲ್ಲ. ತಾವು ಧರಿಸುವ ಭಾರೀ ಸರಗಳಿಂದಲೇ ಹುಡುಗಿಯರು ಬಹುಮಟ್ಟಿಗೆ ತಮ್ಮ ಎದೆಯ ಭಾಗವನ್ನು ಮುಚ್ಚಿಕೊಳ್ಳುತ್ತಿದ್ದರು.

ಮದುಮಗಳಿಗೆ ಯೋಗ್ಯವೆನಿಸುವ ಮಸ್ಲಿನ್ ಬಟ್ಟೆಯನ್ನು ಆರಿಸಲು ತಿರುಚೂರಿನ ಪೇಟೆಗಳಿಗೇ ಪ್ರವಾಸ ಹೋಗುವ ಯೋಜನೆಯನ್ನು ನಮ್ಮ ಅಡಿಗೆಯವನು ಹಾಕಿಕೊಂಡ. ತನ್ನ ಮೆಚ್ಚಿನ ಹುಡುಗಿಯ ಸಹನೆ ಕೆಡುವವರೆಗೂ ಅವನು ತನ್ನ ನವೀನ ಯೋಜನೆಯ ಬಗ್ಗೆ ಮುಗ್ಧನಾಗಿ ಮಾತನಾಡುತ್ತಿದ್ದ. ಅತೃಪ್ತಿಯಿಂದ ಮನಸ್ಸು ಚಂಚಲವಾಗಿದ್ದ ಈ ಅವಧಿಯಲ್ಲಿಯೇ ನಮ್ಮ ಶ್ರೀಮಂತ ಸಂಬಂಧಿಗಳಲ್ಲೊಬ್ಬ ಅವಳ ಮೋಹದ ಬಲೆಗೆ ಬಿದ್ದ. ತನ್ನೊಂದಿಗೆ ಅನೈತಿಕ ಸಂಬಂಧ ಬೆಳೆಸುವಂತೆ ಪುಸಲಾಯಿಸಲು ಅವಳನ್ನು ಪ್ರತಿದಿನ ಮಧ್ಯಾಹ್ನ ಯಾವುದಾದರೂ ಆಸೆ ತೋರಿಸಿ ಖಾಲಿ ಮನೆಯೊಂದಕ್ಕೆ ಅವನು ಕರೆದೊಯ್ಯತೊಡಗಿದ. ಅವಳ ಬಗೆಗಿನ ಹುರುಪು ಹೆಚ್ಚಾಗುತ್ತ ಹೋದಂತೆ, ಚಿಕ್ಕ ಕಾಗದದ ತುಂಡುಗಳಲ್ಲಿ ಪತ್ರಬರೆದು, ಅವಳು ಬಾಲ್ಕನಿಯ ಕೆಳಗೆ ತಿರುಗಾಡುತ್ತಿರುವಾಗ ಅವಳತ್ತ ಅವುಗಳನ್ನು ಎಸೆಯತೊಡಗಿದ. ಇಂಥದೊಂದು ಪ್ರೇಮಪತ್ರ ನನ್ನ ಅಜ್ಜಿಗೆ ಸಿಕ್ಕಿತು. ಅಜ್ಜಿ ಅವಳನ್ನು ಕೆಲಸದಿಂದ ತೆಗೆದುಹಾಕಿದಳು.

ಅನಂತರ, ನಮ್ಮ ಅಡಿಗೆಯವನು ಸಾಯಂಕಾಲಗಳಲ್ಲಿ ಕಳ್ಳತಪ್ಪಿಸಿಕೊಂಡು ಮನೆಯಿಂದ ಹೊರಗೆ ಹೋಗಿ ತಪ್ಪುದಾರಿ ಹಿಡಿದ ಆ ಕೆಲಸದ ಹುಡುಗಿಯನ್ನು ಬೇಟೆಯಾಡತೊಡಗಿದ. ಒಂದು ದಿನ, ದೇವಾಲಯದ ಜಾತ್ರೆಮುಗಿಸಿ ಹಿಂದಿರುಗಿ ಬರುತ್ತಿದ್ದಾಗ, ಅವಳ ಪ್ರಿಯತಮನಾದ ಶ್ರೀಮಂತನ ಸೇವಕರು ಥಟ್ಟನೆ ಅವನ ಮೇಲೆ ಎರಗಿದರು; ಅವನತ್ತ ಕಲ್ಲುಗಳನ್ನುಎಸೆದು ಅವನನ್ನು ಗಾಯಗೊಳಿಸಿದರು. ಆಗ ಓಡುತ್ತಾ ಬಂದ ಅವನು ನಮ್ಮ ಮನೆಯ ಮೆಟ್ಟಲುಗಳ ಮೇಲೆ ಮುಗ್ಗರಿಸಿಬಿದ್ದ. ಅವನ ಕಣ್ಣುಗಳ ಮೇಲೆ ರಕ್ತ ಹರಿಯುತ್ತಿದ್ದುದರಿಂದಾಗಿ, ಅವನು ಕುರುಡನಂತಾಗಿದ್ದ. ಅವನ ಬತ್ತಲೆ ಎದೆಯಮೇಲೂ ರಕ್ತ ಹನಿಯುತ್ತಿತ್ತು. ನನ್ನ ಅಜ್ಜಿಗೆ ತುಂಬ ಹೆದರಿಕೆಯಾಯಿತು. ಅವಳು ಒಂದು ಮುಷ್ಟಿ ತುಂಬ, ಹರಳು ಸಕ್ಕರೆಯನ್ನು ತೆಗೆದುಕೊಂಡು ಅವನ ಹಣೆಯ ಮೇಲಾದ ಗಾಯಕ್ಕೆ ಒತ್ತಿ ರಕ್ತ ಪ್ರವಾಹವನ್ನು ತಡೆದಳು. ಅಡಿಗೆಯವನು ಅಸ್ಪಷ್ಟವಾದ ಧ್ವನಿಯಲ್ಲಿ ತನ್ನ ಪ್ರತಿಸ್ಪರ್ಧಿಯ ಹೆಸರನ್ನು ಉಚ್ಚರಿಸಿದ; ಅನಂತರ, ಹಸುಗಳಿಗಾಗಿ ಹಿಂಡಿಯನ್ನು ಸಂಗ್ರಹಿಸುವ ನಮ್ಮ ಮರದ ಕಣಜದ ಮೇಲೆ ಹೆಪ್ಪುಗಟ್ಟಿದ ಸ್ವಲ್ಪ ರಕ್ತಮಾತ್ರ ಇತ್ತು. ಅವನು ಮಾಯವಾಗಿದ್ದ.

ಅವನನ್ನು ಹುಡುಕಲು ಅಜ್ಜಿ ಅವನ ಹಳ್ಳಿಗೆ ಸೇವಕನೊಬ್ಬನನ್ನು ಕಳುಹಿಸಿದಾಗ, ಅಲ್ಲಿಗೆ ಅವನು ಬಂದೇ ಇಲ್ಲವೆಂದು ಅವನ ತಂದೆತಾಯಿಗಳು ತಿಳಿಸಿದರು. ಸೇವಕರು ಚಾಕುವೊಂದರಿಂದ ಉಜ್ಜಿ ಕಣಜದ ಮೇಲೆ ಹೆಪ್ಪುಗಟ್ಟಿದ್ದ ರಕ್ತವನ್ನು ತೆಗೆದು, ಸಗಣಿ

ಬೆರಸಿದ ನೀರಿನಿಂದ ಅದನ್ನು ತೊಳೆದರು. ಯಾವುದೋ ಒಂದು ಮಾಂಸಾಹಾರಿಯಾದ
ವನ್ಯಮೃಗ ಅಲ್ಲಿಗೆ ರಾತ್ರಿ ಬಂದು ಆಹಾರಕ್ಕಾಗಿ ಪ್ರಾಣಿಯೊಂದನ್ನು ಕೊಂದಂತೆ ಕಂಡು
ಬರುತ್ತಿತ್ತು. ಶ್ರೀಮಂತ ವ್ಯಕ್ತಿ ನಮ್ಮ ಮನೆಯಲ್ಲಿ ಹಿಂದಿದ್ದ ಅಡಿಗೆಮನೆ ಕೆಲಸದವಳ
ಭೇಟಿಯಾಗುವುದನ್ನು ನಿಲ್ಲಿಸಿದ, ಅಷ್ಟೇ ಅಲ್ಲ, ರಕ್ತಸಂಬಂಧದ ಚಂದ್ರಮುಖಿಯೊಬ್ಬಳನ್ನು
ವಿವಾಹವಾದ. ಆದರೆ ಆಕೆ ದಿನಾ ರಾತ್ರಿ ಅವನೊಡನೆ ಜಗಳವಾಡುತ್ತಿದ್ದಳು: ಎಂಥ
ಉದ್ರೇಕದಿಂದ ಅವಳು ಬಿಕ್ಕಿಬಿಕ್ಕಿ ಅಳುತ್ತಿದ್ದಳೆಂದರೆ, ಗಂಡಹೆಂಡಿರ ಜಗಳ ಪರಿಹರಿಸಲು
ದೊಡ್ಡವರೇ ಬಾಗಿಲು ತೆರೆಯಿಸಿ ಮಧ್ಯೆ ಪ್ರವೇಶಿಸಬೇಕಾಗಿ ಬರುತ್ತಿತ್ತು.

ಸಭ್ಯನಾಯರ್ ಕುಟುಂಬಗಳಿಗೆ ಸೇರಿದ ಮಹಿಳೆಯರು ಎಂದೂ ಸೆಕ್ಸ್ ಬಗ್ಗೆ
ಮಾತನಾಡುತ್ತಿರಲಿಲ್ಲ. ಇದರಲ್ಲಿ ಆಶ್ಚರ್ಯ ಪಡುವಂಥದೇನೂ ಇಲ್ಲ. ಸೆಕ್ಸ್ ಎಂಬುದು
ಅವರ ಪ್ರಮುಖ ಹೆದರಿಕೆಯಾಗಿತ್ತು. ಸೆಕ್ಸ್ ಜೊತೆ ಹಿಂಸೆ–ರಕ್ತಪಾತಗಳು ಕೂಡಿರು
ತ್ತವೆ ಎಂಬುದು ಅವರ ಭಾವನೆಯಾಗಿತ್ತು. ಸೀತೆಗಾಗಿ ಆಸೆಪಟ್ಟು ನಾಶವಾದ ರಾವಣ
ಹಾಗೂ ದ್ರೌಪದಿಗಾಗಿ ಆಸೆಪಟ್ಟದ್ದರಿಂದಲೇ, ಅವನ ಪತಿ ಭೀಮನಿಂದ ಹತನಾದ
ಕೀಚಕ—ಇವರ ಕಥೆಗಳು ಅವರಿಗೆ ಪರಿಚಿತವಾಗಿದ್ದುವು. ಇನ್ನೂ ಬಾಲ್ಯ ಸಂಪೂರ್ಣ
ಕೊನೆಗೊಳ್ಳುವ ಮೊದಲೇ ನಾಯರ್ ಹುಡುಗಿಗೆ ಮದುವೆಮಾಡುವುದೂ, ಅಂತೆಯೇ
ಹುಡುಗಿಗಿಂತ ಅತಿ ಹೆಚ್ಚು ವಯಸ್ಸಾದ ಹುಡುಗ, ಮದುವೆಯ ದಿನ ರಾತ್ರಿಯೇ ತನ್ನ
ಲೈಂಗಿಕ ಆಸಕ್ತಿಯ ಅವಸರದ ನಡವಳಿಕೆಯಿಂದ ಅವಳಿಗೆ ತೀವ್ರ ಆಘಾತವುಂಟಾಗಿ
ವುದೂ ಆಗ ರೂಢಿಯಾಗಿತ್ತು. ತೌಲನಿಕವಾಗಿ ಹೇಳುವುದಾದರೆ, ಯಾವುದೇ ಕ್ಷೋಭೆ
ಅಥವಾ ತುಮುಲಗಳಿಂದ ಕೂಡಿರದ ಲೈಂಗಿಕ ಜೀವನ ನಡೆಸಿದ ನಾಯಕಿಯೆಂದರೆ
ರಾಧೆಯೊಬ್ಬಳೇ. ತನ್ನ ಪ್ರಿಯಕರನಾದ ನೀಲಮೇಘಶ್ಯಾಮನಿಗಾಗಿ ಯಮುನಾ ನದಿ
ತೀರದಲ್ಲಿ ಅವಳು ಕಾಯುತ್ತಿದ್ದಳು. ಆದರೆ ಅವಳು ಇನ್ನೊಬ್ಬನ ಮಡದಿ; ಆದ್ದರಿಂದ
ಆಕೆ ಜಾರೆಯೇ. ನ್ಯಾಯಸಮ್ಮತವಾದ ಅಂದರೆ, ನಿಷಿದ್ಧವಲ್ಲದ ಸೆಕ್ಸ್‌ನ ಕಕ್ಷೆಯಲ್ಲಿ
ಕಾಣಬರುವುದೆಂದರೆ ಕ್ರೌರ್ಯ ಹಾಗೂ ಹಿಂಸೆಗಳು ಮಾತ್ರ.

ನಮ್ಮ ನಲಾಪತ್ ಮನೆಯ ಅಡಿಗೆ ಮನೆಗೆ ಅನಂತರ ಬಂದ ಕೆಲಸದವಳ
ಕುಸ್ಸು ಕುಟ್ಟಿ. ಮೈ ಬಿಳಿಚಿಕೊಂಡ ಕೃಶಕಾಯದ ಇವಳು ಬಂದದ್ದು ಕಾನ್ನೋಲಿ ಕಾಲುವೆ
ಯಾಚೆಗಿರುವ ಒಂದು ಹಳ್ಳಿಯಿಂದ. ಈ ಕಾಲುವೆಯನ್ನು ದೋಣಿಯಲ್ಲಿ ಕುಳಿತು ದಾಟ
ಬೇಕಾಗಿತ್ತು. ಅವಳು ಬರುವಾಗ ತನ್ನೊಂದಿಗೆ ಬಟ್ಟೆ ಗಂಟೊಂದನ್ನು ತಂದಿದ್ದಳು
ಅವಳು ಕುಳ್ಳಿ; ಗಂಟಲ ಮೇಲೆ ನೀಲ ರಕ್ತನಾಳಗಳು ಸೊಗಸಾಗಿ ಕಂಡುಬರುತ್ತಿದ್ದವು
ಅವಳ ನಡವಳಿಕೆ ನನ್ನ ಅಜ್ಜಿಗೆ ತೃಪ್ತಿಯುಂಟು ಮಾಡಿತು. ಕುಸ್ಸು ಕುಟ್ಟಿ ಒಂದೊಂದೆ
ಅಕ್ಷರಗಳನ್ನು ಮೂಗಿನಿಂದ ಹೊರಡಿಸುತ್ತಿದ್ದಂತೆ ಆಡುವ ಮಾತು ನಮಗೆ ಹಂದಿಯ
ನೆನಪು ತರುತ್ತಿತ್ತು. ಅವಳು ಮನಸೋ ಇಚ್ಛೆ ತಿನ್ನುತ್ತಿದ್ದಳು, ಅಲ್ಲದೆ, ಕೆಲವು ದಿನ
ಸಂಜೆ ಹಟ್ಟಿಯ ಹಿಂಭಾಗಕ್ಕೆ ತೆರಳಿ ತಾನು ತಿಂದುದೆಲ್ಲವನ್ನೂ ವಾಂತಿ ಮಾಡು
ತ್ತಿದ್ದಳು.

ಒಂದು ದಿನ, ನಾನವಳನ್ನು ಹಿಂಬಾಲಿಸಿದೆ. ವಾಂತಿಮಾಡಿ, ತನ್ನ ಮುಖ
ಮೇಲಿನ ಬೆವರನ್ನು ಧೋತಿಯ ಮುಂಭಾಗದಿಂದ ಒರಸಿಕೊಳ್ಳುತ್ತಾ ಇದ್ದ ಅವಳನ

ನೋಡುತ್ತ ಅವಳ ಹಿಂದೆ ನಿಂತುಕೊಂಡೆ. 'ಏನಾಗಿದೆ ನಿನಗೆ?' ಎಂದು ನಾನು ಆವಳನ್ನು ಕೇಳಿದೆ. 'ಏನೂ ಇಲ್ಲ' ಎಂದಳು ಆಕೆ. 'ಈ ದಿನ ನಾನು ತುಂಬ ಹುಣಿಸೆಹಣ್ಣನ್ನು ತಿಂದೆ, ಆದ್ದರಿಂದಲೇ ದೇಹಾಲಸ್ಯ. ಪ್ರತಿಬಾರಿ ಹುಣಿಸೆಹಣ್ಣು ತಿಂದಾಗಲೂ ನನ್ನ ಆರೋಗ್ಯ ಕೆಡುತ್ತದೆ. ಇದನ್ನು ನಿನ್ನ ಅಜ್ಜಿಗೆ ಹೇಳಬೇಡ ...' 'ಆರೋಗ್ಯಕ್ಕೆ ಅಷ್ಟು ಹಾನಿಕರವೆಂದೂ ತಿಳಿದೂ ಅಷ್ಟೊಂದು ಹುಣಿಸೆಹಣ್ಣು ತಿನ್ನುವುದೇಕೆ' ಎಂದು ಅವಳನ್ನು ಪ್ರಶ್ನಿಸಿದೆ. 'ನಿಮ್ಮೆಲ್ಲರಂತೆ ನಾನು ವಿದ್ಯಾವಂತಳಲ್ಲ. ಇಂಗ್ಲಿಷಾಗಲಿ ಅಂಥ ಇತರ ವಿದ್ಯೆಯಾಗಲೀ ನನಗೇನೂ ತಿಳಿದಿಲ್ಲ' ಎಂದಳು ಆಕೆ. 'ನಾನು ಬಡವಳು, ಏನೂ ತಿಳಿಯದವಳು. ಪೆದ್ದಳಲ್ಲದೆ ಇನ್ನೇನು ತಾನೇ ಆಗಲು ನನ್ನಂಥ ಹುಡುಗಿಗೆ ಸಾಧ್ಯ?'

ನಿಜವಾಗಿಯೂ ಅವಳು ಮೂರ್ಖಳು ಎಂದು ನಾನು ಭಾವಿಸಿದೆ. ಒಂದೆರಡು ತಿಂಗಳ ಅನಂತರ ಒಂದು ದಿನ ಬೆಳಗ್ಗೆ ಕೆಳಗೆ ಗದ್ದಲದ ಧ್ವನಿಯನ್ನು ಕೇಳಿ ನನಗೆ ಥಟ್ಟನೆ ಎಚ್ಚರವಾಯಿತು. 'ನಿನ್ನ ಬಟ್ಟೆಗಳನ್ನು ಬದಲಿಸಿ ಈ ಕ್ಷಣವೇ ಇಲ್ಲಿಂದ ಹೊರಡು' ಎಂದು ನನ್ನ ಅಜ್ಜಿ ಕೂಗುತ್ತಿದ್ದರು. ಕುನ್ಹುಕುಟ್ಟಿ ತನ್ನ ಕೊಳಕಾದ ಕೊಠಡಿಯ ಹೊರಗೆ ರಕ್ತದ ಮಡುವಿನಲ್ಲಿ ನಿಂತುಕೊಂಡಿದ್ದಳು. ನಾನು ಸುತ್ತಲೂ ನೋಡಿದೆ. ಗೋಡೆಗಳಿಗೂ ರಕ್ತ ಹಾರಿತ್ತು. 'ಏನಾಯಿತು?' ಎಂದು ನಾನು ಅಜ್ಜಿಯನ್ನು ಕೇಳಿದೆ. ಅವಳೇನೂ ಹೇಳಲಿಲ್ಲ. ಜೋರಾಗಿ ನನ್ನನ್ನು ತಳ್ಳಿದಳು ಅಷ್ಟೆ.

ಅರ್ಧಗಂಟೆಯೊಳಗೆ, ನಮ್ಮನ್ನು ಬಿಟ್ಟು ಹೊರಡಲು ತನ್ನ ಬಟ್ಟೆಗಂಟಿನೊಂದಿಗೆ ಕುನ್ಹುಕುಟ್ಟಿ ಸಿದ್ಧಳಾದಳು. ದೋಣಿಗೆ ಅವಳನ್ನು ಏರಿಸಿ ಬರುವ ಹೊಣೆಯನ್ನು ನಮ್ಮ ಹೊಲದ ಕೆಲಸಗಾರನೊಬ್ಬನಿಗೆ ವಹಿಸಲಾಗಿತ್ತು. ಆ ದೋಣಿ ಅವಳಿಗಾಗಿಯೇ ಕಾಯುತ್ತಿದ್ದಂತಿತ್ತು. ಅಡಿಗೆಮನೆಯ ಆ ಕೆಲಸದ ಹುಡುಗಿ ಅಜ್ಜಿಯ ವಿಶ್ವಾಸ ಕಳೆದುಕೊಂಡಿದ್ದಾಳೆ ಎಂಬುದು ನನಗೆ ಸ್ಪಷ್ಟವಾಗಿತ್ತು. ಅವಳ ಅಪರಾಧವಾದರೂ ಏನು? ನನಗೆ ತಿಳಿದಿರಲಿಲ್ಲ. ಒಂದು ಅಪಘಾತದಂತೆ ನನಗಿದು ತೋರಿತ್ತು. ಅವಳು ಮನೆಯ ಚಾವಣಿಯ ತೊಲೆಗಳಿಂದ ಕೆಳಗೆ ಬಿದ್ದು ಗಾಯಮಾಡಿಕೊಂಡಳೇ?

ಅನಂತರ, ಅಡಿಗೆಯವನಿಂದ ನನಗೆ ತಿಳಿದು ಬಂದುದು ಇಷ್ಟು: ಅವಳು ಶೀಲಭ್ರಷ್ಟಳಂತೆ, ಒಂದುಸಾರಿ ಗರ್ಭಪಾತವನ್ನೂ ಮಾಡಿಸಿಕೊಂಡಿದ್ದಳಂತೆ. ಈ ಶಬ್ದಗಳೇ ನನಗೆ ಹೊಸದಾಗಿದ್ದುವು. ನನಗೇನೂ ಅರ್ಥವಾಗಲಿಲ್ಲ. 'ನಿನ್ನ ಅಜ್ಜಿ ಯಾರ ಬಗ್ಗೆಯೂ ಯಾವುದೇ ಕೆಟ್ಟದನ್ನು ಅನುಮಾನಿಸದಂಥ ಒಳ್ಳೆಯ ವ್ಯಕ್ತಿ' ಎಂದು ಅಡಿಗೆಯವ ಹೇಳಿದ. ತನ್ನ ಕೊಳೆಗಂಟಿನೊಂದಿಗೆ ಹೋಗುತ್ತಿದ್ದ ಕುನ್ಹುಕುಟ್ಟಿಯನ್ನು ನೋಡುತ್ತಿರುವಾಗಲೇ ಅವಳು ಕೆಟ್ಟವಳು ಎಂದು ನನಗನಿಸಿತ್ತು. ಆದರೆ ನನ್ನ ಅಭಿಪ್ರಾಯವನ್ನು ಯಾರು ಕೇಳುತ್ತಾರೆ?

೨. ಕೆಂದುಬಣ್ಣದ ಮಗುವಿಗೆ ಯೂರೋಪಿನ ಶಾಲೆಯಲ್ಲಾದ ಅಪಮಾನ

ಬೆಳೆಯುತ್ತಿರುವ ಚಿಕ್ಕಮಗುವಾಗಿ ಕಲ್ಕತ್ತದಲ್ಲಿ ನಾನಿದ್ದಾಗ, ಬ್ರಿಟಿಷರು ಇನ್ನೂ ಭಾರತವನ್ನು ಆಳುತ್ತಿದ್ದರು. ಆದರೆ ಸಭ್ಯ ಸಮಾಜದಲ್ಲಿ ಅವರು ನಮ್ಮ ಸರಿಸಮಾನರಂತೆ ವರ್ತಿಸುತ್ತಿದ್ದರು. ಬ್ರಿಟಿಷ್ ಕುಟುಂಬಗಳವರು ಭಾರತೀಯರಲ್ಲಿ ಒಬ್ಬಿಬ್ಬರನ್ನು

ನಿಕಟ ಸ್ನೇಹಿತರನ್ನಾಗಿ ಮಾಡಿಕೊಂಡು ಆಗಾಗ ಅವರನ್ನು ಸಂದರ್ಶಿಸುವುದು ಸಾಮಾನ್ಯವಾಗಿತ್ತು.

ಆ ಸಮಯದಲ್ಲಿ ನನ್ನ ತಂದೆಯ ಮೇಲಧಿಕಾರಿ ಬೊಕ್ಕ ತಲೆಯ ಕೆಂಪುಮುಖದವನಾಗಿದ್ದ. ಅವನ ಹೆಸರು ರಾಸ್. ಸಭ್ಯನಾದ ಅವನು ನಮ್ಮ ಮನೆಗೆ ಬಂದಾಗಲೆಲ್ಲ ನನ್ನ ತಂದೆಯನ್ನು "ನನ್ನ ಸನ್ಮಿತ್ರ ನಾಯರ್" ಎಂದೇ ಕರೆಯುತ್ತಿದ್ದ. ತನ್ನ ಮಾತಿನಿಂದಲೇ ನಮ್ಮೆಲ್ಲರ ಮೈ ಜುಮ್ಮೆನ್ನುವಂತೆ ಮಾಡುತ್ತಿದ್ದ.

ಒಂದುಸಲ, ತಿಂಗಳ ಕಾಲ ತಂಗಲೆಂದು ನಾವು ಅಜ್ಜಿಯೊಂದಿಗೆ ಮಲಬಾರಿಗೆ ಹೋದಾಗ, ನಮ್ಮ ಅಡಿಗೆಯವನನ್ನು ಶ್ರೀಮತಿ ರಾಸ್ ಮನೆಗೆ ಕಳುಹಿಸಿದೆವು. ಯೂರೋಪಿನ ಅಡಿಗೆ ಮಾಡುವ ವಿಧಾನವನ್ನು ಅವನು ಅಲ್ಲಿ ಕಲಿಯಲೆಂಬುದು ನಮ್ಮ ಉದ್ದೇಶವಾಗಿತ್ತು. ನಾವು ಬಳಸಿಕೊಳ್ಳುವ ಪ್ರತಿಯೊಂದು ರಜೆಯ ಅವಧಿಯಲ್ಲಿಯೂ ನಮ್ಮ ಅಡಿಗೆಯವನು ಪಾಕಕಲೆಯಲ್ಲಿ ಹೆಚ್ಚು ಹೆಚ್ಚು ಪ್ರಗತಿ ಸಾಧಿಸಿದ. ಅವನು ಸಿದ್ಧಪಡಿಸುವ ಹೊಸ ಅಡಿಗೆಗೆ ಹೊಂದಿಕೊಳ್ಳಲು, ನಮ್ಮ ಭೋಜನ ವಿಧಾನವನ್ನು ಮಾರ್ಪಡಿಸಿಕೊಳ್ಳಲೇಬೇಕಾದ ಪರಿಸ್ಥಿತಿ ಬರುವತನಕ, ಅವನ ಶಿಕ್ಷಣ ಮುನ್ನಡೆಯಿತು.

ಅನ್ನ ಹಾಗೂ ಮಸಾಲೆ ಪಲ್ಯಗಳ ಬದಲು ಅವನು ಸೂಪ್, ಕಟ್‌ಲೆಟ್ ಮತ್ತು ಮಾಂಸದ ಭಕ್ಷ್ಯಗಳನ್ನು ತಯಾರಿಸಿ ನಮಗೆ ಬಡಿಸತೊಡಗಿದ. ನನ್ನ ತಾಯಿಗಾಗಿ ಒಂದು ತಟ್ಟೆಯಷ್ಟು ಅನ್ನವನ್ನೂ ಧಾನ್ಯದ ಪಲ್ಯವನ್ನೂ ಸಿದ್ಧಪಡಿಸುತ್ತಿದ್ದ. ಅವಳು ತನ್ನ ರುಚಿಯನ್ನು ಬದಲಾಯಿಸಿಕೊಳ್ಳಲಾರಳು ಎಂದು ಅಡಿಗೆಯವನು ಭಾವಿಸಿದ್ದುದೇ ಇದಕ್ಕೆ ಕಾರಣವಾಗಿತ್ತು. ನನ್ನ ತಂದೆ ಭೋಜನಕ್ಕೆ ಫೋರ್ಕ್ ಹಾಗೂ ನೈಫ್‌ಗಳನ್ನು ಬಳಸುತ್ತಿದ್ದರು. ಮಕ್ಕಳು, ನನ್ನ ಅಣ್ಣ ಮತ್ತು ನಾನು, ಬೇಗಬೇಗನೆ ಊಟಮಾಡುತ್ತಿದ್ದೆವು. ಆಗ ಯಾರ ಮೇಲ್ವಿಚಾರಣೆಯೂ ಇರುತ್ತಿರಲಿಲ್ಲ. ನಮ್ಮ ಕಂದುಬಣ್ಣದ ಚಿಕ್ಕ ಬೆರಳುಗಳಿಂದ, ಪಾಶ್ಚಾತ್ಯ ಅಡಿಗೆಯನ್ನು ಊಟಮಾಡುತ್ತಿದ್ದೆವು, ಕೈಗಳನ್ನು ನೆಕ್ಕಿಕೊಳ್ಳುತ್ತಿದ್ದೆವು; ನಮ್ಮ ತಟ್ಟೆಗಳಿಗೆ ಬಡಿಸಿದ ಎಲ್ಲ ಪದಾರ್ಥಗಳನ್ನು ಸ್ವಾಹಾ ಮಾಡುತ್ತಿದ್ದೆವು. ಆಗ ಅಡಿಗೆಯವನು ಮುಖ ಸಿಂಡರಿಸಿಕೊಂಡು ನಮ್ಮ ಪಕ್ಕ ನಿಲ್ಲುತ್ತಿದ್ದ. ನಮ್ಮನ್ನು ಅನಾಗರಿಕರೆಂದು ಅವನು ಭಾವಿಸುತ್ತಿದ್ದನೇನೊ!

ನಮ್ಮ ತಂದೆ ಯಾವಾಗಲೂ ಕಾರ್ಯನಿರತರಾಗಿರುತ್ತಿದ್ದರು. ಆಟೊಮೋಬೈಲ್ ಕಾರ್ಖಾನೆಯೊಂದರಲ್ಲಿ ನೌಕರಿ ಹಿಡಿದಿದ್ದ ಅವರು ಭಾರತೀಯ ರಾಜಕುಮಾರರಿಗೂ ಅವರ ಸಂಬಂಧಿಗಳಿಗೂ ರೋಲ್ಸ್‌ರಾಯ್, ಹಂಬರ್ ಮತ್ತು ಬೆಂಟ್ಲಿ ಕಾರುಗಳನ್ನು ಮಾರುತ್ತಿದ್ದರು. ನನ್ನ ತಾಯಿ ಅಸ್ಥಿರ ಸ್ವಭಾವದವಳೂ ಉದಾಸೀನ ಪ್ರವೃತ್ತಿಯವಳೂ ಆಗಿದ್ದಳು. ದೊಡ್ಡ ಮಂಚವೊಂದರ ಮೇಲೆ ಕವುಚಿ ಮಲಗಿಕೊಂಡು ಮಲೆಯಾಳ ಭಾಷೆಯಲ್ಲಿ ಕವನಗಳನ್ನು ಹೊಸೆಯುತ್ತ ಅವಳು ಕಾಲ ಕಳೆಯುತ್ತಿದ್ದಳು. ದಿನವಿಡೀ ದುಡಿಯುವ ಯಾವ ಕೆಲಸದವಳೂ ಆಗ ನಮ್ಮ ಮನೆಯಲ್ಲಿ ಇರಲಿಲ್ಲ. ಫರ್ಲಾಂಗ್ ದೂರದಲ್ಲಿದ್ದ ಯೂರೋಪಿಯನ್ ಶಾಲೆಗೆ, ಅಡಿಗೆಯವನೇ ನಮ್ಮನ್ನು ಕರೆದುಕೊಂಡು ಹೋಗುತ್ತಿದ್ದ ಮತ್ತು ಮಧ್ಯಾಹ್ನ ಶಾಲೆಯಿಂದ ಮನೆಗೆ ಕರೆತರುತ್ತಿದ್ದ.

ಅಡಿಗೆಯವನೇನೂ ವಾತ್ಸಲ್ಯಮಯಿಯಾಗಿರಲಿಲ್ಲ. ಆದ್ದರಿಂದ ನಾವು ಹೆಚ್ಚು ಕಡಮೆ ನಿರ್ಲಕ್ಷ್ಯಕ್ಕೊಳಗಾಗಿಯೇ ಬೆಳೆದೆವು ಎನ್ನಬಹುದು. ತಂದೆ ತಾಯಿಗಳು ಮಕ್ಕಳ ಮೇಲೆ ಪ್ರೀತಿತೋರಿಸುವಂಥ ಸಾಮಾಜಿಕ ವಲಯದಲ್ಲಿ ನಾವು ಎಲ್ಲರ ನಿರ್ಲಕ್ಷ್ಯಕ್ಕೆ ಒಳಗಾದ ದುರದೃಷ್ಟ ಶಾಲಿಗಳು ಎಂಬ ಅರಿವು ನಮಗಿದ್ದುದರಿಂದ, ನಮ್ಮ ನಡುವೆಯೆ ಪ್ರೀತಿಯ ಪ್ರಬಲ ಸಂಬಂಧವೊಂದು ಬೆಳೆಯಿತು. ಭಿಕ್ಷೆ ಬೇಡಲು ಹೋದಾಗ ಕೈಗಾಡಿಯೊಂದರ ಮೇಲೆ ತನ್ನನ್ನು ಕುಳ್ಳಿರಿಸಿಕೊಂಡ ಜೊತೆಗಾರನಮೇಲೆ ಕುಷ್ಠರೋಗಿ ತೋರಿಸಬಹುದಾದ ಪ್ರೀತಿಯಷ್ಟೇ ನಮ್ಮ ನಡುವೆ ಇತ್ತು.

ನನ್ನ ಅಣ್ಣ ಸ್ಥೂಲಕಾಯನಾಗಿದ್ದ. ಅವನ ಬಣ್ಣ ಕಪ್ಪು; ಅವನ ಕಣ್ಣುಗಳು ದುಂಡಾಗಿ ಹೊಳೆಯುತ್ತಿದ್ದುವು. ತರಗತಿಯಲ್ಲಿ ಅತ್ಯಂತ ಬುದ್ಧಿವಂತನಾಗಿದ್ದರೂ ತರಗತಿಯಲ್ಲಿದ್ದ ಬಿಳಿಯ ಹುಡುಗರು ಅವನಿಗೆ ತಮಾಷೆ ಮಾಡುತ್ತಿದ್ದರು ಹಾಗೂ ಚೂಪಾದ ಪೆನ್ಸಿಲನ್ನು ಅವನ ಮೂಗಿನಹೊಳ್ಳೆಗೆ ತೂರಿಸಿ ಹಿಂಸಿಸುತ್ತಿದ್ದರು. ಒಂದು ದಿನ ಅವನ ಅಂಗಿಯ ಮುಂಭಾಗವಿಡೀ ರಕ್ತದ ಕಲೆಗಳಿಂದ ತುಂಬಿತ್ತು. ಬಿಳಿ ಹುಡುಗರ ಕ್ರೌರ್ಯದಿಂದ ಅವನು ದಿಗ್‌ಭ್ರಮೆಗೊಂಡಿದ್ದ. ಕಣ್ಣೀರು ಸುರಿಸಲು ಕೂಡ ಅವನು ಹೆದರುತ್ತಿದ್ದ. ಹಿಂಸಿಸಿದ ಹುಡುಗ ವಿಲಿಯಮ್ ಹೊಡೆಯುವುದನ್ನೇನೋ ನಿಲ್ಲಿಸಿದ ಆದರೆ "ನೀನು ಕಪ್ಪಾದರೂ ನಿನ್ನ ರಕ್ತದ ಬಣ್ಣ ಕೆಂಪೇ" ಎಂದು ಅಣಕಿಸಿದ. ಆಗ ಕೋಪೋದ್ರೇಕಗೊಂಡ ನಾನು ಉನ್ಮತ್ತನಾಗಿ ಅವನ ಮುಖವನ್ನು ಪರಚಿದೆ. ಆದರೆ ಸದಾ ಬಿಳಿಯರ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿದ್ದ ಕಠಿಣ ಸ್ವಭಾವದ ಆ ಆಂಗ್ಲೋ-ಇಂಡಿಯನ್ನರಿಂದ ಬೇಗನೆ ಸೋತುಹೋದೆ. ಬಿಳಿಯ ಬಣ್ಣದ, ಮೂಲೆ ನೆಯ್ಗೆ ಬಟ್ಟೆಯಿಂದ ತಯಾರಿಸಲಾದ ಶಾಲಾ ಸಮವಸ್ತ್ರದ ಅಡಿ ಕಂದುಬಣ್ಣದ ಚರ್ಮವನ್ನು ಹೊಂದಿರುವ ಕಾರಣದಿಂದಲೇ, ಶಾಲೆಯಲ್ಲಿ ಅನುಭವಿಸಬೇಕಾಗಿ ಬಂದ ಹಿಂಸೆಯನ್ನು ಕುರಿತಂತೆ ತಂದೆ ತಾಯಿಗಳ ಎದುರು ನಾವು ತುಟಿಪಿಟಕ್ ಅನ್ನಲಿಲ್ಲ.

ಆಗಾಗ ನಮ್ಮ ಶಾಲೆಗೆ ಗಣ್ಯ ವ್ಯಕ್ತಿಗಳು ಸಂದರ್ಶನ ನೀಡುತ್ತಿದ್ದರು. ಉದಾಹರಣೆಗೆ, ಗವರ್ನರರ ಪತ್ನಿ, ಹಣ್ಣುಮೀಸೆಯ ಅಡ್ಮಿರಲ್ ಅಥವಾ ಬಕ್ಕಿಂಗ್ ಹ್ಯಾಮ್ ಅರಮನೆಯ ಕುಟುಂಬದವರೊಂದಿಗೆ ಸಂಬಂಧ ಹೊಂದಿರುವೆನೆಂದು ಬಡಾಯಿ ಕೊಚ್ಚಿಕೊಳ್ಳುವ ಬೂದುಬಣ್ಣದ ಸಿಲ್ಕ್ ಸೀರೆಯುಟ್ಟಂಥ ಮಹಿಳೆ ಇತ್ಯಾದಿ.

ನಾವು ಮಹಿಳಾ ಪ್ರಿನ್ಸಿಪಾಲರನ್ನು 'ಮೇಡಮ್' ಎಂದು ಕರೆಯುತ್ತಿದ್ದೆವು. ಅಂಥ ಗಂಭೀರ ಸ್ವಭಾವದ ಗಣ್ಯ ವ್ಯಕ್ತಿಗಳನ್ನು ಆಕೆ ಹೇಗೆ ಸೆಳೆಯುತ್ತಿದ್ದಳೋ ನಮಗೆ ತಿಳಿಯದು. ನಮ್ಮದೇನೂ ದೊಡ್ಡ ಶಾಲೆಯಲ್ಲ. ಗಣ್ಯವ್ಯಕ್ತಿಗಳು ನಮ್ಮ ಶಾಲೆಯನ್ನು ಆಗಾಗ ಸಂದರ್ಶಿಸಲು, ರಾಷ್ಟ್ರಗೀತೆಯಾದ 'ರೂಲ್ ಬ್ರಿಟಾನಿಯ' ಪದ್ಯವನ್ನು ನಾವು ಇತರರಿಗಿಂತ ಗಟ್ಟಿಯಾಗಿ ಹಾಡುತ್ತಿದ್ದುದೇ ಪ್ರಾಯಶಃ ಕಾರಣವಾಗಿರಬೇಕು. ಒಂದು ಬೆಳಿಗ್ಗೆ ಮೇಡಂ ಪಿಯಾನೊ ಪಕ್ಕ ಕುಳಿತಿದ್ದರು. ಪಿಯಾನೊ ಮೇಲೆ ಬ್ರಿಟಿಷ್ ರಾಜ ಕುಟುಂಬದ ವರ್ಣರಂಜಿತ ಛಾಯಾಚಿತ್ರವಿತ್ತು. ನಾವು ಸ್ವರವೇರಿಸಿ "ಬ್ರಿಟನ್ಸ್ ನೆವರ್ ಶಲ್ ಬಿ ಸ್ಲೇವ್ಸ್" ಪದ್ಯವನ್ನು ಹಾಡಿದೆವು. ಇದನ್ನು ಕೇಳುವ ಆಸೆಯಿಂದ ರಸ್ತೆಯಲ್ಲಿ ಸಾಗುತ್ತಿದ್ದ ಪೋಸ್ಟ್‌ಮ್ಯಾನ್ ಕೂಡ ತನ್ನ ನಡಿಗೆಯನ್ನು ನಿಧಾನಗೊಳಿಸಿದ.

ದೊರೆ ಆರನೆಯ ಜಾರ್ಜ್ (ಅವನ ಆತ್ಮವನ್ನು ಪರಮಾತ್ಮ ರಕ್ಷಿಸಲಿ) ಚಿನ್ನದ ಗಿಲೀಟು ಹಚ್ಚಲಾದ ಚೌಕಟ್ಟಿನಿಂದ ನಮ್ಮತ್ತ ಕಣ್ಣು ಮಿಟುಕಿಸುತ್ತಿದ್ದಂತೆ ಕಾಣುತ್ತಿತ್ತು. ಬ್ರಿಟಿಷರು ತಮ್ಮ ಹುಸಗೀತೆಯನ್ನು ಭಾರತದಲ್ಲಿ ಹಾಡುತ್ತಾ ಇರುತ್ತಾರೆ ಎಂದು ಅವನು ತಿಳಿದಿರುವನೋ ಎಂಬಂತೆ ಅನಿಸುತ್ತಿತ್ತು.

ಆ ಕಾಲದಲ್ಲಿ ಶರ್ಲಿ ಟೆಂಪಲ್ ಅತ್ಯಂತ ಸುಂದರಿಯೆನಿಸಿದ್ದಳು. ಚಿನ್ನದ ಉಂಗುರ ತೊಟ್ಟು ಸದಾ ಮುಗುಳ್ನಗುತ್ತಿರುವ ಆಕೆಯನ್ನು ಚಿಕ್ಕ ಹುಡುಗಿಯರೆಲ್ಲ ಅನುಕರಿಸುತ್ತಿದ್ದರು. ನಮ್ಮ ಶಾಲೆಯಲ್ಲಿ ಪಿಯಾನೊ ಇರಿಸಿದ ಸ್ಥಳದ ಹಿಂದಿರುವ ಗೋಡೆಯಲ್ಲಿ ಅವಳ ಚಿತ್ರವಿತ್ತು. ನಮ್ಮ ತರಗತಿಯಲ್ಲಿ ಶರ್ಲಿ ಎಂಬ ಹೆಸರಿನ ಇನ್ನೊಬ್ಬಳು ಹುಡುಗಿಯಿದ್ದಳು. ಪಾಟಲವರ್ಣದ ಕೆನ್ನೆಗಳುಳ್ಳ ಅವಳು ಸ್ಕಾಟ್‌ಲ್ಯಾಂಡಿನವಳು. ಅವಳೂ ಹಳದಿ ಉಂಗುರ ಧರಿಸಿದ್ದಳು. ಗಣ್ಯವ್ಯಕ್ತಿಗಳು ಶಾಲೆಗೆ ಭೇಟಿ ನೀಡಿದ ಸಂದರ್ಭಗಳಲ್ಲೆಲ್ಲ, ಅವರ ಕೈಗೆ ಹೂಗೊಂಚಲು ನೀಡುವ ಕೆಲಸ ಶರ್ಲಿಯದೇ ಆಗಿತ್ತು.

ಒಮ್ಮೆ ನಾನು ಬರೆದ ಪದ್ಯವೊಂದನ್ನು ಶರ್ಲಿ ಹಾಡುವ ಸಂದರ್ಭ ಬಂತು. ಹಾಡನ್ನು ಕೇಳಿದ ಗಣ್ಯ ಸಂದರ್ಶಕರು ಪದ್ಯ ಬರೆದವರಾರೆಂದು ಪ್ರಶ್ನಿಸಿದಾಗ, "ಪ್ರಾಯಶಃ ಶರ್ಲಿಯೇ ಇರಬೇಕು" ಎಂದು ಪ್ರಿನ್ಸಿಪಾಲರು ಉತ್ತರಿಸಿದರು. ಶರ್ಲಿ ಸುಂದರಿಯಷ್ಟೇ ಅಲ್ಲ; ಪ್ರತಿಭಾವಂತಳೂ ಹೌದು. ಶಾಲೆಗೆ ಒಂದುಸಲ ಬಂದ ರಾಜ್ಯಪಾಲರ ಹೆಂಡತಿ ಕೂಡ ಅವಳನ್ನು ಮೆಚ್ಚಿ ವಿಶೇಷವಾದ ಮುತ್ತು ಕೊಟ್ಟಿದ್ದರು; "ಎಷ್ಟು ಚುರುಕು! ಎಷ್ಟು ಜಾಣೆ!" ಎಂದು ಉದ್ಗರಿಸಿದ್ದರು.

ಗಣ್ಯ ವ್ಯಕ್ತಿಗಳು ಶಾಲೆಗೆ ಸಂದರ್ಶನ ನೀಡಿದಾಗ, ಯುಕ್ತಾಯುಕ್ತ ಪರಿಜ್ಞಾನವಿರುವ ಕಂದುಬಣ್ಣದ ವಿದ್ಯಾರ್ಥಿಗಳು ತಾವಾಗಿ ದೂರ ಹೋಗಿ ಯಾರಿಗೂ ಕಾಣದಂತೆ ಇರುತ್ತಿದ್ದರು ಅಥವಾ ಜಮಖಾನದ ಕೆಳಗಿನ ಕಸ ಗುಡಿಸುತ್ತಿದ್ದರು. ಕೆಲವು ಬಾರಿ ಶೌಚಗೃಹಗಳ ಹಿಂಭಾಗದ ಕಾರಿಡಾರಿನಲ್ಲಿ ಅವರು ಕಾಯುತ್ತ ನಿಲ್ಲಬೇಕಾಗುತ್ತಿತ್ತು. ಆಗವರಿಗೆ ಜೊತೆಗೂಡುತ್ತಿದ್ದವರೆಂದರೆ ಶಾಲೆಯ ಆಯಾಗಳು. ಆ ದಿನಗಳಲ್ಲಿ ನಮ್ಮಲ್ಲಿ ಯಾರೊಬ್ಬರೂ ಸುರೂಪಿಗಳಾಗಿರಲಿಲ್ಲ. ನಮ್ಮ ಒಟ್ಟು ಸಂಖ್ಯೆ, ಕಪ್ಪು ಬಣ್ಣದ ಆಂಗ್ಲೋ ಇಂಡಿಯನ್ ಆದ ಲೂಯಿಸನೂ ಸೇರಿದಂತೆ, ಆರು. ಕಂದುಬಣ್ಣದ ವಿದ್ಯಾರ್ಥಿಗಳ ಜೊತೆ ಸೇರಬೇಕೋ ಬಿಳಿಯರ ಜೊತೆ ಸೇರಬೇಕೋ ಎಂದು ಲೂಯಿಸನಿಗೆ ತಿಳಿಯುತ್ತಿರಲಿಲ್ಲ. ನಮ್ಮನ್ನು ದ್ವೇಷಿಸುತ್ತಿದ್ದುದಕ್ಕಿಂತ ಹೆಚ್ಚಾಗಿ ಬಿಳಿಯರು ಅವನನ್ನು ದ್ವೇಷಿಸುತ್ತಿದ್ದರು. ಆದರೂ ಅವನು ಹಳ್ಳಿಗಮಾರನಂತೆ ಬಿಳಿಯ ವಿದ್ಯಾರ್ಥಿಗಳನ್ನೇ ಹಿಂಬಾಲಿಸುತ್ತಿದ್ದ. ನಾಯಿಯಂತೆ ಬೊಗಳುತ್ತ, ಕತ್ತೆಯಂತೆ ಅರಚುತ್ತ ಅವರಿಗೆ ಖುಶಿ ನೀಡುತ್ತಿದ್ದ.

ಅನು : ಶಂಸ ಐತಾಳ

ಎರಡು ಕತೆಗಳು

ಕಮಲಾ ದಾಸ್

೧. ಮುಳ್ಳುಮುಖದ ಯುವಕ

ಸಾಯುತ್ತಿದ್ದ ಹೆಂಗಸಿನ ಮತ್ತು ಸುಂದರ ಯುವಕನ ನಡುವಣ ಸಂಬಂಧ ಒಂದು ತಿಂಗಳದಷ್ಟೇ ಆಗಿತ್ತು. ಅವಳು ಪ್ರೀತಿಸಿದ್ದವರಲ್ಲಿ ಅವನು ಅತ್ಯಂತ ಚಿಕ್ಕವನೂ ಚೆಲುವನೂ ಆಗಿದ್ದ ; ಸನ್ನಿವೇಶ ಅವಳನ್ನು ಹೆದರಿಸಿತು. ಕಳೆದ ಹದಿನೈದು ದಿನಗಳಲ್ಲಿ ಅವಳಿಗೆ ಎರಡು ದೊಡ್ಡ ಶಸ್ತ್ರಚಿಕಿತ್ಸೆಗಳಾಗಿದ್ದುವು ; ಅವಳ ವೈದ್ಯರನ್ನು ಚಿಂತೆಗೀಡುಮಾಡಿದ್ದ ಅವಳ ಹೃದಯ ಸ್ಥಿತಿ ಹಾಗೆಯೆ ಉಳಿದಿತ್ತು. ಮರುಭೂಮಿಯಲ್ಲಿ ಕಳ್ಳಿಗಳೂ ಮಾಂಸಾಹಾರಿ ಸಸ್ಯಗಳೂ ಬೆಳೆಯ ಬಹುದಾದಂತೆ, ಉತ್ತು ಪಾಳು ಬಿಟ್ಟಿದ್ದ ಅವಳ ಗರ್ಭಕೋಶದಲ್ಲಿ ಸಣ್ಣ ನಾರುಗಳು ಬೆಳೆದಿದ್ದುವು. ಅವಳ ಪಿತ್ತಕೋಶದಲ್ಲಿ ಅಂಟು ಪದಾರ್ಥಗಳಿದ್ದುವು. ಅವಳ ಕರುಳುಗಳಿಗೆ ಕ್ಷಯ ತಗುಲಿತ್ತು. ದುರ್ಬಲ ಹೃದಯ ಮತ್ತು ಇದೆಲ್ಲ ಸೇರಿ, ಅವಳಲ್ಲಿ ಉಳಿದಿದ್ದ ಅಷ್ಟಿಷ್ಟು ಚೆಲುವನ್ನು ಇತ್ತೀಚಿನ ಆ ತಿಂಗಳುಗಳಲ್ಲಿ ಬತ್ತಿಸಿದ್ದುವು. ನಿಯತವಾಗಿ ಅವಳಿಗೆ ಕೊಡಲಾಗಿದ್ದ ಕ್ಲೊರೊಕ್ವಿನ್ ಅವಳ ಬಣ್ಣವನ್ನು ಕ್ವಿನೈನ್‌ನಷ್ಟು ಕಪ್ಪು ಮಾಡಿತ್ತು. ಆದರೂ ಹೆಣ್ಣಾಗಿ–ಹೆಣ್ಣಲ್ಲದೆ ಮತ್ತೇನೂ ಅಲ್ಲ–, ಅವಳು ತನ್ನ ನೀಲಿ ತುಟಿಗಳ ಮೇಲೆ ರಂಗು ಬಳಿದುಕೊಳ್ಳುತ್ತಿದ್ದಳು ಮತ್ತು ಕೂದಲನ್ನು ಪರಿಮಳಯುಕ್ತವಾಗಿ ಉಳಿಸಿಕೊಳ್ಳಲು ಪ್ರತಿನಿತ್ಯವೂ ಸ್ವಚ್ಛಗೊಳಿಸುತ್ತಿದ್ದಳು. ಸಂಜೆಯ ಭೇಟಿಕಾರರು ಹೋದ ಬಹಳ ಹೊತ್ತಿನಮೇಲೆ ಆ ಯುವಕ ಅವಳನ್ನು ಆಸ್ಪತ್ರೆಯ ಕೊಠಡಿಯಲ್ಲಿ ಭೇಟಿ ಮಾಡುತ್ತಿದ್ದ. 'ಭೇಟಿಕಾರರಿಗೆ ಪ್ರವೇಶವಿಲ್ಲ' ಎಂಬ ಫಲಕ ಬಾಗಿಲ ಮೇಲಿತ್ತು ; ಆದರೆ ಕರುಣಾಳುಗಳು ಅದನ್ನು ಅಲಕ್ಷಿಸುತ್ತಿದ್ದರು. ಏಕೆಂದರೆ ಅವಳನ್ನು ನೋಡುತ್ತಿದ್ದ ಪ್ರತಿಯೊಬ್ಬರಿಗೂ ಗೊತ್ತಿತ್ತು, ಕರುಣೆಯೊಂದೆ ಅವಳನ್ನು ಉಳಿಸಬಲ್ಲುದೆಂದು. ಬೋಳಿಸಿದ ಹೊಟ್ಟೆ ಮತ್ತು ಪೂರ್ತಿ ಅಕ್ರಿಫ್ಲಾವಿನ್

ಲೇಪಿಸಿದ ಚರ್ಮ ಹಾಗೂ ಈಜಿಪ್ಷಿಯನ್ 'ಮಮ್ಮಿ' ಯಂತೆ ತನ್ನನ್ನು ಮುಚ್ಚಿದ
ಮೆದು ಬಟ್ಟೆಯ ಸಹಿತ ಅವಳು ತಳ್ಳುಬಂಡಿಯ ಮೇಲೆ ಹೋಗುತ್ತ, ವೈದ್ಯರು ತನ್ನನ್ನು
ಉಳಿಸಬೇಕೆಂಬ ಬಯಕೆ ತನಗುಂಟೆ ಎನ್ನುವುದರ ಬಗೆಗೆ ಕೂಡ ಖಚಿತತೆಯಿಲ್ಲದವ
ಳಾಗಿದ್ದಳು. ಉಳಿದುಕೊಂಡರೆ ಅವಳು ತನ್ನ ಕಂದು ಮೈಯ ಕಿರಿದಾದ ಎಲ್ಲೆಗಳಿಗೆ
ಮತ್ತು ನೀಲಿ ಕಿಂಕಾಪು ಪರದೆಗಳನ್ನುಳ್ಳ ಚಿಕ್ಕ ಮನೆಗೆ ಹಾಗೂ ತನ್ನ ಮೆಚ್ಚಿನ ಪುಟ್ಟ
ಕಂದು ಕಂಚು ವಿಗ್ರಹಗಳಿಗೆ ಮರಳುವಳು; ಆದರೆ ಅವಳು ಶಸ್ತ್ರವೈದ್ಯರ ಕೈಗಳಿಂದ
ನಿಶ್ಶಬ್ದವಾಗಿ ಮತ್ತು ಸುಂದರವಾಗಿ ನುಣಿಚಿಕೊಂಡರೆ, ಅವಳು ಸ್ವತಂತ್ರಳಾಗುವಳು ;
ಸ್ವರ್ಗೀಯವಾಗಿ ಸಜ್ಜುಗೊಳಿಸಿದ ವಿಶ್ವವನ್ನು ಮನೆಯನ್ನಾಗಿ ಪಡೆಯುವಳು. ಅವಳು
ಗಾಳಿಯಲ್ಲಿರುವಳು, ಕಡಲಿನಲ್ಲಿರುವಳು, ಮಳೆಯಲ್ಲಿರುವಳು, ತರುಣ ತನ್ನ ಪತ್ನಿಯೊಡನೆ
ನಡೆದಾಡಿದ ಕಡಲದಂಡೆಯ ಮರಳಿನಲ್ಲಿರುವಳು. ಇರುಳಿನಲ್ಲಿ, ತರುಣ ತನ್ನ ಮಡದಿಗೆ
"ಗಾಳಿ ಇಂದು ತಣ್ಣಗೆ ಕೊರೆಯುತ್ತಿದೆ, ಕಿಟಕಿ ಮುಚ್ಚು" ಎನ್ನುವನು ; ಅವಳು ಕಿಟಕಿ
ಯಲ್ಲಿರುವುದನ್ನರಿಯದೆ ಮಡದಿ ಅದನ್ನು ಮುಚ್ಚಿ, ಅವನ ಮೈಗೆ ಎದುರಾಗಿ ಮಲಗು
ವಳು. ಅವಳಿಗೆ ರಾತ್ರಿ ನೆರವಾಗಲೆಂದು ಎರಡು ಮಾತ್ರೆಗಳನ್ನು ಕೊಡಲಾಯಿತು ;
ಒಂದು ನಿದ್ರೆಮಾತ್ರೆ, ಇನ್ನೊಂದು ನೋವುನಿವಾರಕ. ಅವಳಿಗೆ ಕೊಡಲಾದ ಮೂರನೆಯ
ವರವೆಂದರೆ ಸುಂದರ ಯುವಕ. ಅವನು ಅವಳ ಕೈಯನ್ನು ತನ್ನ ಕೈಯಲ್ಲಿ ಹಿಡಿದು
ಅವಳಿಗೆ ನಿದ್ದೆ ಹತ್ತುವವರೆಗೆ ಕುಳಿತಿರುತ್ತಿದ್ದ. ಆಮೇಲೆ ಅವನು ಉದ್ರಿಕ್ತವಾದ ಭುಜಗಳನ್ನು
ಕುಣಿಸಿ, ಕೊಠಡಿಯನ್ನು ಬಿಡುವನು. ತನ್ನನ್ನು ಪ್ರೀತಿಸುವುದು ಸಾಧ್ಯವೇ ಎಂದ
ಅವಳು ಅವನನ್ನು ತುಂಬಿದ ಕಣ್ಣುಗಳಿಂದ ಮತ್ತು ಬಿಳಿಚಿಕೊಂಡ ಬಾಯಿಂದ ಕೇಳಿದಾಗ
ಅವನು ತನ್ನ ಪಾದರಕ್ಷೆಗಳತ್ತ ಕೆಳಗೆ ನೋಡುವನು ಮತ್ತು "ನನ್ನ ಪಾಲಿಗೆ ನೀನು ಏನೆಂಬ
ದನ್ನು ನೀನು ಬಲ್ಲೆ" ಎನ್ನುವನು. ಆಮೇಲೆ ಅವಳನ್ನು ಮನೆಗೆ ತರಲಾಯಿತು. ಪ್ರ
ಯೊಬ್ಬರೂ ಅವಳಿಗೆ ಮೃದುವಾಗಿದ್ದರು. ಅವಳು ತರುಣನನ್ನು ನೋಡಬಯಸಿದಳು
ಅವನು ಅವಳನ್ನು ಬೆಳಗ್ಗೆ ನೋಡುವುದಾಗಿ ಮಾತು ಕೊಟ್ಟ ; ಈ ಆಲೋಚನೆ ಇರುಳ
ಅವಳನ್ನು ಧೈರ್ಯದಿಂದಿರಿಸಿತು. ಅಂದು ರಾತ್ರಿ ತನಗೆ ನಿದ್ದೆಗುಳಿಗೆಗಳೂ ನೋವು
ನಿವಾರಕಗಳೂ ಬೇಕಿಲ್ಲವೆಂದು ಅವಳು ತನ್ನ ಗಂಡನಿಗೆ ಹೇಳಿದಳು. ನೋವು ಅಪರಾಧ
ದೃಶ್ಯಕ್ಕೆ ಹಿಂದಿರುಗುವ ಕೊಲೆಗಡುಕನಂತಿತ್ತು. ಇರುಳು ಶಸ್ತ್ರವೈದ್ಯನ ಭ್ರಾಮಕ ಚೂ
ಅವಳೊಳಗಿನ ಖಾಲಿ ಜಾಗಗಳನ್ನು ಚೊಕ್ಕಟ ಮಾಡುತ್ತಿತ್ತು. ನಾಳೆ ಅವಳು ಅವನು ತನ
ಮುಳ್ಳುಮುಖ, ಮಿತಿಮೀರಿ ದುಂಡಾದ ತೊಡೆ ಹಾಗೂ ಸುಂದರ ದಂತಪಂಕ್ತಿಯೊಡ
ಇಲ್ಲಿಗೆ ಬರುತ್ತಾನೆ ಮತ್ತೆ ನನ್ನ ಕೈಹಿಡಿದುಕೊಳ್ಳುತ್ತಾನೆ. ಆ ಕೆಲವು ನಿಮಿಷಗಳವರೆ
ಎಲ್ಲವೂ ಸುಂದರವಾಗಿರುತ್ತದೆ ಎಂದು ಅವಳು ಹೇಳಿಕೊಂಡಳು. ಆದರೆ ಬೆಳಗ್ಗೆ ಅವ
ದಾದಿ ಅವಳನ್ನು ಮಗುವೆಂಬಂತೆ ಮೀಯಿಸಿ, ಸುಗಂಧಚೂರ್ಣ ಚಿಮುಕಿಸಿದ ಮೇಲೆ ಅವ
ಕಾದರೂ ಅವನು ಬರಲಿಲ್ಲ. ಬೆಳಗ್ಗೆ ಅವನು ದೂರವಾಣಿಯಲ್ಲಿ ಸಂಪರ್ಕಿಸಿ, ತನ
ತುಂಬ ಕೆಲಸವಿರುವುದಾಗಿ ಹೇಳಿದ. ಮರುದಿವಸ ಬೆಳಗ್ಗೆ ಅವನು ಬರುವನು. ಶಾನು
ಗಳನ್ನು ಅಲಕ್ಷಿಸುವ ನೋವಿನೊಡನೆ ಅವಳು ಎಚ್ಚರವಾಗಿ ಮಲಗಿದ್ದಳು. ಅವಳ ದಾ
ಅವಳನ್ನು ಗಾಢವಾಗಿ ಪ್ರೀತಿವಶಳಾಗಿದ್ದಾಳೆಂಬುದನ್ನು ಅರಿತಿದ್ದು, ನಿಧಾನವಿನಂತೆ ಅವ

ವಸ್ತ್ರಾಲಂಕಾರ ಮಾಡಿದಳು. ಆದರೆ ತರುಣ ಬರಲಿಲ್ಲ. ಆ ವಿಚಿತ್ರ ಸಂಬಂಧವನ್ನು ಮುಂದುವರಿಸಲು ಅವನಿಗೆ ಇಷ್ಟವಿಲ್ಲದ್ದರ ಕಾರಣವನ್ನು ಅವಳಿಗೆ ತಿಳಿಸುವವರು ಯಾರು?

೨. ಸನಾತನ ಚೌಧುರಿಯ ಹೆಂಡತಿ

ತನ್ನ ಹೆಂಡತಿ ತನ್ನನ್ನು ವಂಚಿಸುತ್ತಿದ್ದಾಳೆಂದು ಗೋಪಿ ಮೆನನ್ ಶಂಕಿಸತೊಡಗಿದಾಗ, ಅವನ ಮದುವೆ ಆರು ವರ್ಷದಷ್ಟು ಹಳೆಯದಾಗಿತ್ತು. ಒಂದು ಬೆಳಗ್ಗೆ, ಮಧ್ಯ ರಾತ್ರಿಯಾದ ಎರಡು ಗಂಟೆಗಳ ಬಳಿಕ ಅವನು ಎಚ್ಚತ್ತು, ಮಂಪರಿನಲ್ಲಿ ತನ್ನ ಹೆಂಡತಿಗೆ ಇನ್ನಷ್ಟು ಹತ್ತಿರ ಸರಿದ. ಇನ್ನೂ ಅರೆ ನಿದ್ರೆಯಲ್ಲಿದ್ದ ಅವಳು ಕಣ್ಣು ತೆರೆಯದೆ, ಅವನನ್ನು ತಬ್ಬಿಕೊಂಡು ಪಿಸುಗುಟ್ಟಿದಳು: "ಸನಾತನ, ನನ್ನ ಪ್ರಿಯ...."

ಸನಾತನ. ಯಾರ ಹೆಸರು ಅದು? ಆಮೇಲೆ ಮೆನನ್ ನಿದ್ರಿಸಲಾರದಾದ. ಕಿಟಕಿಯ ಮೂಲಕ ಸೂರ್ಯನ ಉಜ್ವಲತೆ ಪ್ರವೇಶಿಸಿದಾಗಲೂ ಅವನು ಎಚ್ಚರವಾಗಿ, ಹೆದರಿಕೆಯಿಂದ ಅವಳ ತೋಳುಗಳ ಬಿಸಿಯಪ್ಪುಗೆಯಲ್ಲಿ ಮಲಗಿದ್ದ. ಆದರೆ ಅವಳನ್ನು ನಿದ್ರೆಯಿಂದೆಬ್ಬಿಸಿ, ನಿಗೂಢ ಸನಾತನನ ಬಗ್ಗೆ ಅವಳನ್ನು ಕೇಳಲಾರದಷ್ಟು ಅಭಿಮಾನ ಅವನಿಗೆ.

ಅವಳು ಅಡುಗೆ ಮನೆಯಲ್ಲಿ ತಿಂಡಿ ಮಾಡುತ್ತಿದ್ದಾಗ ಅವನು ಅವಳ ಬಟ್ಟೆಗಳನ್ನು ನೋಡಲು ಅವಳ ವಸ್ತ್ರಗಳ ಕಪಾಟು ತೆರೆದ. ಆ ರೇಷ್ಮೆ ಸೀರೆಗಳನ್ನೆಲ್ಲ ಅವಳೇ ಕೊಳ್ಳುವುದು ಹೇಗೆ ಸಾಧ್ಯವಾಯಿತು? ಕಳೆದ ದೀಪಾವಳಿಯಲ್ಲಿ ಅವನು ಒಂದನ್ನು ಅವಳಿಗೆ ಕೊಂಡುಕೊಟ್ಟಿದ್ದ. ಆದರೆ ಕಪಾಟಿನಲ್ಲಿ ಐವತ್ತಕ್ಕೂ ಹೆಚ್ಚು ರೇಷ್ಮೆ ಸೀರೆಗಳು ತಮ್ಮ ತೂಗುಂಗುರಗಳಿಂದ ಮಿರುಗುತ್ತ ತೂಗಾಡುತ್ತಿದ್ದುವು. "ನನ್ನ ಕಪಾಟಿನಲ್ಲಿ ಏನನ್ನು ಹುಡುಕುತ್ತಿದ್ದೀರಿ?" ಎಂದು ಕೇಳುತ್ತ ಅವಳು ತಟ್ಟೆಯನ್ನು ಮಲಗುವ ಕೋಣೆಗೊಯ್ದಳು.

"ಬೆಲೆ ಬಾಳುವ ಇಷ್ಟೊಂದು ಸೀರೆಗಳು ನಿನಗೆ ಹೇಗೆ ಸಿಕ್ಕಿದುವು?" ಎಂದು ಅವನು ಅವಳನ್ನು ಕೇಳಿದ. "ಇವು ಅಪ್ಪಟ ಕಾಂಜೀವರಂ ಸೀರೆಗಳಲ್ಲವೆ?"

"ಕಾಂಜೀವರಂ ಸೀರೆಗಳು?" ಅವಳು ಗಟ್ಟಿಯಾಗಿ ನಕ್ಕಳು. ತುಸು ಮುಂದೆ ಚಾಚಿದ 'ಕೋರೆ'ಹಲ್ಲು ಅವಳ ಬಾಯನ್ನು ಮತ್ತೂ ಮುದ್ದಾಗಿಸಿತು. ಅವಳ ನಸುನಗು ಆಡ್ರೇ ಹೆಪ್‌ಬರ್ನಳ ನಗುವನ್ನು ಹೋಲುತ್ತದೆಂದು ಅವನಿಗೆ ಯಾವಾಗಲೂ ಅನಿಸಿತ್ತು. ಇವು ಹತ್ತು ರೂಪಾಯಿಗೆ ಯಾರೂ ಕೊಳ್ಳಬಹುದಾದ ಸೀರೆಗಳು. ಅವಳು ವಿನೋದದಿಂದ ನಗುತ್ತ ನುಡಿದಳು: "ಮಾತುಂಗದಿಂದ ಬರುವವನೊಬ್ಬ ಇಲ್ಲಿಗೆ ತಂದ ಕೃತಕ ರೇಷ್ಮೆ ಸೀರೆಗಳವು; ಈ ಕಟ್ಟಡದ ಎಲ್ಲ ಮಹಿಳೆಯರಿಗೂ ಅವನು ಇವುಗಳನ್ನು ಮಾರುತ್ತಾನೆ."

ಬಾಂದ್ರಾಕ್ಕೆ ಹೋಗುವ ವೇಗದ ರೈಲಿಗಾಗಿ ಕಾಯುತ್ತಿದ್ದಾಗ, ತನ್ನ ಸ್ವಂತ ಮನಸ್ಸನ್ನು ಸಂದೇಹದಿಂದ ಮುಕ್ತಗೊಳಿಸುವುದಕ್ಕಾಗಿ ಅವಳನ್ನು ಪರೀಕ್ಷೆಗೀಡು ಮಾಡಲು ಅವನು ಹಠಾತ್ತಾಗಿ ನಿರ್ಧರಿಸಿದ. ಕೂಡಲೆ ಮನೆಗೆ ಹಿಂದಿರುಗಿದ.

ತನ್ನ ಬೀದಿಯ ತುದಿಯನ್ನು ತಲುಪಿದಾಗ ಅವನು ಆಶ್ಚರ್ಯದಿಂದ ನಿಂತ. ಅವನ ಹೆಂಡತಿ ಕೈಚೀಲವೊಂದನ್ನು ತೂಗಾಡಿಸುತ್ತ, ನೀಲಿ ಸೀರೆಯುಟ್ಟು ತನ್ನ ಮನೆಯಿಂದ ಹೊರಬರುತ್ತಿದ್ದಳು. ಅವನು ದೀಪದ ಕಂಬವೊಂದರ ಹಿಂದೆ ಅವಿತುಕೊಂಡ. ಅವಳು ಟ್ಯಾಕ್ಸಿ ನಿಲ್ದಾಣಕ್ಕೆ ತ್ವರಿತದಿಂದ ನಡೆಯುತ್ತಿದ್ದಳು. ರಿಜ್ ರಸ್ತೆಯಲ್ಲಿ, ತೋಟವೊಂದು ಸುತ್ತುವರಿದ ದೊಡ್ಡ ಮನೆಯೊಂದರ ಮುಂದೆ ಅವಳು ಟ್ಯಾಕ್ಸಿ ನಿಲ್ಲಿಸಿದಳು. ಗೇಟ್ ತೆರೆದು, ಮನೆಯೊಳಗೆ ಕಣ್ಮರೆಯಾದಳು. ಅವನು ತನ್ನ ಟ್ಯಾಕ್ಸಿಯನ್ನು ಕಳುಹಿಸಿ, ಗೇಟಿನ ಹತ್ತಿರ ಸುಳಿದಾಡಿದ. ಮನೆಯ ಭಾರವಾದ ಬಾಗಿಲು ತೆರೆದುದನ್ನೂ ಸೇವಕನೊಬ್ಬ ಅವಳಿಗೆ ಸಲಾಮು ಹಾಕಿ ಸ್ವಾಗತಿಸಿದ್ದನ್ನೂ ಅವನು ನೋಡಬಹುದಿತ್ತು. ಆಮೇಲೆ ಬಾಗಿಲು ಮತ್ತೆ ಮುಚ್ಚಿಕೊಂಡಿತು.

ಮೆನನ್ ಮನೆಯ ಸುತ್ತ ನಡೆದು, ಹಿಂದುಗಡೆಯ ವಿಶಾಲ ಕೋಣೆಯೊಂದರ ತೆರೆದ ಕಿಟಕಿಯನ್ನು ತಲುಪಿದ; ಅದು ಊಟದ ಕೋಣೆಯೆಂದು ಅವನು ಗುರುತಿಸಿದ. ಅವನು ಗಾಜಿನ ಹಲಗೆಗಳ ಮೂಲಕ ಇಣುಕಿದ. ಅವನ ಹೆಂಡತಿ ವಯಸ್ಸಾದ ವ್ಯಕ್ತಿಯೊಬ್ಬನಿಗೆ ಎದುರಾಗಿ ದೊಡ್ಡ ಊಟದ ಮೇಜಿನ ಮುಂದೆ ಕುಳಿತು, ಉಪಾಹಾರ ಸ್ವೀಕಾರದಲ್ಲಿ ತೊಡಗಿದ್ದಳು. ಆ ವ್ಯಕ್ತಿ ರೇಷ್ಮೆ ನಿಲುವಂಗಿ ಧರಿಸಿದ್ದ. ಅವಳು ತಿನ್ನುವುದನ್ನು ಮುಗಿಸಿದ ಬಳಿಕ ಎದ್ದು ಆ ಮನುಷ್ಯನ ಹಣೆಯನ್ನು ಮೃದುವಾಗಿ ಚುಂಬಿಸಿದಳು. ಅವನು ಒಂದು ನಿಮಿಷ ಅವಳನ್ನು ಮುದ್ದಿಸಿದ. ಅವಳು ಕೋಣೆಯನ್ನು ಬಿಟ್ಟಾಗ ಅವನು ಸಿಗರೇಟ್ ಹತ್ತಿಸಿ, ಪತ್ರಿಕೆಗಳನ್ನೋದತೊಡಗಿದ. ಮೆನನ್‌ಗೆ ಆಘಾತವಾಯಿತು. ಅವಳಿಗೆ ಇಂಥ ವಂಚನೆಯ ಸಾಮರ್ಥ್ಯವಿತ್ತೆ? ಕೇರಳದ ಹಳ್ಳಿಯೊಂದರಲ್ಲಿ ಹುಟ್ಟಿ ಬೆಳೆದ ಹುಡುಗಿ ಇವಳು. ಅವಳು ಮತ್ತೊಬ್ಬನ ಮನೆಗೆ ಪ್ರವೇಶಿಸಿ, ಪಾಶ್ಚಾತ್ಯ ರೀತಿಯ ಉಪಾಹಾರವನ್ನು ಅವನೊಡನೆ ಸ್ವೀಕರಿಸಿ, ತನ್ನನ್ನು ಮುದ್ದಿಸಲು ಅವನಿಗೆ ಅವಕಾಶ ಕೊಡುವುದೆಂತು ಶಕ್ಯ? ಓ ದೇವರೇ, ಇದೊಂದು ದುಃಸ್ವಪ್ನ ಮಾತ್ರವಾಗಿರಲಿ ಎಂದು ಪ್ರಾರ್ಥಿಸಿದ, ಮೆನನ್.

ಹೊಸದಾಗಿ ತಂದುಕೊಂಡ ಧೈರ್ಯದಿಂದ ಅವನು ತಲೆಬಾಗಿಲಿಗೆ ಹೋಗಿ, ಗಂಟೆಯೊತ್ತಿದ. "ಬಾಗಿಲು ತೆರೆಯಿರಿ" ಎಂದು ಒಳಗಿನವರನ್ನು ಕುರಿತು ಗರ್ಜಿಸಿದ. ಸೇವಕನೊಬ್ಬ ಬಾಗಿಲು ತೆರೆದು, ಅವನ ಜೀರ್ಣವಾದ ಉದ್ಯೋಗ ವಸ್ತ್ರಗಳನ್ನು ತಿರಸ್ಕಾರದಿಂದ ಪರಿಶೀಲಿಸಿದ.

"ನಿಮ್ಮ ಯಜಮಾನನನ್ನು ನಾನು ಕೂಡಲೆ ನೋಡಬೇಕು" ಎಂದ, ಮೆನನ್.

"ಸಾಹೇಬರೂ ಮೇಮ್‌ಸಾಹೇಬರೂ ಉಪಾಹಾರ ತೆಗೆದುಕೊಳ್ಳುತ್ತಿದ್ದಾರೆ. ನೀವು ಸ್ವಲ್ಪ ಹೊತ್ತು ಕಾಯಬೇಕು" ಎಂದ, ಸೇವಕ. "ನಿಮ್ಮ ಹೆಸರೇನು?"

"ನನ್ನ ಹೆಸರು ಗೋಪಿ ಮೆನನ್" ಎಂದ, ನೊಂದ ಗಂಡ.

ಕೆಲವೇ ನಿಮಿಷಗಳಲ್ಲಿ ಆತಿಥೇಯ ಬಾಗಿಲಿಗೆ ಬಂದ. ಅವನು ತನ್ನ ಅಂದಗೊಳಿಸಿದ ಕೈಯನ್ನು ಮೆನನ್‌ಗೆ ಚಾಚಿದ. "ನಾನು ಸನಾತನ ಚೌಧುರಿ" ಎಂದ. "ನನ್ನಿಂದ ನಿಮಗೆ ಏನಾಗಬೇಕು?"

"ಈ ಮನೆಯ ಒಂದು ಭಾಗವನ್ನು ಬಾಡಿಗೆಗೆ ಕೊಡಬೇಕೆಂದಿದ್ದೀರಿ ಎಂದ

ಎಷ್ಟೋ ಕೇಳಿದೆ" ಎಂದ, ಮೆನನ್. "ಅದು ನಿಜವೇ ಎಂದು ತಿಳಿಯಲು ಬಂದಿದ್ದೇನೆ..."

"ಯಾರೋ ನಿಮ್ಮನ್ನು ತಮಾಷೆ ಮಾಡುತ್ತಿದ್ದಾರೆ" ಎಂದ, ಚೌಧುರಿ. "ನನ್ನ ಹೆಂಡತಿಯೆ ತಯಾರಿಸಿದ ನಕ್ಷೆಯ ಪ್ರಕಾರ ಇದನ್ನು ಹತ್ತು ವರ್ಷಗಳ ಹಿಂದೆ ಕಟ್ಟಲಾಯಿತು. ನನ್ನ ನಾಲ್ವರು ಮಕ್ಕಳೆಲ್ಲ ಈ ಮನೆಯಲ್ಲಿ ಹುಟ್ಟಿದರು. ಆದ್ದರಿಂದ, ಈ ಮನೆಯ ಯಾವುದೇ ಭಾಗವನ್ನು ಹೊಸಬರಿಗೆ ಬಾಡಿಗೆಗೆ ಕೊಡುವುದರ ಕಲ್ಪನೆ ನನ್ನ ಹೆಂಡತಿಗಾಗಲಿ ನನಗಾಗಲಿ ಎಂದೂ ಇರದು."

ಆ ಗಳಿಗೆಯಲ್ಲಿ ಅವಳು ಪ್ರವೇಶಿಸಿದಳು. ಮೆನನ್ನನ್ನು ನೋಡಿದಾಗ, ತನ್ನ ಸೀರೆಯ ಸೆರಗಿನಿಂದ ಬೇಗ ತಲೆಗೆ ಮುಸುಕು ಹಾಕಿಕೊಂಡಳು; ಮನೆಯ ಒಳಭಾಗಕ್ಕೆ ಮರಳಲು ಯತ್ನಿಸಿದಳು.

"ಮೃಣಾಳಿನಿ, ಒಂದು ಕ್ಷಣ ನಿಲ್ಲು" ಎಂದ, ಚೌಧುರಿ. "ನಾವು ನಮ್ಮ ಮನೆಯ ಒಂದು ಭಾಗವನ್ನು ಬಾಡಿಗೆಗೆ ಕೊಡುತ್ತಿದ್ದೇವೆಂದು ಈ ಬಡ ಗೃಹಸ್ಥನನ್ನು ಯಾರೋ ನಂಬಿಸಿದ್ದಾರೆ. ಇವನಿಗೆ ಉಪದ್ರವ ಕೊಡಲು ಯಾರೋ ಯತ್ನಿಸಿರುವುದು ಸ್ಪಷ್ಟ."

ಅವಳು ಹಿತಕರವಾಗಿ ಮುಗುಳ್ನಕ್ಕಳು, ಆ ಮುಗುಳ್ನಗೆಯನ್ನು ಅಷ್ಟೊಂದು ವಿಶಿಷ್ಟಗೊಳಿಸಿದ, ಎದ್ದು ಕಾಣುವ 'ಕೋರೆ' ಹಲ್ಲನ್ನು ಪ್ರದರ್ಶಿಸುತ್ತ: ಅದೇ ಆಡ್ರೆ ಹೆಪ್‌ಬರ್ನಿಷ್ ನಗೆ. "ಯಾರೋ ನಿಮಗೆ ಟೋಪಿ ಹಾಕಲು ಯತ್ನಿಸುತ್ತಿದ್ದಾರೆ", ಅವಳೆಂದಳು.

"ಬೆಳಗಿನ ಹೊತ್ತು ನಿಮ್ಮಿಬ್ಬರಿಗೂ ತೊಂದರೆ ಕೊಟ್ಟುದಕ್ಕೆ ವಿಷಾದಿಸುತ್ತೇನೆ" ಎಂದ, ಮೆನನ್.

"ಪರವಾಗಿಲ್ಲ" ಎಂದ, ಚೌಧುರಿ.

"ನಮಸ್ಕಾರ" ಎಂದ ಮೆನನ್, ತನ್ನನ್ನೆ ನೋಡುತ್ತಿದ್ದ ದಂಪತಿಯತ್ತ ತಿರುಗಿ ನೋಡದೆ ನಡೆದುಹೋದ. ಗೇಟಿನ ಹೊರಗೆ, ಬೂದು ಬಣ್ಣದ ಸಿಮೆಂಟ್ ಲೇಪಿತ ಕಂಬದ ಮೇಲೆ 'ಸನಾತನ ಚೌಧುರಿ' ಎಂದು ಕೆತ್ತಿದ ಹಿತ್ತಾಳೆ ಫಲಕವೊಂದಿತ್ತು. ನೀಲಿ ಸೀರೆಯ ಮಹಿಳೆಯತ್ತ—ಅವಳು ತನ್ನ ಹೆಂಡತಿಯನ್ನು ಸಾಕಷ್ಟು ಹೋಲುತ್ತಿದ್ದರೂ—ಹಿನ್ನೋಟ ಬೀರುವುದು ಮೆನನ್‌ಗೆ ಸಾಧ್ಯವಾಗಲಿಲ್ಲ. ಅತಿ ಹತ್ತಿರದ ಬಸ್‌ನಿಲ್ದಾಣಕ್ಕೆ ನಡೆಯುತ್ತಿದ್ದಂತೆ ಅವನು ತನಗೆ ತಾನೆ ಹೇಳಿಕೊಂಡ, "ಸಂಶಯ ಒಂದು ಬಗೆಯ ವಿಷಪೂರಿತ ಕಳೆ."

ಅನು : ಡಾ॥ ಸಿ. ಪಿ. ಕೆ.

ಜಿ. ಎಸ್. ಶಿವರುದ್ರಪ್ಪ: ಬದುಕು-ಬರಹ

ಲಕ್ಷ್ಮೀನಾರಾಯಣ ಅರೋರ

ಎದೆ ತುಂಬಿ ಹಾಡಿದೆನು ಅಂದು ನಾನು
ಮನವಿಟ್ಟು ಕೇಳಿದಿರಿ ಅಲ್ಲಿ ನೀವು
ಇಂದು ನಾ ಹಾಡಿದರು ಅಂದಿನಂತೆಯೆ ಕುಳಿತು
ಕೇಳುವಿರಿ ಸಾಕೆನಗೆ ಅದುವೆ ಬಹುಮಾನ
ಹಾಡು ಹಕ್ಕಿಗೆ ಬೇಕೆ ಬಿರುದು ಸನ್ಮಾನ?

—ಸಾಮಗಾ

ನಾಡಿನ ಹೆಸರಾಂತ ಕವಿಗಳಲ್ಲಿ ವಿಮರ್ಶಕರಲ್ಲಿ ಒಬ್ಬರಾ
ಡಾ|| ಜಿ. ಎಸ್. ಶಿವರುದ್ರಪ್ಪನವರು ಕರ್ನಾಟಕ ಸಾಹಿ
ಅಕಾಡೆಮಿಯ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. 'ಪುಸ್ತ
ಪ್ರಪಂಚ'ದ ಪ್ರಕಾಶಕರ, ಓದುಗರ ಮತ್ತು ಬರಹಗಾರರ ಬಳಗ
ಪರವಾಗಿ ಜಿ.ಎಸ್.ಎಸ್. ಅವರಿಗೆ ಈ ಮೂಲಕ ಹೃತ್ಪೂರ್ವ
ಅಭಿನಂದನೆಗಳನ್ನು ಸಲ್ಲಿಸುವುದು ತುಂಬ ಸಂತಸದ ವಿಚಾ
ಬಿರುದು ಸನ್ಮಾನ ಬಯಸದ ಹಾಡುಹಕ್ಕಿಗೆ ನಾಡುನುಡಿ
ಸಾಹಿತ್ಯದ ಅಭಿವೃದ್ಧಿಯ, ಪ್ರಸಾರದ ಚುಕ್ಕಾಣಿ ಹಿಡಿಯು
ಗುರುತರ ಜವಾಬ್ದಾರಿ ಹೆಗಲೇರಿದೆ. ಪ್ರತಿಭೆ, ಪಾಂಡಿತ್ಯ ಮತ
ಲೋಕಾನುಭವಗಳಿಂದ ಮುಪ್ಪುರಿಗೊಂಡ ಶ್ರೀಯುತರು ಸಮ
ಕೆಲಸಗಾರರು, ಉತ್ಸಾಹಿಗಳು, ಚಿಂತನಶೀಲರು, ಕರ್ತೃತ್ವಶ
ಸಂಪನ್ನರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಕಾಯ
ಚಟುವಟಿಕೆಗಳು ಶಿವರುದ್ರಪ್ಪನವರ ಅಧಿಕಾರಾವಧಿಯಲ್ಲಿ ಸುಗ
ವಾಗಿ ನಡೆಯಲಿ, ಹೊಸ ಆಯಾಮಗಳನ್ನು ಪಡೆದುಕೊಂ
ಅರ್ಥಪೂರ್ಣವಾಗಲಿ ಜನೋಪಯೋಗಿಯಾಗಲಿ ಎಂಬು
ಕನ್ನಡಿಗರೆಲ್ಲರ ಆಶಯ ಹಾಗೂ ಹಂಬಲ.

ಶ್ರೀಯುತ ಶಿವರುದ್ರಪ್ಪನವರ ಬದುಕು, ವ್ಯಕ್ತಿತ್ವ ಹಾ
ಸಾಹಿತ್ಯ ಸಾಧನೆಗಳನ್ನು ಸ್ಥೂಲವಾಗಿ ಪರಿಚಯಮಾಡಿಕೊ

ವುದು ಈ ಲೇಖನದ ಉದ್ದೇಶ. ಆದರೆ ಅವರ ವ್ಯಕ್ತಿತ್ವದ ಹಾಗೂ ಸಾಹಿತ್ಯದ ಎಲ್ಲ ಮುಖಗಳ ಆಮೂಲಾಗ್ರ ಪರಿವೀಕ್ಷಣೆ, ವಿಮರ್ಶೆ ವಿಶ್ಲೇಷಣೆಗಳಿಗೆ ಈ ಲೇಖನದ ಚೌಕಟ್ಟಿನಲ್ಲಿ ಅವಕಾಶ ಕಲ್ಪಿಸಲು ಸಾಧ್ಯವಾಗಿಲ್ಲ.

ಶಿವರುದ್ರಪ್ಪನವರು ಫೆಬ್ರವರಿ ೭,೧೯೨೬ ರಂದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ದಲ್ಲಿ ಹುಟ್ಟಿದರು. ಅವರ ತಂದೆ ಶಾಂತವೀರಪ್ಪನವರು ಮಿಡ್ಲ್ ಸ್ಕೂಲ್ ಉಪಾಧ್ಯಾಯರು. ತಾಯಿ ವೀರಮ್ಮ. ತಂದೆಯವರಿಗೆ ಆಸ್ತಿಪಾಸ್ತಿ ಇರಲಿಲ್ಲವಾದ ಕಾರಣ ಉಪಾಧ್ಯಾಯ ವೃತ್ತಿಯನ್ನೇ ಅವಲಂಬಿಸಬೇಕಾಗಿ ಬಂದಿದ್ದು ಇದರಿಂದಾಗಿ ಬಡತನದ ಬೇಗೆಯ ಅನುಭವ ಅವರ ಕುಟುಂಬಕ್ಕೆ ಉಂಟಾಗಿತ್ತು. ಶಾಂತವೀರಪ್ಪನವರಿಗೆ ಊರಿಂದ ಊರಿಗೆ ವರ್ಗಾವಣೆಯಾಗುತ್ತಿದ್ದುದರಿಂದ ಶಿವರುದ್ರಪ್ಪನವರಿಗೂ ಬಾಲ್ಯದಿಂದಲೇ ಅನೇಕ ಊರುಗಳ ವಾಸ. ಹಾಗಾಗಿ ಅನೇಕ ಶಾಲೆಗಳ ಗ್ರಂಥಾಲಯಗಳ ಪ್ರಯೋಜನ ಪಡೆದು ಕೊಂಡು ಓದುವ ಹವ್ಯಾಸವನ್ನು ಬೆಳೆಸಿಕೊಳ್ಳುವುದು ಅವರಿಗೆ ಸಾಧ್ಯವಾಯಿತು. ಕಾರಂತರ ಬಾಲಪ್ರಪಂಚ, ಗೋವಿನ ಕಥೆಗಳೆ ಅಲ್ಲದೆ ಕುವೆಂಪು, ಡಿ.ವಿ.ಜಿ.ಯಂಥ ಲೇಖಕರ ಪ್ರಭಾವ ಅವರ ಮೇಲೆ ಚಿಕ್ಕಂದಿನಿಂದಲೇ ಉಂಟಾಯಿತು.

ಹೊನ್ನಾಳಿ, ಕೋಟೆಹಾಳಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನೂ ರಾಮಗಿರಿ, ಬೆಲಗೂರುಗಳಲ್ಲಿ ಮಾಧ್ಯಮಿಕ ಶಿಕ್ಷಣವನ್ನೂ ಪೂರೈಸಿದ ಶಿವರುದ್ರಪ್ಪನವರ ಪ್ರೌಢ ಶಾಲೆಯ ವಿದ್ಯಾಭ್ಯಾಸ ದಾವಣಗೆರೆ ಮತ್ತು ತುಮಕೂರುಗಳಲ್ಲಿ ಸಾಗಿತು. ೧೯೪೨ ರಲ್ಲಿ ಮೆಟ್ರಿಕ್ ಮುಗಿಸಿ ಜೂನಿಯರ್ ಇಂಟರ್‌ಮೀಡಿಯೇಟ್ ಸೇರಿದಾಗ ದೇಶಾದ್ಯಂತ ಅಸಹಕಾರ ಚಳವಳಿ ಪ್ರಾರಂಭವಾಗಿ ಅವರು ಶಿಕ್ಷಣವನ್ನು ಮುಂದುವರಿಸಲಾಗದೆ ಊರಿಗೆ ಮರಳಬೇಕಾಯಿತು. ಅನಂತರ ೧೯೪೩–೪೪ ರಲ್ಲಿ ಮತ್ತೆ ಕಾಲೇಜಿಗೆ ಸೇರಿ ೧೯೪೫ ರಲ್ಲಿ ಇಂಟರ್ ಪಾಸ್ ಮಾಡಿದರು. ಬೇಸಿಗೆ ರಜೆಯಲ್ಲಿ ಯಾವುದಾದರೂ ಸರ್ಕಾರಿ ಕಚೇರಿಯಲ್ಲಿ ಅಲ್ಪಸ್ವಲ್ಪ ಕೆಲಸಮಾಡಿ ಓದನ್ನು ಮುಂದುವರಿಸುವ ಸಲುವಾಗಿ ಕೈಲಾದಷ್ಟು ಸಂಪಾದನೆ ಮಾಡುತ್ತಿದ್ದುದೂ ಉಂಟು. ಮನೆಯಲ್ಲಿ ಹಣಕಾಸು ಪರಿಸ್ಥಿತಿ ಅನುಕೂಲವಾಗಿಲ್ಲದಿದ್ದ ಕಾರಣ ಅವರು ಬಿ.ಎ. ತರಗತಿಗೆ ಸೇರಲಾಗಲಿಲ್ಲ. ಹಾಗಾಗಿ ಅವರು ಗುಬ್ಬಿ ತಾಲ್ಲೂಕು ಕಛೇರಿಯಲ್ಲಿ ಗುಮಾಸ್ತರಾಗಿ ತಿಂಗಳಿಗೆ ಮೂವತ್ತೈದು ರೂ.ಗಳ ಮೇಲೆ ಕೆಲಸಕ್ಕೆ ಸೇರಿದರು. ಒಂದು ವರ್ಷ ಕೆಲಸ ಮಾಡಿ, ಸಂಬಳದಲ್ಲೇ ಉಳಿತಾಯ ಮಾಡಿ ಅನಂತರ ೧೯೪೭ ರಲ್ಲಿ ಮೊದಲನೆಯ ಬಿ.ಎ. (ಆನರ್ಸ್) ಸೇರಿದರು. ಎ. ಆರ್. ಕೃಷ್ಣಶಾಸ್ತ್ರಿ, ಕುವೆಂಪುರವರಂಥ ಗುರುಗಳ ಶಿಷ್ಯ ನಾಗುವ ಅವಕಾಶ ಅವರದಾಯಿತು. ಪುಟ್ಟಪ್ಪನವರ ಶಿಷ್ಯರಾಗಿದ್ದ ಕಾಲವೇ ತಮ್ಮ ಬದುಕಿನಲ್ಲಿ ಅತಿ ಉಜ್ವಲವಾದ ಕಾಲವೆಂದು ಅವರೇ ಒಂದೆಡೆ ಹೇಳಿಕೊಂಡಿದ್ದಾರೆ.

ಶಿವರುದ್ರಪ್ಪನವರು ೧೯೪೯ ರಲ್ಲಿ ಬಿ.ಎ. (ಆನರ್ಸ್) ಪರೀಕ್ಷೆಯಲ್ಲಿ ಮೊದಲ ವರ್ಗದಲ್ಲಿ ಮೊದಲ ಸ್ಥಾನ ಪಡೆದು ಎರಡು ಸುವರ್ಣಪದಕಗಳು ಮತ್ತು ಒಂದು ಬಹುಮಾನ ಗಳಿಸಿ ತೇರ್ಗಡೆಯಾದರು. ಅದೇ ವರ್ಷ ದಾವಣಗೆರೆಯ ಡಿ.ಆರ್.ಎಂ. ಕಾಲೇಜಿನಲ್ಲಿ ಅಧ್ಯಾಪಕರಾಗಿ ಕೆಲಸ ಮಾಡುವ ಅವಕಾಶ ಈ ಅರ್ಹತೆಯ ಆಧಾರದ ಮೇಲೆ ಅವರಿಗೆ ಲಭ್ಯವಾಯಿತು. ಅನಂತರ ಅವರು ಮೈಸೂರು ಯುವರಾಜ

ಕಾಲೇಜಿಗೆ ಬಂದು ೧೯೫೩ ರಲ್ಲಿ ಪ್ರಥಮದರ್ಜೆ ಪ್ರಥಮರ್‍ಯಾಂಕ್ ಪಡೆದು ಎರಡ ಸುವರ್ಣ ಪದಕಗಳು ಹಾಗೂ ಒಂದು ಬಹುಮಾನದೊಡನೆ ಎಂ.ಎ. ಶಿಕ್ಷಣವನ ಮುಗಿಸಿದರು. ಆಮೇಲೆ ಶಿವಮೊಗ್ಗೆಗೆ ವರ್ಗವಾಗಿ, ೧೯೫೫ ರಲ್ಲಿ ಭಾರತ ಸರ್ಕಾರ ಸಂಶೋಧನೆ ವಿದ್ಯಾರ್ಥಿವೇತನ ಪಡೆದು ಪುನಃ ಮೈಸೂರಿಗೆ ಬಂದು ಕೆ. ವಿ. ಪುಟ್ಟಪ ನವರ ಮಾರ್ಗದರ್ಶನದಲ್ಲಿ 'ಸೌಂದರ್ಯ ಸಮೀಕ್ಷೆ' ಎಂಬ ಮಹಾಪ್ರಬಂಧವನ ರಚಿಸಿದರು. ೧೯೬೦ ರಲ್ಲಿ ಈ ಮಹಾಪ್ರಬಂಧಕ್ಕಾಗಿ ಅವರಿಗೆ ಪಿ.ಹೆಚ್.ಡಿ. ಪದ ದೊರೆಯಿತು. ಅನಂತರ ಮಹಾರಾಜ ಕಾಲೇಜಿನಲ್ಲಿ ಕೆಲ ಕಾಲ ಸೇವೆ ಸಲ್ಲಿಸಿದ ಮೇ ೧೯೬೦ ರಲ್ಲೇ ಅವರು ಮಾನಸಗಂಗೋತ್ರಿಗೆ ಅಧ್ಯಾಪಕರಾಗಿ ಬಂದರು. ೧೯೬೩ರ ವರೆಗ ಅಲ್ಲಿ ಕೆಲಸ ಮಾಡಿದ ಮೇಲೆ ಅದೇ ವರ್ಷದ ನವೆಂಬರ್‌ನಿಂದ ಎರಡು ವರ್ಷಗಳ ಕಾ ಉಸ್ಮಾನಿಯ ವಿಶ್ವವಿದ್ಯಾನಿಲಯದ ಆಹ್ವಾನದ ಮೇರೆಗೆ ಕನ್ನಡ ಉಪಪ್ರಾಧ್ಯಾಪ ಹಾಗೂ ವಿಭಾಗ ಮುಖ್ಯಸ್ಥರಾಗಿ ಕೆಲಸ ಮಾಡಿದರು. ಕನ್ನಡ ವಾತಾವರಣಕ್ಕಾ ಹಾತೊರೆಯುತ್ತಿದ್ದ ಜೀವ ಅಲ್ಲಿಗೆ ಒಗ್ಗದೆ ಮತ್ತೆ ಕನ್ನಡ ನಾಡಿಗೆ ಹಿಂದಿರುಗಿದರ ೧೯೬೬ ರಲ್ಲಿ ಶಿವರುದ್ರಪ್ಪನವರು ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ ಉಪಪ್ರಾಧ್ಯಾಪಕ ಮತ್ತು ವಿಭಾಗ ಮುಖ್ಯಸ್ಥರಾಗಿ ನೇಮಕಗೊಂಡು ೧೯೭೦ ರ ಪ್ರಾಧ್ಯಾಪಕ ಮತ್ತು ವಿಭಾಗ ಮುಖ್ಯಸ್ಥರಾದರು. ೧೯೭೧ ರಲ್ಲಿ ಆ ವಿಶ್ವವಿದ ನಿಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಸೇವೆ ಸಲ್ಲಿಸತೊಡಗಿದರ ಕಳೆದ ವರ್ಷವಷ್ಟೆ ಅವರು ವಿಶ್ವವಿದ್ಯಾನಿಲಯ ಪ್ರಾಧ್ಯಾಪಕ ಹುದ್ದೆಯಿಂದ ನಿವೃ ರಾಗಿದ್ದಾರೆ.

ಜಿ. ಎಸ್. ಎಸ್.ರವರು ಹದಿನೈದನೆಯ ಹರಯದಿಂದಲೇ ಬರವಣಿಗೆಯ ಮೈಗೂಡಿಸಿಕೊಂಡವರು. ಅವರ ಮೊದಲ ಸಾಹಿತ್ಯ ಕೃತಿಗೆ ಕೆಲಮಟ್ಟಿಗೆ ನೆರವಾದವ ಜಿ. ಪಿ. ರಾಜರತ್ನಂ. ಶಿವರುದ್ರಪ್ಪನವರು ಗೋಪಾಲಕೃಷ್ಣ ಅಡಿಗರ ತಲೆಮಾರಿ ಮಹತ್ವದ ಕವಿಯೆನಿಸಿಕೊಂಡಿದ್ದು ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ನವೋದ ಹಾಗೂ ನವ್ಯ ಇವೆರಡು ಧೋರಣೆಗಳನ್ನೂ ತಮ್ಮ ಕಾವ್ಯದಲ್ಲಿ ಯಶಸ್ವಿಯಾಗಿ ರೂ ಕೊಂಡು ಬಂದಂತಹವರು. ನವೋದಯ ಕಾವ್ಯಸಂದರ್ಭಗಳಲ್ಲಿ ನಿಂತು ನವ್ಯದ ಮಾ ದಂಡಗಳಿಗೆ ಸಲ್ಲುವಂತಹ ಚಿಂತನಶೀಲ ಪ್ರಯತ್ನಗಳು ಅವರ ಕಾವ್ಯದಲ್ಲಿ ಕಾಣದೆ ಯುತ್ತವೆ. ಬೇಂದ್ರೆ, ಕುವೆಂಪು, ಪು.ತಿ.ನ., ಅಡಿಗ, ಚನ್ನವೀರ ಕಣವಿ ಮುಂತಾ ರಿಗೆ ಹೋಲಿಸಿದರೆ ಶಿವರುದ್ರಪ್ಪನವರು ತಮ್ಮದೇ ಆದ ವೈಶಿಷ್ಟ್ಯಗಳೊಡನೆ ಬೇರೆ ಆಗಿ ನಿಲ್ಲಬಲ್ಲ ಕವಿ. ಕಾವ್ಯ ಹಾಗೂ ಕಾವ್ಯದ ವಸ್ತುವಿನ ಬಗೆಗೆ ಅವರು ತೋ ತಾದಾತ್ಮ್ಯ, ಕಾಳಜಿ ಅಲ್ಲದೆ ಅವರ ಕಾವ್ಯಾಭಿವ್ಯಕ್ತಿಯಲ್ಲಿ ಎದ್ದು ಕಾಣುವ ನವೀ ಸೂಕ್ಷ್ಮತೆ, ಅತಿರೇಕಕ್ಕೆ ಹೋಗದ ಸಮರ್ಥವಾದ ಸತ್ವಪೂರ್ಣವಾದ ನವಿ ವಿಡಂಬನೆ ಅವರ ಕಾವ್ಯವನ್ನು ಹಿರಿದಾಗಿಸಿವೆ. ಅಂತೆಯೆ ನಮ್ಮ ಸಾಂಸ್ಕೃತಿಕ ಸತ್ವವ ಮೈಗೂಡಿಸಿಕೊಂಡು ಮಣ್ಣಿನ ವಾಸನೆಯಿಂದ ಉಸಿರು ತುಂಬಿಕೊಂಡು ಅವರ ಸಾ ವಾಹಿನಿ ಹರಿದಿದೆ.

ಅನೇಕ ವಿಮರ್ಶಕರ ದೃಷ್ಟಿಯಲ್ಲಿ ಶಿವರುದ್ರಪ್ಪನವರು ಒಬ್ಬ ಸಮನ್ವಯ

ಎಲ್. ಎಸ್. ಶೇಷಗಿರಿರಾಯರ ಮಾತಿನಲ್ಲಿ ಹೇಳುವುದಾದರೆ "ಹಲವು ಗಿಡಗಳ ಹೂವುಗಳನ್ನು ಬಿಡಿಸಿ ಒಂದು ಬುಟ್ಟಿಯಲ್ಲಿ ಒಟ್ಟಿಗೆ ಇಟ್ಟಂತೆ, ನವೋದಯ–ಪ್ರಗತಿ–ನವ್ಯ ಮಾರ್ಗಗಳಲ್ಲಿ ಉತ್ತಮ ಎಂದು ಕಂಡ ಅಂಶಗಳನ್ನು ಒಟ್ಟಿಗೆ ಜೋಡಿಸಿದರು ಎಂದು ಈ ಮಾತಿನ ಅರ್ಥವಾಗಬಾರದು. ನವೋದಯದ ಮಾರ್ಗದಿಂದ ಕಾವ್ಯಜಗತ್ತಿಗೆ ಕಾಲಿಟ್ಟು, ಯಾವ ಒಂದು ಮಾರ್ಗಕ್ಕೂ ಮುಡಿಪಾಗದೆ, ತಮ್ಮ ಅನುಭವದ ಸ್ತರಗಳನ್ನು ಬೆಳೆಸಿ, ಬಾಳಿನಲ್ಲಿ ತಮ್ಮ ಶ್ರದ್ಧೆ ತಮ್ಮ ನಂಬುಗೆಗಳನ್ನು ಉಳಿಸಿಕೊಂಡು, ತಮ್ಮ ಕವಿಚೇತನದ ಸ್ಪಂದನಕ್ಕೆ ಕಾವ್ಯದಲ್ಲಿ ಅಭಿವ್ಯಕ್ತಿ ಕೊಟ್ಟ ಕವಿ ಶಿವರುದ್ರಪ್ಪನವರು....", ಈ ದೃಷ್ಟಿಯಲ್ಲಷ್ಟೆ ಅವರು ಸಮನ್ವಯ ಸಾಧಕರು;

ಶಿವರುದ್ರಪ್ಪನವರ ಸಾಹಿತ್ಯ ಸೃಷ್ಟಿಯನ್ನು ಕುರಿತು ಈಗ ಸ್ಥೂಲವಾಗಿ ಪರಿಚಯ ಮಾಡಿಕೊಡಬಹುದು. ಸಾಮಗಾನ (೧೯೫೦), ಚೆಲುವು ಒಲವು (೧೯೫೩), ಸಂಜೆದಾರಿ (೧೯೫೪), ದೇವಶಿಲ್ಪ (೧೯೫೯), ದೀಪದ ಹೆಜ್ಜೆ (೧೯೫೯), ಕಾರ್ತೀಕ (೧೯೬೧), ತೀರ್ಥವಾಣಿ (೧೯೬೧), ಅನಾವರಣ (೧೯೬೩), ತೆರೆದದಾರಿ (೧೯೬೬), ಗೋಡೆ (೧೯೭೨) ನನ್ನ ನಿನ್ನ ನಡುವೆ (೧೯೭೩), ಕಾಡಿನ ಕತ್ತಲಲ್ಲಿ (೧೯೮೧) ಇವು ಕವಿ ಶಿವರುದ್ರಪ್ಪನವರು ಹೊರತಂದಿರುವ ಕವನ ಸಂಗ್ರಹಗಳು. ಕರ್ಮಯೋಗಿ (೧೯೫೬), ವಿಮರ್ಶೆಯ ಪೂರ್ವ ಪಶ್ಚಿಮ (೧೯೬೧), ಸೌಂದರ್ಯ ಸಮೀಕ್ಷೆ (೧೯೬೫) ಪರಿಶೀಲನ (೧೯೬೬), ಗತಿಬಿಂಬ (೧೯೬೯), ಸಾಹಿತ್ಯ ವಿಮರ್ಶೆ (೧೯೬೯), ಮಾಸ್ಕೋದಲ್ಲಿ ಇಪ್ಪತ್ತೆರಡುದಿನ (೧೯೭೩), ಕನ್ನಡ ಸಾಹಿತ್ಯ ಸಮೀಕ್ಷೆ (೧೯೭೫), ಮಹಾಕಾವ್ಯ ಸ್ವರೂಪ (೧೯೭೬), ನವೋದಯ (೧೯೭೬), ಮಹಾಕಾವ್ಯ ಸ್ವರೂಪ (೧೯೭೬), ಕಾವ್ಯಾರ್ಥ ಚಿಂತನ (೧೯೮೩) ಇವು ಲೇಖಕ ಸಂಶೋಧಕ ವಿಮರ್ಶಕ ಶಿವರುದ್ರಪ್ಪನವರ ಪ್ರಮುಖ ಗದ್ಯ ಕೃತಿಗಳು. ಇವೇ ಅಲ್ಲದೆ ಕೆ. ಎಸ್. ನರಸಿಂಹಸ್ವಾಮಿಯವರಿಗೆ ಅರ್ಪಿಸಿದ ಅಭಿನಂದನ ಗ್ರಂಥ 'ಚಂದನ' ವನ್ನು (೧೯೭೨) ಅವರು ಇತರರೊಂದಿಗೆ ಸಂಪಾದಿಸಿದ್ದಾರೆ. 'ಪ್ರಾಯೋಗಿಕ ವಿಮರ್ಶೆ (೧೯೭೧), ಅವರು ಡಾ|| ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರೊಂದಿಗೆ ಸಂಪಾದಿಸಿರುವ ಕೃತಿ. 'ವಾಕ್ಯಮಾಣಿಕ್ಯಕೋಶ'ವನ್ನು (೧೯೭೨) ಡಾ|| ಎಸ್. ವಿದ್ಯಾಶಂಕರರೊಂದಿಗೂ ಶಬರಶಂಕರವಿಲಾಸ ಸಂಗ್ರಹವನ್ನು ಬಿ. ಎನ್. ಶಾಸ್ತ್ರಿಯವರೊಂದಿಗೂ ಸೇರಿ ಅವರು ಸಂಪಾದನೆ ಮಾಡಿದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ ವತಿಯಿಂದ ಪ್ರಕಟಗೊಂಡ ಅನೇಕ ಕೃತಿಗಳ ಸಂಪಾದನೆಯ ಹೊಣೆಗಾರಿಕೆಯನ್ನು ಅವರು ನಿರ್ವಹಿಸಿದ್ದಾರೆ. ಉದಾಹರಣೆಗೆ ಅರವಿಂದ ದರ್ಶನ (೧೯೭೫), ಕನ್ನಡ ನಾಟಕ; ಪರಂಪರೆ ಮತ್ತು ಪ್ರಯೋಗ, ಕನ್ನಡ ವಿಮರ್ಶೆಯ ನೆಲೆ ಬೆಲೆ (೧೯೭೪), ಕವಿ ಜೇಂದ್ರೆ (೧೯೭೫), ಕಾವ್ಯಲಹರಿ (೧೯೬೮, ೧೯೭೩), ಕಾವ್ಯ ಸಂಪುಟ (೧೯೭೧), ಚಿಂತನದೀಪ್ತಿ (೧೯೭೪), ಚಿನ್ನದ ಗೆರೆ (೧೯೭೮), ಟಾಲ್‌ಸ್ಟಾಯ್ ವಿಚಾರಧಾರೆ (೧೯೭೩), ಪಂಪ: ಒಂದು ಅಧ್ಯಯನ (೧೯೭೪), ಭಾರತೀಯ ಪರಂಪರೆ (೧೯೭೫), ವಿವಿಧ (೧೯೮೩), ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂ. ೧, ೨, ೩, (೧೯೭೪, ೧೯೭೫, ೧೯೭೬), ಸರ್ವಜ್ಞ : ಒಂದು ಸಮೀಕ್ಷೆ (೧೯೭೫), ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ (೧೯೭೧), ಸಾಹಿತ್ಯ ವಾರ್ಷಿಕ

೧೯೭೧, ೧೯೭೨, ೧೯೭೩, ೧೯೭೪ (೧೯೭೩, ೧೯೭೪, ೧೯೭೪, ೧೯೭೬), ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು (೧೯೭೨) ೧೯೭೭ ರಲ್ಲಿ ಶಿವರುದ್ರಪ್ಪನವರ ಮಿತ್ರರು ಅಭಿಮಾನಿಗಳು ಸೇರಿ ಅವರಿಗೆ 'ಸ್ನೇಹ ಕಾರ್ತಿಕ' ಎಂಬ ಅಭಿನಂದನಗ್ರಂಥವೊಂದನ್ನು ಉಡುಗೊರೆಯಾಗಿ ಸಲ್ಲಿಸಿದರು. ಅವರನ್ನು ಕುರಿತಂತೆ ಇನ್ನೊಂದು ಗೌರವ ಗ್ರಂಥ ಇನ್ನೇನು ಹೊರಬರುವುದರಲ್ಲಿದೆ. 'ಚತುರಂಗ' (೧೯೮೬) ಶಿವರುದ್ರಪ್ಪನವರು ಹೇಳಿಕೊಂಡಿರುವಂತೆ ಈಚೆಗೆ ಹೊರಬಿದ್ದಿರುವ ಅವರ "ಒಂದು ಅಸಮಗ್ರ ಆತ್ಮಕತೆ." "ಒಬ್ಬ ಸೃಜನಶೀಲ ಲೇಖಕ ವಾಸ್ತವವಾಗಿ ತನ್ನ ಬರಹಗಳಲ್ಲಿ ತನ್ನ ನಿಜವಾದ ಆತ್ಮಕತೆಯನ್ನು ಬರೆದುಕೊಂಡಿರುತ್ತೇನೆ" ಎಂದು ಅವರು ದೃಢವಾಗಿ ನಂಬಿಕೊಂಡಿರುವುದರಿಂದ ಈ ಆತ್ಮಕಥೆ ಅವರ ನೆನಪಿನ ಅಂಗಳದ ಕಿರುತಾರೆಗಳಂತಿದ್ದು ಅಸಮಗ್ರವಾಗಿದ್ದರೂ ಅವರ ವ್ಯಕ್ತಿತ್ವಕ್ಕೆ ಸಾಕಷ್ಟು ಮಟ್ಟಿಗೆ ಕನ್ನಡಿ ಹಿಡಿಯುತ್ತದೆ ಎನ್ನಬಹುದು.

ಶಿವರುದ್ರಪ್ಪನವರ ಮೊದಲನೆಯ ಕವನ ಸಂಗ್ರಹವಾದ ಸಾಮಗಾನ ೧೯೫೦ ರಲ್ಲಿ ಪ್ರಕಟವಾಯಿತು. ಅವರ ಕಾವ್ಯ ಪ್ರೇರಣೆಯನ್ನು ಕುರಿತಂತೆ ರಂ. ಶ್ರೀ. ಮುಗಳಿಯವರ ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದು. "ಜೀವಿಸಿರುವ ಮತ್ತು ಜೀವಂತವಾಗಿ ತನ್ನನ್ನು ಪರಿಸರಕ್ಕೆ ಒಡ್ಡಿರುವ ಯಾವುದೇ ಕವಿಯ ನಿರ್ಮಿತಿ ವಿಚಾರದಲ್ಲಿ ಕೊನೆಯ ಮಾತನ್ನು ಹೇಳಲು ಸಾಧ್ಯವಾಗುವುದಿಲ್ಲ....ಶಿವರುದ್ರಪ್ಪನವರ ಪ್ರಥಮ ಕಾವ್ಯಸ್ಫೂರ್ತಿ ಈಶ್ವರ ಸೃಷ್ಟಿಯ ಸೌಂದರ್ಯದಿಂದ ಮುಗ್ಧವಾದ ತರುಣ ಚೇತನವೊಂದರ ಆನಂದ-ಆಶ್ಚರ್ಯಗಳಲ್ಲಿದೆ. 'ಸಾಮಗಾನ' ಸಂಕಲನದಲ್ಲಿಯ ಪ್ರಕೃತಿಪೂಜೆ, ಮಂಜಿನಲೀಲೆ, ಹೂಮಳೆ ಇಂಥ ಕವನಗಳಲ್ಲಿ ಈ ಭಾವಸ್ಥಾಯಿಯಿದೆ. ಇದರಲ್ಲಿ ಇದು ಈಶ್ವರ ಸೃಷ್ಟಿ ಎಂಬ ನಂಬಿಕೆ ವಿಶದವಾಗಿದೆ....ಈ ನಂಬಿಕೆಗಳು ಪರಂಪರೆಯಿಂದ ನಡೆದು ಬಂದುವು, ಆಲೋಚನೆಯಿಂದ ಅನುಭವದಿಂದ ಪಡೆದುಕೊಂಡವುಗಳಲ್ಲಿ ಎಂದು ಹೇಳುವುದು ಸಾಧ್ಯ. ಯಾವುದೇ ನಂಬಿಕೆಯ ಪ್ರಾರಂಭಸ್ಪರ್ಶವಾಗುವುದು ಪರಂಪರೆಯ ಮತ್ತು ಪರಿಸರದ ಪ್ರಭಾವದಿಂದ. ಬರುಬರುತ್ತ ವ್ಯಕ್ತಿ ತನ್ನ ಆಲೋಚನೆ ಅನುಭವಗಳಿಂದ ಅದನ್ನು ದೃಢಪಡಿಸಿಕೊಳ್ಳುವನು, ಕೆಲವು ಸಲ ಅದು ತೀವ್ರವಾಗಬಹುದು, ಹಲವು ಸಲ ಅದು ಮಂದವಾಗಬಹುದು."

ಜಿ. ಎಸ್. ಎಸ್. ರವರ 'ನಿನ್ನಡಿಯ ಹುಡಿ ನನ್ನ ಮುಡಿಯ ಸಿಂಗರಿಸಲಿ, ಕಡೆಗಾನು ಹುಡಿಯಾಗಿ ನಿನ್ನಡಿಗೆ ಸಲ್ಲಲಿ' '(ಬೇಡಿಕೆ)' 'ಭಿಕ್ಷಕ್ಕೆ ಬಂದವರ ಮುಂದೆ ಭಿಕ್ಷುಕನಾದೆ, ನನ್ನೆದೆಯ ಜೋಳಿಗೆಯ ನಾನೆ ತೆರೆದು, ಮುಂದೆ ನಡೆದರು ಅವರು ಹಾಡು ಸುರಿದು' ('ಶುಭದಭಯವಾಣಿ') ಎಂಬಂಥ ಮಾತುಗಳಲ್ಲಿ ಅರ್ಪಿತ್ರೆ ಶಿವದರ್ಶನ ಭಾವಗಳು ಕಂಡುಬರುವಂತೆಯೆ ಅಲ್ಲಲ್ಲಿ ರುದ್ರಭಾವನೆಗಳೂ ತಲೆಯೆತ್ತಿನಿಂತಿವೆ. 'ಉಡುಗಣವೇಷ್ಟಿತ' ನಾದ ಚಂದ್ರ 'ಕಣ್ಣ ನೀರಿನಲಿ ಮಣ್ಣಧೂಳಿನಲಿ ಹೊರಳುತ್ತಿರುವವರ ಸಹಚಾರಿ' ಯಾಗಿಯೂ 'ದೀನ ಅನಾಥರ ದುಃಖ ದರಿದ್ರರ ಮುರುಕು ಗುಡಿಸಲಲಿ ಉಪವಾಸಿ'ಯೂ ಆಗಿ ಕಂಡುಬರುತ್ತಾನೆ ('ಅಲ್ಲಿ-ಇಲ್ಲಿ'). ಇದೇ ಭಾವವನ್ನು 'ವ್ಯೈನಡುಗಿತು ಕಿಡಿಮೊಡೆಯಿತು ಸೌಂದರ್ಯ! ಸಾವು ಬದುಕಿನ ಹೋರಾಟದ ಕ್ರೌರ್ಯ ಎದೆ ತುಂಬಿತು ('ಶಂತುಕೃತಿ'), 'ಕಣ್ಣೀರಿಗೀಮಿಗಿಲು ತತ್ವಬೋಧಕರಿಲ್ಲ, ಮುನ್ನೀರು

ಎಂಬುದೊ ಕಣ್ಣೀರೆ ಎಲ್ಲ!' ('ಕಣ್ಣೀರು') ಎಂಬಂಥ ಸಾಲುಗಳಲ್ಲಿಯೂ ನೋಡ ಬಹುದು. ಇಂತೆಡೆಗಳಲ್ಲಿ ಕವಿ ನಿಜಕ್ಕೂ ಶಿವರುದ್ರಸಂಗಮ!

ಅನುಭವ ಪಕ್ವವಾದಂತೆಲ್ಲ ಕವಿಯ ವರ್ಣನಾತ್ಮಕ ಶಕ್ತಿ ಕ್ರಮೇಣ ಬೆಳೆಯುತ್ತ ಹೋಗಿರುವುದರ ಜೊತೆಗೆ ಅಭಿವ್ಯಕ್ತಿ ವಾಚ್ಯ ಸೌಂದರ್ಯದಿಂದ ವ್ಯಂಗ್ಯ ಪ್ರಪಂಚದ ಅರ್ಥವಲಯದ ಕದಗಳನ್ನು ತಟ್ಟುತ್ತಿರುವುದನ್ನು ಜಿ.ಎಸ್.ಎಸ್. ಅವರ ರಚನೆಗಳಲ್ಲಿ ನೋಡಬಹುದು. 'ಸೀರಾಮಧುರ'ನಾದ ಅಲೆಅಲೆಯಾಗೈತರುತಿದೆ ದಿವ್ಯ ವೀಣಾ ಮಧುರನಾದ 'ಮ' ಭಾವ ಭಾವಾತೀತ ವಿವಿಧಾನುಭವಗಳನು ನನ್ನೆದೆಯ ಸಿರಿಗುಡಿಗೆ ತಂದಿಲ್ಲಿ ನಿಲಿಸುತಿದೆ' (ವೀಣಾಧ್ವನಿ) ಎಂದು ಅಚ್ಚರಿಪಡುವ ಕವಿಹೃದಯ 'ಶತಮಾನ ಗಳ ತಿಮಿರ ಮುಸುಕಿದೀ ಮಂದಿರದ ಎದೆಯಾಳದಲ್ಲಿ....ಬೆಳಗು ಬಾ ಹಣತೆಯನು ನನ್ನೆದೆಯ ಗುಡಿಯಲ್ಲಿ ಚಿರಕಾಲ ಪ್ರಜ್ವಲಿಸಿ ಬೆಳಗುವಂತೆ, ನೀನು ಬಂದದ್ದರಿಂದ ನನ್ನೆದೆಯ ಆನಂದ ನರ್ತಿಸುತ ಶೋಭಿಸಿದೆ ಮಳೆ ಬಂದ ಮರುದಿನದ ಮುಂಬೆಳಗಿನಂತೆ' ಎಂಬುದಾಗಿ ಕೃತಕೃತ್ಯತೆಯನ್ನು ನೇರವಾದ ಮಾತುಗಳಲ್ಲೇ ಅಭಿವ್ಯಕ್ತಿಸುತ್ತದೆ. 'ವಿಶಾಲ ಪಥದಲಿ ಜೀವನ ರಥದಲಿ ನಿನ್ನಯ ಕರುಣೆಯ ಸಾರಥ್ಯದಲಿ, ನೀಲ ವಿತಾನದ ಹಂದರದಡಿಯಲಿ ಮರ್ತ್ಯದ ಮಣ್ಣಿನ ಧೂಳಿನಲಿ ಹಗಲು ಇರುಳುಗಳ ಬೆಳಕಿ ನಲಿ ನಡೆಯುತ್ತಿದೆ. ಈ ಜೀವರಥ ವಿಶಾಲವಾಗಿದೆ ನನ್ನ ಪಥ' ಎಂಬುದಾಗಿ ಕವಿಚೇತನ ತನ್ನ ವಿಸ್ತಾರವಾದ ಪಥವನ್ನು ಗುರುತಿಸಿಕೊಳ್ಳುತ್ತದೆ.

ವಾಚ್ಯದಿಂದ ವ್ಯಂಗ್ಯ ಪ್ರಪಂಚಕ್ಕೆ ನಡೆದ ಸಂಕ್ರಮಣವನ್ನು ಅವರ 'ಜಡೆ' ಯಂತಹ ಕವನಗಳಲ್ಲಿ ಗುರುತಿಸಬಹುದು. ಬೇರೆ ಬೇರೆ ಪ್ರಕಾರಗಳ ಜಡೆಗಳ ವರ್ಣನೆ ಇಲ್ಲಿ ಕಂಡುಬರುತ್ತದೇನೊ ಅನ್ನುವಷ್ಟರಲ್ಲಿ 'ಮಾತೃಮಮತಾವೃಕ್ಷ ಬಿಟ್ಟ ಬೀಳಲಿ ನಂತೆ ಹರಡಿರುವ ತಾಯ ಜಡೆ!' ಎನ್ನುತ್ತ ಗಂಭೀರ ರೂಪಕವನ್ನು ಪಡೆದು ಕೊಳ್ಳುತ್ತ 'ಕುರುಕುಲಜೀವಾಕರ್ಷಣ ಪರಿಣತ' ಆ ಪಾಂಚಾಲಿಯ ಜಡೆ, 'ಸೀತೆಯ ಕಣ್ಣೀರೊಳು ಮಿಂದ ಜಡೆ' ಎಂಬುದಾಗಿ ಮಹಾಭಾರತ ರಾಮಾಯಣಗಳ ಎಲ್ಲೆಗಳನ್ನು ಮುಟ್ಟಿ 'ಓ ಓ ಈ ಜಡೆಗೆಲ್ಲಿ ಕಡೆ!' ಎಂಬ ಅಚ್ಚರಿಯೊಡನೆ ನಿಲ್ಲುತ್ತದೆ. ಕಣ್ಣಿಗೆ ಕಾಣುವ ಸೃಷ್ಟಿಯ ಹಿಂದೆ ಅಡಗಿರುವ ಅದೃಶ್ಯಶಕ್ತಿಯ ಬಗ್ಗೆ ಮನುಷ್ಯನ ಕುತೂಹಲ, ಅದನ್ನು ಕಂಡುಕೊಳ್ಳಲು ಸಾಧ್ಯವಾಗದಿದ್ದಕ್ಕೆ ಉಂಟಾದ ಕಳವಳ ತಳಮಳಗಳು ಆಶ್ಚರ್ಯಕರವಾಗಿ ಹೊಸ ತಿರುವಿನ ಧ್ವನಿಯನ್ನು ಪಡೆದುಕೊಳ್ಳುತ್ತದೆ.

> ಗಾನಗಳ ಕಾವ್ಯಗಳ ಶಿಲ್ಪಗಳ ಕಲೆಯ ಜಡೆ
> ಎಲ್ಲವೂ ರಮ್ಯವೆಲ್ಲ!
> ಜಡೆಯಾಚೆ ತಿರುಗಿಸಿದ ತಾಯ ಮುಖ ಮಾತ್ರ ಇಂದಿಗೂ
> ಕಾಣದಲ್ಲ!

ಕವಿ ದುರದೃಷ್ಟವಶಾತ್ ತಾಯಿಯನ್ನು ಕಳೆದುಕೊಂಡಾಗ ಅವರ ವಯಸ್ಸು ಆರು ವರ್ಷ. ಅವರ ಮಾತುಗಳನ್ನೇ ನೋಡುವುದಾದರೆ "ಈ ನನ್ನ ತಾಯಿಯ ಬಗ್ಗೆ ಅವಳ ಮುಖದ ಬಗ್ಗೆ ನನಗೆ ನಿಲ್ಲುವುದು ಒಂದು ಅಸ್ಪಷ್ಟವಾದ ನೆನಪು: ಮಮತೆ ತುಂಬಿದ

ಒಂದು ಮುಖ. ಹೊಳೆಯುವ ಎರಡು ಕಣ್ಣು ಮತ್ತು ತಲೆಯ ತುಂಬ ಹೊದ್ದ ಹಸುರು ಸೆರಗು. ಇದಿಷ್ಟೇ ನನಗೆ ನೆನಪಿರುವುದು. ಆದರೆ ಆಕೆ ತುಂಬ ಮಧುರವಾಗಿ ಹಾಡುತ್ತಿದ್ದಳು; ಆ ಹಾಡಿನ ಕೊರಳಿನ ಇಂಪು ಇಂದೂ ನನ್ನ ಮನಸ್ಸಿನಲ್ಲಿ ಅನುರಣಿತವಾಗುತ್ತದೆ. ಇಂಥ ತಾಯಿಯನ್ನು ಕಳೆದುಕೊಂಡಾಗ, ಬಹುಶಃ ನನಗೆ ಆರು ವರ್ಷ ವಯಸ್ಸು ನನ್ನ ತಮ್ಮನಿಗೆ ಮೂರು. ಆಕೆ ತೀರಿಕೊಂಡ ದಿನ ಬೀರೂರಿನಲ್ಲಿ ನಾನೂ ನನ್ನ ತಮ್ಮ ಹಾಯಾಗಿ ಆಟವಾಡುತ್ತಿದ್ದೆವು. 'ನಿನ್ನ ಅಮ್ಮ ದೇವರ ಹತ್ತಿರ ಹೋಗಿದಾಳಪ್ಪ' ಎಂದು ಅವರಿವರು ಹೇಳಿದ್ದನ್ನು ಕೇಳಿ ಮತ್ತೆ ಬರುತ್ತಾಳೆ ಎಂದು ನಂಬಿ ಸ್ವಲ್ಪ ಕಾಲ ಸುಮ್ಮನಿದ್ದೆ. ಆಮೇಲೆ, ಹಾಗೆ ಅವರು ಹೇಳಿದ್ದು ಸುಳ್ಳು ಎಂಬುದು ಅರ್ಥವಾಗಿ, ಅ ಮತ್ತೆ ಬರುವುದೇ ಇಲ್ಲವೆಂದು ಖಚಿತವಾದಾಗ, ನಿಜಕ್ಕೂ ಅಳು ಒತ್ತರಿಸಿಕೊಂಡು ಬಂತು. ಆಮೇಲೆ 'ಕಂಡ ಕಂಡ ಹೆಣ್ಣುಮೊಗದಿ ತಾಯ ಮುಖವನರಸಿದೆ'. ಅನಂತರ ಮತ್ತೊಬ್ಬ ತಾಯಿ ಶಾಂತಮ್ಮ ಮನೆಯನ್ನು ತುಂಬಿದಳು" (ಚತುರಂಗ: ಎಳೆಯಂದಿನ ಬೆಳಕು ಪು. ೬,೭). ಹಾಗೆ ಉಕ್ಕಿಬಂದ ತಾಯ ಹಂಬಲ. ಆಕೆಯ ಮುಖವನ್ನು ನೆನಪಿಸಿಕೊಳ್ಳುವ ಕೈಗೂಡದ ಪ್ರಯತ್ನ ಮೇಲೆ ಉಲ್ಲೇಖಿಸಿರುವ ಪದ್ಯದ ಕೊನೆಯ ಎರಡು ಸಾಲುಗಳಲ್ಲಿ ಎಂಥ ಉದಾತ್ತವಾದ ಮರ್ಮಸ್ಪರ್ಶಿಯಾದ ಅಭಿವ್ಯಕ್ತಿ ಪಡೆದಿದೆ !

'ಸಂಜೆದಾರಿ' (೧೯೫೪) ಸಂಕಲನದ ವೇಳೆಗೆ ಕವಿ ಕಾವ್ಯದಲ್ಲಿದ್ದ ವ್ಯಂಗ್ಯ ಸಾಮಾಜಿಕ ಪರಿಸರದತ್ತ ಬಾಗಿ ವಿಡಂಬನೆಯ ರೂಪವನ್ನು ಪಡೆದುಕೊಳ್ಳತೊಡಗಿತು. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಕಂಡುಬರುತ್ತಿದ್ದ ಸಾಮಾಜಿಕ ಏರುಪೇರುಗಳ ವಿಸಂಗತಿಗಳು ಈ ಬಗೆಯ ರಚನೆಗಳಿಗೆ ಸಾಕಷ್ಟು ಗ್ರಾಸವನ್ನು ಒದಗಿಸುತ್ತಿದ್ದವು. ಸಂಜೆದಾರಿ, ಮೋಡಿ, ಬಾಡಿಗೆಮನೆ, ಮೋಪ್ಪ್ರು, ಆಸ್ಪತ್ರೆ ಈ ಬಗೆಯ ಕೆಲವು ಕವನಗಳು. 'ಎಂಥ ಹುಚ್ಚು ಜನರು ಇವರು ಕೊಚ್ಚೆಯನೇ ಕಾಂಬರು ! ಕೊಚ್ಚೆಯುಂಡು ದಡದಿ ಬೆಳೆದ ಹಚ್ಚಹಸುರ ಕಾಣರು !' (ಜನರು) ಎಂಬಂತಹ ಸಾಲುಗಳಲ್ಲಿ ಸಾಮಾಜಿಕ ಬದುಕಿನ ಘೋರ ವಾಸ್ತವತೆ ಎದುರಾಗುತ್ತದೆ.

ಅಲ್ಲಿಂದ ಮುಂದೆ 'ಅನಾವರಣ' (೧೯೬೩) ಸಂಕಲನಕ್ಕೆ ಬರುವ ವೇಳೆಗೆ ಕವಿಯ ವ್ಯಂಗ್ಯ ಕೇವಲ ಆಕ್ರೋಶಕ್ಕೇ ಸೀಮಿತಗೊಳ್ಳದೆ ನವಿರಾದ ಕಲಾಕೃತಿಯಾಗಿ ವಿಮರ್ಶಕರೊಬ್ಬರು ಹೇಳುವಂತೆ 'ಚುಚ್ಚಿದರೂ ಮೆಚ್ಚುವಂಥ' ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಅನಾವರಣವಾಯಿತಂತೆ, ನಾಯಿಗೇಕೆ ಎಚ್ಚರಿಕೆ, ಶನಿದೇವರವಿಗ್ರಹ, ಕೋ ಕೂಗಿತು, ಕಂಪ್ಲೇಂಟು, ಹಳೇಪೇಪರ್ ಖಾಲಿ ಶೀಷೆ, ಶೇವಿಂಗ್ ಸೆಲೂನಿನಲ್ಲಿ ಮುಂತಾ ಪದ್ಯಗಳಲ್ಲಿ ವಿಡಂಬನೆ ಹೆಚ್ಚಾಗಿದ್ದು ಕವಿಯ ವ್ಯಂಗ್ಯದ ಮೊನಚನ್ನು ಹೊರಗೆಡವುತ್ತದೆ. ಈ ಸಂಕಲನದ ಕೊನೆಯಲ್ಲಿ ಬರುವ 'ಹಾರೈಕೆ' ಎಂಬ ಕವನದಲ್ಲಿ ಹೊಸ ಪೀಳಿಗೆಯ ಮೇಲ್ಮಟ್ಟದ ಆದರ್ಶಗಳನ್ನು ಎತ್ತಿ ತೋರಿ ಕವಿ ಹೇಳುವ ಮಾತುಗಳು ಅವರ ಕಾವ್ಯಾಭಿವ್ಯಕ್ತಿ ಮತ್ತೊಂದೆಡೆ ಹೊರಳುತ್ತಿದ್ದುದನ್ನು ಸೂಚಿಸುತ್ತದೆ.!

ಕಣಿವೆ ತಳದೊಳು ಜೊಂಡಾಗದಿರು ಮಗುವೆ
ಬೆಟ್ಟಗುಡ್ಡದ ಹಿರಿ ತೇಗವಾಗು

ತಲೆಯುಬಾಗದೆ ನಿಂತು ಕೊಂಬೆರೆಂಬೆಯ ಚಾಚಿ
ಮಳೆ ಬಿಸಿಲು ಗಾಳಿಗಳ ತೊಟ್ಟಿಲಾಗು
ಹಸುರು ಹಾವಸೆ ಹಚ್ಚಿ ಕೊಳೆವ ಕೊಳವಾಗದಿರು
...ಕೆಟ್ಟ ಇಟ್ಟಿಗೆಯಿಂದ ಕಟ್ಟದಿರು ಹೊಸಮನೆಯ
ನಾಳೆನಾಸೆಯ ಶಿಖರ ನೀನೆ ನಮಗೆ!

ಕವಿಯ ಉಳಿದ ಕವನ ಸಂಕಲನಗಳಲ್ಲಿ ಬಹುಮಟ್ಟಿಗೆ ಮೊದಲನ ಮನೋಧರ್ಮವೇ ವಿವಿಧ ರೂಪಗಳಲ್ಲಿ ಅಭಿವ್ಯಕ್ತಿಗೊಂಡಿದ್ದು ರಚನಾಶಿಲ್ಪದಲ್ಲಿ ಪರಾಗವಾದ ನಡೆ, ಅಲ್ಲಲ್ಲಿ ವಿಡಂಬನೆ ಕಂಡುಬರುತ್ತದೆ. ಬರವಣಿಗೆಯಲ್ಲಿ ಅಂತರ್ಮುಖತೆಗಿಂತ ಬಹಿರ್ಮುಖತೆಯೂ ವ್ಯಕ್ತಿ ನಿಷ್ಠತೆಗಿಂತ ವಸ್ತುನಿಷ್ಠತೆಯೂ ಕಾಣದೊರೆಯುತ್ತದೆ. ಅವರ ಕಾವ್ಯದ ವ್ಯಾಪ್ತಿ ಸಹ ವಿಶಾಲವಾಗಿದ್ದು ಪ್ರಕೃತಿಗೀತೆಗಳು, ಚಿಂತನೆ, ವೈಯುಕ್ತಿಕ ಬದುಕಿನ ರಸನಿಮಿಷಗಳು, ಸಾಮಾಜಿಕ ಸಮಸ್ಯೆಗಳು ಇವೆಲ್ಲ ಅವರ ಕಾವ್ಯಕ್ಯಾಮೆರಾದಲ್ಲಿ ಸೆರೆಸಿಕ್ಕಿವೆ.

ಇಂದು ಅನೇಕರ ಪಾಲಿಗೆ ಶಿವರುದ್ರಪ್ಪನವರು ಭಾವಗೀತೆಗಳ ಕವಿ. ಅವರ ಅನೇಕ ಭಾವಗೀತೆಗಳು ಜನರ ನಾಲಿಗೆಯ ಮೇಲುಂಟು. 'ಹಾಡಬಹುದಾದ' ತಮ್ಮ ಐವತ್ತು ಭಾವಗೀತೆಗಳನ್ನು ಅವರು ಆರಿಸಿಕೊಟ್ಟದ್ದು ಅವು 'ಎದೆತುಂಬಿ ಹಾಡಿದೆನು' (೧೯೬೦, ೧೯೬೩) ಎಂಬ ಸಂಗ್ರಹದಲ್ಲಿ ಅಚ್ಚಾಗಿವೆ. 'ಉಡುಗಣವೇಷ್ಟಿತ', 'ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೆ', 'ಎದೆ ತುಂಬಿ ಹಾಡಿದೆನು ಅಂದು ನಾನು', 'ಎಲ್ಲೋ ಹುಡುಕಿದೆ ಇಲ್ಲದ ದೇವರ', 'ಹೌದೇನೇ ಉಮಾ ಹೌದೇನೆ', 'ಬೆಳಗು ಬಾ ಹಣತೆಯನು ನನ್ನೆದೆಯ ಗುಡಿಯಲ್ಲಿ', 'ವಿಶಾಲ ಪಥದಲಿ ಜೀವನ ರಥದಲಿ', 'ನೀನು ಮುಗಿಲು ನಾನು ನೆಲ', 'ಹಾಡು ಹಳೆಯದಾದರೇನು ಭಾವನವನವೀನ', 'ವೇದಾಂತಿ ಹೇಳಿದನು', 'ನಿನ್ನದೆ ನೆಲ ನಿನ್ನದೆ ಜಲ', 'ಸರ್ವೋದಯದ ಕಿರಣಲೀಲೆ', 'ನೆನಪಿದೆಯೆ ನಿನಗೆ'—ಇಂಥ ಕವನಗಳನ್ನು ಇಲ್ಲಿ ಉಲ್ಲೇಖಿಸಬಹುದು.

ಶಿವರುದ್ರಪ್ಪನವರು ಹೆಸರಾಂತ ಕವಿಗಳೇ ಅಲ್ಲದೆ ನುರಿತ ವಿಮರ್ಶಕರು. 'ಕೇವಲ ಶುಷ್ಕಪಂಡಿತರ ಸ್ವತ್ತೆನಿಸಿದ್ದ ಸಂಶೋಧನೆ ರಸದೃಷ್ಟಿಗೂ ಸಹೃದಯ ಸೃಷ್ಟಿಗೂ ಶತ್ರುವಲ್ಲವೆಂಬುದನ್ನು ಎತ್ತಿ ತೋರಿಸಲೇ ಎಂಬಂತೆ ರೂಪುಗೊಂಡಿದೆ.' ಅವರ ಕೃತಿ ಸೌಂದರ್ಯ ಸಮೀಕ್ಷೆ. ಗ್ರಂಥದ ಸ್ವರೂಪವನ್ನು ಮೊದಲ ಮಾತಿನಲ್ಲೇ ಸ್ಪಷ್ಟಪಡಿಸುತ್ತಾ ಲೇಖಕರು "....ಈ ಬರವಣಿಗೆ ಕಾವ್ಯಗಳ ಗುಣದೋಷ ಮೌಲ್ಯನಿರ್ಣಯ ವಿಚಾರವನ್ನು ಕುರಿತ ವಿಮರ್ಶೆ ಅಲ್ಲ; ಅದು ಪ್ರಕೃತ ಪ್ರಬಂಧದ ಉದ್ದೇಶವೂ ಅಲ್ಲ—ವಿಮರ್ಶೆಗೆ ಮೂಲವಾದ ಕಾವ್ಯದ, ಕಾವ್ಯ ಸೌಂದರ್ಯದ ಅಥವಾ ಕಾವ್ಯಾನುಭವದ ವಿವಿಧ ಅಭಿವ್ಯಕ್ತಿಯ ಮುಖಗಳನ್ನು ಕುರಿತ ಪರಿಶೀಲನೆ ಇದು" ಎಂದು ಹೇಳಿರುವ ಮಾತುಗಳು ಗಮನಾರ್ಹ, ಸೌಂದರ್ಯಬೋಧೆ, ಸೌಂದರ್ಯ ಮೀಮಾಂಸೆ, ಭಾರತೀಯ ಸೌಂದರ್ಯ ದರ್ಶನ, ಪ್ರಾಚೀನ ಕನ್ನಡ ಕವಿಗಳ ಸೌಂದರ್ಯ ದೃಷ್ಟಿ, ಸರ್ವೋದಯ ಕವಿಗಳ ಸೌಂದರ್ಯಾನುಭವ, ಸತ್ಯಂ ಶಿವಂ ಸುಂದರಂ—ಈ ಆರು ಭಾಗಗಳಲ್ಲಿ ಗರಿಗೆದರಿರುವ 'ಸೌಂದರ್ಯ ಸಮೀಕ್ಷೆ'ಯ ವ್ಯಾಪ್ತಿ ವೇದಗಳಿಂದ ಹಿಡಿದು ಸಮಕಾಲೀನ ಕನ್ನಡ ಕಾವ್ಯದವರೆಗೆ ಉಂಟು. ವಿದ್ವತ್ತು ಮತ್ತು ರಸಿಕತೆಗಳ ಅಪರೂಪ ಸಂಗಮ ಈ ಕೃತಿ.

'ಪರಿಶೀಲನ' ಹದಿನೈದು ವಿಮರ್ಶಾ ಲೇಖನಗಳ ಸಂಗ್ರಹ. ಇದರಲ್ಲಿ ಪಂಪನ ಕೃತಿಗಳ ಬಗ್ಗೆ ಮೂರು ಲೇಖನಗಳು, ರಾಘವಾಂಕನ ಬಗ್ಗೆ ಎರಡು, ವಚನಕಾರರ ಬಗ್ಗೆ ಎರಡು, ಹರಿದಾಸರ ಬಗ್ಗೆ ಎರಡು, ದಾಸರ ಶರಣರ ಬಗ್ಗೆ ಒಂದು ಹಾಗೂ ರಾಮಾಯಣದ ಅಗಸನ ಪಾತ್ರ, ಜೈಮಿನಿ ಭಾರತ, ರತ್ನಾಕರನ ಕಾವ್ಯ, ಭಾರತದ ಅಕ್ಷಯವಸ್ತ್ರ ಪ್ರಸಂಗ ಮತ್ತು ರವೀಂದ್ರನಾಥ ಠಾಕೂರರ 'ಫಲಸಂಚಯ'ದ ಬಗ್ಗೆ ಲೇಖನಗಳಿವೆ. ಲೇಖಕರ ವಿಮರ್ಶನ ದೃಷ್ಟಿ ಸಂಶೋಧನ ಪ್ರವೃತ್ತಿ, ಕಾವ್ಯ ಸೌಂದರ್ಯವನ್ನು ಸವಿಯುವ ರಸ ದೃಷ್ಟಿಗಳಿಂದ ಕೂಡಿದ ಈ ಲೇಖನಗಳ ಸಂಗ್ರಹ ಸ್ವಾರಸ್ಯಪೂರ್ಣವಾದ ಶೈಲಿಯನ್ನು ಪಡೆದುಕೊಂಡಿದೆ.

'ಗತಿಬಿಂಬ' ಕಾವ್ಯಮೀಮಾಂಸೆ ಮತ್ತು ವಿಮರ್ಶೆಯ ತಾತ್ವಿಕ ನಿಲುವುಗಳನ್ನು ಕುರಿತ ಪ್ರಬಂಧಸಂಕಲನ, ಸಾಹಿತ್ಯ–ಜೀವನದ ಗತಿಬಿಂಬ, ಕವಿಯಲ್ಲಿ ವಿಶಿಷ್ಟತೆ, ವಿಮರ್ಶೆ ಮತ್ತು ಕಾಲಾತೀತಸ್ಥಿತಿ, ಸಮಕಾಲೀನ ಪ್ರಜ್ಞೆ, ಸಾಹಿತ್ಯದಲ್ಲಿ ಪ್ರಾಮಾಣಿಕತೆ, ಕವಿ-ಸಹೃದಯ, ಕಾವ್ಯಮೀಮಾಂಸೆ (ಕಳೆದ ೨೫ ವರ್ಷಗಳಲ್ಲಿ) ಮುಂತಾದ ಲೇಖನಗಳನ್ನು ಈ ಕೃತಿ ಒಳಗೊಂಡಿದೆ. ಅಂತೆಯೆ ಸಾಹಿತ್ಯ ವಿಮರ್ಶೆಯಲ್ಲಿ ಪೂರ್ವದ ದೃಷ್ಟಿಯಾವುದು? ಪಶ್ಚಿಮದ ದೃಷ್ಟಿಯಾವುದು? ಒಂದು ನಿರ್ದಿಷ್ಟ ಸಾಂಸ್ಕೃತಿಕ ಸಂದರ್ಭಕ್ಕೆ ಹೊಂದಿಕೊಳ್ಳುವಂಥ ಮಾನದಂಡ ಯಾವುದು? ಎರಡು ಬೇರೆ ಬೇರೆ ಸಾಂಸ್ಕೃತಿಕ ಸಂದರ್ಭಗಳಲ್ಲಿ ಮೂಡಿಬಂದಿರುವ ಮಾನದಂಡಗಳನ್ನು ಯಾವ ಮಟ್ಟದ ಔಚಿತ್ಯದಲ್ಲಿ ಗ್ರಹಿಸಬೇಕು ಇವೇ ಮುಂತಾದ ಪ್ರಶ್ನೆಗಳ ಹಿನ್ನೆಲೆಯಲ್ಲಿ ಕನ್ನಡ ವಿಮರ್ಶೆಯ ನೆಲೆಯನ್ನು ಗುರುತಿಸಿ ಅದಕ್ಕೆ ಬೆಲೆಕಟ್ಟುವ ಪ್ರಯತ್ನ ಲೇಖಕರ 'ವಿಮರ್ಶೆಯ ಪೂರ್ವ ಪಶ್ಚಿಮ' ಕೃತಿಯಲ್ಲಿ ನಡೆದಿದೆ. ಸುಮಾರು ಒಂದು ಸಾವಿರ ವರ್ಷಗಳ ಕನ್ನಡ ಸಾಹಿತ್ಯ ಮತ್ತು ಸಮಕಾಲೀನ ಕನ್ನಡ ಸಾಹಿತ್ಯದ ವಿವೇಚನೆಯೂ ಇಲ್ಲಿ ಕಂಡು ಬರುವುದಲ್ಲದೆ ಸಂಸ್ಕೃತ ಮತ್ತು ಇಂಗ್ಲಿಷ್ ಕಾವ್ಯಗಳ ಬಗ್ಗೆಯೂ ವಿವೇಚನೆ ಚರ್ಚೆ ನಡೆದಿದೆ.

ಲೇಖಕರ 'ಕರ್ಮಯೋಗಿ' ಕವಿ ರಾಘವಾಂಕನ ಸಿದ್ಧರಾಮ ಚಾರಿತ್ರ್ಯದ ಆಧಾರದ ಮೇಲೆ ರಚನೆಗೊಂಡಿದೆ. ಮುಖ್ಯವಾಗಿ ಪೌರಾಣಿಕ ಕಾದಂಬರಿಯಾದರೂ ಇದು ಐತಿಹಾಸಿಕ ದೃಷ್ಟಿಯಿಂದ ಕಡಮೆಯೇನಲ್ಲ. ಆದರೂ ಇಲ್ಲಿ ಕಥಾನಾಯಕ ಸಿದ್ಧರಾಮ ಐತಿಹಾಸಿಕ ವ್ಯಕ್ತಿಯಾಗಿರುವುದಕ್ಕಿಂತಲೂ ಮಿಗಿಲಾಗಿ ಪೌರಾಣಿಕ ವ್ಯಕ್ತಿಯಾಗಿಯೆ ಪ್ರಾಶಸ್ತ್ಯ ಪಡೆದಿದ್ದಾನೆನ್ನಬಹುದು.

ಸ್ವಭಾವತಃ ಕವಿಯಾದ ಜಿ.ಎಸ್.ಎಸ್. ಭಾರತ-ಸೋವಿಯತ್ ಸಾಂಸ್ಕೃತಿಕ ವಿನಿಮಯ ಯೋಜನೆಯ ಮೂಲಕ ಇಪ್ಪತ್ತೆರಡು ದಿನಗಳ ಕಾಲ ಮಾಸ್ಕೋಗೆ ಸಂದರ್ಶಕ ಪ್ರಾಧ್ಯಾಪಕರಾಗಿ ಹೋಗಿದ್ದ ಪ್ರವಾಸಾನುಭವವನ್ನು ಅವರ 'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ' ಕೃತಿಯಲ್ಲಿ ಕಾಣಬಹುದು. ವಿಮರ್ಶಕರೊಬ್ಬರ ಮಾತಿನಲ್ಲಿ ಇದು "ಸೊಗಸಾದ ಗದ್ಯದಲ್ಲಿ ಮಿತಕಾಲಾವಧಿಯ ಅನುಭವಗಳನ್ನು ಯಾವ ವಿಧವಾದ ಸುಳ್ಳು ನಿಲುವುಗಳನ್ನೂ ಆರೋಪಿಸಿಕೊಳ್ಳದೆ ತಕ್ಕ ಕುತೂಹಲ ಮತ್ತು ಶ್ರದ್ಧೆಯಿಂದ ಸ್ವೀಕರಿಸಿ ಒಂದು ಕ್ರಮ ಮತ್ತು ಪರಿಷ್ಕರಣ" ಹೊಂದಿರುವ ಚೆನ್ನಾಗಿ ಓದಿಸಿಕೊಳ್ಳುವ ಕೃತಿ.

ಇವೇ ಅಲ್ಲದೆ ಶಿವರುದ್ರಪ್ಪನವರು ಸುಮಾರು ಮೂವತ್ತು ವರ್ಷಗಳ ಹಿಂದೆ ಕೆ.ಬಿ. ಪ್ರಭುಪ್ರಸಾದರೊಡನೆ ನಾಲ್ಕು ರೇಡಿಯೊ ನಾಟಕಗಳನ್ನೂ ಬರೆದಿದ್ದಾರೆ. ರಾಣಿ ದುರ್ಗಾವತಿ, ಮಹಾಸಂಗಮ, ನಾದಸೇತು ಮತ್ತು ಅವಳು ತೋರಿದ ಬೆಳಕು ಎಂಬ ಈ ಪ್ರಸಾರ ನಾಟಕಗಳನ್ನು ಇಲ್ಲಿ ಉಲ್ಲೇಖಿಸಬಹುದಷ್ಟೆ.

೧೯೮೪ ರ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಶಿವರುದ್ರಪ್ಪನವರ ಈಚಿನ ಮಹತ್ವದ ಕೃತಿ 'ಕಾವ್ಯಾರ್ಥಚಿಂತನ'ಕ್ಕೆ ಸಂದಿದೆ. ಈ ಕೃತಿಯ ಬಗ್ಗೆ ಕುವೆಂಪು ಅವರ ಈ ಮಾತುಗಳು ಗಮನಾರ್ಹ– "ತೀಕ್ಷ್ಣ ವಿಮರ್ಶನ ನೈಪುಣ್ಯ, ಸೂಕ್ಷ್ಮ ಸಂವೇದನಾ ಸಾಮರ್ಥ್ಯ, ಗಾಢವಿದ್ವತ್ತು, ಚಿಂತನ- ಮಂಥನಗಳಿಂದ ಸಂಲಬ್ಧವಾದ ಸಂಸ್ಕಾರ ಮತ್ತು ತೌಲನಿಕ ವಿಶ್ಲೇಷಣಾ ಕೌಶಲ್ಯಗಳು ಈ ಕೃತಿಯಲ್ಲಿ ಪ್ರತಿಫಲನಗೊಂಡು ಅದೊಂದು ಮಾರ್ಗದರ್ಶಕ ಆಧಾರಭೂತ ಕೃತಿ ಎನ್ನುವ ಮೆಚ್ಚುಗೆಗೆ ಪಾತ್ರವಾಗಿದೆ. ತೌಲನಿಕ ವಿಮರ್ಶೆಯ ಕ್ಷೇತ್ರದಲ್ಲಿ ಅದಕ್ಕೊಂದು ಅಗ್ರಗಣ್ಯಸ್ಥಾನವಿದೆ ಎನ್ನುವುದರಲ್ಲಿ ಸಂದೇಹ ವಿಲ್ಲ." ಹಾಗೆಯೆ ಗೋಪಾಲಕೃಷ್ಣ ಅಡಿಗರು "ಈ ಕೃತಿ ರಚನೆಯ ಹಿಂದೆ ಇರುವ ಸಂಸ್ಕೃತ, ಇಂಗ್ಲಿಷ್ ಆಧಾರ ಗ್ರಂಥಗಳ ಆಳವಾದ ಅಭ್ಯಾಸ, ಮನನ, ವಿವೇಚನೆ, ಪಾಶ್ಚಾತ್ಯ, ಭಾರತೀಯ ಕಾವ್ಯ ಸಂಕಲ್ಪನೆಗಳ ನಿರ್ದಿಷ್ಟವಾದ ಗ್ರಹಿಕೆ, ನಿರ್ದುಷ್ಟವಾದ ನಿರೂಪಣೆ– ಇವು ನಿಜವಾಗಿಯೂ ದಂಗುಬಡಿಸುವಂಥವು" ಎಂಬುದಾಗಿ ಈ ಕೃತಿಯನ್ನು ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ. ಚನ್ನವೀರ ಕಣವಿಯವರ ದೃಷ್ಟಿಯಲ್ಲಿ "ವಿಮರ್ಶೆ ತನ್ನ ಶಾಸ್ತ್ರೀಯ ಶಿಸ್ತಿನಿಂದ ಇಷ್ಟೊಂದು ಆಹ್ಲಾದಕರವೂ ಆಕರ್ಷಕವೂ ಆಗಿರುವುದು ಸಾಧ್ಯವೆ ಎಂದು ಅಚ್ಚರಿಪಡುವಂತಿದೆ. ಒಬ್ಬನೇ ವ್ಯಕ್ತಿಯಲ್ಲಿ ಶ್ರೇಷ್ಠ ಬಗೆಯ ಕವಿ ಹಾಗೂ ವಿಮರ್ಶಕರಿಬ್ಬರೂ ಪರಸ್ಪರ ಮುಕ್ತ ಮನಸ್ಸಿನಿಂದ ತಮ್ಮ ರಹಸ್ಯಗಳನ್ನು ನಿವೇದಿಸಿ ಕೊಳ್ಳುತ್ತ ಪಾಲುಗೊಂಡಂತಿದೆ, ಕಾವ್ಯಾರ್ಥಚಿಂತನ." ಲೇಖಕರ ಪ್ರತಿಭೆ, ವಿದ್ವತ್ತು, ಪರಿಣತಿಗಳ ಬಗ್ಗೆ ಇದಕ್ಕಿಂತ ಮಿಗಿಲಾಗಿ ಏನುತಾನೆ ಹೇಳಲು ಸಾಧ್ಯ!

'ಸ್ನೇಹ ಕಾರ್ತೀಕ'ದ ಸಂಪಾದಕರ ಎರಡು ಮಾತುಗಳನ್ನು ಉಲ್ಲೇಖಿಸಿ ಈ ಲೇಖನ ಮುಗಿಸಬಹುದು. "ಹೊಸ ಸಾಹಿತ್ಯದ ಬಗೆಗೆ ಆಸಕ್ತಿ, ಹಳೆಯದರಲ್ಲಿ ಆಳವಾದ ಪಾಂಡಿತ್ಯ, ಅದನ್ನು ವಿವೇಚಿಸುವಲ್ಲಿ ಹೊಸ ಪೀಳಿಗೆಯ ನವೀನವಾದ ಹರಿತವಾದ ವಿಮರ್ಶನ ಬುದ್ಧಿ–ಇವರದು. ಮಿತ-ಹಿತ ಮಾತುಗಾರರಾದ ಇವರು ಒಳ್ಳೆಯ ಕೆಲಸ ಗಾರರು, ಹಿಡಿದ ಪಟ್ಟುಬಿಡದೆ ಕಾರ್ಯಸಾಧಿಸುವ ಸಮರ್ಥರು. ತಾವು ಮಾಡುವ ಕಾರ್ಯದಲ್ಲಿ ತೋರುವ ಶ್ರದ್ಧೆ ಉತ್ಸಾಹಗಳನ್ನು ಇತರರಲ್ಲೂ ನಿರೀಕ್ಷಿಸುವವರು.... ಉತ್ಸಾಹದ ಜೊತೆಗೆ ಈಡು ಜೋಡಾಗಿ ಕರ್ತೃತ್ವಶಕ್ತಿಯೂ ಇವರಲ್ಲಿದೆ. ತಮ್ಮ ಕನಸನ್ನು ನನಸಾಗಿಸುವುದರಲ್ಲಿ ಪ್ರಾಮಾಣಿಕ ಮನದಿಂದ, ಯಾವ ಆಡಂಬರ ಅಟಾಟೋಪಗಳಿಲ್ಲದೆ ಮೌನವಾಗಿ ಕಾರ್ಯತತ್ಪರರಾಗುವುದು, ಇವರ ಹಿರಿಯ ಗುಣಗಳಲ್ಲಿ ಒಂದು."

ಈ ಮಾತುಗಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ಶಿವರುದ್ರಪ್ಪನವರ ಬಗೆಗೆ ಕನ್ನಡಿಗರಲ್ಲಿ ಹೆಚ್ಚಿನ ಭರವಸೆ ಮೂಡಿಸಬಲ್ಲವೇನೋ.

ಐದು ಕವನಗಳು

ಜಿ. ಎಸ್. ಶಿವರುದ್ರಪ್ಪ

೧. ನಾನು ಬರೆಯುತ್ತೇನೆ

ನಾನು ಬರೆಯುತ್ತೇನೆ
ಕಾಳ ರಾತ್ರಿಗಳಲ್ಲಿ ಬಂದು ಕದ ತಟ್ಟುವ
ಧ್ವನಿಗಳನ್ನು ಕುರಿತು.

ನಾನು ಬರೆಯುತ್ತೇನೆ
ಬಿರುಗಾಳಿಯಲ್ಲಿ ಕಡಲಿನ ಮೇಲೆ
ಹೊಯ್ದಾಡುವ ದೋಣಿಗಳನ್ನು ಕುರಿತು.

ನಾನು ಬರೆಯುತ್ತೇನೆ
ನೆಲದಾಳಗಳಲ್ಲಿ ಮಲಗಿರುವ ಮೂಳೆಗಳ
ನಿಟ್ಟುಸಿರನ್ನು ಕುರಿತು.

ನಾನು ಬರೆಯುತ್ತೇನೆ
ಸಂಜೆಗತ್ತಲಿನಲ್ಲಿ ಕರಗುತ್ತಿರುವ
ಉಜ್ವಲವಾದ ಹಗಲುಗಳನ್ನು ಕುರಿತು.

ನಾನು ಬರೆಯುತ್ತೇನೆ
ಶತಮಾನಗಳ ಕತ್ತಲನ್ನೊಡೆದು
ಮೆತ್ತಗೆ ತಲೆಯೆತ್ತುವ ಮೊಳಕೆಗಳನ್ನು ಕುರಿತು.

ನಾನು ಬರೆಯುತ್ತೇನೆ
ಕೊನೆಯಿರದ ಬೀದಿಗಳ ಮೇಲೆ
ಕೀರ್ತಿಗೆ ಕಚ್ಚಾಡುವವರನ್ನು ಕುರಿತು.

ಅರಳುವ ಕನಸುಗಳನ್ನು ಕುರಿತು
ಉರುಳುವ ಚಕ್ರಗಳನ್ನು ಕುರಿತು
ನಾನು ಬರೆಯುತ್ತೇನೆ, ನನ್ನ
ಒಂದೊಂದೇ ಎಲೆಯುದುರಿ,
ನಾನು ಬೋಳಾಗುವುದನ್ನು ಕುರಿತು.

೨. ಪ್ರೀತಿ ಇಲ್ಲದ ಮೇಲೆ

ಪ್ರೀತಿ ಇಲ್ಲದ ಮೇಲೆ-
ಹೂವು ಅರಳೀತು ಹೇಗೆ?
ಮೋಡ ಕಟ್ಟೀತು ಹೇಗೆ?
ಹನಿಯೊಡೆದು ಕೆಳಗಿಳಿದು
ನೆಲಕ್ಕೆ ಹಸಿರು ಮೂಡೀತು ಹೇಗೆ?

ಪ್ರೀತಿ ಇಲ್ಲದ ಮೇಲೆ-
ಮಾತಿಗೆ ಮಾತು ಕೂಡೀತು ಹೇಗೆ?
ಅರ್ಥ ಹುಟ್ಟೀತು ಹೇಗೆ?
ಬರೀ ಪದಕ್ಕೆ ಪದ ಜತೆಗಿದ್ದ ಮಾತ್ರಕ್ಕೆ
ಪದ್ಯವಾದೀತು ಹೇಗೆ?

ಪ್ರೀತಿ ಇಲ್ಲದ ಮೇಲೆ
ದಕ್ಷಿಣಾಫ್ರಿಕದ ಕಗ್ಗತ್ತಲಿಗೆ
ಬೆಳಕು ಮೂಡೀತು ಹೇಗೆ?
ಸೆರೆಮನೆಯ ಕಂಬಿಯ ನಡುವೆ
ಕನುರುವ ಕನಸು ಕೊನರೀತು ಹೇಗೆ?
ಬಿಳಿ ಜನರ ಕರಾಳ ಕಪ್ಪು ಹೃದಯಕ್ಕೆ
ಕ್ರಿಸ್ತನ ಕರುಣೆ ಅರ್ಥವಾದೀತು ಹೇಗೆ?

ಪ್ರೀತಿ ಇಲ್ಲದ ಮೇಲೆ-
ಸಂಶಯದ ಗಡಿಗಳುದ್ದಕ್ಕು
ಸಿಡಿಗುಂಡುಗಳ ಕದನ ನಿಂತೀತು ಹೇಗೆ?

ಜಾತಿ-ಮತ-ಭಾಷೆ-ಬಣ್ಣಗಳ ಗೋಡೆಯ ನಡುವೆ
ನರಳುವ ಪಾಡು ತಪ್ಪೀತು ಹೇಗೆ ?
ನಮ್ಮ ನಿಮ್ಮ ಮನಸ್ಸು
ಮರುಭೂಮಿಯಾಗದ ಹಾಗೆ
ತಡೆಗಟ್ಟುವುದು ಹೇಗೆ ?

೩. ಪ್ರತಿಭೆ - ಪಾಂಡಿತ್ಯ

ಹೂಡಿದ್ದ ಬಡಕಲು ಕುದುರೆಗಳ ಕಂಡು
ನಕ್ಕನು ಋತುಪರ್ಣರಾಜ
ಕಾರ್ಕೋಟಕನ ವಿಷದಿಂದ ವಿಕೃತಾಂಗನಾದ
ನಳ
ಸಾರಥಿಯಾಗಿ ನಡೆಸಿದವನು ರಥವ.

ನಾಳೆ ಸ್ವಯಂವರದ ಹೊತ್ತಿಗೆ ನಾವು
ಹೋಗಿ ಸೇರುವುದುಂಟೆ ನಿಷಧವನ್ನು ?
ಪ್ರಶ್ನೆಗುತ್ತರವಾಗಿ ಸುಳಿನಗೆಯೊಡನೆ
ಮಿಂಚಿದವು ಪ್ರತಿಭೆಯ ಕಣ್ಣು.

ಗಾಳಿದಾರಿಯ ಸೀಳಿ ಚಲಿಸಿರಲು ರಥಚಕ್ರ
ಬೆರಗಾಗಿ ತಲೆದೂಗಿದನು ರಾಜ.
ಮೆಚ್ಚಿದನಯ್ಯ ಬಾಹುಕ ; ನೀನು ಬಲ್ಲಾತ
ಅಶ್ವ ಹೃದಯದ ವಿದ್ಯೆ, ನಾನೂ
ಬೇರೊಂದರಲಿ ಪಂಡಿತ ; ಕೇಳು
ಬೇಕಾದರೀ ಕೆಳಗೆ ತಲೆಯೆತ್ತಿ
ಶಾಖೋಪಶಾಖೆಗಳ ಚಾಚಿರುವ ಮರದಲ್ಲಿ
ಎಲೆಗಳೆಷ್ಟೆಂದು ಹೇಳುತ್ತೇನೆ.

ಸೊಯ್ಯಸಿಳಿಯಿತು ರಥ ಆಕಾಶದಿಂದ ನೆಲಕ್ಕೆ
ಕ್ಷಣಾರ್ಧದಲ್ಲಿ ಎಣಿಸಿದನು ಋತುಪರ್ಣ
ಮರದ ಎಲೆಗಳ ಸಂಖ್ಯೆ :

ಎಂಬತ್ತು ಸಹಸ್ರ ಲಕ್ಷದ ಮೇಲೆ
ನಾನೂರ ತೊಂಬತ್ತು.
ತಂಗಾಳಿಗೊಲೆವ ಮರ, ನಸುನಕ್ಕು
ತಲೆದೂಗಿತ್ತು !

ಮೆಚ್ಚಿದನು ಬಾಹುಕನು
ಋತುಪರ್ಣ ಪಾಂಡಿತ್ಯಕ್ಕೆ
ಮತ್ತೆ ನಿಶ್ಶಬ್ದವಾಗಿ ಏರಿತು ರಥ
ಮೂಡಿದ ಹಾಗೆ ಕುದುರೆಗೆ ರೆಕ್ಕೆ.

೪. ಹೊಸ ಹುಟ್ಟು

“ಎತ್ತಿಕೋ ನನ್ನನ್ನು
ಬಿಡು ಮೊದಲು ನಿನ್ನರಮನೆಯ ತಿಳಿಗೊಳದಲ್ಲಿ
ಆಮೇಲೆ ಹೊಳೆಯಲ್ಲಿ
ಮತ್ತೆ ನಾ ಬೆಳೆದ ಮೇಲೆ ಕಡಲಿಗೆ
ಏನು ಯಾಕೆ ಎಂದು ಸಂಶಯ ಬೇಡ
ಅರ್ಥವಾಗುತ್ತದೆ ಎಲ್ಲವೂ ಕೊನೆಗೆ”

ಬೊಗಸೆಗೆ ಬಂದ ಪುಟ್ಟ ಮೀನನ್ನು
ದಿಟ್ಟಿಸಿದ ಮನು,
ಅದರ ಬಿಡುಗಣ್ಣಗಳಲಿ ಬಿಂಬಿಸುತ್ತಿತ್ತು
ಬೆಳಗಿನ ಬಾನು
ಅರುಣೋದಯದ ಪ್ರಶಾಂತ ಮೌನದಲಿ
ಮರ್ಮರಿಸುತ್ತ ಹರಿದಿತ್ತು ನದಿ
ತನ್ನ ಪಾಡಿಗೆ ತಾನು.

ಏನಾಶ್ಚರ್ಯ !
ಅರ್ಘ್ಯವೆತ್ತಿದ ಕೈಗೆ ಮೀಸು ಬರುವುದು ಏನು !
ಮತ್ತೆ ನನ್ನನ್ನು ಹೀಗೆ ಕೇಳುವುದು ಏನು !

ವಿಚಿತ್ರವಾಗಿದೆ ಎಲ್ಲ
ನಂಬುವುದು ಒಳ್ಳೆಯದು ; ಅನುಮಾನ
ಒಳ್ಳೆಯದಲ್ಲ.

ಬೆಳೆಯಿತು ಮೀನು ದಿನದಿಂದ ದಿನಕ್ಕೆ
ಮೊದಲು ಅರಮನೆಯ ಉದ್ಯಾನದಲ್ಲಿರುವ
ಕೊಳದಲ್ಲಿ
ಆಮೇಲೆ ಹೊಳೆಯಲ್ಲಿ
ಮತ್ತೆ ಬ್ರಹ್ಮಾಂಡವಾಗಿ ಕಡಲಲ್ಲಿ
ಈಜಿತ್ತು ಅಲೆಗಳ ಸೀಳಿ
ಬಡಬಾಗ್ನಿಯುರಿಸುತ್ತ ತನ್ನ ಕಣ್ಣಲ್ಲಿ.

"ನೋಡುತ್ತ ದಡದಲ್ಲಿ ನಿಂತ ಮನುವಿಗೆ
ಹೇಳಿತು ಮತ್ತೆ :
ಕೇಳು, ನಾನು ಹೇಳುವುದನ್ನು
ಸರಿಯಾಗಿ ಕೇಳು,
ನೀನು ಈ ಯುಗದ ಮನು ; ನಾಳಿನ ಜಗದ
ಭಾರವನು ಹೆಗಲಲ್ಲಿ ಹೊತ್ತವನು ;
ಈ ಕಾಲ ಮುಗಿತಾಯಕ್ಕೆ ಬಂದಿದೆ
ಬದಲಾಗುವುದು ಅಗತ್ಯ
ಚಕ್ರ ತಿರುಗುವುದಕ್ಕೆ.

ಈಗ ಮೂಲಜಲ ಬಗ್ಗಡವಾಗಿ ಕೆಸರು
ಒಳಗೂ ಹೊರಗು ; ಕೊಳೆತು ನಾರಿದೆ ತೀರ್ಥ
ದೇವಾಲಯದ ಮೂರ್ತಿಗಳು ಭಗ್ನ ; ತಕ್ಕಡಿ
ಯೆಲ್ಲ ತಲೆಕೆಳಗು. ತಿನ್ನುವನ್ನದ ತುಂಬ
ಕಲ್ಲು ; ಎಲ್ಲೆಂದರಲ್ಲಿ ಬೆಳೆದು ದಂಡಕಾರಣ್ಯ
ಹದ್ದು–ನರಿ-ತೋಳ ರಾಕ್ಷಸ ರಾಜ್ಯ.

ದಾರಿಬಂದೇ : ಇರುವೆಲ್ಲವನ್ನೂ ಕೊಚ್ಚಿ
ಮತ್ತೆ ಕಟ್ಟಬೇಕಾಗಿದೆ ಹೊಸ ಜಗತ್ತ,
ನೀನೋ ಅದಕ್ಕೆ ಬರಿ ನಿಮಿತ್ತ.
ಕಟ್ಟು ಹಡಗೊಂದನು, ಶೇಖರಿಸು ಒಂದು ಕಡೆ
ನಾಳೆ ಬಿತ್ತಲು ತಕ್ಕ ಬೀಜಗಳನ್ನು
ನೀನು, ನಿನ್ನ ಪರಿವಾರ, ಮತ್ತೆ ಒಂಪತ್ತು

ಉತ್ತಮದ ತಳಿಯನ್ನು
ಬರುತ್ತದೆ ನಾಳೆ ಜಲಪ್ರಳಯ ; ಕೊಚ್ಚುತ್ತದೆ
ಇರುವುದೆಲ್ಲವನ್ನೂ ನಿಶ್ಶೇಷವಾಗಿ
ನಾ ಹಿಡಿದು ರಕ್ಷಿಸುತ್ತೇನೆ ನೀ ಕೂತ
ಹಡಗನ್ನು ಹೊಸ ಹುಟ್ಟಿಗಾಗಿ"

"ನಾನೊಲ್ಲೆ
ಕೈ ಮುಗಿದು ಹೇಳಿದನು ಮನು, "ನಾನೊಲ್ಲೆ
ಇರುವ ಈ ಎಲ್ಲವನ್ನೂ ನಿರ್ನಾಮಗೊಳಿಸಿ
ನಾಳಿನ ದಿವಸ ನಾನು ನನ್ನ ಪರಿವಾರ
ಉಳಿದು ಬದುಕುವ ಭಾಗ್ಯ ನನಗೆ ಬೇಡ
ನೀ ವರ್ಣಿಸಿದ ವಾಸ್ತವದ ಒಂದಂಶ
ನಾನೂ ಕೂಡ
ಕೊಚ್ಚಲಿ ಬಿಡು ನನ್ನನ್ನೂ ಸೇರಿಸಿಕೊಂಡು
ಈ ಮಹಾ ಪ್ರವಾಹ
ನನಗಿಲ್ಲ ನಾನೊಬ್ಬನೇ ಬದುಕುವ ದಾಹ
ನಾಳೆ ಬೆಳೆದೀತು ಹೊಸ ಮಣ್ಣಿನಲ್ಲಿ ಬೇರೂರಿ
ನನ್ನಲ್ಲಿರುವ ಒಳ್ಳಿತೇನಾದರೂ
ಕೊಂಬೆ-ರೆಂಬೆಗೆ ಪುಟಿದು ಹೊಸ ಹೂವು-ಚಿಗುರು."

೫. ಹಿಮಾಲಯದ ಸ್ಮೃತಿ ಸಂಪುಟ

ಕನಸು ಮನಸುಗಳಲ್ಲಿ ಥಟ್ಟನೆ ಎದ್ದು
ಸದಾ ಕರೆಯುತ್ತಿರುವ ಗಿರಿಶಿಖರ ಪಂಕ್ತಿಗಳೆ
ಪರ್ವತ ಪ್ರಪಂಚದಂತರಾಳಗಳಲ್ಲಿ
ಮೂಲರೂಪವ ಕುರಿತು ನಡೆಯುತ್ತಿರುವ ಹೆಜ್ಜೆಗಳೆ

ಕಗ್ಗಾಡು ಕಣಿವೆಗಳ ಹರಜಟಾಮಂಡಲದೊಳಗೆ
ಭ್ರಮಿಸುತ್ತಿರುವ ನಿತ್ಯಜಲ ಸತ್ವಗಳೆ
ಥಳತ್ತಳಿಪ ಧವಳ ಪರ್ವತದ ಹಿನ್ನೆಲೆಯಲ್ಲಿ
ಮುಡಿಯೆತ್ತಿ ನಿಂತ ಗುಡಿಯ ಗೋಪುರಗಳೆ

ಕಿಕ್ಕಿರಿದ ಹೆಮ್ಮರದ ರೋಮರಾಜಿಯ ವೈಯ್ಯ
ಪ್ರಪ್ರಾಚೀನ ಪೆಡಂಭೂತ ಸಂತಾನವೆ
ಭೈರವನ ಬಾಯ ಪಾತಾಳದಾಕಳಿಕೆಗಳ
ತಳಾತಳದಲ್ಲಿ ನಿದ್ರಿಸುವ ಘನ ಮೌನವೇ

ತತ್ತರಿಸುವೆತ್ತರದ ಬೃಹದಾಕಾರ ವಿಸ್ತಾರ–
ದಸ್ತವ್ಯಸ್ತ ನಿರ್ಲಕ್ಷ್ಯ ದೃಶ್ಯಾಭಿವ್ಯಕ್ತಿಗಳೆ
ಮುಂಜಾನೆ ಬಂಗಾರವಾಗಿ, ನಡು ಹಗಲು ರಜತ ಮಯವಾಗಿ
ಸಂಜೆಗೆ ಹೊನ್ನೇರಿಲೆಯು, ಪಾರಿವಾಳದ ಬೂದು ಬಣ್ಣವಾಗಿ
ಶೋಭಿಸುವ ದಿಶಿದೇವತಾತ್ಮ ತೇಟಶ್ಯರೀರಿಗಳೆ

ಸಂಜೆಗತ್ತಲಿನಲ್ಲಿ ಮರೆವೆಗೆ ಇಳಿವ
ಹಳೆಯ ನೆನಪುಗಳಂತೆ ನಿಂತ ಶಿಖರಕೆ
ನಕ್ಷತ್ರದಾರತಿಯೆತ್ತುವಾಕಾಶವೇ,
ದಟ್ಟ ಕತ್ತಲಿನ ನಿದ್ರಾ ಸಮುದ್ರದೊಳಗು–
ದ್ಬುದ್ಧವಾದ ನೀರ್ಗಲ್ಲ ಕನಸುಗಳಂತೆ
ಮಬ್ಬಾದ ಗಿರಿಪಂಕ್ತಿ ವಿಸ್ತಾರವೇ

ಕಣಿವೆಯೊಳಗುಟ್ಟುಗಳಿಗಿಟ್ಟ ಕಡೆಗೋಲಂತೆ
ಭೋರಿಡುವ ನೀರುಗಳ ಅನುರಣನವೇ
ಜಟಿಲ ಕಾನನದ ಕುಟಿಲ ಕಂದರದ ದಾರಿಯಲಿ
ಹಠಾತ್ತನೆ ಒಂದನ್ನೊಂದು ಸಂಧಿಸಿದ
ನದೀ ಜಲೋಲ್ಲಾಸ ನಿರ್ಘೋಷಗಳೆ
ಬೆಟ್ಟದೆತ್ತರದ ಕೋಡುಗಳಿಂದ ಹಾಲಿಳಿವ
ಅಸಂಖ್ಯಾತ ಜಲಪಾತದುತ್ಸಾಹ ಗೀತಗಳೆ

ನಿದ್ದೆ ಎಚ್ಚರಗಳಲಿ ನಿಶ್ಶಬ್ದವಾಗಿ
ನನ್ನನು ಕರೆವ ಅದ್ಭುತಗಳೆ
ಕೂತಲ್ಲೆ ನೆನಪಲ್ಲಿ ಪ್ರತ್ಯಕ್ಷವಾಗುತ್ತ
ಪುಸ್ತಕದಲ್ಲಿ ಮುದ್ರಿತವಾದ ಸಂಪುಟಗಳೆ
ಅಲ್ಲಿ ಹೇಗೋ ಹಾಗೆ ಇಲ್ಲಿಯೂ ನನ್ನೊಳಗೆ
ಸತ್ಯವಾಗುತ್ತಿರುವ ವಾಸ್ತವಗಳೇ

ಮಕ್ಕಳಿವರೇನಮ್ಮಾ ನಾ ಹಡೆದ?

ಜಿ. ಟಿ. ನಾರಾಯಣರಾವ್

ಇದೇ ಜುಲೈ ೧೨ರ ರಾಷ್ಟ್ರೀಯ ದೈನಿಕಗಳಲ್ಲಿ ಪ್ರಕಟವಾದ ಒಂದು ಸುದ್ದಿ :

ಪ್ರಪಂಚದ ಜನಸಂಖ್ಯೆ ೫೦೦ ಕೋಟಿ!

ಇಂದು ಜುಲೈ ೧೧ ಶನಿವಾರ ನಮ್ಮ ಈ ಗ್ರಹದಲ್ಲಿಯ ಜನಸಂಖ್ಯೆ ೫೦೦ ಕೋಟಿ ಮಿತಿ ತಲಪಿತು. ಯೂಗೊಸ್ಲಾವಿಯಾದ ಒಂದು ಹಳ್ಳಿಯಲ್ಲಿ ೨೩ ವರ್ಷ ವಯಸ್ಸಿನ ಸಂಜ್ ಗ್ಯಾಸ್ಪರ್ ಎಂಬಾಕೆ ಹಡೆದ ಗಂಡು ಶಿಶುವಿನೊಡನೆ ಪ್ರಪಂಚದಲ್ಲಿರುವ ಹೊಟ್ಟೆ-ಬಾಯಿಗಳ ಸಂಖ್ಯೆ ೫೦೦ ಕೋಟಿ ತಲಪಿ ಸಾರ್ವಕಾಲಿಕ ದಾಖಲೆ ಸ್ಥಾಪಿಸಿದೆ. ಈ ಸಂದರ್ಭವನ್ನು ಆಸ್ಪತ್ರೆಯ ವಲಯಗಳು ಸಂಭ್ರಮದಿಂದ ಆಚರಿಸಿದುವು.

ಗ್ಯಾಸ್ಪರಳ ನವಜಾತ ಶಿಶುವಿನ ಯಾವ ಪ್ರಯತ್ನ ಅಥವಾ ಅಪರಾಧ ಇಲ್ಲದೆ, ಕೇವಲ ಹುಟ್ಟಿನ ಆಕಸ್ಮಿಕತೆಯಿಂದ, ಅದಕ್ಕೆ ಈ 'ಗೌರವ' ಪ್ರಾಪ್ತವಾಗಿದೆ. ಪ್ರಪಂಚ ಜನಸಂಖ್ಯೆ ಒಂದ ಶೃಂಗದಿಂದ ಎತ್ತರದ ಇನ್ನೊಂದು ಶೃಂಗಕ್ಕೆ ಜಿಗಿದು ದಾಖಲೆ ಸ್ಥಾಪಿಸುವ ಇಂಥ ಒಂದೊಂದು ಸಂದರ್ಭವನ್ನೂ ಜನಸಂಖ್ಯಾಪರಿಣಿತರು ಗಾಬರಿಯಿಂದ ನೋಡಿ ಮತ್ತೆ ಮತ್ತೆ ತಮ್ಮ ಎಚ್ಚರಿಕೆ ನುಡಿಗಳನ್ನು ಸಾರುತ್ತ ಬಂದಿದ್ದಾರೆ.

ಅಮೆರಿಕಾ ದೇಶದ ವಾಷಿಂಗ್ಟನ್ನಿನಲ್ಲಿರುವ ಜನಸಂಖ್ಯಾ ಸಂಸ್ಥೆ ವೈಜ್ಞಾನಿಕ ಸಮೀಕ್ಷೆ ನಡೆಸಿ ಮುಂಡಿಸಿರುವ ಅಂದಾಜು ಪ್ರಕಾರ ಇಸವಿ ೨೦೫೦ರವೇಳೆಗೆ—ಅಂದರೆ ಇನ್ನು ೬೩ ವರ್ಷಗಳಲ್ಲಿ—ಪ್ರಪಂಚದ ಜನಸಂಖ್ಯೆ ೧೧೦೦ ಕೋಟಿ ದಾಟಿರುತ್ತದೆ. ಆಗ ಈ ಭೂಮಿಯಲ್ಲಿ ಈಗಿರುವುದಕ್ಕಿಂತ ೨.೨ ಮಡಿ ಜನರಿರುತ್ತಾರೆ, ಭೂಮಿಯೇನೂ ಉಬ್ಬಿರುವುದಿಲ್ಲ!

ಇಷ್ಟೇ ಅಲ್ಲ. ಈ ಹೆಚ್ಚಳ ಪ್ರಪಂಚಾದ್ಯಂತ ಏಕ ರೀತಿ ಏನೂ ಆಗಿರುವುದಿಲ್ಲ ಪ್ರಥಮ ಮತ್ತು ದ್ವಿತೀಯ ವಿಶ್ವ ರಾಷ್ಟ್ರಗಳಲ್ಲಿ ಯಥಾಸ್ಥಿತಿ ಮುಂದುವರಿಕೆ ಅಥವಾ ಜನಸಂಖ್ಯೆಯ ಇಳಿಕೆ, ತೃತೀಯ ವಿಶ್ವ ರಾಷ್ಟ್ರಗಳಲ್ಲಿ ಜನಸಂಖ್ಯೆಯ ಅತಿಶಯ ವೃದ್ಧಿ— ಜನಸಂಖ್ಯಾಸ್ಫೋಟ. (ಅಮೆರಿಕ, ಸೋವಿಯತ್ ರಷ್ಯ ಮುಂತಾದ ಆರ್ಥಿಕ ಹಾಗೂ ಸೇನಾ ಬಲಿಷ್ಠ ರಾಷ್ಟ್ರಗಳು ಪ್ರಥಮ ವಿಶ್ವ ರಾಷ್ಟ್ರಗಳು ; ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್ ಮುಂತಾದವು ದ್ವಿತೀಯ ವಿಶ್ವ ರಾಷ್ಟ್ರಗಳು; ಭಾರತ, ಪಾಕಿಸ್ತಾನ, ಶ್ರೀಲಂಕಾ ಬರ್ಮಾ ಮುಂತಾದವು ತೃತೀಯ ವಿಶ್ವ ರಾಷ್ಟ್ರಗಳು—ಈ ವರ್ಗೀಕರಣವನ್ನು ಆರ್ಥಿಕ ಸ್ವಾವಲಂಬನೆ, ತಂತ್ರವಿದ್ಯಾಸಿದ್ಧಿ, ಸೇನಾಸಾಮರ್ಥ್ಯ ಮುಂತಾದ ಪ್ರಗತಿ ಮಾನಕಗಳನ್ನು ಅನುಸರಿಸಿ ಮಾಡಲಾಗಿದೆ.)

ಭಾರತವನ್ನೇ ಕುರಿತು ಹೇಳುವುದಾದರೆ ಈ ತ್ವರಿತಗತಿಯ ಅತಿಶಯ ವೃದ್ಧಿಯ ಅರ್ಥವಿಷ್ಟು :

ಭಾರತದ ಪ್ರಸಕ್ತ ಜನಸಂಖ್ಯೆ ೭೬ ಕೋಟಿ ಇರುವುದು ಇಸವಿ ೨೦೦೦ದಲ್ಲಿ ೧೦೦ ಕೋಟಿ ಆಗಿರುತ್ತದೆ. ಹಸಿವು ಬಡತನ ಮೌಢ್ಯ ಮತ್ತು ಅತೃಪ್ತಿ ಅಸಹನೀಯ ಹಾಗೂ ಅದಮನೀಯ ಮಟ್ಟ ತಲಪಿದ್ದು ಜನಜೀವನ ಇನ್ನೂ ದುರ್ಧರವಾಗುತ್ತದೆ ಕಾಡು, ಹಸುರು, ನೀರಿನಾಕರ ಮುಂತಾದ ಜೀವನಾವಶ್ಯಕ ಮೂಲ ಪರಿಕರಗಳ ಹನ ಇನ್ನಷ್ಟು ತೀವ್ರತರವಾಗಿ ನಡೆದು ದೇಶವಿಡೀ ಗಲೀಜಿನ ಬೆಂಗಾಡು ಆಗುವತ್ತ ಸಾಗಿರುತ್ತದೆ.

ಇದೇನೂ ಶೂನ್ಯವಾದಿಯೊಬ್ಬನ ಅಸಹಾಯಕ ಪ್ರಲಾಪವಲ್ಲ, ಪಲಾಯನ ವಾದಿಯ ನಿರಾಶೆಯ ಆಕಳಿಕೆಯೂ ಅಲ್ಲ. ಪ್ರಪಂಚದಲ್ಲಿ—ಮುಖ್ಯವಾಗಿ ಭಾರತದಲ್ಲಿ —ಜನಸಂಖ್ಯೆ ಬೆಳೆದು ಬಂದಿರುವ ಬಗೆ ಗಮನಿಸಿದರೆ ಹೇಗೆ ಮನುಕುಲ ಕ್ರಮೇಣ ಸರ್ವನಾಶದತ್ತ ಸಾಗುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ.

ಪ್ರಪಂಚದ ಸಂಪನ್ಮೂಲಗಳನ್ನು ಆಧರಿಸಿ ನಾಗರಿಕತೆ (ಅಂದರೆ ಜೀವನ ವಿಧಾನ ಅಭಿವರ್ಧಿಸಿ ಬಂದಿದೆ. ಇದರೊಂದಿಗೆ ಜನಸಂಖ್ಯೆಯೂ ಬೆಳೆದಿದೆ. ಪ್ರತೀಕಗಳಲ್ಲಿ ಹೀಗೆ ವಿವರಿಸಬಹುದು.

ನೈಸರ್ಗಿಕ ಸಂಪನ್ಮೂಲ + ಮನುಷ್ಯ ಪ್ರಯತ್ನ = ಅಧಿಕ ಸಂಪತ್ತು

ಅಧಿಕ ಸಂಪತ್ತು + ಮನುಷ್ಯನಿಂದ ಇದರ ಅನುಭೋಗ =

ಅಧಿಕ ಜನ + ಪರಿಸರ ಮಾಲಿನ

ಈ ಅಧಿಕ ಜನ ಮತ್ತೆ ನೈಸರ್ಗಿಕ ಸಂಪನ್ಮೂಲವನ್ನು ಅಧಿಕವಾಗಿ ಸೂರೆಗೊಳ ತ್ತಾರೆ. ಫಲ? ಇನ್ನಷ್ಟು ಜನಸಂಖ್ಯೆ, ಮತ್ತಷ್ಟು ಪರಿಸರಮಾಲಿನ್ಯ, ಅಸಹನೀಯ ಜೀವನ ಸಮಸ್ಯೆಗಳು.

ಮಾನವನ ಮಿದುಳ ಕೂಸು ವಿಜ್ಞಾನ (ಸೈನ್ಸ್), ವಿಜ್ಞಾನದ ದೂ ತಂತ್ರವಿದ್ಯೆ (ಟೆಕ್ನಾಲಜಿ). ಮಾನವ–ತಂತ್ರವಿದ್ಯೆ ಅಂತರಕ್ರಿಯೆ ಹಾಗೂ ಅಂತರಾವ

ಲಂಬನದ ಪರಿಣಾಮವಾಗಿ ವರ್ತಮಾನ ಜೀವನ ಅತಿ ಸಂಕೀರ್ಣವಾಗಿದೆ. ೧೯೫೦ ರಿಂದೀಚೆಗೆ ಈ ಸಂಕೀರ್ಣತೆಯು ತೀವ್ರತೆ ವಿಶೇಷವಾಗಿ ತಾಗುತ್ತಿದೆ. ಇದರ ಕಾರಣ ಎರಡು.

ಒಂದು, ೧೯೫೦ರ ಮೊದಲು ಜನಸಂಖ್ಯೆ ತೀರ ಮಿತವಾಗಿತ್ತು. ಆ ದಿನದ ಮಾನವನ ಆವಶ್ಯಕತೆಗಳಾದರೂ ಅಷ್ಟೆ—ಸರಳ ಮತ್ತು ಪರಿಮಿತ. ಇತ್ತ ನಿಸರ್ಗದ ಸಂಪನ್ಮೂಲಗಳಾದರೂ ಅಪರಿಮಿತವೇ ಎಂಬ ಭಾವನೆ ಮೂಡಿಸುವಂತಿದ್ದುವು. ಹೀಗಾಗಿ ೧೯೫೦ಕ್ಕೆ ಹಿಂದಿನ ವರ್ಷಗಳಲ್ಲಿ ಪ್ರಪಂಚದ ಜನಸಂಖ್ಯೆ ಮತ್ತು ಸಂಪನ್ಮೂಲ ಗಳ ನಡುವೆ ಗಮನಾರ್ಹ ಕಂದರವೇನೂ ಬಾಯಿ ಕಳೆದಿರಲಿಲ್ಲ. ನೈಸರ್ಗಿಕ ಸಂಪನ್ಮೂಲ ಗಳ ಪೂರ್ಣಾನ್ವೇಷಣೆಯನ್ನೇ ಆಗಲಿ ವ್ಯವಸ್ಥಿತ ಉಪಯೋಗವನ್ನೇ ಆಗಲಿ ಮಾನವ ಇನ್ನೂ ಮಾಡಿರಲಿಲ್ಲ. ಕೋರಿದ ವರಗಳನ್ನು ಅನುಗ್ರಹಿಸುವ ಕಲ್ಪತರುವೇ ಧರಿತ್ರಿ ಎಂಬುದು ಅಂದಿನ ಮನೋಧರ್ಮ.

ಎರಡು, ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ತಂತ್ರವಿದ್ಯೆ ಅಭೂತ ಪೂರ್ವ ವೇಗೋತ್ಕರ್ಷ ಪಡೆದು ದೌಡಾಯಿಸತೊಡಗಿತು. ಅಭಿನವ ಬ್ರಹ್ಮನಾದ ತಂತ್ರವಿದ್ಯಾಪಾರಂಗತ ಮಾನವ ನಿಸರ್ಗದ ಅನೇಕ ನಿಗೂಢ ರಹಸ್ಯಗಳನ್ನು ಭೇದಿಸಿ ಬದುಕನ್ನು ಹಸನುಗೊಳಿಸುವ ವಿಧಾನಗಳನ್ನು ಶೋಧಿಸಿ ರೂಢಿಸಿದ. ಇವುಗಳ ಪರಿಣಾಮವಾಗಿ ತಂತ್ರವಿದ್ಯೆಯ ಶಕ್ತಿದಾಹ ತೀವ್ರವಾಯಿತು. ಇದರ ಶಮನಕ್ಕೆ ಮತ್ತೆ ನಿಸರ್ಗಕ್ಕೇ ಶರಣಾಗುವುದು ಅನಿವಾರ್ಯವಾಯಿತು. ಅಂದರೆ ನಿಸರ್ಗದ ಸೂರೆ ಅವ್ಯಾಹತವಾಗಿ ಸಾಗಿತು. ನಿಸರ್ಗ ಇದರಿಂದ ಬರಡಾಯಿತು, ಬತ್ತಿತು. ತಂತ್ರವಿದ್ಯೆ–ಶಕ್ತಿ ಮಜಲು ಓಟದ (ಅಂದರೆ ಶಕ್ತಿಯ ಉತ್ಪಾದನೆ ಅಧಿಕವಾದಂತೆ ತಂತ್ರವಿದ್ಯೆ ಬೆಳೆಯಿತು, ತಂತ್ರವಿದ್ಯೆ ಬೆಳೆದಂತೆ ಶಕ್ತಿಯ ಬೇಡಿಕೆ ಅಧಿಕವಾಯಿತು—ಹೀಗೆ ಒಂದು ಇನ್ನೊಂದಕ್ಕೆ ಕೊಕ್ಕೊಡುತ್ತ ಸಾಗುವ ಪರಿ) ಪರಿಣಾಮವಾಗಿ ತ್ಯಾಜ್ಯ ವಸ್ತುಗಳ ಹಿರಿಮೊತ್ತ ಪೇರಿಕೊಂಡು ಪರಿಸರಮಾಲಿನ್ಯಕ್ಕೆ ಕಾರಣವಾಯಿತು. ವ್ಯಾಪಕ ಪರಿಸರ ಮಾಲಿನ್ಯ ಇಪ್ಪತ್ತನೆಯ ಶತಮಾನದ, ತತ್ರಾಪಿ ಅದರ ಉತ್ತರಾರ್ಧದ, ತಂತ್ರವಿದ್ಯೆಯ ಅನಿವಾರ್ಯ ಉಪ್ರೋತ್ಪನ್ನ.

ಇಲ್ಲಿ ಇನ್ನೂ ಒಂದು ಸಂಗತಿಯನ್ನು ಪ್ರಸ್ತಾವಿಸಬೇಕು. ತಂತ್ರವಿದ್ಯಾಭಿವರ್ಧನೆಯ ಸಮಗ್ರ ಪರಿಣಾಮವಾಗಿ ಮರಣಕಾರಕ ರೋಗರುಜಿನಗಳು ಹಿಮ್ಮೆಟ್ಟಿ ಜನರ ಜೀವಿತ ನಿರೀಕ್ಷೆ ಏರುಮೊಗವಾಗಿದೆ, ಸಾವಿನ ಸಂಖ್ಯೆ ಕಡಿಮೆ ಆಗಿದೆ. ಇಂಥ ಪರಿಸ್ಥಿತಿಯಲ್ಲಿ ಜನನದರ ಸ್ಥಿರವಾಗಿದ್ದಾಗ್ಯೂ ಜನಸಂಖ್ಯೆ ಕ್ರಮೇಣ ಏರುವುದು ಸಹಜ. ಇನ್ನು ಜನನ ದರವೇನಾದರೂ ತುಸು ಏರಿದ್ದಾದರೆ ಜನಸಂಖ್ಯೆ ಜಿಗಿದೇರುತ್ತದೆ. ಹೀಗೆ ವೃದ್ಧಿಸುವ ಜನಸಂಖ್ಯೆ ಅಧಿಕ ಶಕ್ತಿಯನ್ನು ಬೇಡುತ್ತದೆ. ಇದರ ಪೂರೈಕೆಗಾಗಿ ತಂತ್ರವಿದ್ಯೆ ಬೆಳೆಯ ಬೇಕಾಗುತ್ತದೆ, ಹೊಸ ಹಸುರುಗಳನ್ನು ಅರಸಬೇಕಾಗುತ್ತದೆ. ಈ ರೀತಿ ಜನಸಂಖ್ಯೆ–ತಂತ್ರ ವಿದ್ಯೆ–ಶಕ್ತಿವಿನಿಯೋಗ ಒಂದು ವಿಷತ್ರಿಭುಜವನ್ನೇ ರಚಿಸುವಂತೆ ತೋರುತ್ತವೆ. ಒಂದು ಇನ್ನೆರಡಕ್ಕೆ ಕೊಕ್ಕೊಡುತ್ತ ಮೂರೂ ಚಟುಲಗತಿಯಿಂದ ಹೊರಧಾವಿಸುತ್ತ ತ್ರಿಭುಜದ ವಿಸ್ತೀರ್ಣ ವಿಸ್ತರಿಸುತ್ತದೆ.

ನಿಸರ್ಗದ ಸಂಪನ್ಮೂಲಗಳಲ್ಲಿ ವ್ಯಾಪಕವಾಗಿ ಎರಡು ವರ್ಗಗಳನ್ನು ಗುರುತಿಸಬಹುದು. ಪುನರಾವರ್ತನಶೀಲ ಸಂಪನ್ಮೂಲಗಳು, ಅ-ಪುನರಾವರ್ತನಶೀಲ ಸಂಪನ್ಮೂಲಗಳು.

ಪ್ರಾಣಿ, ಗಿಡ, ಮರ, ನೀರು, ವಾಯು ಮುಂತಾದವು ಮೊದಲನೆಯ ವರ್ಗಕ್ಕೆ ಸೇರುತ್ತವೆ. ಏಕೆಂದರೆ ಇವನ್ನು ರೂಪಿಸಲು ವಿನಿಯೋಗವಾಗುವ ವಿವಿಧ ಧಾತುಗಳು, ಆ ವಸ್ತುಗಳು ಉಪಯೋಗದಿಂದ ಇಲ್ಲವೇ ಸಾವಿನಿಂದ ಕೊನೆಗೊಂಡ ಬಳಿಕ, ಮತ್ತೆ ನಿಸರ್ಗಕ್ಕೆ ಅವೇ ಧಾತುಗಳಾಗಿ ಜಮೆಯಾಗಿ ಹೋಗುತ್ತವೆ. ನಿಸರ್ಗವೊಂದು ಮಹಾ ಪ್ರಯೋಗಶಾಲೆ. ಇಲ್ಲಿ ಕಟ್ಟುವಿಕೆ ಮತ್ತು ಒಡೆಯುವಿಕೆ ನಿರಂತರವಾಗಿ ನಡೆಯುತ್ತಿರುತ್ತವೆ. ಉದಾಹರಣೆಗೆ ಯಾವುದೇ ಪ್ರಾಣಿಯನ್ನು ಪರಿಶೀಲಿಸಬಹುದು. ನೀರು, ಸಾರಜನಕ, ಮೇದಸ್ಸು, ಶರ್ಕರ ಮತ್ತು ಹಲವಾರು ಖನಿಜ ಲವಣಗಳ ಸಂಕೀರ್ಣ ಮೇಳನವದು. ಅರ್ಥಾತ್ ಹೈಡ್ರೊಜನ್, ಆಕ್ಸಿಜನ್, ನೈಟ್ರೊಜನ್ ಮತ್ತು ವಿವಿಧ ಖನಿಜ ಲವಣಗಳು ನಿರ್ದಿಷ್ಟ ಆಲೇಖ್ಯಾನುಸಾರ ಸಂಯೋಗಗೊಂಡು ಆ ಪ್ರಾಣಿ ಮೈದಳೆದಿರುತ್ತದೆ. ಅದರ ಮರಣಾನಂತರ ನೈಸರ್ಗಿಕ ಕಾರಕಗಳ ಸತತ ಕ್ರಿಯೆಯ ಪರಿಣಾಮವಾಗಿ ದೇಹ ವಿಘಟಿಸಲ್ಪಟ್ಟು ವಿವಿಧ ಧಾತುಗಳು ಬೇರ್ಪಟ್ಟು ನಿಸರ್ಗದಲ್ಲಿ ಲೀನವಾಗುತ್ತವೆ; ಮತ್ತು ಆ ಮಹಾಪ್ರಯೋಗಮಂದಿರದಲ್ಲಿ ಪುನರಪಿ ಉಪಯೋಗಕ್ಕೆ ಲಭಿಸುತ್ತವೆ.

ಫಾಸಿಲ್ ಇಂಧನ—ಕಲ್ಲಿದ್ದಲು, ಪೆಟ್ರೋಲ್, ಡಾಮರು ಇತ್ಯಾದಿ—ಹೀಗಲ್ಲ. ಅಂತೆಯೇ ಲೋಹ, ಹಲವಾರು ಖನಿಜಗಳು, ಪ್ಲಾಸ್ಟಿಕ್, ಕೃತಕ ನಾರು, ಸಂಶ್ಲೇಷಿತ ರಾಸಾಯನಿಕಗಳು ಮುಂತಾದವು ಕೂಡ. ಉಪಯೋಗಾನಂತರ ನಿಸರ್ಗಕ್ಕೆ ಜಮೆಯಾಗುವ ಇವುಗಳ ಶೇಷಪದಾರ್ಥಗಳು ಅದರಲ್ಲಿ ಸುಲಭವಾಗಿ ಆಗಲಿ ಕ್ಷಿಪ್ರವಾಗಿ ಆಗಲಿ ಲೀನವಾಗುವುದಿಲ್ಲ. ಸಾವಿರಾರು ವರ್ಷಗಳ ಕಾಲ ಇವು ಪ್ರತ್ಯೇಕವಾಗಿಯೇ ಉಳಿದಿರುತ್ತವೆ. ಏಕೆಂದರೆ ಇವನ್ನು ಶೀಘ್ರವಾಗಿ ವಿಘಟಿಸಬಲ್ಲ ಸಾಮರ್ಥ್ಯಯುತ ನೈಸರ್ಗಿಕ ಕಾರಕಗಳಿಲ್ಲ. ಇತ್ತ ವಿಕಿರಣಪಟು ಧಾತುಗಳ ಬಳಕೆಯಿಂದ ಪರಮಾಣು ಶಕ್ತಿಯನ್ನು ಹಿಂಡುವ ತಂತ್ರವಿದ್ಯೆಯ ಉಪೋತ್ಪನ್ನ ಪದಾರ್ಥಗಳು ಶತಮಾನ ಪರ್ಯಂತ ವಿಕಿರಣಪಟುಗಳಾಗಿಯೇ ಉಳಿದಿದ್ದು ಜೀವಿಗಳಿಗೆ ಮಾರಕವಾಗುತ್ತವೆ. ಒಟ್ಟಾರೆ ಹೇಳುವುದಾದರೆ, ನಿಸರ್ಗದಿಂದ ಒಮ್ಮೆ ಬಸಿಯಲಾದ ಫಾಸಿಲ್ ಇಂಧನ ಮೊದಲಾದ ಸಂಪನ್ಮೂಲಗಳು ಸನಿಹದ ಭವಿಷ್ಯದಲ್ಲೇನೂ ಅದರ ಮಹಾಪ್ರಯೋಗಮಂದಿರಕ್ಕೆ ಮರುಬಳಕೆಗೆ ಲಭಿಸುವುದಿಲ್ಲವೆಂಬುದಂತೂ ಖಾತ್ರಿ. ಹೀಗಾಗಿ ಪ್ರಪಂಚ ಅಷ್ಟರಮಟ್ಟಿಗೆ ಕ್ರಮೇಣ ಕಚ್ಚಾ ಸಾಮಗ್ರಿಗಳ ಕೊರತೆ ಎದುರಿಸಬೇಕಾಗುತ್ತದೆ.

ಈ ಹಿಂದೆ ವಿವರಿಸಿದ ಜನಸಂಖ್ಯೆ-ತಂತ್ರವಿದ್ಯೆ-ಶಕ್ತಿ ತ್ರಿಭುಜದ ವಿಸ್ತೀರ್ಣ ನಿಸರ್ಗ ಭರಿಸಬಹುದಾದ ಸಂಪನ್ಮೂಲಗಳ ಪರಿಮಿತಿಯೊಳಗಿರುವಾಗ ತ್ರಿಭುಜದ ಇರವಿನ ಅರಿವು ಮಾನವನಿಗಾಗುವುದಿಲ್ಲ. ಇಂಥ ನಿರ್ಣಾಯಕ ಪರಿಮಿತಿಯನ್ನು—ದೇಹಲಿ ಪರಿಮಿತಿಯನ್ನು (ತ್ರೆಶೋಲ್ಡ್ ಲಿಮಿಟ್)—ಪ್ರಪಂಚ ಗಾತ್ರ ಅಂದಾಜಿಗೆ ಅಡ ಹಾಯ್ದಂತೆ ತೋರುತ್ತದೆ. ಆಗ ಪರಿಸರ ಮಾಲಿನ್ಯ ಪಿಡುಗಾಗಿ ತನ್ನ ಅಸ್ತಿತ್ವವನ್ನು

ಪ್ರದರ್ಶಿಸತೊಡಗಿತು ; ಜೀವನದ ಗುಣಮಟ್ಟದ ಮೇಲೆ, ಉಳ್ಳವರನ್ನೂ ಉಳ್ಳದವರನ್ನೂ ಸಮಾನವಾಗಿಯೇ ಒಳಗೊಂಡಂತೆ, ದುಷ್ಪರಿಣಾಮ ಬೀರತೊಡಗಿತು.

ಕ್ರಿಸ್ತಪೂರ್ವ ೮೦೦೦ದ ಅಂದಾಜಿಗೆ ನವಶಿಲಾಯುಗ ಪ್ರಾರಂಭವಾಯಿತು ಆ ಮೊದಲು ಕಾಡು ಪ್ರಾಣಿಗಳಿಗಿಂತ ತೀರ ಬೇರೆಯವನೇನೂ ಆಗಿರದಿದ್ದ ಆದಿಮಾನವ (ನೈಸರ್ಗಿಕವಾಗಿ ದೊರೆತ ಪ್ರಾಣಿ ಹಾಗೂ ಸಸ್ಯಗಳಿಂದ ಹೊಟ್ಟೆ ಹೊರೆಯುವುದು ಮತ್ತು ನಿಸರ್ಗದ ಪ್ರತಿಕೂಲ ಬಲಗಳ ಎದುರು ಬದುಕಿ ಉಳಿಯುವುದು ಇವೆರಡೇ ಆದಿಮಾನವನ ಬದುಕಿನ ಘನೋದ್ದೇಶಗಳಾಗಿದ್ದುವು) ಈ ವೇಳೆಗೆ ಬೇಸಾಯಕ್ಕೆ ಕಾಲಿರಿಸಿದ್ದ ಮತ್ತು ಸಾಕು ಪ್ರಾಣಿಗಳ ಸೇವೆ ಪಡೆಯತೊಡಗಿದ್ದ. ತತ್ಪರಿಣಾಮವಾಗಿ ಅಲೆಮಾರಿ ಮಾನವ ಒಂದೆಡೆ ನೆಲೆಯೂರಿದವನಾದ. ಇದು ಆತನಿಗೆ ಒಂದು ತೆರನಾದ ನೆಮ್ಮದಿಯ ಬಾಳನ್ನು ಒದಗಿಸಿತು. ಈ ಕಾರಣದಿಂದಾಗಿ ಜನಸಂಖ್ಯೆಯ ಬೆಳೆವಣಿಗೆಗೆ ಕೊಂಚ ಕುಮ್ಮಕ್ಕು ದೊರೆಯಿತು. ಆಗಿನ ಪ್ರಪಂಚದ ಜನಸಂಖ್ಯೆ ಸುಮಾರು ಎಂಬತ್ತು ಲಕ್ಷ.

ಕ್ರಿಸ್ತಪೂರ್ವ ೩೦೦೦ದ ಅಂದಾಜಿಗೆ ಮಾನವ ಕಂಚುಯುಗಕ್ಕೆ ಕಾಲಿರಿಸಿದ. ಅಂದು ತಿಳಿದಿದ್ದ ಆದಿಮ ತಂತ್ರವಿದ್ಯೆಯನ್ನು ನಿಸರ್ಗಕ್ಕೆ ಅನ್ವಯಿಸಿ ಚಿನ್ನ, ಬೆಳ್ಳಿ, ತಾಮ್ರ, ತವರ, ಸೀಸ ಎಂಬ ಐದು ಬೇರೆಬೇರೆ ಲೋಹಗಳನ್ನು ಸಂಸ್ಕರಿಸಬಲ್ಲವನಾಗಿದ್ದ. ಆತನ ಆದಿಮ ಕುಲುಮೆಗೆ ಯಥೇಚ್ಛವೆನ್ನಿಸುವಷ್ಟು ಕಟ್ಟಿಗೆ ಸ್ಥಳೀಯವಾಗಿಯೇ ದೊರೆಯುತ್ತಿತ್ತು. ತಾತ್ತ್ವಿಕವಾಗಿ ಈ ಸಿದ್ಧಿಯ ಅರ್ಥವಿಷ್ಟು : ಶಕ್ತಿಯ ಒಂದು ರೂಪವಾದ ಉಷ್ಣವನ್ನು ಅದುರಿನ ಮೇಲೆ ಪ್ರಯೋಗಿಸಿ ಲೋಹಸಂಸ್ಕರಣೆ ಮಾಡಬಹುದಾಗಿತ್ತು ; ಹೀಗೆ ಪಡೆದ ಲೋಹ ಮಾನವನಿಗೆ ಅಧಿಕ ತ್ರಾಣಕೊಡಬಲ್ಲದಾಗಿತ್ತು. ಇದರ ಪರಿಣಾಮವಾಗಿ ಅವನ ಬದುಕು ಅಷ್ಟರಮಟ್ಟಿಗೆ ಸುಗಮವಾಗುತ್ತಿತ್ತು. ಲೋಹದಿಂದ ಆಯುಧಗಳನ್ನೂ ಹತ್ಯಾರುಗಳನ್ನೂ ಆತ ತಯಾರಿಸಬಲ್ಲವನಾಗಿದ್ದ.

ಕ್ರಿಸ್ತ ಪೂರ್ವ ೮೦೦೦ದಲ್ಲಿದ್ದ ೮೦ ಲಕ್ಷ ಜನಸಂಖ್ಯೆ ಕ್ರಿಸ್ತ ಶಕಾರಂಭವಾಗುವಾಗ ಸುಮಾರು ೩೦ ಕೋಟಿಗೆ ಏರಿತ್ತು. ಅಂದರೆ ಇಲ್ಲಿಯ ವಾರ್ಷಿಕ ಸರಾಸರಿ ಹೆಚ್ಚಳ ದರ ಶೇಕಡಾ ೦.೦೩೬. ಇದರ ಅರ್ಥ ಈ ವರ್ಷ ಜನಸಂಖ್ಯೆ ೧ ಲಕ್ಷವಿದ್ದರೆ ಮುಂದಿನ ವರ್ಷ ಇದಕ್ಕೆ ೩೬ ಜನ ಜಮೆ ಆಗುತ್ತಿದ್ದರು ; ಮುಂದಿನ ವರ್ಷ ಇನ್ನೂ ೩೬.೦೧೩ ಜನ ಜಮೆ ಆಗುತ್ತಿದ್ದರು ಇತ್ಯಾದಿ—ಬಸವನ ಹುಳುವಿನ ಮಂದ ಸರಿತದಂತೆ. ಇಲ್ಲಿ ಒಂದು ಅಂಶ ನೆನಪಿನಲ್ಲಿಡಬೇಕು. ಆ ದಿನಗಳಂದು ಜನನದರ ಸಾಕಷ್ಟು ಅಧಿಕವಾಗಿಯೇ ಇತ್ತು : ಬಹುಪತ್ನಿತ್ವ, ಅಮಿತಸಂತಾನ ಎರಡೂ ಸೇರಿ ಪ್ರತಿ ವರ್ಷ ದಂಪತಿಗಳಿಗೆ ಸರಾಸರಿಯಲ್ಲಿ ಜನಿಸುತ್ತಿದ್ದ ಶಿಶುಗಳ ಸಂಖ್ಯೆ ಇಂದಿನ ಸರಾಸರಿಗಿಂತ ಎಷ್ಟೋ ಅಧಿಕವಾಗಿತ್ತು. ಆದರೆ ಹೀಗೆ ಹುಟ್ಟಿದ ಮಕ್ಕಳೆಲ್ಲವೂ ಬಹುಕಾಲ ಬದುಕಿ ಉಳಿಯುತ್ತಿರಲಿಲ್ಲ. ಅಲ್ಲದೇ ದೊಡ್ಡವರಾದರೂ ನೈಸರ್ಗಿಕ ಅಪಘಾತ, ವ್ಯಾಧಿ, ಕಾಳಗ ಮೊದಲಾದವುಗಳಿಗೆ ಬಲಿಯಾಗಿ ಪೂರ್ಣಾಯುಷ್ಯ ತುಂಬುವ ಮೊದಲೇ ಮಡಿಯುತ್ತಿದ್ದರು. ಹೀಗೆ ಉನ್ನತ ಜನನದರವನ್ನು ಉನ್ನತ ಮರಣದರ ಹೆಚ್ಚು ಕಡಿಮೆ ಸಮತೋಲಿಸಿ ಒಟ್ಟಾರೆ ಜನಸಂಖ್ಯಾವೃದ್ಧಿ ತೀರ ಅಲ್ಪಪ್ರಮಾಣದಲ್ಲಿರುತ್ತಿತ್ತು.

ಕ್ರಿಸ್ತ ಶಕಾರಂಭವಾಗುವ ವೇಳೆಗೆ ಮಾನವ ಕಬ್ಬಿಣಯುಗದ ಕೊಡಿ ತಲಪಿದ್ದ.

ಆಗ ರಸವಾದಿಗಳು ಕೀಳು ಲೋಹಗಳಿಂದ ರಾಜಲೋಹವಾದ ಬಂಗಾರ ತಯಾರಿಸಲು ನಾನಾ ಬಗೆಯ ಮಂತ್ರಮೋಡಿಗಳನ್ನೂ ಧಾತು ಕಷಾಯಗಳನ್ನೂ ಪ್ರಯೋಗಿಸುತ್ತಿದ್ದರು. ಅವರ ಉದ್ದೇಶ ಮಾತ್ರ ಕೈಗೂಡಲಿಲ್ಲ. ಆದರೆ ಆ ಪ್ರಯೋಗಗಳ ಹಾಗೂ ಚಿಂತನೆಗಳ ಉಪೋತ್ಪನ್ನಗಳಾಗಿ ಲೋಹ ತಂತ್ರವಿದ್ಯೆಯೂ ರಸಾಯನವಿಜ್ಞಾನವೂ ಚೆನ್ನಾಗಿ ಬೆಳೆದು ಅಭಿವರ್ಧಿಸಿದುವು. ಸರಿ, ಯಥಾ ಪ್ರಕಾರ ನಿಸರ್ಗದ ಮೇಲೆ ಶಕ್ತಿಯ ಅಧಿಕ ಪ್ರಯೋಗದಿಂದ ಅಧಿಕ ತ್ರಾಣಗಳಿಸುವ ಮತ್ತು ಹೆಚ್ಚಿನ ಹತೋಟಿಗಳಿಸುವ ಆಟ (ಅಥವಾ ಲೂಟಿ!) ಮುನ್ನಡೆಯಿತು. ಸಹಜವಾಗಿ ಜನಸಂಖ್ಯೆ ವೃದ್ಧಿಯಾಗುತ್ತ, ಈ ಹಿಂದೆ ಹೇಳಿದಂತೆ, ಕ್ರಿಸ್ತ ಶಕ ೧ರಲ್ಲಿ ೩೦ ಕೋಟಿ ತಲಪಿತು.

(ಸಶೇಷ)

ಮೆಕ್ಸಿಕೋ ಸಿಟಿಗೆ ಹೋಗಿದ್ದ ಕೆಲವು ಪ್ರಯಾಣಿಕರು ಜುಲೈ ೧೬ ಎಂಬ ಹೆಸರಿನ ಒಂದು ಬೀದಿಯನ್ನು ಅರಸುತ್ತಿದ್ದರು. ಅವರಿಗೆ ಎದುರಾದ ಒಬ್ಬನೇ ಒಬ್ಬ ವ್ಯಕ್ತಿ ಸ್ವಲ್ಪ ಕುಡಿದವನಂತೆ ತೋರುತ್ತಿದ್ದ. ಪ್ರಯಾಣಿಕರ ಪೈಕಿ ಒಬ್ಬ ಆತನನ್ನು ಕೇಳಿದ "ಕ್ಷಮಿಸಬೇಕು ಮಾನ್ಯರೇ! ಜುಲೈ ೧೬ ಎಲ್ಲಿದೆ ಹೇಳುವಿರಾ?"
"ಜುಲೈ ೧೬?" ಆ ವ್ಯಕ್ತಿ ತುಸು ಯೋಚಿಸಿ ಹೇಳಿದ "ಅದು ಯಾವ ಇಸವಿಯದು ಎಂದು ನೀವು ತಿಳಿಸಿದರೆ ಪ್ರಾಯಶಃ ಹೇಳಿಯೇನು."

ಲ್ಯೂಯಿಸ್ ರೊಬರ್ಟೋ ರ್ಯೊಸ್

ಎಲ್ಲವನ್ನೂ ಒಪ್ಪಿಕೊಂಡದ್ದಾದರೆ ಹರಟೆಯ ಸ್ವಾರಸ್ಯವೇ ಕೆಟ್ಟು ಹೋಗುತ್ತದೆ.

ಎಲ್‌ಡ್ರಿಜ್ ಕ್ಲೀವರ್

ಶಂಕರಾಚಾರ್ಯರ ಕೃತಿಗಳಲ್ಲಿ ಕಾವ್ಯಗುಣ*

ಡಾ|| ಸಿ. ಪಿ. ಕೃಷ್ಣಕುಮಾರ್

ಶ್ರೀ ಶಂಕರಾಚಾರ್ಯರ ಕೃತಿಗಳಲ್ಲಿ ಕಾವ್ಯಗುಣ ಎನ್ನುವಾಗ, ಅವರ ಸ್ತೋತ್ರಕೃತಿಗಳನ್ನಷ್ಟೆ ಪರಿಗಣಿಸಬೇಕಾಗುತ್ತದೆ; ವೇದಾಂತ ಗ್ರಂಥಗಳನ್ನಲ್ಲ. ಅವರ ವೇದಾಂತ ಗ್ರಂಥಗಳಲ್ಲಿ ಕಂಡುಬರುವ ಗದ್ಯ ಸರಳ ಮತ್ತು ಉಜ್ವಲವಾಗಿದ್ದು, ಉಜ್ವಲತೆಯಲ್ಲಿ ಬಾಣನ ಪ್ರಸಿದ್ಧ ಗದ್ಯವನ್ನು ಹೋಲುತ್ತದೆ ಎಂಬ ಅಭಿಪ್ರಾಯವನ್ನು ಇಲ್ಲಿ ಲಕ್ಷಿಸಬಹುದು.

ಅದ್ವೈತದ ತುತ್ತತುದಿಯನ್ನೇರಿ 'ಶಿವೋಽಹಂ' ಎಂದು ಘೋಷಿಸಿದ ಶಂಕರಾಚಾರ್ಯರು ಅಲ್ಲಿಯೆ ವಿರಮಿಸಲಿಲ್ಲ; ಲೋಕಸಂಗ್ರಹಕ್ಕಾಗಿ ಕೆಳಗಿಳಿದು ಬಂದರು; ಕರ್ಮಯೋಗ, ಕಾವ್ಯಯೋಗ ಎರಡನ್ನೂ ಮೆರೆದರು. ಆಚಾರ್ಯರದು ಅನೇಕಮುಖ ವ್ಯಕ್ತಿತ್ವ: ಅವರು ಜ್ಞಾನಿ, ಭಕ್ತ, ವೇದಾಂತಿ, ವಾದಿ ಎಲ್ಲವೂ ಹೌದು; ಅಲ್ಲದೆ ಮಹಾ ದ್ರಷ್ಟಾರರಾದ ಅವರಿಗೆ ಕವಿಪದವಿಯೂ ಸಹಜವಾಗಿಯೆ ಸಿದ್ಧಿಸಿದೆ. ಅವರ ಭಾಷ್ಯಗಳಲ್ಲಿ ಮತ್ತು ಪ್ರಕರಣ ಗ್ರಂಥಗಳಲ್ಲಿ ಧೀಶಕ್ತಿಯ ಪ್ರಖರತೆ, ಪ್ರಗಾಢತೆಗಳು ವ್ಯಕ್ತವಾಗುವಂತೆ ಅವರ ಸ್ತೋತ್ರಗಳಲ್ಲಿ ಕವಿಹೃದಯದ ಆರ್ದ್ರತೆ ವಿದಿತವಾಗುತ್ತದೆ. ಇವುಗಳಲ್ಲಿ ಅವರು ಮನೋಜ್ಞವಾದ ಕವಿತೆಯನ್ನು ಸಾಕಷ್ಟು ಕೊಟ್ಟಿದ್ದಾರೆ. ಒಟ್ಟಿನಲ್ಲಿ ಆಚಾರ್ಯರ ಆಧ್ಯಾತ್ಮಿಕ ದರ್ಶನದಂತೆ ಕಾವ್ಯಪ್ರತಿಭೆಯೂ ಎತ್ತರದ್ದು.

ಶಂಕರಾಚಾರ್ಯರ ಜೀವನದಲ್ಲಿ ಮತ್ತು ಕೃತಿಗಳಲ್ಲಿ ಜ್ಞಾನಮಾರ್ಗ, ಭಕ್ತಿಮಾರ್ಗಗಳ ಸಮನ್ವಯವಿದೆ. ಅವರು ಅದ್ವೈತ ತತ್ತ್ವದ ಮೂಲಕ ನಿರ್ಗುಣೋಪಾಸನೆಯನ್ನು ಪ್ರತಿಪಾದಿಸಿರುವಂತೆ ತಮ್ಮ ಸ್ತೋತ್ರಗಳ ಮೂಲಕ ಸಗುಣೋಪಾಸನೆಯನ್ನು ಪುರಸ್ಕರಿಸಿದ್ದಾರೆ; ಯಾವುದೇ ಸಂಕುಚಿತ ಪಂಥಭಾವನೆಯಿಲ್ಲದೆ ಶಿವ, ವಿಷ್ಣು, ದೇವಿ ಮುಂತಾದವರನ್ನು ಸ್ತುತಿಸಿದ್ದಾರೆ. ತಾವು

* ಆಕಾಶವಾಣಿ ಸೌಜನ್ಯದಿಂದ.

ಸಂಸಾರಸ್ಥರಲ್ಲದಿದ್ದರೂ, ವಿರಕ್ತಿಯ ಮೂರ್ತಿಯಾದ ಯತಿವರೇಣ್ಯರಾದರೂ, ಆಚಾರ್ಯರು ತಮ್ಮನ್ನು ಸಂಸಾರಿಯ ಪಾತ್ರದಲ್ಲಿ, ಒಮ್ಮೊಮ್ಮೆ ಪಾಪಿಯ ಪಾತ್ರದಲ್ಲಿ ಇರಿಸಿಕೊಂಡು, ಭಗವತ್ಕೃಪೆಗಾಗಿ, ಉದ್ಧಾರಕ್ಕಾಗಿ ಆರ್ತತೆಯಿಂದ ಹಂಬಲಿಸುವ ಪರಿಯಿದೆ, ಸ್ತೋತ್ರಗಳಲ್ಲಿ. ಸಾಮಾನ್ಯರ ಪರವಾಗಿ ಅವರಿಲ್ಲಿ ಮೊರೆಯಿಡುತ್ತಿದ್ದಾರೆ, ಸಮಷ್ಟಿಯ ಭಾವಗಳಿಗೆ ವೈಯಕ್ತಿಕ ಅಭಿವ್ಯಕ್ತಿ ಕೊಡುತ್ತಿದ್ದಾರೆ ಎನಿಸುತ್ತದೆ. ಎಂತಲೇ ನಮಗೆ ಅವರ ಕಳಕಳಿಯ ಕರೆ, ಮೊರೆಗಳಲ್ಲಿ ಹೃದಯಸಂವಾದ ಸಾಧ್ಯವಾಗುತ್ತದೆ.

ಶಂಕರಾಚಾರ್ಯರ ಕವಿಮನೋಧರ್ಮವನ್ನು ಪರಿಭಾವಿಸುವಾಗ, 'ಭಜ ಗೋವಿಂದಂ' ಸ್ತೋತ್ರದ ಮೊದಲ ಪದ್ಯವನ್ನು ನಾವು ಮೊದಲು ನೆನೆಯಬೇಕು:

ಭಜ ಗೋವಿಂದಂ ಭಜ ಗೋವಿಂದಮ್
ಭಜ ಗೋವಿಂದಂ ಮೂಢಮತೇ
ಸಂಪ್ರಾಪ್ತೇ ಸನ್ನಿಹಿತೇ ಕಾಲೇ
ನ ಹಿ ನ ಹಿ ರಕ್ಷತಿ ಡುಕೃಞ್ಕರಣೇ

(ಎಲೈ ಮೂಢಮತಿ, ಗೋವಿಂದನನ್ನು ಭಜಿಸು. ಮೃತ್ಯು ಹತ್ತಿರವಾದಾಗ ವ್ಯಾಕರಣ ಸೂತ್ರಗಳು ನಿನ್ನನ್ನು ಕಾಪಾಡುವುದಿಲ್ಲ). ಒಣಪಾಂಡಿತ್ಯಕ್ಕಿಂತ ಭಕ್ತಿಗೆ ಆಚಾರ್ಯರಿಲ್ಲಿ ಪ್ರಾಶಸ್ತ್ಯ ಕೊಡುತ್ತಿದ್ದಾರೆ. ಎಂದರೆ, ಅವರ ದೃಷ್ಟಿಯಲ್ಲಿ ಶಾಸ್ತ್ರಕ್ಕಿಂತ ಕಾವ್ಯ ಮೇಲುಗೈಯಾಗುತ್ತದೆ.

ಶಂಕರಾಚಾರ್ಯರ 'ಶಿವಾನಂದಲಹರಿ' ಯೊಂದು ಭಕ್ತಿನಿರ್ಭರವಾದ ಭಾವಗೀತೆ; ಹೃದಯಸ್ಪರ್ಶಿಯಾದ ಆತ್ಮನಿವೇದನೆ ಅದರಲ್ಲಿ ಕಂಡುಬರುತ್ತದೆ. ಒಂದೆರಡು ಪದ್ಯಗಳನ್ನು ಮಾತ್ರ ನೋಡಬಹುದು.

ಶಿವನ ಕಿರಾತ ಲೀಲೆಯ ಕಥೆಯನ್ನು ಆಧರಿಸಿ, ಬೇಟೆಯ ಪ್ರತಿಮೆಯೊಂದನ್ನು ಸ್ವೋಪಜ್ಞವಾಗಿ ಕೊಡುತ್ತಾರೆ ಆಚಾರ್ಯರು:

ಮಾ ಗಚ್ಛ ತ್ವಮಿತಸ್ತತೋ ಗಿರಿಶ ಭೋ ಮಯ್ಯೇವ ವಾಸಂ ಕುರು
ಸ್ವಾಮಿನ್ನಾದಿ ಕಿರಾತ ಮಾಮಕಮನಃಕಾಂತಾರಸೀಮಾಂತರೇ
ವರ್ತಂತೇ ಬಹುಶೋ ಮೃಗಾ ಮದಜುಷೋ ಮಾತ್ಸರ್ಯಮೋಹಾದಯ-
ಸ್ತಾನ್ ಹತ್ವಾ ಮೃಗಯಾವಿನೋದರುಚಿತಾಲಾಭಂ ಚ ಸಂಪ್ರಾಪ್ಸ್ಯಸಿ

(ಹೇ ಸ್ವಾಮಿ ಆದಿಕಿರಾತ, ಅತ್ತಿತ್ತ ಹೋಗಬೇಡ; ನನ್ನಲ್ಲಿ ನೆಲಸು. ನನ್ನ ಮನಸ್ಸಿನ ಕಾಡಿನಲ್ಲಿ ಮಾತ್ಸರ್ಯ, ಮೋಹ ಮುಂತಾದ ಕೊಬ್ಬಿದ ಮೃಗಗಳು ಅಸಂಖ್ಯವಾಗಿವೆ. ಅವುಗಳನ್ನು ಕೊಂದು, ಮೃಗಯಾವಿನೋದನ ಲಾಭವನ್ನು ಪಡೆ.)

ತಮ್ಮ ಚಿತ್ತಕ್ಕೆ ಯಾವಾಗಲೂ ಹೇಗೆ ಶಿವನ ಪದಕಮಲದ ಬಯಕೆ ಎಂಬುದನ್ನು ಆಚಾರ್ಯರು ಅನೇಕ ಹೋಲಿಕೆಗಳಿಂದ ಮನಗಾಣಿಸುತ್ತಾರೆ:

ಹಂಸಃ ಪದ್ಮವನಂ ಸಮಿಚ್ಛತಿ ಯಥಾ ನೀಲಾಂಬುದಂ ಚಾತಕಃ
ಕೋಕಃ ಕೋಕನದಪ್ರಿಯಂ ಪ್ರತಿದಿನಂ ಚಂದ್ರಂ ಚಕೋರಸ್ತಥಾ
ಚೇತೋ ವಾಂಛತಿ ಮಾಮಕಂ ಪಶುಪತೇ ಚಿನ್ಮಾರ್ಗಮೃಗ್ಯಂ ವಿಭೋ
ಗೌರೀನಾಥ ಭವತ್ಪದಾಬ್ಜಯುಗಲಂ ಕೈವಲ್ಯಸೌಖ್ಯಪ್ರದಮ್

(ಹೇ ಪ್ರಭು, ಪಾರ್ವತೀಪತಿ, ಹಂಸ ತಾವರೆಗೊಳವನ್ನು, ಚಾತಕ ಕಾರ್ಮೋಡವನ್ನು, ಚಕ್ರವಾಕ ಸೂರ್ಯನನ್ನು, ಚಕೋರ ಚಂದ್ರನನ್ನು ಬಯಸುವಂತೆ ನನ್ನ ಮನಸ್ಸು ಮೋಕ್ಷಸುಖವನ್ನು ಕೊಡುವ ನಿನ್ನ ಪಾದಪದ್ಮಗಳನ್ನು ನಿತ್ಯವೂ ಬಯಸುತ್ತದೆ.)

ತಮ್ಮ ಮನ ಶಿವನ ಅಡಿಗೆರಗಲಿ ಎಂದು ಮಾತ್ರವಲ್ಲ, ಆ ಅಡಿಗಳಿಗೆ ಪಾದುಕೆಗಳಾಗಲಿ ಎಂದು ಹಾರೈಸುತ್ತಾರೆ ಆಚಾರ್ಯರು: "ಮಚ್ಚೇತೋಮಣಿಪಾದುಕಾವಿಹರಣಂ ಶಂಭೋ ಸದಾಽಂಗೀಕುರು" (ಹೇ ಶಂಭು, ನನ್ನ ಚಿತ್ತವನ್ನು ಸದಾ ನಿನ್ನ ಮೆಟ್ಟುಗಳನ್ನಾಗಿ ಮಾಡಿಕೊಂಡು ವಿಹರಿಸು). ಈ ಭಾವನೆ ನಿಜಕ್ಕೂ ಅಪೂರ್ವ.

'ಲಕ್ಷ್ಮೀನೃಸಿಂಹ ಸ್ತೋತ್ರ'ದ ಪ್ರತಿಪದ್ಯದಲ್ಲೂ ಶಂಕರಾಚಾರ್ಯರು "ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಂ" ಎಂದು ಎದೆತುಂಬಿ ಪ್ರಾರ್ಥಿಸುತ್ತಾರೆ. ಈ ಪ್ರಾರ್ಥನೆಯಲ್ಲಿ ಆರ್ತತೆಯಷ್ಟೆ ಅಲ್ಲ, ಅರ್ಥವೂ ಇದೆ. ಲೋಕಕಂಟಕನಾಗಿದ್ದ ಹಿರಣ್ಯಕಶಿಪುವನ್ನು ಸೀಳಿಹಾಕಿದ ಹಸ್ತವೆ ತಾನೆ ಭಕ್ತನನ್ನು ಹಿಡಿದೆತ್ತಬೇಕಾದದ್ದು? ಸಂಸಾರ ತಾಪದಿಂದ ತಮ್ಮನ್ನು ಪಾರುಮಾಡುವಂತೆ ಹೀಗೆ ಮೊರೆಯಿಡುತ್ತಾರೆ ಆಚಾರ್ಯರು:

ಸಂಸಾರದಾವದಹನಾತುರ ಭೀಕರೋರು-
ಜ್ವಾಲಾವಲೀಭಿರತಿದಗ್ಧತನೂರುಹಸ್ಯ
ತ್ವತ್ಪಾದ ಪದ್ಮಸರಸೀರುಹಮಾಗತಸ್ಯ
ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಂ

(ಸಂಸಾರವೆಂಬ ಕಾಳ್ಗಿಚ್ಚಿನ ಭಯಂಕರ ಜ್ವಾಲೆಗಳಿಂದ ಬೆಂದು ನೊಂದವನಾಗಿ, ತಂಪಾದ ಕೊಳದಂತಿರುವ ನಿನ್ನ ಚರಣಗಳಿಗೆ ಶರಣುಹೋಗಲು ಬಂದಿರುವೆ. ಹೇ, ಲಕ್ಷ್ಮೀನೃಸಿಂಹ, ನನಗೆ ನಿನ್ನ ಕರಗಳ ಆಸರೆಯನ್ನು ನೀಡು) ಪದ್ಯದ ಪೂರ್ವಾರ್ಧ ಭೀಕರ ಜ್ವಾಲೆಗಳ ಚಿತ್ರವನ್ನು ಸಮರ್ಥವಾಗಿ ಮೂಡಿಸುತ್ತದೆ. ಹೀಗೆಯೆ, ಸಂಸಾರದ ದಾರುಣತೆಯನ್ನು ಮುಂದಿನ ಪದ್ಯ ಸರ್ಪದ ರೂಪಕದಿಂದ ಶಕ್ತಿವತ್ತಾಗಿ ಅಭಿನಯಿಸಿ ತೋರುವಂತಿದೆ:

ಸಂಸಾರ ಸರ್ಪಘನವಕ್ತ್ರಭಯೋಗ್ರ ತೀವ್ರ-
ದಂಷ್ಟ್ರಾಕರಾಲ ವಿಷದಗ್ಧ ವಿನಷ್ಟ ಮೂರ್ತೇಃ
ನಾಗಾರಿವಾಹನ ಸುಧಾಬ್ಧಿನಿವಾಸ ಶೌರೇ
ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಂ

(ಸಂಸಾರ ಸರ್ಪದ ಭೀಕರವಾದ ಬಾಯಲ್ಲಿರುವ ಘೋರವೂ ತೀವ್ರವೂ ಆದ ಕರಾಳದಂತಗಳ ವಿಷದಿಂದ ದಗ್ಧನಾದ, ವಿನಷ್ಟ ಕಾಯನಾದ ನನಗೆ, ಹೇ ಗರುಡವಾಹನ, ಕ್ಷೀರಸಾಗರಶಯನ, ಲಕ್ಷ್ಮೀನೃಸಿಂಹ, ನಿನ್ನ ಕರಗಳ ಆಸರೆಯನ್ನು ನೀಡು.)

'ಶಿವನಾಮಾವಲ್ಯಾಷ್ಟಕ'ದ ಪ್ರತಿ ಪದ್ಯದಲ್ಲೂ ಆಚಾರ್ಯರು "ಸಂಸಾರ ದುಃಖ ಗಹನಾಜ್ಜಗದೀಶ ರಕ್ಷ" (ಜಗದೀಶ, ಸಂಸಾರ ದುಃಖವೆಂಬ ದಟ್ಟವಾದ ಅಡವಿಯಿಂದ ನನ್ನನ್ನು ರಕ್ಷಿಸು) ಎಂದು ಬೇಡಿಕೊಳ್ಳುತ್ತಾರೆ. ಕಾಡು ಕಾಡಲ್ಲ; ಈ ಸಂಸಾರದ ಕ್ಲೇಶಪರಂಪರೆ ನಿಜವಾಗಿ ಕಾಡು. ಅದರಿಂದ ಬಿಡುಗಡೆಗೊಳ್ಳಬೇಕು.

'ದೇವ್ಯಪರಾಧಕ್ಷಮಾಪಣಸ್ತೋತ್ರ'ದಲ್ಲಿ ಬರುವ "ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ" (ಕೆಟ್ಟಮಗ ಹುಟ್ಟಿದರೂ ಹುಟ್ಟಬಹುದು, ಆದರೆ ಕೆಟ್ಟತಾಯಿ ಎಲ್ಲಿಯೂ ಇರುವುದಿಲ್ಲ) ಎಂಬ ಮಾತು ಪ್ರಸಿದ್ಧವಾದದ್ದು; ತನ್ಮೂಲಕ ಶಂಕರಾಚಾರ್ಯರು ಭಗವತ್ಕಾರುಣ್ಯದ, ಅಂತೆಯೆ ಪಾಪಿಗಳ ಉದ್ಧಾರದ ಭರವಸೆಯನ್ನು ಕೊಟ್ಟಿದ್ದಾರೆ. ಕಿವಿಗೆ ಹಿತವಾದ ಅನುಪ್ರಾಸಸರಣಿಯನ್ನು ಆಚಾರ್ಯರು ಹೇಗೆ ತರಬಲ್ಲರೆಂಬುದಕ್ಕೆ 'ಶಿವಾಪರಾಧಕ್ಷಮಾಪಣ ಸ್ತೋತ್ರ'ದ ಈ ಪದ್ಯ ನಿದರ್ಶನ:

ಚಂದ್ರೋದ್ಭಾಸಿತ ಶೇಖರೇ ಸ್ಮರಹರೇ ಗಂಗಾಧರೇ ಶಂಕರೇ
ಸರ್ಪೈರ್ಭೂಷಿತ ಕಂಠಕರ್ಣವಿವರೇ ನೇತ್ರೋತ್ಥ ವೈಶ್ವಾನರೇ
ದಂತಿತ್ವಕ್ಕೃತ ಸುಂದರಾಂಬರಧರೇ ತ್ರೈಲೋಕ್ಯಸಾರೇ ಹರೇ
ಮೋಕ್ಷಾರ್ಥಂ ಕುರು ಚಿತ್ತವೃತ್ತಿ ಮಚಲಾಮನ್ಯೈಸ್ತು ಕಿಂ ಕರ್ಮಭಿಃ

ಶಂಕರರ ಸ್ತೋತ್ರ ಸಮುದಾಯದಲ್ಲಿ 'ಸೌಂದರ್ಯಲಹರಿ' ವಿಶಿಷ್ಟವಾಗಿ ನಿಲ್ಲುತ್ತದೆ. ಅದು ಸ್ತೋತ್ರ ಮಾತ್ರವಾಗಿರದೆ, ಮಂತ್ರಶಾಸ್ತ್ರವೆಂದೂ ವಿಖ್ಯಾತವಾಗಿದೆ. ಆದರೆ ಮಾಂತ್ರಿಕ, ತಾಂತ್ರಿಕ ಮೌಲ್ಯಗಳಿಂದ ಭಿನ್ನವಾದ ಕಾವ್ಯಮೌಲ್ಯವನ್ನೂ ಅದು ಅತಿಶಯವಾಗಿ ತಾಳಿಕೊಂಡಿದೆ. ಈ ಕೃತಿಯಲ್ಲಿ ಆಚಾರ್ಯರು ತ್ರಿಜಗನ್ಮಾತೆಯಾದ ಆದಿಶಕ್ತಿಯನ್ನು ಭಕ್ತಿಭಾವ ಪರವಶತೆಯಿಂದ ಸ್ತುತಿಸಿದ್ದಾರೆ. ಶ್ರೀದೇವಿಯ ಮಹಿಮೆಯ ಸಂಕೀರ್ತನೆ, ಆ ತ್ರಿಪುರಸುಂದರಿಯ ಅನುಪಮ ಲಾವಣ್ಯದ ವರ್ಣನೆ, ಅವಳ ಕೃಪೆಯ ಯಾಚನೆ ಇವು 'ಸೌಂದರ್ಯಲಹರಿ'ಯ ತ್ರಿವೇಣಿ. ಆದಿಶಕ್ತಿಯ ಸೌಂದರ್ಯವನ್ನು ಆಚಾರ್ಯರು ಮುಡಿಯಿಂದ ಅಡಿಯವರೆಗೆ ಪರಿಪರಿಯಾಗಿ ಬಣ್ಣಿಸಿದ್ದಾರೆ. ಆದರೆ ಅದು ಸಾಂಪ್ರದಾಯಿಕ ಸ್ತ್ರೀವರ್ಣನೆಯ ಮಾದರಿಯಾಗದೆ, ಜಗಜ್ಜನನಿಯನ್ನು ಶುದ್ಧ ಮುಗ್ಧ ಶಿಶುಭಾವದಿಂದ ಕಂಡು ಕಂಡರಿಸುವ ಉದಾತ್ತ ಸಾಹಸವಾಗಿದೆ. ಉದ್ದಕ್ಕೂ ಸ್ಥಾಯಿಯಾಗಿರುವ ಈ ಶಿಶುಮನೋಧರ್ಮದಿಂದಲೇ 'ಸೌಂದರ್ಯಲಹರಿ' ಅನನ್ಯವಾಗಿರುವುದು. ಆದಿಶಕ್ತಿಯ ಕಲ್ಪನೆ ಹೆಣ್ಣಿನ ಕಲ್ಪನೆ, ನಿಜ; ಆದರೆ ಆಕೆ ಸಾಮಾನ್ಯ ಹೆಣ್ಣಲ್ಲ—ಸಕಲ ಸೌಂದರ್ಯದ ಆಕರ, ಪರಬ್ರಹ್ಮಸ್ವರೂಪಿಣಿ, ವಿಶ್ವಾಕಾರೆ, ಅಖಿಲ ಲೋಕಗಳ ತಾಯಿ. ಅವಳ ಚೆಲುವನ್ನು ಒಂದು ಅತ್ಯುನ್ನತ ಮನೋಭೂಮಿಕೆಯಲ್ಲಿ ಸಂದರ್ಶಿಸಿದ್ದಾರೆ ಶಂಕರಾಚಾರ್ಯರು. ಆ ನೆಲೆಯಿಂದ ಹೊಮ್ಮಿರುವ ಈ ದೇವೀ ಸೌಂದರ್ಯವರ್ಣನೆ ಶೃಂಗಾರರಂಜಿತವಾದ ಸುಂದರ ರಚನೆಯಷ್ಟೆ ಅಗದೆ ಅಲೌಕಿಕ

ಪ್ರಭಾವಳಿಯನ್ನುಳ್ಳ ಶಿವಸೃಷ್ಟಿಯಾಗಿದೆ. ಕವಿಸಮಯಗಳು, ಚಮತ್ಕಾರಗಳು ಇಲ್ಲಿಲ್ಲವೆಂದಲ್ಲ; ಆದರೆ ಅವು ಉದಾತ್ತ, ಭವ್ಯ ಕಲ್ಪನೆಗಳಿಗೆ ಪೂರಕವಾಗಿ ನಿಂತು ಸಾರ್ಥಕವಾಗಿವೆ. ಅಲ್ಲದೆ, ಸಾಮಾನ್ಯ ಸ್ತ್ರೀಗೆ ಅನ್ವಯಿಸಿದಾಗ ಉತ್ಪ್ರೇಕ್ಷೆಯಾಗಿ, ಕವಿಸಮಯವಾಗಿ ತೋರಬಹುದಾದದ್ದು ಜಗನ್ಮಾತೆಯ ವಿಷಯದಲ್ಲಿ ಉಚಿತವಾಗುತ್ತದೆ.

ಇಲ್ಲಿ 'ಸೌಂದರ್ಯಲಹರಿ'ಯ ಕೆಲವೇ ಪದ್ಯಗಳನ್ನು (ಈ ಲೇಖಕನ) ಅನುವಾದದಲ್ಲಿ ನೋಡುವುದಷ್ಟೆ ಶಕ್ಯ. ಆದಿಶಕ್ತಿಯ ಪಾದಧೂಳಿಯ ಮಹಿಮೆಯನ್ನು ಅನೇಕ ರೂಪಕಗಳಿಂದ ನಿರೂಪಿಸುತ್ತಾರೆ, ಆಚಾರ್ಯರು :

ಚರಣರಜವಿದಜ್ಞಾನಿ ಹೃದಯ ತಿಮಿರವನು ಕಳೆವ ದಿನಪ;
ಜಡರಿಗಿದುವೆ ಚೈತನ್ಯದೊಂದು ಮಕರಂದ ಭರಿತ ಸ್ತಬಕ;
ಇದು ದರಿದ್ರಜನವೃಂದಕಹುದು ಚಿಂತಾಮಣಿಯ ಮಾಲೆ;
ಜನ್ಮ ಜಲಧಿಯಲಿ ಮುಳುಗಿಹೋದವರಿಗಿದು ವರಾಹದಾಡೆ!

ವಿಷ್ಣುವಿನ ವರಾಹಾವತಾರ ಕಥೆಯ ಹಿನ್ನೆಲೆಯಲ್ಲಿ ವರಾಹದಾಡೆಯ ಪ್ರತಿಮೆ ಹೊಸ ಬಗೆಯಲ್ಲಿ ಬಳಕೆಗೊಂಡಿರುವುದು ಗಮನಾರ್ಹ.

ದೇವಿಯ ಅನುಗ್ರಹಕ್ಕೆ ಪಾತ್ರನಾದವನು ಸೂರ್ಯಚಂದ್ರಕುಚವುಳ್ಳ, ಮೂಜಗವನ್ನು ಬೇಕಾದರೂ ಗೆಲ್ಲಬಲ್ಲ ಎಂದು ಆಚಾರ್ಯರು ಹೇಳುತ್ತಾರೆ. ಮೂರು ಲೋಕವೇ ಒಂದು ಹೆಣ್ಣು, ಸೂರ್ಯ ಚಂದ್ರಮಂಡಲಗಳೆ ಅವಳ ಸ್ತನಯುಗ ಎಂಬ ಕಲ್ಪನೆ ಎಷ್ಟು ಭೂಮವಾಗಿದೆ!

ಪಾರ್ವತಿಯ ಗಲ್ಲ ತಂದೆಯಾದ ಹಿಮವಂತನಿಗೆ ವಾತ್ಸಲ್ಯದ ಅನುಭವವನ್ನು, ಪತಿಯಾದ ಶಂಕರನಿಗೆ ಶೃಂಗಾರದ ಅನುಭವವನ್ನು ತಂದುಕೊಟ್ಟದ್ದು. ಆ ಸಂಕೀರ್ಣ ಚಿತ್ರವನ್ನು ಆಚಾರ್ಯರು ಹೀಗೆ ಕೊಡುತ್ತಾರೆ:

ವಾತ್ಸಲ್ಯದಿಂದ ಗಿರಿರಾಜ ತನ್ನ ಬೆರಳಿನಲಿ ಮುಟ್ಟಿದಂಥ
ಮತ್ತೆ ಮತ್ತೆ ಶಿವ ಅಧರಪಾನ ಕಾತರದೊಳೆತ್ತಿದಂಥ
ಶಂಭುವಿನ ಕೈಯಲಿರುವ ಕನ್ನಡಿಯ ಹಿಡಿಯಿದೆನಿಪ ನಿನ್ನ
ಎಣೆಯೆ ಇಲ್ಲದೀ ಗಲ್ಲವನು, ಶಿವೆಯೆ, ಎಂತು ಹೊಗಳಲಮ್ಮ!

ಗಣಪತಿ, ಷಣ್ಮುಖರು ಇಂದಿಗೂ ಕುಮಾರರಾಗಿಯೇ ಉಳಿದಿರುವುದರ ರಹಸ್ಯವನ್ನು ಆಚಾರ್ಯರು ಬಿಡಿಸಿದ್ದಾರೆ. ಅವರು ಕುಡಿಯುವ ಲೋಕಮಾತೆಯ ಎದೆಹಾಲಿನ ಮಾಧುರ್ಯ ಅದಕ್ಕೆ ಕಾರಣವಂತೆ! ದಿಟ, ಆ ಅಮೃತರಸದ ಮುಂದೆ ರತಿ ಕ್ಷುಲ್ಲಕ.

ಶ್ರೀದೇವಿಯ ಚರಣಾರವಿಂದದಲ್ಲಿ ಭ್ರಮರ ಭಾವದಿಂದ ವಿರಮಿಸಬಯಸುತ್ತಾರೆ, ಶಂಕರಾಚಾರ್ಯರು :

ದೀನಜನ ಬಯಸುವೆಲ್ಲ ಸಿರಿಗಳನು ನಿಚ್ಚ ನೀಡುವಂಥ
ಸಾಂದ್ರ ಸೌಂದರ್ಯ ಪ್ರಕರಮಕರಂದ ರಸವ ಸೂಸುವಂಥ
ದಿವ್ಯಮಂದಾರ ಮಂಜರಿಯ ಸೊಬಗ ತಾಳಿಕೊಂಡು ನಿಂತ
ನಿನ್ನ ಚರಣವಲಿ ಮುಳುಗಿ ಜೀವವಿದು ತುಂಬಿಯಾಗಲವ್ವ !

ಭಕ್ತಚೇತನ ಇದಕ್ಕಿಂತ ಮಿಗಿಲಾದುದೇನನ್ನು ಕೇಳಿಕೊಳ್ಳಬಹುದು ?

ಈಗ 'ಭಜಗೋವಿಂದಂ' ಸ್ತೋತ್ರಕ್ಕೆ ಮರಳೋಣ. ಜನ್ಮಾಂತರ ಪರಿಭ್ರಮಣದ ಕೋಟಲೆಯನ್ನು ಆಚಾರ್ಯರು ಹೀಗೆ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ :

ಪುನರಪಿ ಜನನಂ ಪುನರಪಿ ಮರಣಂ
ಪುನರಪಿ ಜನನೀ ಜಠರೇ ಶಯನಂ
ಇಹ ಸಂಸಾರೇ ಬಹುದುಸ್ತಾರೇ
ಕೃಪಯಾsಪಾರೇ ಪಾಹಿ ಮುರಾರೇ

ಇಲ್ಲಿ ಮತ್ತು ಇತರ ಪದ್ಯಗಳಲ್ಲಿ ಕೂಡ ಆಕರ್ಷಕವಾದ ಅಂತ್ಯಪ್ರಾಸ ಪ್ರಾಚುರ್ಯವಿದೆ.

"ನಾರೀಸ್ತನಭರನಾಭೀದೇಶ" ದಂತಹ ಪ್ರಲೋಭನೆಗಳಿಂದ ತಪ್ಪಿಸಿಕೊಂಡು, ಮೋಕ್ಷ ಸಂಪಾದಿಸುವುದು ಹೇಗೆಂಬುದನ್ನು 'ಭಜಗೋವಿಂದಂ' ಸರಸವಾಗಿ ಉಪದೇಶಿಸುತ್ತದೆ; ಅದು ಮೋಹಮುದ್ಗರ.

ಕಾಲಚಕ್ರ ಭರದಿಂದ ಉರುಳುತ್ತಿದೆ. ಆದ್ದರಿಂದ ಮೃತ್ಯು ಮುಟ್ಟುವುದಕ್ಕೆ ಮುನ್ನ ಎಚ್ಚತ್ತುಕೊಳ್ಳಬೇಕೆಂದು ಆಚಾರ್ಯರು ಮನಮುಟ್ಟುವಂತೆ ಹೇಳುತ್ತಾರೆ :

ದಿನಮಪಿ ರಜನೀ ಸಾಯಂಪ್ರಾತಃ
ಶಿಶಿರವಸಂತೌ ಪುನರಾಯಾತಃ
ಕಾಲಃ ಕ್ರೀಡತಿ ಗಚ್ಛತ್ಯಾಯು–
ಸ್ತದಪಿ ನ ಮುಂಚತ್ಯಾಶಾವಾಯುಃ

(ಹಗಲಿರುಳುಗಳು, ಬೆಳಗು ಬೈಗುಗಳು, ಶಿಶಿರ ವಸಂತಗಳು ಬಂದು ಬಂದು ಹೋಗುತ್ತಿವೆ. ಕಾಲ ಆಟವಾಡುತ್ತಿದೆ. ಆಯುಸ್ಸು ಕಳೆಯುತ್ತಿದೆ. ಆದರೂ ಆಸೆ ತೊಲಗುವುದಿಲ್ಲ). ಪ್ರಕೃತಿಯ ದ್ವಂದ್ವಗಳ ಚೆಲುವಿನ ಚಿತ್ರಣ ಇಲ್ಲಿದೆ; ಆದರೆ ಅದನ್ನು ದಾಟಿ ಹೋಗುತ್ತಾರೆ ಆಚಾರ್ಯರು.

ಕಾಲಕ್ರೀಡೆಯ ಪ್ರಭಾವದಿಂದ ಪಾರಾಗುವುದು ಮನುಷ್ಯನ ಗುರಿಯಾಗಬೇಕು. ಅದಕ್ಕಿರುವ ಉಪಾಯವನ್ನು ಶಂಕರಾಚಾರ್ಯರು ಹೃದ್ಯವಾಗಿ ಹೇಳಿಕೊಟ್ಟಿದ್ದಾರೆ. ಅದರ ಒಂದು ಅಂಗವಾಗಿ ಕಂಡುಬರುತ್ತದೆ, ಅವರ ಕಾವ್ಯಕ್ರೀಡೆ. ಜಗತ್ತು ಮಾಯೆಯೆಂಬುದು ಆಚಾರ್ಯರ ಅಂತಿಮ ನಿಲುವು. ಆದರೆ ಅದನ್ನು ಅಭಿವ್ಯಕ್ತಿಸುವ ಅವರ ವಾಣಿ ಬರಿಯ ಮಾಯೆಯಲ್ಲ. ಅದರಲ್ಲಿ ಸೌಂದರ್ಯವಿದೆ; ಜೊತೆಗೆ ಸತ್ಯವಿದೆ, ಶಿವವಿದೆ. ಅದರಿಂದ ಆನಂದಲಾಭವೂ ಉಂಟು, ಮಂಗಳಪ್ರಾಪ್ತಿಯೂ ಉಂಟು.

ಸ್ವಾಮಿ ವಿವೇಕಾನಂದ : ಶಕ್ತಿಯ ಸಂಕೇತ

ಕೆ. ಎಸ್. ಭಗವಾನ್

ಇಪ್ಪತ್ತನೆಯ ಶತಮಾನ ಶ್ರೀರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದರ ಯುಗ. ಈ ಇಬ್ಬರು ಮಹಾಪುರುಷರು ಉಂಟುಮಾಡಿದ ಜಾಗೃತಿ ಇತಿಹಾಸ ಕಂಡಿರುವ ಎಲ್ಲಾ ಧಾರ್ಮಿಕ ಚಳವಳಿಗಳಿಗಿಂತ ಹೆಚ್ಚು ಪ್ರಕಾಶಮಾನವಾಗಿದೆ. ಧರ್ಮಸಮನ್ವಯದ ವಿಚಾರ ಅವರಿಗೆ ಮೊದಲು ಅಲ್ಲೊಮ್ಮೆ ಇಲ್ಲೊಮ್ಮೆ ಅಧ್ಯಯನ ಮಟ್ಟದಲ್ಲಿ ಕಂಡರೂ ಕಾಣದಂತೆ ಸೂಕ್ಷ್ಮವಾಗಿ ಸೂಚಿತವಾಗಿತ್ತು. ಅದು ಪರಮಹಂಸರ ಜೀವನದಲ್ಲಿ ಸಂಪೂರ್ಣ ಸಾಕ್ಷಾತ್ಕಾರ ಪಡೆಯಿತು. ಎಲ್ಲಾ ಧರ್ಮಗಳೂ ಒಂದೇ 'ಧರ್ಮ'ದ ಬೇರೆ ಬೇರೆ ಶಾಖೆಗಳು ; ಮನುಷ್ಯರೆಲ್ಲ ಒಂದೇ, ಪ್ರತ್ಯೇಕತೆ ವಿನಾಶಕಾರಿ. ಜಲ, ಪಾನಿ, ವಾಟರ್, ನೀರು ಎಂದು ವಿಧವಿಧವಾಗಿ ಹೆಸರಿಸಿದರೂ ವಸ್ತು ಒಂದೇ, ಎಂಬ ಪರಮಸತ್ಯವನ್ನು ಸಾಧನೆಯಿಂದ ಕಂಡುಕೊಂಡ ಅಪೂರ್ವ ಜ್ಯೋತಿಪುರುಷ ಶ್ರೀರಾಮಕೃಷ್ಣ ಪರಮಹಂಸರು (೧೮–೨–೧೮೩೬ ರಿಂದ ೧೫–೮–೧೮೮೬). ಓದಲೂ ಬರೆಯಲೂ ಬಾರದ ಒಂದು ಕುಗ್ರಾಮದ ಬಡ ಹುಡುಗ ಮಾನವ ಜನಾಂಗದ ಗುರು ಸ್ಥಾನಕ್ಕೆ ಬೆಳೆದದ್ದು ಅತ್ಯಂತ ರೋಮಾಂಚಕಾರಿಯಾದ ಅದ್ಭುತ ಕಥೆ. ತಾವು ಕಂಡ ಮಹಾದರ್ಶನವನ್ನು ಜಗತ್ತಿಗೆ ಬಿತ್ತಲು ಆಶಿಷ್ಠರೂ ಬಲಿಷ್ಠರೂ ದೃಢಿಷ್ಠರೂ ಧೀರಮತಿಗಳೂ ಅಂತಃಕರಣ ಸಂಪನ್ನರೂ ಆದ ತರುಣರ ತಂಡವನ್ನು ವಿಶೇಷ ಎಚ್ಚರಿಕೆಯಿಂದ ಅವರು ಆರಿಸಿದರು. ಅವರೆಲ್ಲ ಅತಿ ಎತ್ತರಕ್ಕೆ ಬೆಳೆದರು. ಪರಮಹಂಸರ ಶಿಷ್ಯ ಸಮುದಾಯದ ಹಿಮಾಲಯದಲ್ಲಿ ಸ್ವಾಮಿ ವಿವೇಕಾನಂದರು ಗೌರೀಶಂಕರ ಶಿಖರವಾಗಿದ್ದಾರೆ.

ಸ್ವಾಮಿ ವಿವೇಕಾನಂದರು ಬದುಕಿದ್ದು ಮೂವತ್ತೊಂಬತ್ತು ವರ್ಷ ಆರು ತಿಂಗಳು ಮಾತ್ರ (ಜನನ: ೧೨–೧–೧೮೬೩; ಮರಣ: ೪–೭–೧೯೦೨). ಸ್ವಾಮಿಜಿಯ ಸಾಹಸಮಯ ಜೀವನವನ್ನು

ಮೂರು ವಿಭಾಗ ಮಾಡಬಹುದು : ವಿದ್ಯಾರ್ಥಿ ಸಾಧಕ, ಅಲೆಮಾರಿ ಸನ್ಯಾಸಿ ಮತ್ತು ವೇದಾಂತ ಪ್ರಚಾರಕ.

ಒಂದು : ವಿದ್ಯಾರ್ಥಿಯಾಗಿದ್ದಾಗ ಪ್ರಾಚ್ಯ ಮತ್ತು ಪಾಶ್ಚಾತ್ಯ ತತ್ವಜ್ಞಾನವನ್ನೂ ಸಾಹಿತ್ಯವನ್ನೂ ಇಂಗದ ತೃಷೆಯಿಂದ ಓದಿ ಜೀರ್ಣಿಸಿಕೊಂಡಿದ್ದರು. ಗುರುವಿನ ನಿರ್ದೇಶನದಲ್ಲಿ ಸಾಧನೆ ಕೈಗೊಂಡು ಸಾಕ್ಷಾತ್ಕಾರ ಪಡೆದಿದ್ದರು.

ಎರಡು : ತಮ್ಮ ದೇವಗುರು ಮಹಾ ಸಮಾಧಿಗೆ ಸಂದ ಮೊದಲು ಮತ್ತು ಆಮೇಲೆ ಮಾತೃಭೂಮಿಯನ್ನು ಹನ್ನೆರಡು ವರ್ಷಗಳ ಕಾಲ ಸತತವಾಗಿ ಸುತ್ತಾಡಿ ಬಂದರು. ತಾಯ್ನಾಡನ್ನು ಕಣ್ಣುಬಿಟ್ಟು ನೋಡಿದರು. ಜನರ ಕಷ್ಟವನ್ನು ಕಿವಿಗೊಟ್ಟು ಕೇಳಿದರು ; ದೇಶದ ಹೀನಸ್ಥಿತಿಗೆ ಎದೆ ನೊಂದರು. ಈ ಪರಿವ್ರಾಜಕ ಅವಸ್ಥೆ ಅವರಿಗೆ ಮತ್ತೊಂದು ಬಗೆಯ ಮಹತ್ತರ ಸಾಧನೆಯಾಯಿತು. ಭಾರತದ ಬಡತನವನ್ನು ಕಣ್ಣಾರೆ ಕಂಡರು ; ಹೊಟ್ಟೆಗೂ ಬಟ್ಟೆಗೂ ಇಲ್ಲದೆ ಹೊಟ್ಟೆದೊಕ್ಕರಿಸಿಕೊಂಡು ಚಕ್ಕಳ ಮೂಳೆಯಾಗಿ ದುಡಿಯುವ ಜನರನ್ನು ನೋಡಿ ಕಣ್ಣೀರು ಹರಿಸಿದರು ; ಜನಸಾಮಾನ್ಯರ ಘೋರ ಅಜ್ಞಾನವನ್ನು ದರ್ಶಿಸಿ ಮುಮ್ಮಲ ಮರುಗಿದರು. ವೇದಾಂತ ಬೋಧಿಸುವ ಸರ್ವ ಸಮಾನತೆ ಎಲ್ಲಿ ? ನಿತ್ಯಜೀವನದ ಮೇಲು ಕೀಳಿನ ಕಹಿ ಎಲ್ಲಿ ? ಎಂದು ಅರಿತು ಹೌಹಾರಿದರು. ನಿಂತಲ್ಲಿ ನಿಲ್ಲದೆ ದೇಶ ಪರ್ಯಟನೆ ಮಾಡುತ್ತಿದ್ದಾಗ ಅರಮನೆ ಗುರುಮನೆಗಳಿಗೆ ಭೇಟಿಕೊಟ್ಟರು ; ರಾಜಮಹಾರಾಜರ ಜೊತೆ ಸಂಭಾಷಿಸಿದರು ; ಪಂಡಿತರು ಮತ್ತು ಆತ್ಮಜ್ಞಾನಿಗಳ ಕೂಡ ವಾದಿಸಿದರು ; ಪಾಮರರೊಡನೆ ಆತ್ಮೀಯವಾಗಿ ಬೆರೆತು ಅವರ ನೋವು ಸಿಟ್ಟುಸಿರುಗಳನ್ನು ತೀವ್ರವಾಗಿ ಅನುಭವಿಸಿದರು. ದೀನ ದಲಿತರ ಅಂತಃಕರಣ ಅತ್ಯಂತ ನಿರ್ಮಲವಾಗಿದೆ, ಮಧುರವಾಗಿದೆ ಎಂದು ಸಂಶಯಾತೀತವಾಗಿ ಮನವರಿಕೆ ಮಾಡಿಕೊಂಡರು. ಆದ್ದರಿಂದಲೆ ಅವರ ಕೃತಿಗಳಲ್ಲಿ ಮಾನವೀಯತೆ ಸಾಗರೋಪಮವಾಗಿ ಹರಡಿಕೊಂಡಿದೆ, ಪ್ರಪಂಚವನ್ನೆಲ್ಲ ಪ್ರಾಣವಾಯು ಆವರಿಸಿಕೊಂಡಿರುವಂತೆ. ವಿವೇಕಾನಂದರ ಮಾನವೀಯ ತತ್ವಕ್ಕೆ ಮಹಾ ಸಾಹಿತಿ ಲಿಯೋ ಟಾಲ್‌ಸ್ಟಾಯ್ ಮಾರುಹೋಗಿದ್ದರು. ವಿವೇಕಾನಂದರ ಆತ್ಮೋದ್ಧಾರಕ ಪ್ರಭಾವದಿಂದ ಮಹಾಕವಿ ಕುವೆಂಪು ಅವರ ಜೀವನ ಪಾವನವಾಯಿತು ; ಅವರ ಸಾಹಿತ್ಯ ಲೋಕೋತ್ತರವಾಯಿತು.

ಮೂರು : ವಿವೇಕಾನಂದರು ಅಮೆರಿಕಾ ದೇಶಕ್ಕೆ ಹೋಗಿ ಧರ್ಮಸಮ್ಮೇಳನದಲ್ಲಿ ಭಾಗವಹಿಸಿ ಭರತಖಂಡಕ್ಕೆ ಅಪಾರ ಕೀರ್ತಿಯನ್ನು ಸಂಪಾದಿಸಿಕೊಟ್ಟರು. ಸಾಮಾನ್ಯವಾಗಿ ಎಲ್ಲಾ ಕ್ಷೇತ್ರಗಳಲ್ಲಿಯೂ ರಿಕ್ತರಂತಿದ್ದ ಭಾರತೀಯರಿಗೆ ಸ್ವಾಭಿಮಾನವನ್ನೂ ಆತ್ಮವಿಶ್ವಾಸವನ್ನೂ ಮೂಡಿಸಿದರು. ಆಧುನಿಕ ಭರತಖಂಡ ವಿವೇಕಾನಂದರಿಗೆ ಎಷ್ಟರ ಮಟ್ಟಿಗೆ ಋಣಿಯಾಗಿದೆ ಎಂಬುದು ಆಗಲೇ ಇತಿಹಾಸದ ಭಾಗವಾಗಿದೆ. ಅವರ ಹುಟ್ಟು ಹಬ್ಬವನ್ನು ಅಂತರರಾಷ್ಟ್ರೀಯ ಯುವದಿನಾಚರಣೆ ಎಂದು ವಿಶ್ವಸಂಸ್ಥೆಯ ಮೂಲಕ

ಘೋಷಿಸಿ ಪ್ರಪಂಚ ತನ್ನ ದೊಡ್ಡ ಗೌರವವನ್ನು ವಿವೇಕಾನಂದರಿಗೆ ಹಣೆಮಣಿದು ಅರ್ಪಿಸಿದೆ.

ಸಾಮಾನ್ಯವಾಗಿ ಎಲ್ಲ ಮಹಾಪುರುಷರ ಬದುಕಿನ ಸುತ್ತ ಒಂದು ಬಗೆಯ ಅಲೌಕಿಕ ವಾತಾವರಣ ಆವರಿಸಿಕೊಂಡಿರುವಂತೆ ಭಾಸವಾಗುತ್ತದೆ. ಅಸಾಮಾನ್ಯ ವ್ಯಕ್ತಿಗಳಾಗಿದ್ದರಿಂದ ಅವರಿಗೆ ಆ ಬಗೆಯ ಶಕ್ತಿ ಇತ್ತು ಎಂಬ ಭಾವನೆ ಮಾನವ ಜನಾಂಗ ದಲ್ಲಿ ರೂಢಿಯಲ್ಲಿದೆ. ಆದರೆ ಅವರ ಸುತ್ತ ಪೊರೆ ಕಟ್ಟಿರುವ ನಿಗೂಢತೆಯನ್ನು ಭೇದಿಸಿ ಗಮನಿಸಿದರೆ ಅವರೂ ಇತರರಂತೆ ಸಾಮಾನ್ಯರು ಎಂದು ದೃಢವಾಗಿ ಅರ್ಥವಾಗುತ್ತದೆ. ಅವರು ತಮ್ಮ ಶಕ್ತಿಯನ್ನು ಹರಿದು ಹಂಚಿಹೋಗದಂತೆ ಒಂದು ಕಡೆ ಕಟ್ಟಿ ಹಾಕಿ ತಡೆಗಟ್ಟಿದ್ದರಿಂದ ಅವರು ಶಕ್ತಿಯ ಜಲಾಶಯವಾದರು ; ಅಸಾಧಾರಣ ಮಹಾನುಭಾವ ರೆಂದು ಪರಿಗಣಿತವಾದರು. ಸತತ ಪರಿಶ್ರಮ ಮತ್ತು ಸಾಧನೆಯಿಂದ ಅವರು ಮಹಾ ಪುರುಷ ಪಟ್ಟ ಮುಟ್ಟಿದರು. ಬೃಹದ್ ದೇವಸ್ಥಾನ ಮತ್ತು ಅರಮನೆಗಳ ಕಳಸ ಗೋಪುರಗಳು ಕಾಣಿಸುತ್ತವೆಯೇ ಹೊರತು ನೆಲದ ಒಡಲಲ್ಲಿ ಮರೆಯಾಗಿರುವ ಅವುಗಳ ಅಸ್ತಿವಾರ ಗೋಚರಿಸುವುದಿಲ್ಲ. ಸಿದ್ಧತೆಯ ಭೂಮ ವ್ಯಕ್ತಿತ್ವದ ಗೋಪ್ಯತೆ. ಆದರೆ ಸಾಮಾನ್ಯ ಮಾನವ ಬುದ್ಧಿ ಮೇಲೇರುವುದಕ್ಕೆ ಹಂಬಲಿಸುವ ಬದಲು ಮಹಾಮಾನವ ರಿಗೆ ದೈವಿಕತೆಯ ಬಣ್ಣ ತೊಡಿಸಿ ತನಗದು ಸಾಧ್ಯವಿಲ್ಲವೇನೋ ಎಂದು ಸಮಾಧಾನ ಪಟ್ಟುಕೊಳ್ಳುವ ನೆಪ ಹೂಡುತ್ತದೆ.

ನಿರಂತರ ಸಾಧನೆಯಿಂದ ನರೇಂದ್ರನಾಥ ತನ್ನನ್ನು ತಾನೆ ಕೆತ್ತಿಕೊಳ್ಳುತ್ತ ಲೋಕ ವಿಖ್ಯಾತ ಸ್ವಾಮಿ ವಿವೇಕಾನಂದರಾದರು. ತಮ್ಮ ಪ್ರತಿಭಾ ವಿಲಾಸದಿಂದ ಮೇಧಾ ಶಕ್ತಿಯಿಂದ ಧೀಮಂತಿಕೆಯಿಂದ ಅಪಾರ ವಿದ್ವತ್ತಿನಿಂದ ವಾಗ್ ವೈಖರಿಯಿಂದ ಪರ ದುಃಖ ಕಾತರತೆಯಿಂದ ದಲಿತ ಪ್ರೇಮದಿಂದ ದೂರದೃಷ್ಟಿಯಿಂದ ಉದಾತ್ತ ದರ್ಶನ ದಿಂದ ಉತ್ಕಟ ಜೀವನ ಪ್ರೀತಿಯಿಂದ ಜಗತ್ತಿನ ಹೃದಯ ಮನಸ್ಸುಗಳನ್ನು ಸಹಜವಾಗಿ ಗೆದ್ದುಬಿಟ್ಟರು. ಅವರು ಜ್ಞಾನಿಗಳಲ್ಲಿ ಶ್ರೇಷ್ಠ ಜ್ಞಾನಯೋಗಿ, ಭಕ್ತರಲ್ಲಿ ಪರಮಭಕ್ತ, ಕರ್ಮಯೋಗದಲ್ಲಿ ಉನ್ನತ ಕರ್ಮಯೋಗಿ. ಆದ್ದರಿಂದಲೆ ಅವರ ಮಾತುಗಳಿಗೆ ಹೊಳಪಿದೆ, ಬಲವಿದೆ, ಬೆಳಕಿದೆ, ಮಂತ್ರಶಕ್ತಿಯಿದೆ. ಮಂತ್ರ ಎಂದರೇನು ? ಅರ್ಥ ವಾಗದ ಶಬ್ದವೆ ? ಅಲ್ಲ. ಗಾಬರಿ ಹುಟ್ಟಿಸುವ ಶ್ಲೋಕವೆ ? ಅಲ್ಲ. ಯಾವ ಮಾತಿ ನಿಂದ ನಮಗೆ ಶಕ್ತಿ ಬರುತ್ತದೆಯೋ ಅದೇ ಮಂತ್ರ. ಎಂಥ ಶಬ್ದಗಳಿಂದ ನಮಗೆ ಜೀವನದ ಸಮಸ್ಯೆಗಳನ್ನು ಎದುರಿಸಲು ಸಾಹಸಭಾವ ಸ್ಫುರಿಸುತ್ತದೆಯೋ, ಯಾವು ದಕ್ಕೂ ಅಂಜದ ಎದೆಗಾರಿಕೆ ಬೆಳೆಯುತ್ತದೆಯೋ ಅದೇ ಮಂತ್ರ. ಒಟ್ಟಿನಲ್ಲಿ ಶಕ್ತಿ ಕೊಡುವ ಮಾತೆಲ್ಲ ಮಂತ್ರ. ಮಂತ್ರವೆಂದರೆ ಕಾಣದ ಭೂತ ಪಿಶಾಚಿ ದೆವ್ವ ದೇವ ರನ್ನು ಆವಾಹನೆ ಮಾಡುವ ಅಥವಾ ಓಡಿಸುವ ಜೀವ ಮಾರಕ ಕೀಳು ತಂತ್ರವಲ್ಲ. ಮನುಷ್ಯನಲ್ಲಿ ಸುಪ್ತವಾಗಿರುವ ಶಕ್ತಿಯ ಸೆಲೆ ಹರಿಯುವಂತೆ ಮಾಡುವ ಸಾಧನವೆ ಮಂತ್ರ. ವಿವೇಕಾನಂದರ ಮಾತುಗಳಿಗೆ ಅಂಥ ಸತ್ವ ಅಗಾಧವಾಗಿದೆ.

ಉಸಿರಾಡುತ್ತಿದ್ದರೂ ಸತ್ತಂತಿದ್ದ, ಜಡುಗಟ್ಟಿ ಜೋಮು ಹಿಡಿದಿದ್ದ, ಗೆದ್ದಲು ಕಟ್ಟಿದ್ದ ಭಾರತೀಯ ಸಮಾಜವನ್ನು ವಿವೇಕಾನಂದರು ತಿಳಿವಳಿಕೆಯ ವೀರಾವೇಶದಿಂದ

ಎಬ್ಬಿಸಿದರು. ಅದು ನಾನಾ ಸ್ತರಗಳಲ್ಲಿ ಚಾಲನೆಗೊಳ್ಳುವಂತೆ ಮಾಡಲು ತಮ್ಮ ತಪಃಶಕ್ತಿಯನ್ನೆಲ್ಲ ವಿನಿಯೋಗಿಸಿದರು. ಅವರು ಅದಮ್ಯ ಶಕ್ತಿಯ ಸ್ಫೂರ್ತಿದಾಯಕ ಮೂರ್ತಿಯಾಗಿದ್ದರು. ಅವರು ಆವೇಶವಾಗಿ ಬಂದರು, ಮಿಂಚಿನಂತೆ ಹೊಳೆದರು, ಸಿಡಿಲಿನಂತೆ ಗುಡುಗಿದರು, ಧಾರಾಕಾರವಾಗಿ ಜ್ಞಾನದ ಮಳೆಗರೆದರು. ರಾಷ್ಟ್ರಶಕ್ತಿ ಉನ್ಮೀಲನಗೊಂಡಿತು. ಅವರು ಬಿರುಗಾಳಿಯಾಗಿ ಬೀಸಿದರು, ಲೊಡ್ಡು ಮರಗಳೆಲ್ಲ ಬುಡಸಹಿತ ಬಿದ್ದುಹೋದುವು; ತಂಗಾಳಿಯಾಗಿ ತಂಪೆರೆದರು, ಜೀವವಿದ್ದ ವೃಕ್ಷರಾಜ ಚಿಗಿತು ಫಲ ಬಿಟ್ಟಿತು. ಅವರು ಹುಟ್ಟಿದ್ದು ಭಾರತದಲ್ಲಾದರೂ, ತಮ್ಮ ಜನ್ಮ ಭೂಮಿಯ ಮೇಲೆ ಅವರಿಗೆ ಅಪಾರ ಭಕ್ತಿಯಿದ್ದರೂ ಅವರ ದೃಷ್ಟಿ ಎಂದೂ ಸಂಕುಚಿತ ವಾಗಿರಲಿಲ್ಲ. ಅವರದು ವಿಶ್ವದೃಷ್ಟಿ; ಪ್ರಪಂಚದ ಪ್ರತಿಯೊಂದು ಭಾಗವೂ ತನ್ನ ದೇಹದ ಒಂದು ಅಂಶವೆಂಬ ಭಾವವನ್ನು ರಕ್ತಗತ ಮಾಡಿಕೊಂಡಿದ್ದ ಹೃದಯವಂತಿಕೆ ಅವರದು.

ವಿವೇಕಾನಂದರು ನುಡಿದದ್ದು ಬರೆದದ್ದು ಇಂದಿಗೆ ಸುಮಾರು ನೂರು ವರ್ಷಗಳ ಹಿಂದೆ. ಆದರೂ ಅವರ ನುಡಿಯ ಕಿಡಿ ಆರಿಲ್ಲ. ಏಕೆಂದರೆ ನಮ್ಮ ಸಾಮಾಜಿಕ ಸಮಸ್ಯೆ ಗಳು ಹೆಚ್ಚು ಕಡಿಮೆ ಹಾಗೆಯೆ ಇವೆ. ನೋಟುನೋಟಕ್ಕೆ ಕೊಂಚಮಟ್ಟಿಗೆ ಬದಲಾವಣೆ ಕಂಡರೂ ಅದೇ ಅಜ್ಞಾನ, ಅಸೂಯೆ, ಅಂಧಶ್ರದ್ಧೆ, ಅವಿವೇಕ, ಅಸಮಾನತೆಗಳು ದಿನ್ನಗುಣಿತ ಕುಣಿಯುತ್ತಿವೆ. ಆಗ ಅವು ಕುರುಡು ಬೆಪ್ಪಾಗಿ ಕಂಡರೆ ಈಗ ಜಾಣ ಪೆದ್ದಾಗಿ ತೋರುತ್ತಿವೆ. ಅಷ್ಟೇ ವ್ಯತ್ಯಾಸ.

ಈ ಬಗೆಯ ಪಿಡುಗುಗಳನ್ನು ಸುಟ್ಟು ಬೂದಿಮಾಡಲು ಅತ್ಯಗತ್ಯವಾದ ಬೆಂಕಿ, ಅರ್ಥಾತ್ ಜ್ಞಾನಾಗ್ನಿ, ವಿವೇಕಾನಂದರ ಕೃತಿಗಳಲ್ಲಿ ನಿಹಿತವಾಗಿದೆ. ಆ ಅಗ್ನಿಕುಂಡ ದಿಂದ ನಮ್ಮೆದೆಯ ಹಣತೆಯನ್ನು ಹಚ್ಚಿಕೊಳ್ಳಬೇಕು. ಆಗ ಕವಿದಿರುವ ಕಗ್ಗತ್ತಲು ಅದರ ಬೆಳಕಿನಲ್ಲಿ ಕೂಡಲೇ ಓಡಿಹೋಗುತ್ತದೆ. ಜ್ಞಾನಜ್ಯೋತಿಯನ್ನು ವಿವೇಕಾ ನಂದರು ಎರಡು ನಿಟ್ಟಿನಿಂದ ಪೂರೈಸುತ್ತಾರೆ. ಅವು ಅಧ್ಯಾತ್ಮ ಮತ್ತು ವಿಜ್ಞಾನ. ಅಧ್ಯಾತ್ಮ ಎಂದರೆ ಪರಿಶುದ್ಧವಾಗಿ ಸತ್ವಭರಿತವಾಗಿ ಅಂತರಂಗವನ್ನು ಬೆಳೆಸುವ, ಬೆಳಕನ್ನು ಪಡೆಯುವ ವಿಧಾನ. ಅಧ್ಯಾತ್ಮದ ಕೆಲಸ ಅಂತರಂಗದ ಬೆಳವಣಿಗೆ; ವಿಜ್ಞಾನದ ಕೆಲಸ ಬಹಿರಂಗದ ಬೆಳವಣಿಗೆ. ಒಂದರ ಬೆಳಕಿನಲ್ಲಿ ಇನ್ನೊಂದನ್ನು ನೋಡುತ್ತ ಅದರೊಡನೆ ಇದನ್ನು ಒರೆಹಚ್ಚುತ್ತ ಗಟ್ಟಿಯನ್ನು ಸ್ವೀಕರಿಸುವ ಸಾಮರ್ಥ್ಯ ಅವರಿಗೆ ಇತ್ತು. ಇವೆಲ್ಲದಕ್ಕೂ ಮೂಲಾಧಾರವಾಗಿ ಸ್ವಾನುಭವಪೂರ್ಣವಾದ ಜ್ಯೋತಿ ಸ್ವರೂಪಿಣಿಯಾದ ಆತ್ಮಸಾಕ್ಷಾತ್ಕಾರವಿತ್ತು. ಅಧ್ಯಾತ್ಮದ ಶ್ರೇಷ್ಠತೆಯನ್ನು ವಿಜ್ಞಾನ ಅರಿತುಕೊಂಡದ್ದು, ವಿಜ್ಞಾನದ ಸವಾಲುಗಳನ್ನು ದಿಟ್ಟವಾಗಿ ಅಧ್ಯಾತ್ಮ ಎದುರಿಸಿದ್ದು ಮೊಟ್ಟಮೊದಲು ಬಹುಶಃ ವಿವೇಕಾನಂದರಲ್ಲಿ ಎನ್ನಬಹುದು. ತುಂಬ ಪ್ರಧಾನವಾದ ಈ ವಿಷಯವನ್ನು ತೌಲನಿಕ ಧರ್ಮಶಾಸ್ತ್ರ ನಿರ್ಣಯಿಸಬೇಕಾಗಿದೆ. ತಮ್ಮ ಪ್ರೌಢ ಕೃತಿಯಾದ 'ರಾಜಯೋಗ'ದ ಪ್ರಾರಂಭದ ಪುಟಗಳಲ್ಲಿ ವಿವೇಕಾನಂದರು ಹೇಳುತ್ತಾರೆ: "ಯೋಗದಲ್ಲಿ ರಹಸ್ಯವಿಲ್ಲ; ರಹಸ್ಯವಿದ್ದರೆ ಅದು ಯೋಗವಲ್ಲ. ಅದನ್ನು ತಿರಸ್ಕರಿಸಿ," ವಿಜ್ಞಾನವನ್ನು ಪ್ರಯೋಗಶಾಲೆಯಲ್ಲಿ ಪರೀಕ್ಷೆ ಮಾಡುವಂತೆ ಧರ್ಮವನ್ನು ಸಾಧನೆಯ ಪ್ರಯೋಗಶಾಲೆಯಲ್ಲಿ ಪರೀಕ್ಷೆ ಮಾಡಬೇಕು.

ಯಾವುದು ಧರ್ಮ, ಯಾವುದು ಧರ್ಮವಲ್ಲ; ಯಾವ ಮೌಲ್ಯಗಳು ಬಾಳಿಗೆ ಬಲವನ್ನೂ ಬೆಳಕನ್ನೂ ನೀಡುತ್ತವೆ; ಯಾವುದು ಗಟ್ಟಿ, ಯಾವುದು ಟೊಳ್ಳು; ಯಾವುದನ್ನು ಹಿಡಿಯಬೇಕು, ಯಾವುದನ್ನು ಬಿಡಬೇಕು ಎಂಬ ವಿಚಾರಗಳು ಖಚಿತ ವಾಗಿ ತಿಳಿಯಬೇಕಾದರೆ ವಿವೇಕಾನಂದರ ಕೃತಿಗಳನ್ನು ಮತ್ತೆ ಮತ್ತೆ ಓದಬೇಕು, ಅಧ್ಯಯನ ಮಾಡಬೇಕು, ಅನುಷ್ಠಾನ ಮಾಡಬೇಕು. ವಿಶ್ವದ ಎಲ್ಲಾ ಅತ್ಯುತ್ತಮ ವಿಚಾರಗಳ ಶ್ರೇಷ್ಠ ಸಂಗಮದಂತೆ ಅವರು ಇದ್ದಾರೆ. ಸಂಗಮ ನಿಂತ ಕೊಳವಲ್ಲ. ಅದು ಹರಿಯುವ ಹೊಳೆ. ಎಲ್ಲ ಮತಗಳ ಹಿತವೂ ಅಹಿತವೂ ಆದ ಮಗ್ಗುಲುಗಳನ್ನು, ಧರ್ಮ ಸಂಸ್ಥಾಪಕರ ಪ್ರವಾದಿಗಳ ಅವತಾರಿಗಳ ಆಚಾರ್ಯರ ಗುಣಗಳನ್ನು ಹೇಳುವ ಕ್ಷಣದಲ್ಲೆ ಅವರ ಹೀನಸುಳಿಗಳನ್ನು ತೋರಿಸುವ ಪ್ರಾಂಜಲ ಮನಸ್ಸನ್ನು ವಿವೇಕಾನಂದರಲ್ಲಿ ಬಿಟ್ಟರೆ ಬೇರೆಲ್ಲಿ ಕಾಣಲು ಸಾಧ್ಯ?

ಧರ್ಮ ಎಂದರೆ ಒಳ್ಳೆಯತನ, ಆದರೆ ಅದನ್ನು ತಮ್ಮ ಹೊಟ್ಟೆಪಾಡಿಗಾಗಿ ಕೊಳಕು ಹಿಡಿಸಿ ಹಾಳು ಮಾಡುವವರು ಪೂಜಾರಿಗಳು, ಪಾದ್ರಿಗಳು, ಮುಲ್ಲಾಗಳು, ಫಾರಿಸಿಗಳು; ಅಂದರೆ ಪುರೋಹಿತ ವರ್ಗ. ಆದ್ದರಿಂದಲೇ ವಿವೇಕಾನಂದರು "ಪುರೋಹಿತ ರನ್ನು ಒದ್ದೋಡಿಸಿ" ಎಂದಿದ್ದಾರೆ. ದೇವಸ್ಥಾನಗಳು ಚರ್ಚುಗಳು ಮಸೀದಿಗಳನ್ನು ಧ್ವಂಸಮಾಡಿ ಎಂದು ಕರೆ ಕೊಟ್ಟಿದ್ದಾರೆ. ಏನು! ಸ್ವಾಮೀಜಿ ಹೀಗೆಲ್ಲಾ ಹೇಳಿ ದ್ದಾರೇ? ಎಂದು ಬೆಚ್ಚುವಂತಾಗುತ್ತದೆ. ಹೌದು, ಹೇಳಿದ್ದಾರೆ. ಏಕೆಂದರೆ ಇವುಗಳೆಲ್ಲ ಪ್ರಗತಿಗೆ ಪ್ರತಿಬಂಧಕಗಳಾಗಿವೆ. ಮನುಷ್ಯರನ್ನು ಒಂದುಗೂಡಿಸುವುದಕ್ಕೆ ಬದಲು ಒಡೆಯುತ್ತಿವೆ. "ದೇವರಲ್ಲಿ ನಂಬಿಕೆ ಇಡದವನನ್ನು ನಾಸ್ತಿಕ ಎಂದು ಹಳೆಯ ಧರ್ಮ ಹೇಳಿತು. ಆದರೆ ತನ್ನಲ್ಲಿ ನಂಬಿಕೆ ಇಡದವನನ್ನು ನಾಸ್ತಿಕ ಎಂದು ಹೊಸ ಧರ್ಮ ಕರೆಯುತ್ತದೆ" ಎಂಬುದಾಗಿ 'ಅನುಷ್ಠಾನ ವೇದಾಂತ' ಎನ್ನುವ ಉಪನ್ಯಾಸಗಳಲ್ಲಿ ಧರ್ಮ ವನ್ನು ಕುರಿತು ಹೊಸ ವ್ಯಾಖ್ಯೆ ನೀಡಿದ್ದಾರೆ. ದೇವರನ್ನು ತ್ಯಜಿಸಿದ್ದಾರೆ! ವಿವೇಕಾನಂದರು ಎಂಥ ವಿಚಾರವಂತ, ಬಂಡಾಯಗಾರ, ಕ್ರಾಂತಿಕಾರಿ ಎಂದು ಗೊತ್ತಾಗಬೇಕಾದರೆ ಅವರ ಕೃತಿಗಳನ್ನು ತೆರೆದ ಮನಸ್ಸಿನಿಂದ ಓದಬೇಕು. ಅವರು ಹಿಂದೂ ಧರ್ಮದ ವಕ್ತಾರ ಎಂಬ ಪ್ರಚಾರದ ಥಳುಕಿನ ತೆರೆಯನ್ನು ಹರಿದು, ಅವರಿಗೆ ತೊಡಿಸಿರುವ ಹಿಂದೂ ಮುಖವಾಡವನ್ನು ಒಡೆದು ನೋಡಬೇಕು. ಸತ್ಯ ವ್ಯಕ್ತಿಯಾದಾಗ ಶಕ್ತಿಯಾಗುತ್ತದೆ, ಸಂಸ್ಥೆಯಾದಾಗ ಸಾಯುತ್ತದೆ. ಅವರೊಬ್ಬ ಮಹಾನ್ ಮಾನವತಾವಾದಿ, ಭಗವಾನ್ 'ಬುದ್ಧನಂತೆ. 'ಬುದ್ಧದೇವ ನನ್ನ ಇಷ್ಟದೇವತೆ, ನನ್ನ ಗುರು' ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ವಿವೇಕಾನಂದ ಎರಡನೆಯ ಬುದ್ಧ!

ವಿವೇಕಾನಂದರ ಜೀವನ ಮತ್ತು ಸಂದೇಶವನ್ನು ಒಂದು ಮಾತಿನಲ್ಲಿ ಹಿಡಿದಿಡ ಬಹುದು. ಅದು ಶಕ್ತಿ ಮನುಷ್ಯರನ್ನು ಶಕ್ತಿವಂತರನ್ನಾಗಿ ವೀರ್ಯವಂತರನ್ನಾಗಿ ಪುರುಷ ಸಿಂಹರನ್ನಾಗಿ ಮಾಡುವುದೇ ಅವರ ಬದುಕಿನ ಪರಮ ಗುರಿಯಾಗಿತ್ತು. ಅವರ ಭಾಷಣ ಗಳನ್ನೂ ಬರವಣಿಗೆಯನ್ನೂ ಸಂವಾದಗಳನ್ನೂ ಪತ್ರಗಳನ್ನೂ ಪಠಣ ಮಾಡುವುದರಿಂದ ವಾಚಕರಿಗೆ ಶಕ್ತಿಯ ಅನುಭವ ಯಥೇಚ್ಛವಾಗಿ ಆಗುತ್ತದೆ. ನಮ್ಮ ಅನಂತ ಶಕ್ತಿಯ ಅರಿವು ಮೂಡಿ ನಮಗೇ ಆಶ್ಚರ್ಯವಾಗುತ್ತದೆ. ಓದುವಾಗ ಕುಲುಮೆಯಲ್ಲಿ ಕುಳಿತಂತೆ

ತೋರುತ್ತದೆ. ಅತ್ಯಂತ ಜಡ ವ್ಯಕ್ತಿಯೂ ಚೈತನ್ಯದ ಚಿಲುಮೆಯಾಗುತ್ತಾನೆ. ವಿದ್ಯುತ್ತು ಮುತ್ತಿಕ್ಕಿದರೆ ಮೈಮನಗಳೆಲ್ಲ ಕಂಪಿಸುವಂತೆ ಅವರ ಉಪದೇಶದಿಂದ ರೋಮಾಂಚನವಾಗುತ್ತದೆ. ಗಾಳಿ ತುಂಬಿದ ಚೆಂಡಿನಂತೆ ಜೀವ ಪುಟಿಯುತ್ತದೆ. ಒಣಗಿದ ಭೂಮಿಗೆ ಮಳೆ ಬಿದ್ದಂತೆ ಜೀವನೋಲ್ಲಾಸ ನರನಾಡಿಯನ್ನೆಲ್ಲ ವ್ಯಾಪಿಸುತ್ತದೆ. ಪ್ರಪಂಚದ ಜ್ಞಾನ ರಾಶಿಯಲ್ಲಿ ವಿವೇಕಾನಂದರು ಬಹುವಾಗಿ ಪ್ರೀತಿಸಿ ಮೆಚ್ಚಿದ್ದ ಕೃತಿರತ್ನಗಳೆಂದರೆ ಉಪನಿಷತ್ತುಗಳು. ಅವು ಶಕ್ತಿಯನ್ನು, ಮಾನವ ಶಕ್ತಿಯನ್ನು, ಅತಿಶಯವಾಗಿ ಕೊಂಡಾಡುತ್ತವೆ. ವಿವೇಕಾನಂದರು ಅಂಥ ಶಕ್ತಿಯ ಜೀವಂತ ಪ್ರತಿರೂಪವಾಗಿದ್ದರು. ತೇಜಃಪುಂಜವಾಗಿದ್ದರು. ಉಪನಿಷತ್ತುಗಳೇ ಮೈವೆತ್ತಂತೆ ಇದ್ದರು. “ಶಕ್ತಿಯೆ ಜೀವನ, ದೌರ್ಬಲ್ಯವೆ ಮರಣ; ದೌರ್ಬಲ್ಯವನ್ನು ತ್ಯಜಿಸಿ” ಎಂದು ಗೆಳೆಯನಂತೆ, ಗುರುವಿನಂತೆ, ತಾಯಿಯಂತೆ ಅವರು ಹೇಳಿದ್ದಾರೆ.

ಮನೆಯ ಕಸ ಗುಡಿಸುತ್ತೇವೆ. ಒಮ್ಮೆ ಗುಡಿಸಿದೆ ಅಂತ ಸುಮ್ಮನಿರುವುದಿಲ್ಲ. ಪದೇ ಪದೇ ಸ್ವಚ್ಛ ಮಾಡುತ್ತೇವೆ. ಮನೆಯಲ್ಲಿ ಕಸ ಸೇರುವಂತೆ ಮನಸ್ಸಿನಲ್ಲೂ ಕಸ ಶೇಖರಣೆಯಾಗುತ್ತದೆ. ಗೊತ್ತಿಲ್ಲದಂತೆ, ಅದನ್ನು ತೊಡೆಯಲು ಮಹಾತ್ಮರ ಜೀವನ ಮತ್ತು ಸಂದೇಶಗಳೆ ಸರಿಯಾದ ಸಾಧನ. ಆದ್ದರಿಂದ ದೊಡ್ಡ ವಿಚಾರಗಳಲ್ಲಿ ಮನಸ್ಸನ್ನು ನೆನೆಸಬೇಕು, ಕುದಿಸಬೇಕು. ಅರಳಿಸಬೇಕು. ನಮ್ಮನ್ನು ಉಳಿಸುವ ಬೆಳೆಸುವ ಪ್ರಬಲ ಪ್ರಗತಿಪರ ಶಕ್ತಿಯಾಗಿದ್ದಾರೆ ವಿವೇಕಾನಂದರು. ತೀವ್ರ ಹಸಿವಾದಾಗ ಆಹಾರ ಸಿಗದಿದ್ದರೆ, ಕಡು ಬಾಯಾರಿಕೆಯಾದಾಗ ಕುಡಿಯಲು ನೀರಿಲ್ಲದಿದ್ದರೆ ಸತ್ತೇಹೋಗುತ್ತೇವೆಂಬ ಯಾತನೆ ಉಂಟಾಗುವಂತೆ ಜ್ಞಾನ ಗಳಿಕೆಯ ವಿಷಯದಲ್ಲಿ ವ್ಯಾಕುಲ ಉಂಟಾಗಬೇಕು. ಆಗ ಬಾಳು ಬೆಳಕಾಗುತ್ತದೆ. ಜೀವ ಅಮೃತವಾಗುತ್ತದೆ.

ಪರಿಣಿತನಿಗಿಂತ ಹೆಚ್ಚು ಅಪ್ರಿಯನಾದವ ಯಾರು ಗೊತ್ತೇ? ತಾನು ಪರಿಣಿತ ಎಂದು ತಿಳಿದಿರುವಾತ.

ರೀಡರ್ಸ್ ಡೈಜೆಸ್ಟ್

ವಯಸ್ಕರ ಶಿಕ್ಷಣ ಮತ್ತು ಖುಷ್ಕಿ ಬೇಸಾಯ ತಂತ್ರಜ್ಞಾನ

ಟಿ. ಎಸ್. ಶಂಕರಲಿಂಗಪ್ಪ

ನಮ್ಮದು ಕೃಷಿಪ್ರಧಾನ ದೇಶ. ಶೇ. ೭೦ ರಷ್ಟು ಜನ ಕೃಷಿಯನ್ನೇ ತಮ್ಮ ಮುಖ್ಯ ಕಸುಬನ್ನಾಗಿ ಮಾಡಿಕೊಂಡಿದ್ದಾರೆ. ೧೯೭೦–೭೧ರ ನಮ್ಮ ದೇಶದ ಕೃಷಿಕ ಜನಗಣತಿಯ ಪ್ರಕಾರ ಇವರಲ್ಲಿ ಶೇ. ೭೦ ಮಂದಿ ರೈತರು ಎರಡು ಹೆಕ್ಟೇರ್ ಭೂಮಿಗಿಂತಲೂ ಕಡಿಮೆ ಜಮೀನು ಉಳ್ಳವರಾಗಿದ್ದಾರೆ. ಇವರ ಆರ್ಥಿಕ ಸ್ಥಿತಿಗತಿಯೆಲ್ಲಾ ತಮ್ಮ ಈ ಜಮೀನಿನ ಉತ್ಪಾದನೆಯ ಮೇಲೆ ನಿಂತಿದ್ದು, ಇದು ಅವರ ಸಾಮಾಜಿಕ, ಸಾಂಸ್ಕೃತಿಕ ಬದುಕಿನ ಮೇಲೂ ಪರೋಕ್ಷ, ಪರಿಣಾಮ ಉಂಟುಮಾಡದೆ ಇಲ್ಲ. ಇವರು ಜಮೀನಿನಲ್ಲಿ ಹೆಚ್ಚು ಉತ್ಪತ್ತಿ ತೆಗೆಯಲು ಬೇಕಾದ ಮೂಲ ಬಂಡವಾಳ ಹಾಕಲು ಅಶಕ್ತರಾಗಿದ್ದು, ಇಂದಿಗೂ ಮಳೆಯನ್ನೇ ಆಶ್ರಯಿಸಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ. ಅಂತೆಯೇ ಕ್ರಮೇಣ ಬಡವರಾಗುತ್ತಾ ಇಂದು ಕಡು ಬಡತನದಿಂದ ಬಳಲುತ್ತಿದ್ದಾರೆ.

ಇವರು ಇದ್ದಷ್ಟು ಭೂಮಿಯಲ್ಲೇ ಹವಾಮಾನಕ್ಕೆ ಅನುಗುಣವಾಗಿ ಅಷ್ಟೇ ಬಂಡವಾಳದಲ್ಲಿ ಹೆಚ್ಚು ಬೆಳೆಯನ್ನು ಬೆಳೆಯುವುದು ಇತ್ತೀಚಿನ ಕೃಷಿ ಕ್ಷೇತ್ರದ ಸಾಧನೆಯಾಗಿದೆ. ಅದೇ ಖುಷ್ಕಿ ಬೇಸಾಯ ತಂತ್ರಜ್ಞಾನ.

ಜನರ ಬದುಕಿನಲ್ಲಿ ಗುಣಾತ್ಮಕ ಪ್ರಗತಿಯನ್ನು ಉಂಟುಮಾಡುವುದೇ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳ ಗುರಿ. ಖುಷ್ಕಿ ಬೇಸಾಯ ಅಭಿವೃದ್ಧಿ ಕಾರ್ಯಕ್ರಮ ಇದರಿಂದೇನೂ ಹೊರತಲ್ಲ. ವಾಸ್ತವಿಕ ಸಂಗತಿಯೆಂದರೆ, ರೈತಸಮುದಾಯದ ನಾಲ್ಕನೆ ಮೂರು ಭಾಗ ಕೃಷಿಕ ಕುಲ ಖುಷ್ಕಿ ಬೇಸಾಯಗಾರರಾಗಿದ್ದು, ಇವರಲ್ಲಿ ಸಣ್ಣ ಹಾಗೂ ಅತಿ ಸಣ್ಣ ರೈತರೇ

ಹೆಚ್ಚಾಗಿದ್ದಾರೆ. ಅಲ್ಲದೆ ನಮ್ಮ ರಾಜ್ಯದಲ್ಲಿ ಪ್ರತಿಶತ ೭೦ರಷ್ಟು ಭೂಮಿ ಕೇವಲ ಮಳೆಯನ್ನೇ ಆಶ್ರಯಿಸಿದೆ. ಇಷ್ಟು ವ್ಯಾಪಕವಾಗಿರುವ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸುವ ಸಾಧ್ಯತೆಗಳು ಕಡಿಮೆ ಇದ್ದು, ರಾಜ್ಯದಲ್ಲಿ ಹಾಲಿ ಇರುವ ನೀರಾವರಿ ಸೌಲಭ್ಯಗಳು ಹಾಗೂ ಕೈಗೊಂಡಿರುವ ಎಲ್ಲಾ ನೀರಾವರಿ ಕಾಮಗಾರಿಗಳು ಮುಕ್ತಾಯ ಗೊಂಡರೂ ಶೇ. ೫೦ ರಷ್ಟು ಸಾಗುವಳಿ ಭೂಮಿಗೆ ಮಾತ್ರ ನೀರಾವರಿ ಒದಗಿಸುವುದು ಸಾಧ್ಯ ಎಂದು ಅಂಕಿಅಂಶಗಳಿಂದ ಕಂಡುಬಂದಿದೆ. ಜೊತೆಗೆ ವರ್ಷವರ್ಷವೂ ನೀರಾವರಿ ಸೌಲಭ್ಯವಿರುವ ಭೂಮಿಯಲ್ಲಿ ಉತ್ಪಾದನೆ ಹೆಚ್ಚುತ್ತಿದ್ದಾಗ್ಯೂ ಆಹಾರದ ಒಟ್ಟು ಉತ್ಪಾದನೆಯಲ್ಲಿ ಇಂದಿಗೂ ಶೇ. ೪೦ ರಷ್ಟು ಆಹಾರಧಾನ್ಯ ಉತ್ಪಾದನೆ ಖುಷ್ಕಿ ಭೂಮಿಯಿಂದಲೇ ಬರುತ್ತಿದೆ ಎಂಬುದೂ ಒಂದು ಗಮನಾರ್ಹ ಅಂಶ. ಅಲ್ಲದೆ ಮಳೆಯ ಏರುಪೇರಿನಿಂದಾಗಿ ರಾಜ್ಯದಲ್ಲಿ ಐದು ವರ್ಷಗಳಿಂದ ಸತತವಾಗಿ ಅನಾವೃಷ್ಟಿ ಪರಿಸ್ಥಿತಿ ತಲೆದೋರಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸರಕಾರ ವ್ಯಾಪಕವಾಗಿ ಖುಷ್ಕಿ ಬೇಸಾಯ ಅಭಿವೃದ್ಧಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸುತ್ತಿದೆ. ಕೃಷಿಯೊಂದಿಗೆ ಅನೂಚಾನವಾಗಿ ನಡೆದುಕೊಂಡು ಬಂದಿರುವ ಇತರ ಕಸುಬುಗಳಾದ ತೋಟಗಾರಿಕೆ, ಪಶುಸಂಗೋಪನೆ, ಕೃಷಿ, ಅರಣ್ಯ ಬೇಸಾಯ, ಮೇವು ಬೆಳೆಸುವುದು, ಉಣ್ಣೆ, ರೇಷ್ಮೆ ಉತ್ಪಾದನೆ, ಕೋಳಿ, ಹಂದಿಗಳ ಸಾಕಣೆಗಳನ್ನು ಸಹ ಈ ಕಾರ್ಯಕ್ರಮದ ಮುಖ್ಯಾಂಶಗಳನ್ನಾಗಿ ಸೇರಿಸಲಾಗಿದೆ.

ಯಾವುದೇ ಅಭಿವೃದ್ಧಿ ಕಾರ್ಯಕ್ರಮ ಎದುರಿಸುವ ಮೊದಲ ಸವಾಲೆಂದರೆ, ಆ ಕಾರ್ಯಕ್ರಮ ಯಾರಿಗಾಗಿ ರೂಪಿತವಾಗಿದೆಯೋ ಅವರು ಅದರಲ್ಲಿ ಸಕ್ರಿಯವಾಗಿ ಭಾಗವಹಿಸದಿರುವುದೇ ಆಗಿದೆ. ಇಂದಿಗೂ ಬಡವನಾಗಿಯೇ ಉಳಿದಿರುವ ಖುಷ್ಕಿ ಬೇಸಾಯಗಾರನಿಗಾಗಿ ರೂಪಿಸಲಾಗಿರುವ ಈ ಕಾರ್ಯಕ್ರಮ ಅವನದೇ ಕಾರ್ಯಕ್ರಮವಾಗಬೇಕಾದರೆ ಕಾರ್ಯಕ್ರಮದ ಪ್ರತಿ ಹಂತದಲ್ಲೂ ಅವನು ಸಕ್ರಿಯವಾಗಿ ಭಾಗವಹಿಸಬೇಕು. ಆದರೆ ರೂಢಿಯಲ್ಲಿರುವ ಕೃಷಿ ವಿಧಾನಗಳನ್ನು ಬಿಟ್ಟು ಹೊಸ ವಿಧಾನಗಳನ್ನು ರೈತನು ತನ್ನ ಜಮೀನಿನಲ್ಲಿ ಅಳವಡಿಸಿಕೊಳ್ಳಲು ಅಷ್ಟು ಸುಲಭವಾಗಿ ಒಪ್ಪುವುದಿಲ್ಲ. ತನ್ನ ಜಮೀನಿಗೆ ಹೆಚ್ಚು ಖರ್ಚು ಮಾಡದೆ ಹೆಚ್ಚು ಉತ್ಪತ್ತಿ ತೆಗೆಯಲು ಸಾಧ್ಯವೇ ಇಲ್ಲ ಎಂದು ಅವನು ಇಂದಿಗೂ ದೃಢವಾಗಿ ನಂಬಿದ್ದಾನೆ. ಬಹುಶಃ ಯಾವುದೇ ಅಭಿವೃದ್ಧಿ ಕಾರ್ಯಕ್ರಮದ ಬಗ್ಗೆಯೂ ಕೂಡ ಹಳ್ಳಿಗಾಡಿನ ಬಹುತೇಕ ಜನರ ಮನಸ್ಸಿನಲ್ಲಿ ಈ ನಂಬಿಕೆ ಆಳವಾಗಿ ಬೇರುಬಿಟ್ಟಿದೆ. ತತ್ಪರಿಣಾಮವಾಗಿ ಅನಾದಿ ಕಾಲದ ಈ ಜಡಮನೋಭಾವದಿಂದ ಅವರಿನ್ನೂ ಬಿಡುಗಡೆ ಹೊಂದಿಲ್ಲ. ಅವರ ಹೃದಯ, ಮನಸ್ಸು ಮುರುಟಿ ಹೋಗಿದೆ. ಒಂದು ರೀತಿಯ ತೀವ್ರ ಆತ್ಮ ಸಂಶಯದಿಂದ ಅವರು ಬಳಲುತ್ತಾ ಬಂದಿದ್ದಾರೆ. ಇವಕ್ಕೆ ಐತಿಹಾಸಿಕ ಹಾಗೂ ಸಾಂಸ್ಕೃತಿಕ ವಿಶಿಷ್ಟ ಸನ್ನಿವೇಶಗಳು ಕಾರಣವೇ ಹೊರತು ಮಾನವನ ಮೂಲಭೂತ ಸ್ವಭಾವವಂತೂ ಅಲ್ಲವೇ ಅಲ್ಲ.

ಹಲವು ಚಿಂತನೆಗಳು ಒಂದೆಡೆ ಸಮನ್ವಯಗೊಂಡು ಇಡಿಯಾಗಿ ಹೊಸದೊಂದು ರೂಪ ಪಡೆದ ಪ್ರಕ್ರಿಯೆಯೇ 'ಅಭಿವೃದ್ಧಿ'ಯ ಪರಿಕಲ್ಪನೆಯಾಗಿದೆ. ಅಂತೆಯೇ

ಯಾವುದೇ ಅಭಿವೃದ್ಧಿ ಕಾರ್ಯಕ್ರಮಕ್ಕಾದರೂ ಅದರದೇ ಆದ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಉದ್ದೇಶಗಳು ಇದ್ದೇ ಇರುತ್ತವೆ. ಆದರೆ ಶ್ರೀಸಾಮಾನ್ಯನಿಗೆ ಇದರ ಅರಿವು ಸ್ಪಷ್ಟವಾಗಿ ಇರುವುದಿಲ್ಲ. ಅವನ ಮಾನಸಿಕ ಧೋರಣೆ ಹಾಗೂ ದೃಷ್ಟಿ ಕೋನದಲ್ಲಿ ಮೂಲಭೂತ ಬದಲಾವಣೆಯನ್ನು ಉಂಟು ಮಾಡಿದಾಗ ಮಾತ್ರ ಇದು ಅವನಿಗೆ ವೇದ್ಯವಾಗುತ್ತದೆ. ಈ ದೃಷ್ಟಿಕೋನದಿಂದ ನೋಡಿದಾಗ ರೈತರ ಆರ್ಥಿಕ ವ್ಯವಸ್ಥೆಯಲ್ಲಿ ತಂತ್ರಜ್ಞಾನ ಸಂಯೋಜನೆ ಮಾಡುವ ಮೊದಲು ಅವರ ಸಂಸ್ಕೃತಿಯಲ್ಲಿ ವೈಜ್ಞಾನಿಕ ಮೌಲ್ಯಗಳನ್ನು ಸಂಯೋಜನೆ ಮಾಡುವುದು ಅವಶ್ಯವಾಗಿದೆ. ಇದಕ್ಕೆ ಪೂರ್ವಭಾವಿಯಾಗಿ ಗ್ರಾಮೀಣರ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಪರಿಸರಗಳ ನಿರ್ಣಾಯಕ ಅಂಶಗಳು ಹಾಗೂ ಅವುಗಳ ವಾಸ್ತವಿಕ ಹಿನ್ನೆಲೆಯ ಬಗ್ಗೆ ಅಧಿಕೃತವಾದ ಪರಿಜ್ಞಾನ ಇರಬೇಕು. ತದನಂತರವೇ ಅವರೊಂದಿಗೆ ಬೆರೆತು ಕೆಲಸ ಮಾಡಬೇಕು. ಕ್ರಮೇಣ ಅವರ ಹೃದಯ ತೆರೆಯುತ್ತದೆ. ತನ್ಮೂಲಕ ಮನಸ್ಸೂ ವಿಕಾಸಗೊಂಡು ಪರಿವರ್ತನಾಶೀಲವಾಗುವುದು. ಜಾಗೃತಿಯೇ ಸೋಪಾನ; ಶಿಕ್ಷಣವೇ ಸಾಧನ; ಅಭಿವೃದ್ಧಿಯೇ ಗುರಿ.

ರೈತರ ಸ್ವಾವಲಂಬನೆಯೇ ದೇಶದ ಅಭಿವೃದ್ಧಿಗೆ ಬುನಾದಿ. ರೈತರ ಕಸುಬುಗಳು ಹಾಗೂ ಅವುಗಳ ವಿಸ್ತರಣಾ ವಿಧಾನಗಳ ಬಗ್ಗೆ ಅವರಿಗೆ ಜ್ಞಾನ ಮತ್ತು ಕೌಶಲಗಳನ್ನು ಉಂಟುಮಾಡುವಲ್ಲಿ ವಯಸ್ಕರ ಶಿಕ್ಷಣವನ್ನು ಒಂದು ಮೂಲ ಬಂಡವಾಳವೆಂದೇ ಪರಿಗಣಿಸಲಾಗಿದೆ. ನಮ್ಮ ದೇಶದ ಮಾನವ ಸಂಪನ್ಮೂಲದ ಬಹುದೊಡ್ಡ ಭಾಗವಾದ ರೈತ ಸಮುದಾಯ ದೇಶದ ವಾರ್ಷಿಕ ವರಮಾನಕ್ಕೆ ಶೇ. ೫೦ ರಷ್ಟು ಕಾಣಿಕೆ ಕೊಡುತ್ತಿದೆ. ಅಂತೆಯೇ ಗ್ರಾಮೀಣರ ಅಭಿವೃದ್ಧಿಯ ಹಾದಿಯಲ್ಲಿ ಒಂದು ದೊಡ್ಡ ತೊಡಕಾಗಿರುವ ಅನಕ್ಷರತೆಯ ನಿವಾರಣೆಗಾಗಿ ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಯೋಜನೆಯನ್ನು ರಾಷ್ಟ್ರಾದ್ಯಂತ ಜಾರಿಗೆ ತರಲಾಗಿದೆ. ರೈತರು ಸ್ವಸಾಮರ್ಥ್ಯ ಹೊಂದಿ, ಸ್ವಾವಲಂಬಿಗಳಾಗಿ ತಮ್ಮ ಕಸುಬುಗಳನ್ನು ಲಾಭದಾಯಕವನ್ನಾಗಿ ಮಾಡಿಕೊಳ್ಳಲು ಅನುವಾಗುವಂತೆ ಶಿಕ್ಷಣ ನೀಡಲಾಗುತ್ತಿದೆ. ಅಂತೆಯೇ ರೈತರ ಅಭಿವೃದ್ಧಿ ಅವರಿಗೆ ದೊರಕುವ ಸಾಮಾಜಿಕ ಶಿಕ್ಷಣವನ್ನು ಅವಲಂಬಿಸಿದೆ.

ವಯಸ್ಕರ ಶಿಕ್ಷಣ ಕಾರ್ಯಕ್ರಮದ ಅಂತಿಮ ಗುರಿ ವ್ಯಕ್ತಿಯು ಸಾಕ್ಷರತೆಯೊಂದಿಗೆ ತನ್ನ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವಂತೆ ಮಾಡುವುದೇ ಆಗಿದೆ. ಸಾಕ್ಷರತೆ, ಅರಿವು ಹಾಗೂ ಕ್ರಿಯಾಶೀಲತೆಗಳು ವಯಸ್ಕರ ಶಿಕ್ಷಣ ಕಾರ್ಯಕ್ರಮದ ಮೂರು ಮಹತ್ವಪೂರ್ಣ ಆಯಾಮಗಳಾಗಿವೆ.

ಅರಿವು ಎಂದರೆ ತನ್ನ ಮತ್ತು ಪರಿಸರದ ಬಗೆಗಿನ ತಿಳುವಳಿಕೆ ಎನ್ನಬಹುದು. ಕಲಿಯುವವರು ತಮ್ಮದೇ ಪರಿಸ್ಥಿತಿ ಅಥವಾ ಪರಿಸರದ ಬಗ್ಗೆ ತಿಳುವಳಿಕೆ ಹೊಂದಿರಬೇಕು. ಆದರೆ ಜನಸಂಖ್ಯೆಯ ಬಹುಭಾಗ ತಮ್ಮ ಭೌತಿಕ, ಸಾಂಸ್ಕೃತಿಕ ಅಥವಾ ಸಾಮಾಜಿಕ–ಆರ್ಥಿಕ ಪರಿಸರದ ಬಗ್ಗೆ ತಿಳಿಯಕೊಳ್ಳಲು ಅಥವಾ ಸ್ವತಃ ವಿಚಾರ ಮಾಡಲು ಅಸಮರ್ಥರಾಗಿದ್ದಾರೆ. ತನ್ನ ಸಮಸ್ಯೆಗೆ ತಾನೇ ಕಾರಣ; ತಾನೇ ಅದನ್ನು ಬಗೆಹರಿಸಿಕೊಳ್ಳಬೇಕಲ್ಲದೆ ಇತರರಾಗಲಿ ಅಥವಾ ಯಾವುದೇ ಬಾಹ್ಯಶಕ್ತಿ ಅಥವಾ

ಅದೃಷ್ಟ ಅಲ್ಲ ಎನ್ನುವುದನ್ನು ಅವನಿಗೆ ಮನವರಿಕೆ ಮಾಡಿಕೊಡುವುದು ಅಗತ್ಯ. ಅರಿವು ಅವನಲ್ಲಿ ತನ್ನ ಅಭಿವೃದ್ಧಿಗಾಗಿ ತಾನೇ ಹಂಬಲಿಸುವಂತೆ ಮಾಡುತ್ತದೆ. ಈ ವರ್ತನೆ ಆರ್ಥಿಕವಾಗಿರುವುದಕ್ಕಿಂತ ಹೆಚ್ಚು ಮಾನಸಿಕ, ಸಾಮಾಜಿಕ ಹ ಸಾಂಸ್ಕೃತಿಕವಾದದ್ದು ಎಂಬುದು ಇಲ್ಲಿ ತುಂಬಾ ಗಮನಾರ್ಹ ವಿಷಯ.

ಜನರ ಹೃದಯ ಹಾಗೂ ಮನಸ್ಸಿನಲ್ಲಿ ಒಂದು ಸಾಮಾಜಿಕ ಕ್ರಾಂತಿಯ ಉಂಟು ಮಾಡುವ ಈ ಕಾಯಕವನ್ನು ೧೯೪೫ ರಿಂದಲೂ ಕರ್ನಾಟಕ ವಯಸ್ಕರ ಶಿಕ್ಷಣ ಸಮಿತಿ ಮಾಡುತ್ತಾ ಬಂದಿದೆ. ರಾಷ್ಟ್ರೀಯ ವಯಸ್ಕರ ಕಾರ್ಯಕ್ರಮ ಜಾರಿಗೆ ಬರುತ್ತಿದಂತೆ ರಾಜ್ಯ ಮಟ್ಟದಲ್ಲಿ ವಯಸ್ಕರ ನಿರ್ದೇಶನಾಲಯವೂ ಅಸ್ತಿತ್ವಕ್ಕೆ ಬಂದಿದೆ. ಜೊತೆಗೆ ವಿಶ್ವವಿದ್ಯಾನಿಲಯ ಧನಸಹ ಆಯೋಗದ ಆಶ್ರಯದಲ್ಲಿ ವಿಶ್ವವಿದ್ಯಾನಿಲಯಗಳು ನೆಹರು ಯುವಕ ಕೇಂದ್ರ ಹಾಗೂ ಇತರ ಸ್ವಯಂ ಸೇವಾ ಸಂಸ್ಥೆಗಳು ಈ ಕಾರ್ಯಕ್ರಮವನ್ನು ಅನು ಗೊಳಿಸುತ್ತಿವೆ.

ಕಾರ್ಯಕ್ರಮದ ಬೆನ್ನೆಲುಬಾದ ಸಚೇತಕ/ಸಚೇತಕಿಯರು ಹಳ್ಳಿ ಕಲಿಯುವವರು, ಸಮುದಾಯ ಹಾಗೂ ವಿವಿಧ ಅಭಿವೃದ್ಧಿ ಇಲಾಖೆಗಳ ನ ಸೇತುಬಂಧವಾಗಿ ಕೆಲಸ ನಿರ್ವಹಿಸುತ್ತಾರೆ. ಇವರಲ್ಲಿ ಬಹುತೇಕ ಮಂದಿ ಯ ಯುವತಿಯರಾಗಿದ್ದು ಸಾಕಷ್ಟು ವಿದ್ಯಾವಂತರಾಗಿರುತ್ತಾರೆ. ಸ್ಥಳೀಯ ಜನರ ಒಪ್ಪಿ ಮೇರೆಗೆ ಸ್ಥಳೀಯರಾದ ಸಚೇತಕ/ಸಚೇತಕಿಯರನ್ನು ಆಯ್ಕೆ ಮಾಡಲಾಗು ಇವರಲ್ಲಿ ನಾಯಕತ್ವದ ಗುಣಗಳು ಇರಬೇಕಾದದ್ದು ಅವಶ್ಯ. ಗ್ರಾಮೀಣ ಸಮುದ ದೊಂದಿಗೆ ಅರ್ಪಣಾ ಮನೋಭಾವದಿಂದ ಕೆಲಸ ಮಾಡುವ ತುಡಿತವಿದ್ದವರಿಗೆ ಕೊಡಬೇಕು. ಜೊತೆಗೆ ವಿದ್ಯಾಪೀಠ ಅಥವಾ ರೈತ ತರಬೇತಿ ಸಂಸ್ಥೆಗಳಲ್ಲಿ ಪಡೆದವರಿಗೆ ಹೆಚ್ಚು ಆದ್ಯತೆ ನೀಡಬೇಕು.

ತಾನು ರೈತರಿಗಾಗಿ ಕೆಲಸ ಮಾಡುವವನು ಎಂಬುದರ ಬದಲಾಗಿ ರೈತರೊ ಕೆಲಸ ಮಾಡುವವನು ಎಂಬ ಮನೋಭಾವವನ್ನು ವಯಸ್ಕರ ಶಿಕ್ಷಣ ಕಾರ್ಯ ರೂಢಿಸಿಕೊಂಡು ತಾನು ಮೊದಲು ಪರಿವರ್ತನೆ ಹೊಂದಬೇಕು. ಕಾರ್ಯಕ್ರ ಹಿತದೃಷ್ಟಿಯಿಂದ ಇದು ಅತ್ಯಂತ ಮಹತ್ವದ ವಿಷಯ. ಕಾರ್ಯಕರ್ತರು ರೈ ಅರಿವು ಮೂಡಿಸಿ ಕ್ರಿಯಾಶೀಲರಾಗುವಂತೆ ಪ್ರೇರಣೆ ಪ್ರೋತ್ಸಾಹ ನೀಡಬೇ ಜವಾಬ್ದಾರಿ ಹೊತ್ತವರಾದ್ದರಿಂದ ರೈತರಿಗೆ ಖುಷ್ಕಿ ಬೇಸಾಯ ತಂತ್ರಜ್ಞಾನ ಮನದಟ್ಟು ಮಾಡಿಕೊಡುವ ಮೊದಲು ತಮ್ಮ ಜಮೀನಿನಲ್ಲಿ ಅಥವಾ ತಮ್ಮ ವನ್ನು ಒಪ್ಪಿದ ರೈತನ ಹೊಲದಲ್ಲಿ ಒಣಬೇಸಾಯ ಪ್ರಾತ್ಯಕ್ಷಿಕೆಯನ್ನು ಏ ಬೇಕಾಗುತ್ತದೆ. ರೈತ ಪ್ರತ್ಯಕ್ಷವಾಗಿ ಕಂಡರೂ ಪ್ರಮಾಣಿಸಿ ನೋಡುವ ವಿವೇಕ ಈ ಹೊಸ ವಿಧಾನಗಳಿಂದ ಹೆಚ್ಚು ಹಣ ಖರ್ಚು ಮಾಡದೆಯೂ ಅಧಿಕ ಇ ಪಡೆಯಲು ಸಾಧ್ಯ ಎಂದು ಮನದಟ್ಟಾದಾಗ ಮಾತ್ರ ಅವನು ತಾನಾಗೇ ಮ ಬರಲು ಸಾಧ್ಯ. ರೈತ ಇಂತಹ ವಿವೇಚನಾಯುಕ್ತವಾದ ನಿರ್ಣಯವನ್ನು ಸ್ವತಃ ತೆಗೆದುಕೊಳ್ಳುವ ಈ ಘಟ್ಟ ವಯಸ್ಕರ ಶಿಕ್ಷಣ ಕಾರ್ಯಕ್ರಮದಲ್ಲಿ ಅತ್ಯಂತ ಮ

ಪೂರ್ಣವಾಗಿದೆ. ಈ ಕಾರಣದಿಂದಲೇ ಕಾರ್ಯಕರ್ತರು ವಯಸ್ಕ ಗ್ರಾಮೀಣರ ಮನಶ್ಶಾಸ್ತ್ರವನ್ನು ಆಳವಾಗಿ ಅಧ್ಯಯನ ಮಾಡುವುದು ಅತ್ಯಗತ್ಯ. ಇದರಿಂದ ಕಾರ್ಯ ಕ್ಷೇತ್ರದಲ್ಲಿ ಅವರ ಕೆಲಸ ಸುಲಭಸಾಧ್ಯವಾಗುತ್ತದೆ.

ಸಚೇತಕ ಬದಲಾವಣೆಯ ಹರಿಕಾರ. ಅಭಿವೃದ್ಧಿಗೆ ಸಂಬಂಧಿಸಿದಂತೆ ಅವನೊಬ್ಬ ಕ್ರಿಯಾಶೀಲ ನಾಯಕ. ಇವನು ವಿಚಾರವಿನಿಮಯವನ್ನು ಸಾಧ್ಯವಾಗಿಸುವುದಲ್ಲದೆ, ಅಭಿವೃದ್ಧಿ ಇಲಾಖೆಗಳ ವಿವಿಧ ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳ ಮೂಲಕ ದೊರಕುವ ಸಂಪನ್ಮೂಲಗಳು, ವಸ್ತುಸಾಮಗ್ರಿಗಳನ್ನು ಕಲಿಯುವವರಿಗೆ ದೊರಕಿಸಿ ಕೊಡಲು ನೆರವಾಗುತ್ತಾನೆ. ಅವನನ್ನು ಕ್ರಿಯಾತ್ಮಕವಾಗಿ ಸಮರ್ಥನನ್ನಾಗಿಸುವುದು ರಾಜ್ಯ ಸಂಪನ್ಮೂಲ ಕೇಂದ್ರದ ಪ್ರಮುಖ ಕರ್ತವ್ಯವಾಗಿದೆ. ಇದು ಆಗದೆ ಹೋದರೆ, ಸಾಂಪ್ರದಾಯಿಕ ಸಾಕ್ಷರತೆಗೂ ಕ್ರಿಯಾತ್ಮಕ ಸಾಕ್ಷರತೆಗೂ ವ್ಯತ್ಯಾಸವೇ ಇಲ್ಲವಾಗಿ, ಕಾರ್ಯಕ್ರಮದ ಮೂಲ ಉದ್ದೇಶ ವಿಫಲವಾಗುತ್ತದೆ.

ವಿದ್ಯಾಪೀಠಗಳ ಪಾತ್ರ :

ವಿಜ್ಞಾನ ಮತ್ತು ತಂತ್ರಜ್ಞಾನ ವಿಸ್ತರಣಾ ಕಾರ್ಯಕ್ರಮಗಳು ರೈತರಲ್ಲಿ ಕ್ರಿಯಾತ್ಮಕ ನಾಯಕತ್ವವನ್ನು ಉಂಟು ಮಾಡುವ ಉದ್ದೇಶ ಹೊಂದಿವೆಯಾದರೂ ನಿರೀಕ್ಷಿತ ಫಲಿತಾಂಶ ಅವುಗಳಿಂದ ಇದುವರೆಗೆ ದೊರಕಿಲ್ಲ. ಹಾಗೂ ಗ್ರಾಮೀಣರ ಮೇಲೆ ಅವು ಬೀರಿದ ಪ್ರಭಾವ ಅತ್ಯಲ್ಪ ಹಾಗೂ ತಾತ್ಕಾಲಿಕ.

ಈ ದಿಕ್ಕಿನಲ್ಲಿ ೧೯೪೫ ರಿಂದಲೂ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯು ತನ್ನದೇ ಆಶ್ರಯದಲ್ಲಿ ವಿದ್ಯಾಪೀಠವನ್ನು ಸ್ಥಾಪಿಸಿ ಹಳ್ಳಿ ಹಳ್ಳಿಗೂ ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಅರಣ್ಯ ಬೇಸಾಯ ಮುಂತಾದ ಕಸಬುಗಳ ಆಧುನಿಕ ತಂತ್ರಜ್ಞಾನವನ್ನು ತಲುಪಿಸುವ ದಿಸೆಯಲ್ಲಿ ವಿಶಿಷ್ಟ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಕಲಿಕೆ ಮತ್ತು ಗಳಿಕೆಯನ್ನು ಉಪಯುಕ್ತ ರೀತಿಯಲ್ಲಿ ಬೆಸೆಯಲಾದ ಈ ಗ್ರಾಮೀಣ ಜನತಾ ಶಿಕ್ಷಣಾಲಯಗಳಲ್ಲಿ ೬ ತಿಂಗಳು ಶಿಕ್ಷಣ ಪಡೆದ ಗ್ರಾಮೀಣ ಯುವಕ ಯುವತಿಯರು ತಮ್ಮ ತಮ್ಮ ಹಳ್ಳಿಗಳಿಗೆ ಮರಳಿ, ಸಮುದಾಯ ಹಾಗೂ ಅಭಿವೃದ್ಧಿ ಇಲಾಖೆಗಳ ಮಧ್ಯೆ ಸೇತುಬಂಧವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಇದರಿಂದ ಅಭಿವೃದ್ಧಿ ಒಂದೆಡೆ ಮಾತ್ರ ಹೆಪ್ಪುಗಟ್ಟದೆ ಸ್ವತಃ ಅವರ ಮತ್ತು ಸಮುದಾಯದ ಮಟ್ಟದಲ್ಲಿ ಸ್ಥಿರೀಕರಣಗೊಳ್ಳುತ್ತದೆ. ಆಗ ಮಾತ್ರ ಆಧುನಿಕ ಖುಷ್ಕಿ ಬೇಸಾಯದಂಥ ಅಭಿವೃದ್ಧಿ ಕಾರ್ಯಕ್ರಮಗಳು ನಿಜವಾದ ರೈತರದೇ ಕಾರ್ಯಕ್ರಮಗಳಾಗಲು ಸಾಧ್ಯ.

ರಾಜ್ಯ ಸಂಪನ್ಮೂಲ ಕೇಂದ್ರದ ಪಾತ್ರ :

ವಯಸ್ಕರ ಶಿಕ್ಷಣ ಸಾಹಿತ್ಯ ಪ್ರಕಾರಗಳಲ್ಲಿ ನೀರಾವರಿ ಭೂಮಿ ಅಭಿವೃದ್ಧಿಯ ಬಗ್ಗೆ ವಿಪುಲವಾಗಿ ಸಾಹಿತ್ಯ ಹೊರತರಲಾಗಿದೆ. ಇಂದೂ ಸಹ ಈ ಬಗ್ಗೆ ಸಾಹಿತ್ಯ ಹೊರಬರುತ್ತಲೇ ಇದ್ದು, ಇದು ಸಮಂಜಸವೂ ಆಗಿದೆ. ಖುಷ್ಕಿ ಭೂಮಿ ಅಭಿವೃದ್ಧಿ ಬಗೆಗಿನ ತಾಂತ್ರಿಕ ಜ್ಞಾನ ತೀರ ಇತ್ತೀಚಿನದಾದ್ದರಿಂದ ಅದರ ಬಗ್ಗೆ ಇರುವ ಸಾಹಿತ್ಯ

ತೀರ ಅತ್ಯಲ್ಪ. ಈ ಕೊರತೆಯನ್ನು ಪರಿಗಣಿಸಿ ವಯಸ್ಕ ಶಿಕ್ಷಣದ ಶೈಕ್ಷಣಿಕ ಹಾಗೂ ತಜ್ಞ ಸಂಸ್ಥೆಯಾದ ರಾಜ್ಯ ಸಂಪನ್ಮೂಲ ಕೇಂದ್ರವು ಖುಷ್ಕಿ ಬೇಸಾಯ ತಂತ್ರಜ್ಞಾನವನ್ನು ವಯಸ್ಕರ ಶಿಕ್ಷಣದಲ್ಲಿ ಸಂಯೋಜಿಸಲು ಒಂದು ವಿಶೇಷ ಯೋಜನೆಯನ್ನು ರೂಪಿಸಿ ಕಾರ್ಯಗತಗೊಳಿಸುತ್ತಿದೆ. ಈಗಾಗಲೇ ಮೂಲ ಸಾಕ್ಷರತಾ ಪಠ್ಯಗಳಾದ 'ಕಲಿಯೋಣ ಬಾ' ಮತ್ತು 'ಬಾ ತಾಯಿ ಕಲಿಯೋಣ' ಇವುಗಳಲ್ಲಿ ಖುಷ್ಕಿ ಬೇಸಾಯ ತಂತ್ರಜ್ಞಾನ ವನ್ನು ಸಂಯೋಜಿಸಲಾಗಿದೆ. ಈ ಪಠ್ಯಪುಸ್ತಕಗಳನ್ನು ಬೋಧಿಸುವ ಸಚೇತಕ/ಸಚೇತಕಿ ಯರುಗಳಿಗೆ ಹೆಚ್ಚು ಮಾಹಿತಿ ಒದಗಿಸಲು ಕೈಪಿಡಿಗಳಲ್ಲಿ ತಂತ್ರಜ್ಞಾನದ ಬಗ್ಗೆ ಬೋಧನಾಂಶಗಳನ್ನು ಅಳವಡಿಸಲಾಗಿದೆ. ಕೃಷಿ ವಿಶ್ವವಿದ್ಯಾನಿಲಯಗಳ ಸಹಯೋಗ ದೊಂದಿಗೆ ನವಸಾಕ್ಷರರಿಗೆ ತಂತ್ರಜ್ಞಾನದ ಬಗ್ಗೆ ಸಾಕ್ಷರೋತ್ತರ, ಸ್ಥಿರೀಕರಣ ಸಾಹಿತ್ಯ ಹಾಗೂ ಚಿತ್ರಪಟಗಳನ್ನು ಹೊರತರಲಾಗುತ್ತಿದೆ. ವಯಸ್ಕರ ಶಿಕ್ಷಣ ಕಾರ್ಯಕರ್ತರು ಗಳಾದ ಮೇಲ್ವಿಚಾರಕರು, ಸಹಾಯಕ ಯೋಜನಾಧಿಕಾರಿಗಳು ಹಾಗೂ ಸಂಬಂಧಪಟ್ಟ ಇತರ ಅಧಿಕಾರಿಗಳಿಗಾಗಿ ಖುಷ್ಕಿ ಬೇಸಾಯ ತಂತ್ರಜ್ಞಾನದ ಬಗ್ಗೆ ತರಬೇತಿ ಸಾಹಿತ್ಯ ಸಿದ್ಧಪಡಿಸಲಾಗುತ್ತಿದೆ. ವಿಷಯ ಪರಿಣಿತರುಗಳಿಂದ ತರಬೇತಿ ಕಾರ್ಯಕ್ರಮಗಳಲ್ಲಿ ಅತಿಥಿ ಉಪನ್ಯಾಸ ಏರ್ಪಡಿಸಲಾಗುತ್ತಿದೆ. ಬೋಧನೆ, ಕಲಿಕೆ ಹಾಗೂ ತರಬೇತಿ ಸಾಮಗ್ರಿಗಳನ್ನು ಕಾರ್ಯಕ್ಷೇತ್ರಕ್ಕೆ ಬಿಡುಗಡೆ ಮಾಡುವುದಕ್ಕೆ ಪೂರ್ವಭಾವಿಯಾಗಿ ರೈತರಿಗೆ ಶೀಘ್ರಗತಿಯಲ್ಲಿ ತಂತ್ರಜ್ಞಾನವನ್ನು ಪರಿಚಯಿಸಬೇಕಾಗಿರುವುದರಿಂದ ದೃಕ್-ಶ್ರವಣ ಸಾಮಗ್ರಿಗಳ ತಯಾರಿಕೆಗೆ ಯೋಜನೆಯಲ್ಲಿ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗಿದೆ.

ಖುಷ್ಕಿ ಬೇಸಾಯ ತಂತ್ರಜ್ಞಾನವು ಒಣ ಭೂಮಿ ರೈತರಿಗೆ ಹೆಚ್ಚು ಭದ್ರವಾದ ಆರ್ಥಿಕ ಬುನಾದಿಯನ್ನು ಹಾಕಿಕೊಟ್ಟು ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಅವರು ಒಂದು ಬಲಿಷ್ಠ 'ಉತ್ಪಾದನಾ ಶಕ್ತಿ'ಯಾಗಿ ರೂಪುಗೊಳ್ಳಲು ಅನುವು ಮಾಡಿಕೊಡುವ ಉದ್ದೇಶ ಹೊಂದಿದೆ. ಜೊತೆಗೆ ರೈತರಲ್ಲಿ ಕ್ರಿಯಾತ್ಮಕ ನಾಯಕತ್ವ ಬೆಳೆಸಲು ಇದು ಪರಿಣಾಮಕಾರಿ ಸಾಧನವೂ ಹೌದು. ಇದಕ್ಕೆ ಪೂರ್ವಭಾವಿಯಾಗಿ ವಯಸ್ಕರ ಶಿಕ್ಷಣವು ಈ ರೈತರ ಹಾಲಿ ದುಸ್ಥಿತಿಗೆ ಕಾರಣಗಳೇನು ಎಂಬುದರ ಬಗ್ಗೆ ಅವರಿಗೆ ಅರಿವು ಮೂಡಿಸಿರಬೇಕು. ಒಮ್ಮೆ ಅವರಲ್ಲಿ ಅರಿವು ಮೂಡಿತೆಂದರೆ ನಾಳಿನ ತಮ್ಮ ಬದುಕನ್ನು ಹಸನು ಮಾಡಿಕೊಳ್ಳಲು ಅವರೆಲ್ಲಾ ಸಂಘಟಿತರಾಗುತ್ತಾರೆ. ಹಾಗಾದಾಗ ಮಾತ್ರ ಅಭಿವೃದ್ಧಿ ಯೋಜನೆಗಳಲ್ಲಿ ಅವರ ಪಾಲುಗೊಳ್ಳುವಿಕೆ ಅರ್ಥಪೂರ್ಣವಾಗಬಲ್ಲದು.

ವಯಸ್ಕರ ಶಿಕ್ಷಣ ಕಾರ್ಯಕ್ರಮ ಹಾಗೂ ಖುಷ್ಕಿ ಬೇಸಾಯ ಅಭಿವೃದ್ಧಿ ಕಾರ್ಯಕ್ರಮಗಳೆರಡೂ ಜನತಾ ಚಳುವಳಿಯೋಪಾದಿಯ ಕಾರ್ಯಕ್ರಮಗಳೇ. ಬಡತನ ರೇಖೆಯ ಕೆಳಗಿರುವ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಈ ಎರಡೂ ಕಾರ್ಯಕ್ರಮ ಗಳಲ್ಲೂ ಆದ್ಯತೆ ನೀಡಲಾಗಿದೆ. ಈ ಕಾರ್ಯಕ್ರಮಗಳು ಪರಸ್ಪರ ಪೂರಕವಾಗಿದೆ; ಒಂದರ ಯಶಸ್ಸು ಮತ್ತೊಂದರ ಯಶಸ್ಸನ್ನು ಅವಲಂಬಿಸಿದೆ. ಆದ್ದರಿಂದ ಒಂದು ಇನ್ನೊಂದರಲ್ಲಿ ಸಮನ್ವಯಗೊಳ್ಳುವುದು ಇಂದು ತೀರ ಅವಶ್ಯವಾಗಿದೆ. ಈ ಎರಡೂ ಕಾರ್ಯಕ್ರಮಗಳು ಏಕಕಾಲದಲ್ಲಿ ಯಶಸ್ವಿಯಾದರೆ ದೇಶದ ಪ್ರಗತಿಯ ಹಾದಿ ಸುಗಮ ವಾಗುತ್ತದೆ.

ಈ ದಿಸೆಯಲ್ಲಿ ಯೋಜನಾಕಾರರು, ನೀತಿ ನಿರೂಪಕರು, ಶಿಕ್ಷಣತಜ್ಞರು, ಆಡಳಿತಗಾರರು, ಅರ್ಥಶಾಸ್ತ್ರಜ್ಞರು, ಸಮಾಜ ವಿಜ್ಞಾನಿಗಳು, ವಿಜ್ಞಾನಿಗಳು, ರೈತರು, ರೈತನಾಯಕರು ಹಾಗೂ ವಿಚಾರವಂತರು ಆಗಾಗ್ಗ ಒಂದೆಡೆ ಸೇರಿ ವಯಸ್ಕರ ಶಿಕ್ಷಣ ಹಾಗೂ ಖುಷ್ಕಿ ಬೇಸಾಯ ಅಭಿವೃದ್ಧಿ ಕಾರ್ಯಕ್ರಮಗಳ ನಡುವೆ ಸಮನ್ವಯ ಕಲ್ಪಿಸುವ ವಿವಿಧ ಅಂಶಗಳ ಬಗ್ಗೆ ಚಿಂತನೆ ಮಾಡುವುದು ಸೂಕ್ತವಾಗಿದೆ ; ಅಂತೆಯೇ ಅವುಗಳಿಗೆ ಕಾಲ ಕಾಲಕ್ಕೆ ಹೊಸ ಆಯಾಮಗಳನ್ನು ಒದಗಿಸುತ್ತಿರಬೇಕಾಗುತ್ತದೆ. 'ಸಾಮಾಜಿಕ ನ್ಯಾಯ' ಈ ಎರಡೂ ಕಾರ್ಯಕ್ರಮಗಳ ಮಾರ್ಗದರ್ಶಿ ದೀವಿಗೆಯಾಗಬೇಕಾಗಿರುವುದನ್ನು ಇವರುಗಳು ಸ್ವಪ್ರೇರಣೆಯಿಂದ ಮನಗಂಡು ಸಪ್ರೇಮದಿಂದ ಕಾರ್ಯತತ್ಪರರಾಗಬೇಕಾಗಿರುವುದು ಇಂದಿನ ಅನಿವಾರ್ಯತೆಯಾಗಿದೆ.

ನೀನು ನಿಜವಾಗಿಯೂ ಹೊಟ್ಟೆ ತುಂಬ ನಕ್ಕರೆ ನಿನ್ನ ವಯಸ್ಸು ಮಾಗಿದಂತೆ ಮುಖದ ಮೇಲೆ ಮೂಡುವ ನೆರಿಗೆಗಳು ಸರಿಯಾದ ಸ್ಥಳಗಳಲ್ಲಿರುತ್ತವೆ.

ಎ. ವಿ. ಮೇಸನ್

ಪ್ರತಿ ದಿನವೂ ಒಬ್ಬಾತ ಕನಿಷ್ಠ ಪಕ್ಷ ಒಂದು ಹಾಡನ್ನಾದರೂ ಕೇಳಬೇಕು, ಒಳ್ಳೆಯ ಒಂದು ಪದ್ಯವನ್ನಾದರೂ ಓದಬೇಕು, ಸುಂದರವಾದ ಒಂದು ಚಿತ್ರವನ್ನಾದರೂ ನೋಡಬೇಕು ಮತ್ತು ಸಾಧ್ಯವಾದರೆ, ಕೆಲವಾದರೂ ನ್ಯಾಯಸಮ್ಮತ ಮಾತುಗಳನ್ನಾಡಬೇಕು.

ಗ್ಯೊಥೇ

ಎಲ್ಲರೂ ಶಿಕ್ಷಣ ಪಡೆಯುವರೆ ?

ರಾಜಾ ಹೊಸಮಾಳ

ಪ್ರಜಾಪ್ರಭುತ್ವ ಹೊಂದಿರುವ ಭಾರತದಲ್ಲಿ ಎಲ್ಲರೂ ಸರಿಸಮಾನರು. ಮೇಲು-ಕೀಳು, ಬಡವ-ಬಲ್ಲಿದ ಎಂಬ ತಾರತಮ್ಯವಿರಬಾರದು. ಪ್ರತಿಯೊಬ್ಬರೂ ಸತ್ಪ್ರಜೆಯಾಗಿ ಬಾಳುವುದಕ್ಕೆ ಅವಕಾಶವನ್ನು ನೀಡಲು ಉತ್ತಮ ಪರಿಸರವನ್ನು ಸೃಷ್ಟಿಸುವುದು ಹಾಗೂ ಜ್ಞಾನ ಹೆಚ್ಚಿಸುವುದು ಅಗತ್ಯ.

ಸ್ವಾತಂತ್ರ್ಯ ಪಡೆದ ಭಾರತ ತನ್ನ ೪೦ ವರ್ಷಗಳಲ್ಲಿ ಶೇ. ೩೬.೨೩ ರಷ್ಟು ಸಾಕ್ಷರತೆಯನ್ನು ಸಾಧಿಸಿದೆ. ಹಾಗೆಂದೇ ಆರು ಪಂಚವಾರ್ಷಿಕ ಯೋಜನೆಗಳನ್ನು ಮುಗಿಸಿದ್ದರೂ ಇನ್ನೂ ಬಡತನ ರೇಖೆಯ ಕೆಳಗೆ ಜೀವನ ನಡೆಸುವವರು ಶೇ. ೬೨ ರಷ್ಟು ಇದ್ದಾರೆಂದರೆ ಆಶ್ಚರ್ಯವಾಗುವುದಿಲ್ಲವೆ ? ಈ ಸಾಧನೆಗೆ ಮುಖ್ಯವಾದ ಕಾರಣ ಬಡತನ ಮತ್ತು ಅನಕ್ಷರತೆ. ಇವು ಒಂದು ಸಾಣ್ಯದ ಎರಡು ಮುಖಗಳು. ಬಡತನಕ್ಕೆ ಅನಕ್ಷರತೆಯೇ ಕಾರಣವಾದರೆ, ಅನಕ್ಷರತೆಗೆ ಬಡತನ ಕಾರಣ ಎನ್ನುವಂತಾಗಿದೆ.

ಯಾವ ದೇಶ ಉತ್ತಮ ಮಟ್ಟದ ಸಾಕ್ಷರತೆಯನ್ನು ಸಾಧಿಸಿದೆಯೋ, ಆ ದೇಶ ಉತ್ತಮ ಪ್ರಗತಿಯನ್ನು ಸಾಧಿಸುವುದರ ಜೊತೆಗೆ ಜನರ ಜೀವನ ಮಟ್ಟವನ್ನು ಸುಧಾರಿಸಿದೆ ಎಂಬುದನ್ನು ನಾವು ಕಂಡಿದ್ದರೂ, ನಮ್ಮ ರಾಷ್ಟ್ರದಲ್ಲಿ ಏಕೆ ಇನ್ನೂ ಆ ನಿಟ್ಟಿನಲ್ಲಿ ಯಶಸ್ವಿಯಾಗಿಲ್ಲ ಎನ್ನುವುದಕ್ಕೆ ಜನಸಂಖ್ಯಾ ಹೆಚ್ಚಳ ಕಾರಣವಾದರೂ, ಅದಕ್ಕಿಂತಲೂ ಮುಖ್ಯವಾದ ಕಾರಣವೆಂದರೆ ವಿಫಲವಾದ ಕಡ್ಡಾಯ ಪ್ರಾಥಮಿಕ ಶಿಕ್ಷಣ ಎನ್ನುವುದು ಸತ್ಯ. ಪ್ರಾಥಮಿಕ ಶಿಕ್ಷಣದಲ್ಲಾದ ನ್ಯೂನ್ಯತೆಯನ್ನು ನಿವಾರಿಸಲೆಂದೇ ವಯಸ್ಕರ ಶಿಕ್ಷಣವನ್ನು ಹುಟ್ಟುಹಾಕಿದ್ದೇವೆ ಪ್ರಜಾಸತ್ತಾತ್ಮಕದ ಸೈದ್ಧಾಂತಿಕ ದೃಷ್ಟಿಯಿಂದ. ಅಂದರೆ ಪ್ರಾಥಮಿಕ ಶಿಕ್ಷಣದಲ್ಲಿ ಮಾಡಿದ ತಪ್ಪಿಗೆ 'ದಂಡ' ತೆರುವಂತೆ ವಯಸ್ಕರ ಶಿಕ್ಷಣದಲ್ಲಿ ಹಣ ತೊಡಗಿಸುತ್ತಿದ್ದೇವೆ. ಹರಿಯುವ ನೀರಿಗೆ ಅಣೆಕಟ್ಟು ಹಾಕದ

ತು ಆ ನೀರಿನಿಂದ ಉತ್ತಮ ಫಲಿತಾಂಶ ನಿರೀಕ್ಷಿಸಲು ಸಾಧ್ಯವಿಲ್ಲ ಎಂಬುದನ್ನು
ುಬೇಕು. ಎರಡು ದಡದ ಮೇಲೆ ಕಾಲಿಟ್ಟಂತೆ ಆಗಬಾರದು.

ಮತ್ತು ಬದುಕು :

ಈಗಿನ ಶಿಕ್ಷಣ ಮತ್ತು ಬದುಕು : ಇವುಗಳ ಸಂಬಂಧ ಹೇಗಿದೆ ಎಂದರೆ ಎಲ್ಲೂ
ಸದ ಸಮಾನಂತರ ರೇಖೆಗಳಂತಿದೆ. ಒಬ್ಬ ಬಡ ಅನಕ್ಷರಸ್ಥನಿಗೆ ಶಿಕ್ಷಣದ ಅಗತ್ಯ
ಲ್ಲೂ, ಆತನನ್ನು ಕಿತ್ತುತಿನ್ನುವ ಬಡತನ ಹಾಗೂ ಅದರ ನಿವಾರಣೆ ಹೆಚ್ಚಿನ
ತ್ವದ್ದಾಗಿರುತ್ತದೆ. ಇದಕ್ಕಾಗಿ ದಿನವಿಡಿ ವಿಶ್ರಾಂತಿ ಇಲ್ಲದೆ ದುಡಿಯುತ್ತಾನೆ,
ಗೆ ತನ್ನ ಚಿಕ್ಕ ಮಕ್ಕಳನ್ನೂ ಶಾಲೆಗೆ ಬದಲಾಗಿ ಕೂಲಿಗೆ ಕಳುಹಿಸುತ್ತಾನೆ.
ಹವರಿಗೆ ಶಿಕ್ಷಣ ನೀಡಲು ಆಹ್ವಾನಿಸಿದಾಗ ಅವನ ಪ್ರತಿಕ್ರಿಯೆಯ ಹಿನ್ನೆಲೆ
ನ್ನು ಗುರುತಿಸಬೇಕು. ಅವನ ಮನದಾಳದ ನೋವನ್ನು ಅರ್ಥಮಾಡಿಕೊಂಡು,
ತ್ತು ಕೂಳಿಗಾಗಿ ತನ್ನ ಸ್ವಾಭಿಮಾನವನ್ನು ಕಳೆದುಕೊಳ್ಳುವುದನ್ನು ತಪ್ಪಿಸಲು
ುದಾಗಬೇಕು. ಇದಕ್ಕಾಗಿ ಗ್ರಾಮೀಣ ಕೈಗಾರಿಕೆಗಳನ್ನು ಪುನರ್ಜೀವನಗೊಳಿಸುವ
ಲಕ 'ಕೈ ತುಂಬ ಕೆಲಸ-ಬಾಯ ತುಂಬ ಅನ್ನ'–ಈ ವಾತಾವರಣವನ್ನು ಸೃಷ್ಟಿಸಿ
ಣ ನೀಡಿದಾಗ ಮಾತ್ರ ನಮ್ಮ ಯೋಜಿತ ಗುರಿ ಹೆಚ್ಚು ಫಲಕಾರಿಯಾಗಲು
ಶ.

ಹಾಗೆಯೆ ಮತ್ತೊಂದು ಅಂಶ ಕೆಲಸದ ಜೊತೆ ಓದು-ಬರಹ, ದುಡಿಮೆಯ
ತೆಗೆ ಕಲಿಕೆ ಇರುವಂತೆ ಕಾರ್ಯಕ್ರಮ ರೂಪಿಸಬೇಕು. ಅಂದರೆ ಅನಕ್ಷರಸ್ಥ
ು ದುಡಿಯುವ ವೇಳೆಯಲ್ಲಿ ಒಂದೆರಡು ಗಂಟೆಗಳನ್ನು ಅಕ್ಷರ ಕಲಿಕೆಗೆ ವಿನಿಯೋಗಿಸು
ಾಗಬೇಕು. ಈ ರೀತಿಯ ಕಲಿಕೆಯ ವೇಳೆಯಲ್ಲೂ ಹಣ ದೊರೆಯುವಂತಾಗ
ು. ಕಲಿಕೆ ಹಣ ತರುವ ಸಾಧನವೂ ಆಗಬೇಕು.

ವ್ಯಕ್ತಿಯ ಅಭಿವೃದ್ಧಿ ಕಾರ್ಯಕ್ರಮಗಳು ಆತನನ್ನು ಸ್ವಾವಲಂಬಿಯಾಗುವಂತಿರ
ಕೆ ವಿನಃ ಪರಾವಲಂಬಿಯಾಗುವಂತೆ ಪ್ರೋತ್ಸಾಹಿಸುವಂತಿರಬಾರದು. ಇಂದಿನ
ಟ್ಟ ಕಾರ್ಯಕ್ರಮಗಳು ಈ ನಿಟ್ಟಿನಲ್ಲಿ ಸಾಗಿದೆ. ·ಇದಕ್ಕೆ ಬದಲಾಗಿ ಆತನು ತಾನೇ
ಡು, ಸಂಪಾದಿಸಿ ತನ್ನ ವ್ಯಕ್ತಿತ್ವವನ್ನು ಉಳಿಸಿ-ಬೆಳೆಸಿಕೊಳ್ಳಬೇಕಾದ ವಾತಾವರಣ
ನ್ನು ರೂಪಿಸಬೇಕು.

ನಕ್ಷರಸ್ಥರು ಮತ್ತು ಅಕ್ಷರಸ್ಥರು :

ಒಂದು ಭಾಷೆಯನ್ನು ಓದಲು, ಬರೆಯಲು ಕಲಿತವರು ಅಕ್ಷರಸ್ಥರು. ಇವುಗಳನ್ನು
ಯದೇ ಇರುವವರು ಅನಕ್ಷರಸ್ಥರು. ಇದೊಂದೇ ಇವರನ್ನು ವಿಭಾಗಿಸಲು ಇರುವ ಅಳತೆ
ೇಲು. ಕೇವಲ ಅಕ್ಷರ ಕಲಿತ ಮಾತ್ರಕ್ಕೆ ವಿದ್ಯಾವಂತ ಎನಿಸಿಕೊಳ್ಳುವುದಿಲ್ಲ. ಸರಿ–ತಪ್ಪು
ನ್ನು ತನ್ನ ಸ್ವಂತಿಕೆಯಿಂದ ವಿವೇಚಿಸುವ, ಸಮಾಜ ಜೀವಿಯಾದವ ಸಮಾಜದ ಇತಿಮಿತಿ
ನ್ನು ಅರ್ಥಮಾಡಿಕೊಂಡು ಜೀವನ ನಡೆಸುವವನು ಮಾತ್ರ ವಿದ್ಯಾವಂತ ಎನ್ನಿಸಿ
ಳ್ಳುತ್ತಾನೆ. ಆತ ಅಕ್ಷರಸ್ಥನೇ ಆಗಿರಬಹುದು ಇಲ್ಲವೇ ಅನಕ್ಷರಸ್ಥನೇ ಆಗಿರಬಹುದು.

ಅನಕ್ಷರಸ್ಥರು ತಮ್ಮ ಮುಗ್ಧತೆಯಿಂದ ಅಕ್ಷರಸ್ಥರ ಬಗ್ಗೆ ಒಳ್ಳೆಯ ಭಾವನೆಯಿಂದ ಗೌರವ ಮನ್ನಣೆ ನೀಡುತ್ತಾರೆ. ಆದರೆ ಅದೇ ಅಕ್ಷರಸ್ಥರು ಅನಕ್ಷರಸ್ಥರ ಬಗ್ಗೆ ತಾತ್ಸಾರ ಭಾವನೆಯನ್ನು ಹೊಂದಿರುತ್ತಾರೆ ಎಂಬುದನ್ನು ದಿನ ನಿತ್ಯದ ಆಗುಹೋಗುಗಳನ್ನು ಗಮನಿಸಿದರೆ ಅರಿಯಬಹುದು. ವಿದ್ಯಾವಂತರೆಂದು ಹೇಳಿಕೊಳ್ಳುವ ಇವರ ಮನೋಭಾವ, ವರ್ತನೆಯನ್ನು ನಿಜವಾಗಿ ಶಿಕ್ಷಣ ಪಡೆದವರು ಆಲೋಚಿಸಿದರೆ ಇವರು ಕೇವಲ ಅಕ್ಷರಸ್ಥರೆ ಹೊರತು ವಿದ್ಯಾವಂತರಲ್ಲ ಎಂದು ತೀರ್ಮಾನಿಸಬಹುದು. ಇಂದು ಶಿಕ್ಷಣ ಶೋಷಣೆಯ ಶಕ್ತಿಯಾಗುವ ಮಟ್ಟ ತಲುಪಿದೆ ಎಂದರೂ ಆಶ್ಚರ್ಯವಿಲ್ಲ. ಬೇರೆಯವರನ್ನು ಪ್ರಶ್ನೆ ಮಾಡುವುದಕ್ಕಿಂತ ತನ್ನನ್ನೂ ತಾನೇ ಪ್ರಶ್ನಿಸಿಕೊಂಡಾಗ ಶಿಕ್ಷಣದ ಪ್ರಯೋಜನ ಅರಿವಾಗ ಬಹುದು.

ಅಕ್ಷರಸ್ಥ ಸಮುದಾಯ ಮನಸ್ಸು ಮಾಡಿದರೆ ಅನಕ್ಷರತೆಯನ್ನು ತೊಡೆದು ಹಾಕುವದು ದುಸ್ಸಾಧ್ಯವೇನಲ್ಲ. ತನ್ನ ಸ್ವಾರ್ಥ ಮನೋಭಾವನೆಯನ್ನು ಬಿಟ್ಟು ಸೇವಾ ಮನೋಭಾವನೆ ಹೊಂದಿ ತನ್ನ ಸುತ್ತಮುತ್ತ ವಾಸಿಸುವ ಅನಕ್ಷರಸ್ಥರಿಗೆ ತನ್ನ ಇತಿಮಿತಿಯಲ್ಲಿ ಸಾಕ್ಷರತೆ ನೀಡುವುದು, ಶಿಕ್ಷಣದ ಮಹತ್ವ ತಿಳಿಸಿ ಕಲಿಯುವವರನ್ನು ಪ್ರೇರೇಪಿಸುವುದು ತನ್ನ ಕರ್ತವ್ಯವೆಂದು ಪಾಲಿಸಬೇಕು.

ಯುವಕರು ಮತ್ತು ವಿದ್ಯಾರ್ಥಿಗಳು :

ಯುವ ಶಕ್ತಿ ರಾಷ್ಟ್ರದ ಶಕ್ತಿ. ಈ ಶಕ್ತಿ ಸಮಾಜ ಅಭಿವೃದ್ಧಿಗೆ ಪೂರಕವಾಗ ಬಹುದು ಇಲ್ಲವೇ ಸಮಾಜದ ಅವನತಿಗೆ ಮಾರಕವಾಗಬಹುದು. ತ್ಯಾಗ ಹಾಗೂ ಸೇವಾ ಮನೋಭಾವನೆ ಈ ವರ್ಗದವರಲ್ಲಿ ಕಂಡುಬರುತ್ತದೆ. ಇವರು ಧೈರ್ಯ, ಸಾಹಸ ಕಾರ್ಯ ಗಳಲ್ಲಿ ಎದೆಗುಂದದೆ ಎಂತಹ ಕಠಿಣ ಸಂದರ್ಭವನ್ನು ಎದುರಿಸಲು ಬಲ್ಲರು ಎಂಬುದನ್ನು ನಮ್ಮ ಸ್ವಾತಂತ್ರ್ಯ ಸಂಗ್ರಾಮವನ್ನೂ ನೆನೆದರೆ ತಿಳಿಯಬಹುದು. ಅನಕ್ಷರತೆಯನ್ನು ತೊಡೆದುಹಾಕಲು ಇವರ ಶ್ರಮವನ್ನು ಸಾರ್ಥಕಪಡಿಸಿಕೊಳ್ಳಬೇಕಾದುದು ಜವಾಬ್ದಾರಿ ಹೊತ್ತವರೆಲ್ಲರ ಕರ್ತವ್ಯವಾಗಿದೆ. ಹಾಗೇ ಯುವ ವೃಂದವೆ ಸ್ವಪ್ರೇರಣೆಯಿಂದ ತಮ್ಮಿಂದ ತಾವೇ ಅನಕ್ಷರತೆಯನ್ನು ತೊಡೆದುಹಾಕಲು ತೊಡಗಿಸಿಕೊಳ್ಳಬೇಕು.

ದೇಹದ ಯಾವುದೇ ಭಾಗಕ್ಕೆ ಊನವಾದರೂ, ಆತ ಅಂಗವಿಕಲನೆ. ಸಮಾಜವು ಅನಕ್ಷರತೆಯಿಂದ ಅಂಗವಿಕಲತೆಯನ್ನು ಹೊಂದಿರುವುದು ಎಲ್ಲರಿಗೂ ಕಾಣುತ್ತಿರುವುದರಿಂದ ಕಣ್ಣಿದ್ದು ಕುರುಡರಾಗದೆ, ಕಿವಿಯಿದ್ದು ಕಿವುಡರಾಗದೆ, ನಮ್ಮ ನಿಮ್ಮಂತೆ ಇರುವ ಮನುಷ್ಯ ನನ್ನು ಮಾನವೀಯ ದೃಷ್ಟಿಯಿಂದ ಅವನ ವ್ಯಕ್ತಿತ್ವಕ್ಕೆ ಕಳಂಕವಾಗಿರುವ ಅನಕ್ಷರತೆ ಯನ್ನು ನಿವಾರಿಸಲು ಶ್ರಮಿಸಬೇಕು. ಮನುಷ್ಯ ಮನುಷ್ಯನನ್ನು ಪ್ರೀತಿಸುವ ಸಮಾಜ ವನ್ನು ಕಟ್ಟಬೇಕಾಗಿರುವುದು ಪ್ರಜ್ಞಾವಂತರೆಲ್ಲರ ಕರ್ತವ್ಯವೆಂದು ತಿಳಿಯಬೇಕು.

ಸಲಹೆ–ಸುಧಾರಣೆಗಳು

೧) ಮೂಲಭೂತವಾಗಿ ಶಿಕ್ಷಣವನ್ನು ಎಲ್ಲರಿಗೂ ನೀಡಲೇಬೇಕಾಗಿರುವುದ ರಿಂದ ಅನಕ್ಷರತೆ ನಿರ್ಮೂಲನೆ ಮಾಡುವವರೆಗಾದರೂ ಉನ್ನತ ಶಿಕ್ಷಣ

ನೀಡುತ್ತಿರುವ ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳನ್ನು ಮುಚ್ಚು ವುದು ಒಳ್ಳೆಯದು.

೨) ಒತ್ತಾಯವಿಲ್ಲದೆ ಯಾವುದೇ ಕಾರ್ಯಕ್ರಮವು ಸಫಲವಾಗಿಲ್ಲ ಎಂಬುದು ಅನುಭವದ ಹಿನ್ನೆಲೆಯಲ್ಲಿ ತಿಳಿದಿರುವುದರಿಂದ ಶಿಕ್ಷಣದ ವಿಷಯ ದಲ್ಲಾದರೂ ಒತ್ತಾಯದ ಮೂಲಕ ಕಾರ್ಯಕ್ರಮವನ್ನು ಮುನ್ನಡೆಸ ಬೇಕು. ಹೇಗೆಂದರೆ, ಹುಟ್ಟಿದ ಪ್ರತಿ ಒಂದು ಮಗುವನ್ನು ೧೪ ವರ್ಷದ ವರೆಗೆ ಸರ್ಕಾರವೇ ದತ್ತು ತೆಗೆದುಕೊಂಡ ರೀತಿಯಲ್ಲಿ ಎಲ್ಲಾ ಮಕ್ಕಳಿಗೆ ಒಂದೇ ರೀತಿ ಶಿಕ್ಷಣ ನೀಡುವುದಕ್ಕಾಗಿ ವಸತಿ ಶಾಲೆಗಳನ್ನು ತೆರೆಯುವುದು. ನಂತರ ಬಯಸಿದರೆ ಅವರ ಶಕ್ತ್ಯಾನುಸಾರ ಉನ್ನತ ಶಿಕ್ಷಣವನ್ನು ಅವರ ತಂದೆ ತಾಯಿಗಳೇ ಮುಂದುವರಿಸುವುದು.

೩) ವಯಸ್ಕರ ಶಿಕ್ಷಣವನ್ನು ಪಠ್ಯವಸ್ತುವಾಗಿ ಕಾಲೇಜು ಹಾಗೂ ವಿಶ್ವ ವಿದ್ಯಾನಿಲಯ ವಿದ್ಯಾರ್ಥಿಗಳು ಅಧ್ಯಯನಕ್ಕಾಗಿ ಕಡ್ಡಾಯವಾಗಿ ಮಾಡುವಂತೆ ಸೇರಿಸುವುದು.

೪) ಕಾಫಿ, ಟೀ ಎಸ್ಟೇಟ್‌ಗಳ ಹಾಗೂ ಕಾರ್ಖಾನೆಗಳ ಮಾಲೀಕರು ತಮ್ಮ ಖರ್ಚು ವೆಚ್ಚದಲ್ಲಿ ವಯಸ್ಕರ ಶಿಕ್ಷಣ ಬಾಬ್ತಿಗೆ ಹಣ ನಿಗದಿಪಡಿಸಿ ತೊಡಗಿಸಬೇಕು. ತೊಡಗಿಸಿದ ಹಣವನ್ನು ಸರ್ಕಾರ ವರಮಾನ ತೆರಿಗೆ ವಿನಾಯತಿ ನೀಡಬೇಕು.

೫) ಅಭಿವೃದ್ಧಿ ಕಾರ್ಯಕ್ರಮಗಳ ಸೌಲಭ್ಯಗಳನ್ನು ವಿತರಿಸಲು ವಯಸ್ಕರ ಶಿಕ್ಷಣ ಕೇಂದ್ರವನ್ನು ವೇದಿಕೆಯಾಗಿ ಬಳಸಿಕೊಂಡು ಅಲ್ಲಿ ಕಲಿಯುವರಿಗೆ ಮಾತ್ರ (ಅರ್ಹರಾಗಿದ್ದರೆ) ನೀಡಬೇಕು.

೬) ಕುಟುಂಬ ಕಲ್ಯಾಣ ಕಾರ್ಯಕ್ರಮದಂತೆ ವಯಸ್ಕರ ಶಿಕ್ಷಣ ಕಾರ್ಯ ಕ್ರಮವನ್ನು ಮನೆ ಮನೆಗೂ ಹೋಗಿ ಪ್ರಚಾರ ಪಡಿಸಬೇಕು.

೭) ಕಾರ್ಯ ನಿರ್ವಹಿಸಿದ ಕಾರ್ಯಕರ್ತರಿಗೆ ಸರ್ಕಾರಿ ನೇಮಕಾತಿಗಳಲ್ಲಿ ಆದ್ಯತೆ ನೀಡುವಂತೆ ಕಾನೂನು ಜಾರಿಗೆ ತರಬೇಕು.

ಪ್ರಸ್ತುತ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳು

೧) ವಯಸ್ಕರ ಶಿಕ್ಷಣ ಕಾರ್ಯಕ್ರಮ ೧೯೭೮ ರ ಅಕ್ಟೋಬರ್ ೨ ರಿಂದ ರಾಷ್ಟ್ರಾದ್ಯಂತ ಜಾರಿಗೆ ಬಂದಿದೆ. ಇದು ತನ್ನ ನಿಗದಿತ ಅವಧಿ ೧೯೮೪ ರ

ವೇಳೆಗೆ ೧೦ ಕೋಟಿ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವ ಗುರಿ ಹೊಂದಿ ಕಾರ್ಯನಿರ್ವಹಿಸಿದರೂ, ನಿರ್ದಿಷ್ಟ ಗುರಿ ಮುಟ್ಟಲು ಸಾಧ್ಯವಾಗಲಿಲ್ಲ. ಹೀಗಾಗಿ ಈ ಕಾರ್ಯಕ್ರಮವನ್ನು ೧೯೯೦ ರವರೆಗೂ ಮುಂದುವರಿಸುವುದರ ಜೊತೆಗೆ, ವೈಜ್ಞಾನಿಕ ಮುನ್ನಡೆ ಸಾಧಿಸುವುದ ರಿಂದ ಸಾಮಾಜಿಕ, ಆರ್ಥಿಕ ಕ್ಷೇತ್ರದಲ್ಲಿ ಪ್ರಗತಿ ಹೊಂದಬಹುದು ಎಂಬ ಉದ್ದೇಶದಿಂದ ಎರಡನೆ ಹಂತವಾಗಿ ೧೯೯೫ ರವರೆಗೂ ಮುಂದುವರಿಸ ಲಾಗಿದೆ.

ಈ ಕಾರ್ಯಕ್ರಮದಲ್ಲಿ ಒಬ್ಬ ಶಿಕ್ಷಕ ಮೂವತ್ತು ಮಂದಿ ಅನಕ್ಷರಸ್ಥರಿಗೆ ಎರಡು ವರ್ಷಗಳಲ್ಲಿ ಮೂರು ಹಂತವಾಗಿ ಸಾಕ್ಷರತೆ ನೀಡುತ್ತಾನೆ.

ಈ ಯೋಜನೆಯಲ್ಲಿ ಶಿಕ್ಷಕನಾಗಿ ಕಾರ್ಯನಿರ್ವಹಿಸುವವನಿಗೆ ತಿಂಗಳಿಗೆ ೧೦೦ ರೂ.ಗಳನ್ನು ಗೌರವ ಸಂಭಾವನೆಯಾಗಿ ನೀಡಲಾಗುವುದು.

ಮೊದಲನೆ ಹಂತ : ೩೦೦-೩೫೦ ಗಂಟೆಗಳಲ್ಲಿ (೮ ತಿಂಗಳು) ಮೂಲ ಸಾಕ್ಷರತಾ ಕಾರ್ಯಕ್ರಮ

ಎರಡನೆ ಹಂತ : ೧೫೦ ಗಂಟೆಗಳಲ್ಲಿ (ನಾಲ್ಕು ತಿಂಗಳು) ಸಾಕ್ಷರೋತ್ತರ ಕಾರ್ಯಕ್ರಮ

ಮೂರನೆ ಹಂತ : ೧೦೦ ಗಂಟೆಗಳಲ್ಲಿ (ಒಂದು ವರ್ಷ) ಸ್ಥಿರೀಕರಣ ಕಾರ್ಯಕ್ರಮ

ಸಾಮೂಹಿಕ ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮ :

೨) ಈಗಿರುವ ವಯಸ್ಕರ ಶಿಕ್ಷಣ ಕಾರ್ಯಕ್ರಮದ ಜೊತೆಗೆ ಮತ್ತೊಂದು ಅಲ್ಪಾವಧಿ ಬೇಸಿಗೆ ರಜ ದಿನದ ಸಾಕ್ಷರತಾ ಕಾರ್ಯಕ್ರಮವನ್ನು ೧೯೮೬ರ ಮೇ ೧ ರಿಂದ ಜಾರಿಗೆ ತರಲಾಗಿದೆ ಅದೇ ಸಾಮೂಹಿಕ ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮ.

ಈ ಸಾಮೂಹಿಕ ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮದ ಕೇಂದ್ರ ಬಿಂದು ವಿದ್ಯಾರ್ಥಿಗಳು. ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ತಮ್ಮ ಅಧ್ಯಯನದ ಜೊತೆಗೆ ತಮ್ಮ ಸುತ್ತಮುತ್ತಲ ನಿವಾಸಿ ಅನಕ್ಷ ರಸ್ಥರಿಗೆ ಸಾಕ್ಷರತೆ ನೀಡುವ ಜವಾಬ್ದಾರಿಯನ್ನು ವಹಿಸಲಾಗಿದೆ. ಈ ವಿದ್ಯಾರ್ಥಿಗಳು ಸ್ವಪ್ರೇರಣೆಯಿಂದ ಸೇವಾ ಮನೋಭಾವನೆಯನ್ನು ಹೊಂದಿ, ೪ ತಿಂಗಳ ಅವಧಿಯಲ್ಲಿ ಅಂದರೆ ೧೫೦ ಗಂಟೆಗಳಲ್ಲಿ ೨-೫ ಮಂದಿ ಅನಕ್ಷರಸ್ಥರಿಗೆ ಸಾಕ್ಷರತೆ ನೀಡುವುದು. ವಿದ್ಯಾರ್ಥಿ ಸ್ವಯಂ ಸೇವಕರಿಗೆ ಸಂಭಾವನೆ ಇರುವುದಿಲ್ಲ.

ಟಕದ ಅಕ್ಷರಸೇನೆ:

ಕರ್ನಾಟಕ ಸರ್ಕಾರ ತನ್ನದೇ ಆದ ಅಕ್ಷರಸೇನೆ ಕಾರ್ಯಕ್ರಮವನ್ನು ರೂಪಿಸಿ ಜನವರಿ ೧ ರಿಂದ ಜಾರಿಗೆ ತಂದಿದೆ. ವಯಸ್ಸನ್ನು ಆಧಾರವಾಗಿಟ್ಟುಕೊಂಡು ೩ ವಿಧದ ಕಾರ್ಯಕ್ರಮಗಳನ್ನು ರೂಪಿಸಿದೆ.

೧) ಪೂರ್ವ ಪ್ರಾಥಮಿಕ ಶಿಕ್ಷಣ: ಆರು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಮಾತ್ರ ಅವಕಾಶವಿರುತ್ತದೆ.

೨) ಸಂಪ್ರದಾಯ ರಹಿತ ಶಿಕ್ಷಣ: ೬ ರಿಂದ ೧೪ ವರ್ಷ ವಯಸ್ಸಿನ ಶಾಲೆ ಬಿಟ್ಟ ಮಕ್ಕಳಿಗೆ ಅವಕಾಶ ಕಲ್ಪಿಸಿದೆ.

೩) ವಯಸ್ಕರ ಶಿಕ್ಷಣ: ೧೫ ರಿಂದ ಮೇಲ್ಪಟ್ಟ ನಿರಕ್ಷರರು ಸಾಕ್ಷರತೆ ಪಡೆಯಲು ಅವಕಾಶವಿರುತ್ತದೆ. ಇದು ಐದು ತಿಂಗಳ ಕಾರ್ಯಕ್ರಮ. ಒಬ್ಬ ಶಿಕ್ಷಕ ೩೦ ಮಂದಿಗೆ ಸಾಕ್ಷರತೆ ನೀಡುತ್ತಾನೆ.

ಧರ್ಮ ಇಲ್ಲದ ಮನುಷ್ಯ ಚುಕ್ಕಾಣಿ ಇಲ್ಲದ ಹಡಗಿನಂತೆ.

ಗಾಂಧೀಜಿ

ನಾನು ನನ್ನೊಳಗೆ ಒಂದು ಕ್ಷಣ ಕೂಡ ಸ್ಪಷ್ಟವಾಗಿ ನೋಡಿದ್ದಿಲ್ಲ. ಅಂದ ಮೇಲೆ ಇತರರ ಕೃತಿಗಳನ್ನು ಹೇಗೆ ತಾನೇ ನಿರ್ಣಯಿಸಲಿ ?

ಮಾರಿಸ್ ಮ್ಯಾಟರ್‌ಲಿಂಕ್

ಶ್ರೀಸಾಮಾನ್ಯ ಉವಾಚ—ಸಂಜೆಗಣ್ಣಿನ ಹಿನ್ನೋಟ

ಪ್ರೊ|| ಎ. ಎನ್. ಮೂರ್ತಿರಾವ್

ಮುಂದುವರಿದದ್ದು

ಪುಸ್ತಕಗಳ ಮತ್ತು ಓದಿನ ಮಾತು ಬಂದಾಗ ನನ್ನ ವಿಚಿತ್ರ ಅನುಭವವೊಂದು ನೆನಪಾಗುತ್ತದೆ. ಕೆಲವು ವೇಳೆ ನುರಿತ ಸಾಹಿತ್ಯಾಭಿಮಾನಿಗಳ ಮತ್ತು ವಿಮರ್ಶಕರ ಮಾತಿನಲ್ಲಿ ಅಷ್ಟಾಗಿ ಕೇಳಿಬರದ ಪುಸ್ತಕಗಳು ನನಗೆ ಪ್ರಿಯವಾಗಿವೆ. ನನ್ನ ಅಭಿರುಚಿಯಲ್ಲಿ ಏನೋ, ಒಂದು ಕೊರತೆಯೋ ಇದಕ್ಕೆ ಕಾರಣವಿರಬಹುದು ಎಂಬ ಯೋಚನೆ ಕೆಲಕಾಲ ನನ್ನನ್ನು ಬಾಧಿಸುತ್ತಿತ್ತು. ಉದಾಹರಣೆ: ಅಲೆಕ್ಸಾಂಡರ್ ಡ್ಯೂಮಾನ The Three Musketeers ಗಿಂತ ನಾನು The Count of Monte Cristo ವನ್ನೇ ಹೆಚ್ಚು ಸಾರಿ ಓದಿದ್ದೇನೆ. ಎರಡೂ ನನಗೆ ಪ್ರಿಯವೇ. ಒಂದನ್ನು ಕಡಮೆ ಪ್ರೀತಿಸುತ್ತೇನೆಂದಲ್ಲ, ಇನ್ನೊಂದನ್ನು ಹೆಚ್ಚು ಪ್ರೀತಿಸುತ್ತೇನೆಂದು (Not that I love one less, but that I love the other more) ಮೆರಿಡಿತ್‌ನ Diana of the Crossways, Ordeal of Richard Feverel ಗಳಿಗಿಂತ Evan Harrington ಅನ್ನು ಹೆಚ್ಚು ಸಲ ಓದಿದ್ದೇನೆ. ಈ ಅನುಭವವಾಗಿರುವುದು ಎರಡನೇ ಮೂರನೇ ದರ್ಜೆಯ ಸಾಹಿತ್ಯದಲ್ಲಿ. ಷೇಕ್‌ಸ್ಪಿಯರ್, ಈಸ್ಕಿಲಸ್, ಸಾಫೊಕ್ಲೀಸ್ ಮುಂತಾದವರ ಕೃತಿಗಳಿಗೆ ಪ್ರಸಿದ್ಧ ವಿಮರ್ಶಕರ ಕಟ್ಟುವ ಬೆಲೆಯನ್ನೇ ನಾನೂ ಕಟ್ಟಿದ್ದೇನೆ. (ಅನೇಕ ವೇಳೆ ಪಂಡಿತರಲ್ಲೇ ಒಮ್ಮತವಿರುವುದಿಲ್ಲ. Doctors differ!) ಯೂರಿಪಿಡೀಸ್‌ನ ವಿಷಯದಲ್ಲಿ ನನಗಿರುವ ಒಲವು ಅವನಿಗೆ ಸಲ್ಲಬೇಕಾದ್ದಕ್ಕಿಂತ ಹೆಚ್ಚು ಎಂದು ಪಂಡಿತರು ತಲೆ ಅಲ್ಲಾಡಿಸಬಹುದು. ನನ್ನ ವಿಶೇಷ ಒಲವುಗಳನ್ನು ಇತರರೆದುರಿಗೆ ಹೇಳಿದರೆ ಅವರು "ಇವನ ಅಭಿರುಚಿ ತೀರ ಹಸಿಹಸಿ" ಎಂದುಕೊಂಡಾರು ಎಂದು ಮೊದಮೊದಲು ಹಿಂಜರಿಯುತ್ತಿದ್ದೆ.

ಈಗ ಆ ಹಿಂಜರಿಕೆ ಹೋಗಿದೆ. ನನ್ನ ಒಲವುಗಳನ್ನಾಗಲಿ ಅಭಿಪ್ರಾಯಗಳನ್ನಾಗಲಿ ಒಪ್ಪಿಕೊಳ್ಳಲು ಹಿಂಜರಿಯಬಾರದು ಎಂಬ ಮನೋವೃತ್ತಿ ಬೆಳೆದಿದೆ.

ಸಿಕ್ಕಿದ ಪುಸ್ತಕಗಳನ್ನೆಲ್ಲ ಓದುವ ಚಟದಿಂದಾದ ಒಂದು ಪರಿಣಾಮವೆಂದರೆ: "ಈ ಪುಸ್ತಕವನ್ನು ಓದಿ ಮುಗಿಸಿಬಿಡಬೇಕು. ಇದು ಮತ್ತೆ ನನ್ನ ಕೈಗೆ ಸಿಕ್ಕುತ್ತದೆಯೋ ಇಲ್ಲವೋ" ಎಂದುಕೊಂಡು ಶಾಲೆಯ ನಿಯಮಗಳ ಪ್ರಕಾರ ಅವಶ್ಯವಾಗಿ ಓದಬೇಕಾದ ಇತರ ಪಠ್ಯ ವಿಷಯಗಳನ್ನು ಕಡೆಗಣಿಸುವ ಅಭ್ಯಾಸ ಬೆಳೆದದ್ದು. ಸಾಹಿತ್ಯದಲ್ಲಿ ಕೂಡ ಓದಲೇಬೇಕಾದ್ದನ್ನು ಬಿಟ್ಟು ಮನಸೆಳೆದ ಯಾವುದೋ ವಿಷಯದ ಬೆನ್ನಟ್ಟಿ ಹೋಗಿದ್ದೇನೆ, ಕೆಲವು ಶಾಸ್ತ್ರಗಳಿಗೆ—ಸ್ಕೂಲು ಕಾಲೇಜುಗಳಲ್ಲಿ ಅವಶ್ಯವಾಗಿ ವಶಪಡಿಸಿಕೊಳ್ಳಬೇಕಾಗಿದ್ದ ಶಾಸ್ತ್ರಗಳಿಗೆ—ಗಮನ ಕೊಡಲಿಲ್ಲ. ಹೈಸ್ಕೂಲಿನಲ್ಲಿದ್ದಾಗ ಗಣಿತದ ಕಡೆಗೆ ಮನಸ್ಸು ಓಡದೆ ಹೋಯಿತು. ಪರೀಕ್ಷೆಯಲ್ಲಿ ೪೦ ಅಂಕಗಳನ್ನು ಸಂಪಾದಿಸಿದೆನಲ್ಲ ಎಂದು ನನಗೇ ಆಶ್ಚರ್ಯ. ಬಿ.ಎ. ಕ್ಲಾಸುಗಳಲ್ಲಿ ಹೀಗೆ ನನ್ನ ಅನಾದರಕ್ಕೆ ಪಾತ್ರವಾದದ್ದು: Economics—ಅರ್ಥಶಾಸ್ತ್ರ; ಎಂ.ಎ. ಕ್ಲಾಸಿನಲ್ಲಿ; Linguistics—ಭಾಷಾ ಶಾಸ್ತ್ರ. ಈ ಮನೋವೃತ್ತಿಯಿಂದಾಗಿ ಬಿ. ಎಂ. ಶ್ರೀಕಂಠಯ್ಯನವರು ನನ್ನ ವಿಷಯದಲ್ಲಿ ಬಹಳ ಅಸಮಾಧಾನಗೊಳ್ಳುವ ಸಂದರ್ಭಬಂತು. ಆಗ ನಾನು ಎರಡನೇ ಎಂ.ಎ. ಕ್ಲಾಸಿನ ಲ್ಲಿದ್ದೆ, ಟ್ಯೂಟರೂ ಆಗಿದ್ದೆ. ಬಿ. ಎಂ. ಶ್ರೀಯವರು "ಟೆನಿಸನ್ನನ In Memoriam ಎಂಬ ಕಾವ್ಯಕ್ಕೆ ಸಂಬಂಧಪಟ್ಟ ಯಾವ ವಿಷಯದ ಮೇಲಾದರೂ ಸರಿಯೆ, ಒಂದು ಪ್ರಬಂಧವನ್ನು ಬರೆಯಿರಿ" ಎಂದು ನಮಗೆಲ್ಲ ಹೇಳಿದ್ದರು. ಕ್ಲಾಸಿನಲ್ಲಿದ್ದವರು ಮೂರೇ ಜನ—ಬರೆಯದೆ ಗುರುಗಳ ಕಣ್ಣು ತಪ್ಪಿಸಿಕೊಂಡು ಕಾಲ ಹಾಕುವುದು ಸಾಧ್ಯವಲ್ಲ. ಎರಡು ತಿಂಗಳಾಯಿತು, ನಾನು ಪ್ರಬಂಧವನ್ನು ಒಪ್ಪಿಸಲೇ ಇಲ್ಲ. ಬಿ.ಎಂ.ಶ್ರೀಯವರಿಗೆ ಆ ಕಾವ್ಯವೆಂದರೆ ಬಹಳ ಪ್ರೀತಿ. ಅದರ ಬೋಧನೆಗೇ ನಾಲ್ಕೈದು ತಿಂಗಳುಗಳನ್ನು ಮೀಸಲು ಮಾಡಿದ್ದರು. ನನಗೆ ಸ್ವಲ್ಪ ಬೇಸರವಾಗಿತ್ತೆಂದು ಒಪ್ಪಬೇಕು. ಅದಕ್ಕಿಂತ ಹೆಚ್ಚಾಗಿ ಆಗ ನನ್ನ ಮನಸ್ಸನ್ನು ಬ್ರೌನಿಂಗ್ ಆಕ್ರಮಿಸಿದ್ದ. ಶ್ರೀಯವರು ಕ್ಲಾಸಿನಲ್ಲಿ ಮತ್ತೆ ಪ್ರಬಂಧದ ಮಾತನ್ನು ಎತ್ತಿರಲಿಲ್ಲ. ಆದರೆ ಯಾವುದೋ ಸಂದರ್ಭದಲ್ಲಿ ಅದನ್ನು ಎನ್. ಎಸ್. ಸುಬ್ಬರಾಯರಲ್ಲಿ ಪ್ರಸ್ತಾಪಿಸಿದರಂತೆ. ಸುಬ್ಬರಾಯರು ಒಂದು ದಿನ ವರಾಂಡದಲ್ಲಿ ನನ್ನನ್ನು ಕಂಡಾಗ "What is the matter with you, Moorthy Rao? Srikantaiah tells me you have taken two months not to do the work assigned to you. Any troubles at home?" (ಏನಿದು, ಮೂರ್ತಿರಾವ್? ಎರಡು ತಿಂಗಳಾದರೂ ಶ್ರೀಕಂಠಯ್ಯನವರು ಹೇಳಿದ ಕೆಲಸ ಮಾಡಿಲ್ಲವಂತೆ? ಅವರು ನನಗೆ ಹೇಳಿದರು. ಮನೆ ಯಲ್ಲಿ ಏನಾದರೂ ತೊಂದರೆಯೊ?) ಎಂದು ಕೇಳಿದರು. ಇಂಥ ಸಂದರ್ಭಗಳಲ್ಲಿ ನನ್ನ ಸಮಯಸ್ಫೂರ್ತಿ ಚೆನ್ನಾಗಿ ಕೆಲಸ ಮಾಡುತ್ತದೆ. ತೊಂದರೆಗಳ ಸರಪಳಿಯೊಂದನ್ನು ಹೆಣೆದೆ. ಸುಬ್ಬರಾಯರೇನೂ ಮರುಳರಲ್ಲ. ಮನಸ್ಸಿನಲ್ಲೇ "ಇವನು ಹೇಳುವುದೆಲ್ಲ ಸುಳ್ಳು, ಆದರೆ ಸಂಭವ ಹಾಗೆ ಹೇಳುತ್ತಾನೆ" ಎಂದುಕೊಂಡು ನಕ್ಕಿರಬೇಕು. "Go and explain to Srikantaiah. But look, go with the essay in

your hand ! (ನನಗೆ ಹೇಳಿದ್ದನ್ನ ಶ್ರೀಕಂಠಯ್ಯನವರಿಗೆ ತಿಳಿಸು. ಇದು ವ
ನೆನಪಿರಲಿ, ಅವರು ಕೇಳಿದ ಪ್ರಬಂಧವನ್ನು ಕೈಯಲ್ಲಿ ಹಿಡಿದುಕೊಂಡು ಹೋ
ಎಂದರು; ತಮ್ಮ ಮಾತಿನ ಕೊನೆಯ ವಾಕ್ಯದ ಪದಪದವನ್ನೂ ಒತ್ತಿ ಹೇಳಿದರು. ನ
"The Problem of Immortality in In Memoriam"
ವಿಷಯವನ್ನು ಆರಿಸಿಕೊಂಡು ಮೂರು ದಿನ ಹಗಲು ರಾತ್ರಿ ಕುಳಿತು ಪ್ರಬಂಧ
ಹೊಸೆದು ಶ್ರೀಯವರ ಮನೆಗೇ ಹೋಗಿ ಅದನ್ನು ಕೊಟ್ಟೆ. ಸುಬ್ಬರಾಯರಿಗೆ ಹೇ
ತೊಂದರೆಗಳ ಕಥೆಯ ಪುನರಾವರ್ತನೆಯೂ ಆಯಿತು. ಕೊನೆಗೆ "I am sorr
was negligent, Sir" (ನನ್ನ ಔದಾಸೀನ್ಯಕ್ಕಾಗಿ ವಿಷಾದಿಸುತ್ತೇನೆ) ಎಂದ
ಅವರು ಕೋಪದಿಂದಲೇ "You were negligent all right" (
ಉದಾಸೀನನಾಗಿದ್ದೆ, ಹೌದು !) ಎಂದರು. ನಾಲ್ಕು ದಿನ ಕಳೆಯಿತು, ಶ್ರೀಕಂಠ
ನವರು ಪ್ರಬಂಧವನ್ನು ಓದಿ ಅದನ್ನು ಕುರಿತು–ಕ್ಲಾಸಿನಲ್ಲೇ–ಬಹಳ ಉದಾರ
ಮಾತಾಡಿದರು. ರಾಲೊ ಅದನ್ನು 'ಮೈಸೂರು ಯೂನಿವರ್ಸಿಟಿ ಮ್ಯಾಗಸೀನ್'
ಪ್ರಕಟಿಸಿದರು. ಶ್ರೀಕಂಠಯ್ಯನವರ ಮನೆಯಲ್ಲಿ ನಾನು 'ವಿಷಾದಿಸುತ್ತೇನೆ' ಎಂ
ಮರ್ಯಾದೆಗಾಗಿ ಆಡಿದ ಮಾತು. ಆದರೆ ನನ್ನ ಮೇಲೆ ಕೋಪಿಸಿಕೊಂಡಿದ್ದಾಗಲೂ
ಪ್ರಬಂಧವನ್ನು ಕುರಿತು ಅಷ್ಟೊಂದು ಉದಾರವಾದ ಮಾತಾಡಿದ್ದನ್ನು ಕಂಡಾಗ ನ
ನಿಜವಾಗಿಯೂ ಪಶ್ಚಾತ್ತಾಪ ಉದಿಸಿತು, ನನಗೆ ನಾನೇ ಒದೆ ಕೊಟ್ಟುಕೊಳ್ಳಬ
ಎನ್ನಿಸಿತು. ಶ್ರೀಕಂಠಯ್ಯನವರ ಮತ್ತು ರಾಲೋವಿನ ಔದಾರ್ಯ ನನಗೆ ತುಂಬ
ವಿಶ್ವಾಸವನ್ನು ಕೊಟ್ಟಿತು—ನನ್ನಲ್ಲಿ ಆತ್ಮವಿಶ್ವಾಸದ ದಾಸ್ತಾನು ಯಾವಾ
ಕಡಮೆಯೇ !

ಈ ಕಥೆಗೆ ಬಾಲಂಗಚ್ಚಿಯೊಂದಿದೆ. ಹದಿನೈದು ವರ್ಷ ಕಳೆದಮೇಲಿನ ಮಾ
ಆಗ ನಾನು ಶಿವಮೊಗ್ಗ ಕಾಲೇಜಿನಲ್ಲಿ ಉಪಪ್ರಾಧ್ಯಾಪಕನಾಗಿದ್ದೆ. ನಮ್ಮ ಇಂಗ್ಲಿ
ಇಲಾಖೆಯ ಕೆಲಸಕಾರ್ಯಗಳನ್ನು ಪರಿಶೀಲಿಸಲು ಶ್ರೀಕಂಠಯ್ಯನವರು ಅಲ್ಲಿಗೆ ಬಂದ
ನನ್ನ ಪ್ರಾರ್ಥನೆಗೆ ಒಪ್ಪಿಗೆಯನ್ನು ಅನುಗ್ರಹಿಸಿ ನನ್ನ ಮನೆಯಲ್ಲೇ ಇಳಿದುಕೊಂಡ
ಆ ಎರಡು ದಿನಗಳನ್ನು ನಾನು ಎಷ್ಟೋ ಸಾರಿ ಆನಂದದಿಂದ ಸ್ಮರಿಸಿಕೊಂಡಿದ್ದ
ಗುರುಗಳು ಆಗ ಇದ್ದಷ್ಟು ಪ್ರಸನ್ನರಾಗಿ ಹಿಂದೆಂದೂ ಕಂಡಿರಲಿಲ್ಲ. ಯಾವು
ಸಂದರ್ಭದಲ್ಲಿ Wuthering Heights ಎಂಬ ಇಂಗ್ಲಿಷ್ ಕಾದಂಬರಿಯ ಮ
ಬಂತು. ನಾನು "ಅದನ್ನು ಓದಬೇಕೆಂದು ಹತ್ತು ಸಾರಿ ಅಂದುಕೊಂಡಿದ್ದೇನೆ.
ಲಗ್ನ ಒದಗಿ ಬಂದಿಲ್ಲ. ಇನ್ನೂ ಅದನ್ನು ಓದಿಯೇ ಇಲ್ಲ ಸಾರ್. ಇಂಗ್ಲಿಷ್ ಮೇಷ್ಟರಾ
ನಲ್ಲಿ ಅದು dereliction of duty !" (ಕರ್ತವ್ಯ ಲೋಪ) ಎಂದೆ. ಶ್ರೀಯು
"Not the first of its kind ! old habits die hard, do
they !" (ಈ ಕರ್ತವ್ಯಲೋಪ ಮೊದಲನೆಯದೇನಲ್ಲ ! ಹಳೆಯ ಅಭ್ಯಾಸ
ಬಡಪೆಟ್ಟಿಗೆ ಸಾಯುವುದಿಲ್ಲ, ಅಲ್ಲವೆ ?) ಎಂದು ಕಿಲಕಿಲ ತುಂಟನಗೆಯನ್ನು ನಕ್ಕ
ಚಿಕ್ಕ ಮಗುವಿನ ಚೇಷ್ಟೆಯನ್ನು ದಶಕಗಳು ಕಳೆದ ಮೇಲೆ ನೆನಪಿಸಿಕೊಂಡಂತಿ
ಅವರ ಮುಖಮುದ್ರೆ. "ಅರ್ಥವಾಯಿತು ಸಾರ್" ಎಂದು ನಾನೂ ನಕ್ಕೆ. ಶ್ರೀಯು

ಅಂದು ಹೇಳಿದಷ್ಟು ಸತ್ಯ; ಆದರೆ ಪೂರ್ಣ ಸತ್ಯವಲ್ಲ. ನನ್ನ ದುರ್-ಅಭ್ಯಾಸ ಬಡಪೆಟ್ಟಿಗಾಗಲಿ ಬಲಪೆಟ್ಟಿಗಾಗಲಿ, ಸಾಯಲೇ ಇಲ್ಲ! "ಮಾಡಬೇಕಾದ ಕೆಲಸವನ್ನು "ಇನ್ನು ತಡಮಾಡಿದರೆ ಮಾನಹೋಗುತ್ತದೆ" ಎನ್ನುವವರೆಗೂ ಮುಂದಕ್ಕೆ ಹಾಕುವ ಪ್ರವೃತ್ತಿ, ಅದಕ್ಕೆ ಬದಲಾಗಿ (ಅದನ್ನು ಮುಂದೂಡುವುದಕ್ಕೆ ಒಂದು ನೆಪ ಬೇಕಲ್ಲ!) ಇನ್ನೊಂದು ಕೆಲಸವನ್ನು ಹಚ್ಚಿಕೊಳ್ಳುವ ಪ್ರವೃತ್ತಿ—ಎರಡೂ ಈಗಲೂ ಇದ್ದೇ ಇವೆ!

೬. ಆ ಕಾಲದ ನಾಟಕಗಳು

ನಾನು ನಾಟಕವನ್ನು ಮೊಟ್ಟಮೊದಲು ನೋಡಿದ್ದೂ ಹೈಸ್ಕೂಲಿನ ಮೊದಲ ತರಗತಿಯಲ್ಲಿದ್ದಾಗಲೇ. ಮೇಲುಕೋಟೆಯಲ್ಲಿ 'ಪ್ರಭಾವತೀ ದರ್ಬಾರು' ಎಂಬ ನಾಟಕವನ್ನು ನೋಡಿದ್ದೆನೆಂಬುದನ್ನು ಹಿಂದೆ ಕಾಣಿಸಿದ್ದೇನೆ. ಆದರೆ ಅದರ ಹೆಸರು ಹೊರತು ಮತ್ತೇನೂ ನೆನಪಿಲ್ಲ. ರಂಗಮಂದಿರದಲ್ಲಿ ನಾನು ಲಕ್ಷಣವಾಗಿ ನಿದ್ದೆ ಮಾಡಿರಬೇಕು—ಆ ಕಾಲದಲ್ಲಿ ನಾಟಕಗಳು ಆರಂಭವಾಗುತ್ತಿದ್ದದ್ದು ರಾತ್ರಿ ೧೦ ಗಂಟೆಗೆ. ಅಂದ ಮೇಲೆ ನಾನು ಮೊದಲ ನಾಟಕ ನೋಡಿದ್ದು ನನಗೆ ೧೫ ವರ್ಷವಾಗಿದ್ದಾಗ ಎಂದೇ ಇಟ್ಟುಕೊಳ್ಳಬೇಕು. ನನ್ನ ಸಹಪಾಠಿ—ಮತ್ತು ಅವನು ಸಾಯುವವರೆಗೂ ನನ್ನ ಆಪ್ತ ಸ್ನೇಹಿತ—ಗೋವಿಂದಸ್ವಾಮಿಯ ಸೋದರಮಾವನೋ ಚಿಕ್ಕಪ್ಪನೋ ವರದಾಚಾರ್ಯರ ಕಂಪೆನಿಯಲ್ಲಿ ನಟರಾಗಿದ್ದರು. ಅವರ ಕೃಪೆಯಿಂದ ನಮ್ಮಿಬ್ಬರಿಗೂ ಬಿಟ್ಟಿ ನಾಟಕ ನೋಡುವ ಅವಕಾಶ ಸಿಕ್ಕಿತು—ಅದಿಲ್ಲದಿದ್ದರೆ ನಾವು ನಾಟಕ ಶಾಲೆಗೆ ಪ್ರವೇಶಿಸುವ ಸಾಧ್ಯತೆಯೇ ಇರಲಿಲ್ಲ. ಆಗ 'ಗ್ಯಾಲರಿ ಪ್ರಭು'ಗಳ ಸೀಟಿಗೆ ಶುಲ್ಕ ನಾಲ್ಕಾಣೆ, ಇಂದಿನ ೨೫ ಪೈಸೆ. ಅದಷ್ಟನ್ನು ಕೂಡಿಸುವ ಶಕ್ತಿ ನಮ್ಮಿಬ್ಬರಿಗೂ ಇರಲಿಲ್ಲ. ನಾಟಕ ನೋಡಬೇಕೆಂಬ ಆಸೆ ಮಾತ್ರ ಉತ್ಕಟವಾಗಿತ್ತು.

ಆಗ ಮೈಸೂರು ಸಂಸ್ಥಾನದಲ್ಲಿ ವರದಚಾರ್ಯರ ಹೆಸರನ್ನು ಕೇಳದ ಪಾಪಿ ಯಾರೂ ಇರಲಿಲ್ಲ. ಅವರನ್ನಾಗಲಿ ಅವರ ಕಂಪೆನಿಯ ಇತರ ನಟರನ್ನಾಗಲಿ, ಬೀದಿಯಲ್ಲಿ ಕಾಣುವುದೇ ಒಂದು ಭಾಗ್ಯ ಎಂದು ನನ್ನಂಥ ಹುಡುಗರ ಭಾವನೆ. ನಾಟಕದವರೆಲ್ಲ ಯಾವುದೋ ಕನಸಿನ ಗಂಧರ್ವಲೋಕದಿಂದ ಬಂದ ಜನ! ಒಂದು ದಿನ ನನ್ನ ಮುಂದೆ ಸ್ವಲ್ಪ ದೂರದಲ್ಲಿ ಹೆಂಗಸರಂತೆ ತಲೆಗೂದಲನ್ನು ಬೆಳಸಿ ಬೈತಲೆ ತೆಗೆದು ಬಾಚಿ ಗಂಟು ಹಾಕಿಕೊಂಡು ಹೋಗುತ್ತಿದ್ದವರೊಬ್ಬರನ್ನು ನನ್ನ ಸ್ನೇಹಿತ ತೋರಿಸಿ ಹೇಳಿದ: "ನೋಡೋ, ಅವನೇ ಬೋಧರಾವ್; ವರದಾಚಾರ್ಯರ ಕಂಪೆನಿಯಲ್ಲಿ ರಾಣಿ ಪಾರ್ಟು ಮಾಡುತ್ತಾನೆ." ನಾನು ಕೂಡಲೇ ಸ್ವಲ್ಪ ದೂರ ಓಡಿಹೋಗಿ ಮತ್ತೆ ಹಿಂದಿರುಗಿ ಬೋಧರಾಯರ ಎದುರಿಗೆ ಬಂದೆ, ಅವರ ಮುಖ ನೋಡುವ ಪುಣ್ಯವನ್ನು ಕಟ್ಟಿಕೊಳ್ಳಲೆಂದು.

ನಾಟಕದವರ ಸುತ್ತ ಯುವಕರಿಗೆ ಕಂಡ—ಅಥವಾ ಯುವಕರು ಸೃಷ್ಟಿಸಿದ—ಪ್ರಭಾವಲಯ ಹಿರಿಯರ ಕಣ್ಣಿಗೆ ಕಾಣುತ್ತಿರಲಿಲ್ಲ. ಅವರು ನಾಟಕ ನೋಡುವ ವಿಷಯದಲ್ಲಿ ಉತ್ಸಾಹಿಗಳೇ ಹೌದು. ಆಗ ನಾಟಕ ನೋಡುವುದೆಂದರೆ ರಾತ್ರಿ ೧೦ ಗಂಟೆಯಿಂದ

ಬೆಳಗಿನ ಜಾವ ೩ ಘಂಟೆಯವರೆಗೂ ನಿದ್ದೆಗೆಡುವ ಪ್ರಮೇಯ. 'ಸಂಪೂರ್ಣ ರಾಮಾಯಣ' ದಂಥ ನಾಟಕವಾದರಂತೂ ಇಡೀ ರಾತ್ರಿ ನಿದ್ದೆಯಿಲ್ಲ. ಇಷ್ಟಾದರೂ ನಾಟಕ ಶಾಲೆ ಕಿಕ್ಕಿರಿದು ತುಂಬಿರುತ್ತಿತ್ತು. ವೈಯಕ್ತಿಕವಾಗಿ ಅನೇಕ ನಟರನ್ನು ಜನ ಗೌರವಿಸು ತ್ತಿದ್ದದ್ದೂ ನಿಜ. ಆಗ ನಾಟಕಕ್ಕೂ ಸಂಗೀತಕ್ಕೂ ನಿಕಟಸಂಬಂಧವಿತ್ತಷ್ಟೆ. ಬಿಡಾರಂ ಕೃಷ್ಣಪ್ಪನವರೂ ನಾಟಕದಲ್ಲಿ ಪಾರ್ಟುಮಾಡುತ್ತಿದ್ದರು—ನಾನು ಅವರನ್ನು ರಂಗಸ್ಥಳ ದಲ್ಲಿ ನೋಡಿದವನಲ್ಲ. ಚಿಕ್ಕರಾಮರಾಯರು (ಆ ಕಾಲದಲ್ಲಿ ಪ್ರಸಿದ್ಧ ಸಂಗೀತಗಾರರು) ಅರ್ಜುನನ (?) ಪಾರ್ಟುಮಾಡಿದ್ದನ್ನು ನೋಡಿದ್ದೆ; ಯಾವ ನಾಟಕದಲ್ಲೋ, ನೆನಪಿಲ್ಲ. ಮಹಾಭಾರತದ ಅರ್ಜುನ ಚಿಕ್ಕರಾಮರಾಯರಷ್ಟು ಚೆನ್ನಾಗಿ ಹಾಡುತ್ತಿದ್ದನೋ ಇಲ್ಲವೊ ಕಾಣೆ. ವ್ಯಾಸರು ಆ ವಿಷಯದಲ್ಲಿ ಮೌನ ತಾಳಿದ್ದಾರೆ. ಆದರೆ ಅವರ ಅರ್ಜುನ ಚಿಕ್ಕರಾಮರಾಯರಂತೆ ಕಡ್ಡಿಪೈಲ್ವಾನನಾಗಿದ್ದಿರಲಾರ—ಗಾಂಡೀವವನ್ನು ಎತ್ತುವ ಶಕ್ತಿ ಯಿರಬೇಕಲ್ಲ! ಚಿಕ್ಕರಾಮರಾಯರ ಮೈಕಟ್ಟಿಗೂ ಅರ್ಜುನನ ಪಾತ್ರದಲ್ಲಿ ಅವರ ಬಾಯಿಂದ ಹೊರಟ ವೀರಾಲಾಪಕ್ಕೂ ಅಷ್ಟಾಗಿ ಹೊಂದಿಕೆ ಇರಲಿಲ್ಲ. ಆದರೆ ಅಂದಿನ ಪ್ರೇಕ್ಷಕರನ್ನು ಪ್ರೇಕ್ಷಕರು ಎನ್ನುವುದಕ್ಕಿಂತ ಸ್ವಲ್ಪ ಹೆಚ್ಚಾಗಿ ಶ್ರೋತೃಗಳು ಎನ್ನಬೇಕು. ಚಿಕ್ಕರಾಮರಾಯರು ಕರ್ಣಾನಂದವನ್ನು ಕೊಡುತ್ತಿದ್ದರು, ಸಂಶಯವಿಲ್ಲ.

ಅದು ಹೇಗಾದರೂ ಇರಲಿ. ಕೃಷ್ಣಪ್ಪ, ಚಿಕ್ಕರಾಮರಾಯರಂಥವರು ಸಂಗೀತ ಪ್ರಪಂಚದಲ್ಲಿ ಹೇಗೋ ಹಾಗೇ ನಾಟಕ ಪ್ರಪಂಚದಲ್ಲೂ ಜನರ ಗೌರವಕ್ಕೆ ಪಾತ್ರರಾಗಿ ದ್ದರು. ವರದಾಚಾರ್ಯರು ಸೊಗಸಾಗಿ ಹಾಡುತ್ತಿದ್ದರಾದರೂ ಅವರು ಪ್ರಥಮತಃ ನಟರು. ಅವರನ್ನು ಜನ ಗೌರವಿಸುತ್ತಿದ್ದರು ಎಂದರೆ ಅದು ತೀರ ಅಲ್ಪಪ್ರಶಂಸೆ ಯಾದೀತು. ಅವರು ರಂಗಭೂಮಿಯ ಚಕ್ರವರ್ತಿ. ಇಷ್ಟಾದರೂ ಆಗಿನ ಹಿರಿಯರಿಗೆ ಒಟ್ಟಿನಲ್ಲಿ ನಾಟಕದವರು ಎಂದರೆ ಅವಮಾನಿಕೆ. ಕುಡಿತ, ವ್ಯಭಿಚಾರ, ಜೂಜು ಮುಂತಾದ 'ವ್ಯಸನ' (ಕೆಟ್ಟಚಾಳಿ)ಗಳಿಗೂ ನಟರಿಗೂ ಗಂಟುಹಾಕಿದ್ದರು. ಹುಡುಗ ನೊಬ್ಬ ನಾಟಕದವರೊಡನೆ ಓಡಾಡುತ್ತಿದ್ದನೆಂದರೆ ಅವನು ಕೆಟ್ಟುಹಾಳಾಗಿಹೋದ ಎಂದೇ ಜನರ ತೀರ್ಮಾನ! ಕಲಾಭಿಮಾನಿ ಎನ್ನಿಸಿಕೊಳ್ಳಬೇಕಾದರೆ ನಾಟಕ ನೋಡ ಬೇಕು. ಆದರೆ ನಟರನ್ನು ದೂರ ಇಟ್ಟಿರಬೇಕು. ಅಂದಿನ ವಾತಾವರಣದಲ್ಲಿ ಈ ವಿರೋಧಾಭಾಸ—ಅತಿ ತೀವ್ರವಾಗಿ ಅಲ್ಲದಿದ್ದರೂ—ಇತ್ತೆಂಬುದು ನಿಜ.

ಅವತ್ತಿನ ನಾಟಕ 'ಮನ್ಮಥವಿಜಯ.' ವರದಾಚಾರ್ಯರೇ ಮನ್ಮಥನ ಪಾರ್ಟು ಮಾಡುತ್ತಾರೆ. ಅದು ನನಗೆ ಗೊತ್ತಿತ್ತು. ಅವರನ್ನು ನೋಡಲು ಕಣ್ಣಲ್ಲಿ ಕಣ್ಣಿಟ್ಟು ಕೊಂಡು ಕಾದಿದ್ದೆ. ಆಗಿನ ಪರದೆ ಎತ್ತುವಂಥಾದ್ದು, ಪಕ್ಕಗಳಿಗೆ ಎಳೆದುಕೊಳ್ಳುವಂಥಾ ದ್ದಲ್ಲ. ಘಂಟೆಯ ಸದ್ದು ಕೇಳಿಸಿತು. ಪರದೆ ಸುರಳಿಸುರಳಿಯಾಗಿ ಮೇಲಕ್ಕೆದ್ದಿತು; ಹಾರ್ಮೋನಿಯಂ ಮೃದಂಗಗಳ ನಾದ ಕಿವಿಯನ್ನು ಮುತ್ತಿತು. ವಾಸ್ತವ ಪ್ರಪಂಚ ಏನಾಯಿತೋ ನನಗೆ ತಿಳಿಯದು. ಅದಕ್ಕೆ ಬದಲಾಗಿ ನೋಡುನೋಡುತ್ತಿದ್ದಂತೆಯೇ ದಿವ್ಯಸುಂದರವಾದ ಗಂಧರ್ವಲೋಕ ಪ್ರತ್ಯಕ್ಷವಾಯಿತು. ಅದು ಇಲೆಕ್ಟ್ರಿಕ್ ದೀಪಗಳಿಂದ, ಮುಖಚೂರ್ಣ—ಕೆನ್ನೆಗೆಂಪು—ತುಟಿಗೆಂಪುಗಳಿಂದ, ಬಣ್ಣದ 'ಸೀನರಿ'ಗಳಿಂದ ತಯಾರಾದ ಪ್ರಪಂಚ ಎನ್ನುವುದು ಈಚಿನ ತಿಳಿವಳಿಕೆ. ಅವತ್ತು ಆ ಕನಸಿನ ಲೋಕವೇ ಸತ್ಯ,

ವಾಸ್ತವ ಪ್ರಪಂಚ—ಅದು ಮಿಥ್ಯ ಎನ್ನುವುದಕ್ಕೆ ಅದರ ನೆನಪಿದ್ದರೆ ತಾನೆ! ಆ ಹೊಸ ಪ್ರಪಂಚದಲ್ಲಿ ಕಿವಿ "ಮಂಗಳ ಸಾ|ರಂಗಧರಾ|ರ್ಧಾಂಗ ಶಿವ|ಗಿರಿಶ (ಹಾಡಿನ ಸಾಹಿತ್ಯದಲ್ಲಿ ತಪ್ಪಿಲ್ಲವೆಂದು ಗ್ಯಾರಂಟಿ ಕೊಡಲಾರೆ) ಎಂದು ಆರಂಭವಾದ ವೃಂದಗಾನವನ್ನು ತುಂಬಿ ಕೊಳ್ಳುತ್ತಿತ್ತು ; ಕಣ್ಣು ವರದಾಚಾರ್ಯರನ್ನು ಹುಡುಕುತ್ತಿತ್ತು. ರಂಗಸ್ಥಳದಲ್ಲಿದ್ದವರ ಪೈಕಿ ಯಾರೊಬ್ಬರಲ್ಲೂ ವರದಾಚಾರ್ಯರಲ್ಲಿರಬೇಕಾದ ಲಕ್ಷಣಗಳು ಕಾಣಲಿಲ್ಲ. ಆ ಲಕ್ಷಣಗಳೇನೊ–ನನಗೆ ತಿಳಿಯದು. ಅಂತೂ ಅವರೊಬ್ಬರೂ ವರದಾಚಾರ್ಯರಲ್ಲ, ನನಗೆ ಆ ವಿಷಯದಲ್ಲಿ ಸಂದೇಹವಿಲ್ಲ. ಅವರು ರಂಗಸ್ಥಳಕ್ಕೆ ಬಂದದ್ದು ಎರಡನೆಯ ಅಥವಾ ಮೂರನೆಯ ದೃಶ್ಯದಲ್ಲಿ; ಬಂದು ನಾಲ್ಕು ಹೆಜ್ಜೆ ಇಡುವುದರೊಳಗೆ, ನಾಲ್ಕು ಮಾತಾಡುವುದರೊಳಗೆ, "ಇವರೇ ವರದಾಚಾರ್ಯರು" ಎಂದುಕೊಂಡೆ. ನನ್ನ ತೀರ್ಮಾನ ತಪ್ಪಾಗಲಿಲ್ಲ. ಉಳಿದ ಯಾರಲ್ಲೂ ಕಾಣದ ಏನೋ ಒಂದು ವೈಶಿಷ್ಟ್ಯವಿತ್ತು. ಅದರಲ್ಲಿ ಗಾಂಭೀರ್ಯ, ಸಹಜತೆ, ಸಭಾಕಂಪದ ನೆಳಲೂ ಇಲ್ಲದ ಆತ್ಮವಿಶ್ವಾಸ, ಮಾತಿನ ಏರಿಳಿತಗಳಲ್ಲಿ ಸ್ವಾಭಾವಿಕತೆ, ಇವೆಲ್ಲ ಸೇರಿದ್ದಿರಬೇಕು. ಅಂತೂ ಫೋಟೋವಿನಲ್ಲಿ ಕೂಡ ಎಂದೂ ನೋಡದಿದ್ದ ಅವರನ್ನು "ಇವರೇ ವರದಾಚಾರ್ಯರು" ಎಂದು ಗುರುತಿಸಬಹುದಾದಂಥ ವ್ಯಕ್ತಿತ್ವ ಅವರಲ್ಲಿತ್ತು. ಮೈಸೂರು ಪ್ರಾಂತದಲ್ಲಿ ನಾಟಕ ಸಂಸ್ಥೆಯೊಂದನ್ನು ಕಟ್ಟಿ ಸುದೀರ್ಘಕಾಲ ಅದನ್ನು ಯಶಸ್ವಿಯಾಗಿ ನಡೆಸಿದವರಲ್ಲಿ ಪ್ರಥಮ ಸ್ಥಾನ ಗುಬ್ಬಿವೀರಣ್ಣನವರಿಗೆ ಸಲ್ಲಬೇಕು. ಆದರೆ ಅಭಿನಯ ಕಲೆಯ ದೃಷ್ಟಿಯಿಂದ ಪ್ರಥಮಸ್ಥಾನ ಸಲ್ಲುವುದು ವರದಾಚಾರ್ಯರಿಗೆ. ಈ ಮಾತಿಗೆ ಆಧಾರ ಹದಿನೈದು ವರ್ಷದ ಹುಡುಗನ ಅನುಭವ ಮಾತ್ರವಲ್ಲ. ಆಮೇಲೂ ನಾನು ಅವರ ಕಂಪನಿಯ ಅನೇಕ ನಾಟಕಗಳನ್ನು—'ರಾಮವರ್ಮ ಲೀಲಾವತಿ', 'ನಿರುಪಮಾ', 'ಪ್ರಹ್ಲಾದ ಚರಿತ್ರೆ', 'ವಿಷ್ಣುಲೀಲೆ' ಮುಂತಾದವನ್ನು, ಕೆಲವನ್ನು ಮತ್ತೆ ಮತ್ತೆ, ನೋಡಿದ್ದೇನೆ. ಅವರು ಅಭಿನಯಿಸಿದ ನಾಟಕಗಳಲ್ಲಿ ನಾನು ಕೊನೆಯದಾಗಿ ನೋಡಿದ್ದು 'ಶಾಕುಂತಲ.' ನಾನು ಬಿ.ಎ. ಪ್ಯಾಸು ಮಾಡಿದ ವರ್ಷ (೧೯೨೨), ಪದವೀದಾನ ಮಹೋತ್ಸವದ ದಿನ, ಅವರು ನವಪದವೀಧರರನ್ನೆಲ್ಲ ಆಹ್ವಾನಿಸಿ 'ಶಾಕುಂತಲ' ನಾಟಕವನ್ನು ಆಡಿದರು. ಅವತ್ತಿನ ಅನುಭವ ಅಷ್ಟೇನೂ ಹಿತವೆನ್ನಿಸಲಿಲ್ಲ, ಆಚಾರ್ಯರಿಗೆ (ಅವರು ದುಷ್ಯಂತನ ಪಾರ್ಟುಮಾಡಿದರು) ವಯಸ್ಸಾಗಿತ್ತು. ದುಷ್ಯಂತ ಶಕುಂತಲೆಯನ್ನು ಮೊದಲ ಬಾರಿ ನೋಡಿದಾಗ ಅವನೇನೂ ಹೊಚ್ಚ ಹೊಸಪ್ರಾಯದ ಯುವಕನಲ್ಲ; ಆ ವೇಳೆಗಾಗಲಿ ಅವನು ಅನುಭವಿ. ಆದರೆ ೧೯೨೨ರಲ್ಲಿ ವರದಾಚಾರ್ಯರಿಗೆ ಆಗಿದ್ದಷ್ಟು ವಯಸ್ಸಾಗಿರಲಿಲ್ಲ—ಕಣ್ವರ ಆಶ್ರಮದಲ್ಲಿ ಶಕುಂತಲೆಯನ್ನು ಕಂಡ ದುಷ್ಯಂತನಿಗೆ. ಆಚಾರ್ಯರ ಅವತ್ತಿನ ರೂಪ, ದನಿ, ಎಲ್ಲ ಹೇಮಕೂಟದ ಆಶ್ರಮಕ್ಕೆ ಹೋದ ದುಷ್ಯಂತನಿಗೆ ಒಪ್ಪುವಂಥಾದ್ದು. ಅಂತೂ ನಾನೂ ನನ್ನ ಸ್ನೇಹಿತರೂ ಅವತ್ತು "ಅಯ್ಯೋ ಆಚಾರ್ಯರಿಗೆ ಮುಪ್ಪಡಸಿಬಿಟ್ಟಿತಲ್ಲ !" ಎಂದು ವಿಷಾದಪಡುತ್ತ ಮನೆಗೆ ಹೋದೆವು. ನಾನು ಅವರ ನಾಟಕವನ್ನು ಮೊದಲ ಸಲ ನೋಡಿದ ಕಾಲದಲ್ಲೇ ಅವರು ಯೌವನವನ್ನು ದಾಟಿದ್ದರು. ಅದರಿಂದಲೇ ಅವರು ರಾಮವರ್ಮನ (ರೋಮಿಯೋವಿನ) ಪಾರ್ಟು ಮಾಡಿದ್ದೂ ಶೋಭಿಸಲಿಲ್ಲ. ರೋಮಿಯೋವಿನಲ್ಲಿರಬೇಕಾದ ಎಳಸು ಅವರಲ್ಲಿ

ಕಾಣುತ್ತಿರಲಿಲ್ಲ. ಅಭಿನಯ ಕಲೆ ಸೊಗಸಾಗಿಯೇ ಇತ್ತಾದರೂ ಇಡೀ ನಾಟಕ ನಮ್ಮ ಮೇಲೆ ಬೀಸಬೇಕಾದ ಮಾಯೆಯನ್ನು ಬೀಸಲಿಲ್ಲ.

ಆ ಕಾಲದ ಜನರು ನಾಟಕದಲ್ಲಿ ಸಂಗೀತಕ್ಕೆ ಅಷ್ಟೊಂದು ಪ್ರಾಶಸ್ತ್ಯ ಕೊಟ್ಟದ್ದು ಸರಿಯೆ ಎಂಬ ಚರ್ಚೆ ಈಗ ಬೇಡ. ಜನರಿಗೆ ಸಂಗೀತ ಬೇಕಾಗಿತ್ತು. ವರದಾಚಾರ್ಯರು ಸ್ವತಃ ಹಾಡಿದ ಮಟ್ಟುಗಳು ಮಾತ್ರವಲ್ಲ, ನಾಗೇಂದ್ರರಾಯರು ಹಾಡುತ್ತಿದ್ದ 'ಯಮ ಘಾತಕನಿವನು, ಭೀತಿ ತೋರ್ಪನು, ಸೋತುದಲಾ ಕೈಕಾಲು' (ಪ್ರಹ್ಲಾದಚರಿತ್ರೆ), ಬೋಧರಾಯರು ಹಾಡುತ್ತಿದ್ದ 'ಪಸುಕಂದಾ ಸುಂದರಾ' (ಪ್ರಹ್ಲಾದಚರಿತೆ) ಮತ್ತು 'ಪ್ರಾಣೇಶನೆ, ಪೋಗಬೇಡವೊ, ಬೇಡಿಕೊಂಬೆನು' (ಮನ್ಮಥ ವಿಜಯ?)—ಕೊನೆಗೆ ಕುಡುಕರೂ ವಿದೂಷಕರೂ ಹಾಡುತ್ತಿದ್ದ ಒರಟು ಹಾಡುಗಳೂ ಸಹ—ಎಲ್ಲರ ಬಾಯಲ್ಲೂ ನಲಿಯುತ್ತಿದ್ದವು. ಅಂದ ಮೇಲೆ ನಾಟಕದ ಸಂಗೀತ ಜನರಲ್ಲಿ ನಿಜವಾಗಿಯೂ ಇದ್ದ ಬಯಕೆಯೊಂದನ್ನು ಪೂರೈಸುತ್ತಿತ್ತು. ತಮಿಳು ನಾಟಕವೊಂದರಲ್ಲಿ ನಟಿ (ನಟ?) ತಾನು ಹಾಡಬೇಕಾಗಿದ್ದ ಮಟ್ಟೊಂದನ್ನು ಹಾಡಿ ಮುಗಿಸಿದ. ಆಗ ಪ್ರೇಕ್ಷಕನೊಬ್ಬನಿಗೆ ಆ ನಟ ಚೆನ್ನಾಗಿ ಹಾಡುತ್ತಿದ್ದ, ಆದರೆ ನಾಟಕಕ್ಕೆ ಸಂಬಂಧಪಡದ, ಹಾಡೊಂದನ್ನು ಕೇಳಬೇಕು ಎನ್ನಿಸಿತಂತೆ. ಎಲ್ಲರೂ ಕೂಗಿದರು "ಜಯ ಜಯ ಗೋಕುಲಬಾಲ ಪಾಡಪ್ಪ" ಎಂದು ಅದನ್ನು ಹಾಡಿ ಮುಗಿಸುವವರೆಗೂ ನಾಟಕವನ್ನು ಮುಂದುವರಿಸುವುದು ಸಾಧ್ಯವಾಗ ಲಿಲ್ಲ! ಹಾಡು ಕೇಳುವ ಬಯಕೆ ಅಷ್ಟು ಉತ್ಕಟವಾಗಿತ್ತು.

ನನಗೂ ನಾಟಕದ ಮಟ್ಟುಗಳ ಹುಚ್ಚು ಬಲವಾಗಿಯೇ ಹಿಡಿದಿತ್ತು; ಆದರೆ ಆ ಕಾಲದಲ್ಲಿ ಕೂಡ 'ಡೈಲಾಗ್' (dialogue) ಹಾಡುಗಳು ತೀರ ಕೃತಕ ಎನ್ನಿಸಿತು. ಡೈಲಾಗ್‌ಗಳಿಗೆ ಆಗ ವಿಶೇಷ ಬೇಡಿಕೆಯಿದ್ದಿರಬೇಕು. ಕಂಪನಿಯವರು ತಮ್ಮ ನಾಟಕದ ಜಾಹೀರಾತು ನೋಟೀಸುಗಳನ್ನು ಅಚ್ಚುಮಾಡಿಸುವಾಗ 'ಡೈಲಾಗ್' ಎಂಬ ಪದವನ್ನು ('ಹೊಸ ಡ್ರೆಸ್, ಹೊಸ ಸೀನರಿ'ಗಳ ಜೊತೆಗೆ) ದಪ್ಪ ಅಕ್ಷರಗಳಲ್ಲಿ ಮುದ್ರಿಸುತ್ತಿದ್ದರು. ಆಗಿನ ನಾಟಕಗಳ ಪರಿಭಾಷೆಯಲ್ಲಿ 'ಡೈಲಾಗ್' ಎಂದರೆ ಕೇವಲ ಇಬ್ಬರ ಸಂಭಾಷಣೆ ಯಲ್ಲ. ಇಬ್ಬರಲ್ಲಿ ಒಬ್ಬನ ಸವಾಲಿಗೆ ಇನ್ನೊಬ್ಬನ ಜವಾಬು. ಸವಾಲು ಜವಾಬು ಗಳೆರಡಕ್ಕೂ ಸಂಗೀತವೇ ಮಾಧ್ಯಮವಾಗಬೇಕು, ಉದಾಹರಣೆ:

ಸವಾಲು: ಛಿ ನೀಚನೆ ದುರಾತ್ಮನೆ ಕಠೋರ ಖೂಳ ಹೇಡಿಯೆ,
ವಿನೀತಭಾವವನ್ನು ತೋರಿ ಮೋಸಗೈಯುತಿರ್ಪೆಯ!

ಜವಾಬು: ಭಲಾ ಭಲಾ ಬಲಾಗ್ರಣಿ, ಪ್ರತಾಪಶಾಲಿ ನೀನೆಯೆ!
ಬಲಾಬಲಂಗಳನ್ನು ನೋಡೆ ಕಾಲಮೀಗ ಬಂದುದೆ

ಈ ಡೈಲಾಗ್ ಯಾವ ನಾಟಕದ್ದು, ಅದನ್ನು ಹಾಡಿದವರು ಯಾರು, ಎಂಬುದೆಲ್ಲ ಮರೆತು ಹೋಗಿದೆ. ಅದನ್ನು ಕೇಳಿದಾಗ "ಇವರು ಜಗಳ ಆಡಬೇಕಾದರೆ ಸಾಫ್‌ಸೀದಾ ಕತ್ತಿ ಗಳನ್ನು ಹಿರಿದು ಬೀಸಬಾರದೆ? ಸಂಗೀತವೇಕೆ!" ಎಂದುಕೊಂಡದ್ದು ನೆನಪಿದೆ. ಹಾಡಿನ ಲಯಕ್ಕೆ ಸರಿಯಾಗಿ ಕತ್ತುಕುಣಿಸಿದ್ದೂ, ನಾನು ಮತ್ತು ನನ್ನ ಬಂಧು (ಮತ್ತು

ಸಹಪಾಠಿ) ಹರಿಯಪ್ಪನೂ ಅದೇ ಡೈಲಾಗನ್ನು ಹಾಡಿ ಕರ್ಜನ್ ಪಾರ್ಕಿನಲ್ಲಿ ಪುಟ್ಟನಾಟಕ ಆಡಿದ್ದು ಕೂಡ ನೆನಪಿದೆ! ಡೈಲಾಗನ್ನು ನಾನು ಹಳಿದದ್ದೂ ಉಂಟು, ಸವಿದದ್ದೂ ಉಂಟು.

ವರದಾಚಾರ್ಯರ ಹಾಡುಗಾರಿಕೆಯನ್ನು ಕುರಿತು ಒಂದೆರಡು ಮಾತು. ಈಗ ನಾನು ಹೇಳಲಿರುವುದು ನನಗೆ ಹದಿವಯಸ್ಸಿನಲ್ಲಿ ತೋರಿದ ಅಭಿಪ್ರಾಯವಲ್ಲ. ಆ ಕಾಲ ದಲ್ಲಿ 'ಭಲರೆ ಭಲರೆ ನಿಮ್ಮ ನುಡಿಗೆ ನಲಿಯುವೆನೀಗ' (ಮನ್ಮಥವಿಜಯ ?), 'ನಾಗವೇಣಿ ನಗರಿಗೆ ನಾ ಪೋಗಿ ಬರುವೆನೆ' (ಶಾಕುಂತಲ), 'ಪಾರಿತು ಪಾರಿತು ಘಡಮೃಗ ಪೋತ, ತೇರನದರ ಬಳಿ ಸೇರಿಸು ಸೂತ' (ಶಾಕುಂತಲ), 'ನೀಲಕುಂತಳೆ, ಲೋಲಲೋಚನೆ, ಬಾಲಿಕಾಮಣಿ' (ನಿರುಪಮ ?) ಇತ್ಯಾದಿ ಮಟ್ಟುಗಳನ್ನೂ 'ಹರಿಯನದಾವಂ ಕೆಣಕಿದಂ' ಮುಂತಾದ ಕಂದ ಪದ್ಯಗಳನ್ನೂ ಅವರ ಬಾಯಿಂದ ಕೇಳಿದಾಗ ನನ್ನ ಅನುಭವ: ಆನಂದ ವೊಂದೇ. ಇದು ಬಹುಶಃ ಆಗಿನ ನಾಟಕಾಭಿಮಾನಿಗಳೆಲ್ಲರ ಅನುಭವ. ಕೆಲವರಂತೂ—ವರದಾಚಾರ್ಯರ ನಾಟಕಗಳನ್ನು ಹತ್ತಾರುಸಾರಿ ನೋಡಿದ್ದವರು—'ಹರಿಯನದಾವಂ ಕೆಣಕಿದಂ' ಎಂಬ ಪದ್ಯವನ್ನು ಹಾಡುವ ಹೊತ್ತಿಗೆ ಬಂದು ಅದನ್ನು ಕೇಳಿದ ಮೇಲೆ ಹೊರಟುಹೋಗುತ್ತಿದ್ದರಂತೆ! ಅಂದ ಮೇಲೆ ಆಚಾರ್ಯರ ಹಾಡುಗಾರಿಕೆಯಲ್ಲಿ ಏನೋ ಒಂದು ವೈಶಿಷ್ಟ್ಯ, ಒಂದು ಮೋಡಿ, ಇತ್ತೆಂಬುದು ಸ್ಪಷ್ಟ. ಅವರ ಮಟ್ಟುಗಳಲ್ಲಿ ಕೆಲವನ್ನು ಜಿ. ನಾಗೇಶರಾಯರೂ ಬೆಳಕವಾಡಿ ಶ್ರೀನಿವಾಸಯ್ಯಂಗಾರ್ಯರೂ ಹಾಡಿದ್ದನ್ನು ಕೇಳಿ ದ್ದೇನೆ. ಆದರೆ ಅವರಲ್ಲಿ ಅನುಕರಣೆಯ ಕಳಂಕ ಎದ್ದು ಕಾಣುತ್ತಿತ್ತು. ಆಚಾರ್ಯರ ಹಾಡುಗಾರಿಕೆಯ 'ಮಜ'ವನ್ನು ಇತರರು ಯಾರೂ ಸಾಧಿಸಲಿಲ್ಲ.

ಆಗ ಮೈಕ್ರೊಫೋನುಗಳೂ ಧ್ವನಿವರ್ಧಕಗಳೂ ಇರಲಿಲ್ಲವಷ್ಟೆ. ಆದರೂ ಆಚಾರ್ಯರ ಗಾಯನ ರಂಗಮಂದಿರದ ಮೂಲೆಮೂಲೆಯಲ್ಲೂ ಮೊಳಗುತ್ತಿತ್ತು. ಅವರ ಶಾರೀರ ಅಷ್ಟು ಶಕ್ತಿಯುತವಾದದ್ದು, ಉಚ್ಚಾರಣೆ ಅಷ್ಟು ಸ್ಫುಟವಾದದ್ದು. ಅವರು ಉಚ್ಚಕಂಠದಲ್ಲಿ, ತಾರದಲ್ಲಿ, ಹಾಡುತ್ತಿದ್ದದ್ದೇ ಹೆಚ್ಚು. ಶಾಸ್ತ್ರೀಯ ಸಂಗೀತದಲ್ಲಿ ನುರಿತು ಹೆಸರುಪಡೆದವರು ಕೂಡ ಆಚಾರ್ಯರ ಗಾಯನದ ಆಕರ್ಷಣೆಗೆ ಸಿಕ್ಕಿದ್ದರು. ಪ್ರೇಕ್ಷ ಕಾಂಗಣದಲ್ಲಿ ಮೊದಲಸಾಲಿನ ಕುರ್ಚಿಯಲ್ಲಿ ಕೂತು ಬಿಡಾರಂ ಕೃಷ್ಣಪ್ಪನವರು ತಲೆ ದೂಗಿದ್ದನ್ನು ನಾನೇ ನೋಡಿದ್ದೇನೆ. ಆದರೂ ಮೂರನೆಯ ದಶಕದ ಆದಿಭಾಗದಲ್ಲಿ—೧೯೨೦–೨೫ರ ಸುಮಾರಿನಲ್ಲಿ—ಆಚಾರ್ಯರ ಗಾಯನವನ್ನು ಕುರಿತಂತೆ ನನ್ನ ಅಭಿ ಪ್ರಾಯ ಬದಲಾಯಿತು. ಅದು ಶ್ರುತಿಶುದ್ಧವಾದದ್ದು ಎನ್ನುವುದಕ್ಕೆ ಅದರ ಇಂಪೇ ಸಾಕ್ಷಿ. ಅದು ತಾಳಬದ್ಧವಾಗಿಯೂ ಇದ್ದಿರಬೇಕು—ಅದನ್ನು ನಿರ್ಣಯಿಸುವಷ್ಟು ಜ್ಞಾನ ನನಗಿರಲಿಲ್ಲ. ಅದು ಶಾಸ್ತ್ರೀಯ (classical music) ಸಂಗೀತವಲ್ಲ—ತ್ಯಾಗರಾಜರ, ದೀಕ್ಷಿತರ ಕೃತಿಗಳನ್ನು ಹಾಡುವ ಸಂಗೀತ ಕಚೇರಿಗಳಲ್ಲಿ ನಾಟಕದ ಮಟ್ಟುಗಳು ಸೇರ ಲಾರವು. ಸಂಗೀತ ವಿದ್ವಾಂಸರು ರಾಗಾಲಾಪನೆ ಮಾಡುತ್ತಿರುವಾಗ ನಡುವೆ ನಾಟಕದ ಮಟ್ಟುಗಳ ಲಯ ಸುಳಿದುಹೋಗುವುದು ಸಾಧ್ಯಮಾತ್ರವಲ್ಲ, ಸಂಭವವೂ ಹೌದು. ಆದರೂ ಶಾಸ್ತ್ರೀಯ ಸಂಗೀತ ಕಚೇರಿಯ ವಾತಾವರಣವೇ ಬೇರೆ, ನಾಟಕದ ಮಟ್ಟುಗಳ—ಅವನ್ನು ಎಷ್ಟೇ ಚೆನ್ನಾಗಿ ಹಾಡಲಿ—ವಾತಾವರಣವೇ ಬೇರೆ. ತ್ಯಾಗರಾಜರನ್ನು

ಕುರಿತ ನಾಟಕವೊಂದನ್ನು ಆಡಿದರೆ ಅದರಲ್ಲಿ ತ್ಯಾಗರಾಜರ ಕೃತಿಗಳನ್ನು ಹಾಡಲೇ ಬೇಕಾಗುತ್ತದೆ. ಆದರೆ ನಾಟಕದಲ್ಲಿ ಬಂದ ಮಾತ್ರಕ್ಕೆ ಅದು 'ಮಟ್ಟು' ಆಗುವುದಿಲ್ಲ. ಶಾಸ್ತ್ರೀಯ ಸಂಗೀತವನ್ನು ನಾಟಕಕ್ಕೆ ತರುವುದು ಸಾಧ್ಯ; ಆದರೆ 'ಎಳೆಚಿಗುರೆ ಬಾ, ಬಾ ಬಾರೆ ನೀರೆ' (ಇದು 'ಮಟ್ಟು')ಯನ್ನು ಶಾಸ್ತ್ರೀಯ ಸಂಗೀತದ ಕಚೇರಿಗೆ ತರಲಾಗುವುದಿಲ್ಲ.

ವರದಾಚಾರ್ಯರು ಪ್ರಥಮತಃ ನಟರು; ತಮ್ಮ ಗಾಯನ ನಾಟಕಕ್ಕೆ ಉಚಿತವಾಗಿರಬೇಕು ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡೇ ಹಾಡುತ್ತಿದ್ದರು, ಅದ್ಭುತವಾಗಿ ಹಾಡುತ್ತಿದ್ದರು. ಆದರೆ—ಅವರು ಸಂಗತಿಗಳನ್ನು ಹಾಕಿಕೊಂಡು 'ಭಲರೆ ಭಲರೆ' ಎಂದು ಹಾಡಲಾರಂಭಿಸಿದೊಡನೆ ನಾವು ಪ್ರೇಕ್ಷಕ-ಶ್ರೋತೃಗಳಾಗಿರುವುದನ್ನು ಬಿಟ್ಟು ಕೇವಲ ಶ್ರೋತೃಗಳು ಮಾತ್ರವಾಗುತ್ತಿದ್ದೆವು. ನಾಟಕದ ಸನ್ನಿವೇಶ ಎಂಥದ್ದು, ಆ ಸನ್ನಿವೇಶಕ್ಕೆ ಹಾಡು ಹೇಗೆ ಹೊಂದಿಕೊಳ್ಳುತ್ತದೆ, ಇತ್ಯಾದಿಗಳೆಲ್ಲ ನಮ್ಮ ಗಮನದಿಂದ ಜಾರಿ ಹೋಗುತ್ತಿದ್ದವು. ಘನವಿದ್ವಾಂಸನೊಬ್ಬ ವಿಸ್ತಾರವಾಗಿ ಯಾವುದಾದರೊಂದು ರಾಗವನ್ನು—ಮುಖಾರಿಯನ್ನು—ಆಲಾಪನೆ ಮಾಡಿದನೆನ್ನಿ, ನಮಗೆ ಪ್ರಿಯವಾದ ಕೃತಿಯೊಂದನ್ನು—'ಏಲಾವತಾರ' ಅಥವಾ 'ಎಂತನಿ ನೇ ವರ್ಣಿಂತುನು'—ಎತ್ತಿಕೊಂಡನೆನ್ನಿ. ಅಗಬೇಡಿದ ವರವನ್ನು ಪಡೆದವರಂತೆ ನಾವು ತೃಪ್ತಿಯಿಂದ 'ಆಹಾ' ಎಂದುಕೊಂಡು, ಕಿವಿಯೊಂದು ಹೊರತು ಇತರ ಇಂದ್ರಿಯಗಳಿಗೆ ಬಿಡುವುಕೊಟ್ಟು (ನಮ್ಮ ಅರಿವಿಲ್ಲದೆಯೇ ಕಣ್ಣು ಮುಚ್ಚಿಕೊಳ್ಳುವುದುಂಟು!), ಮೈಮನಗಳ ಬಿಗುಪನ್ನು ಸಡಿಲಿಸಿ ಆ ರಾಗಕ್ಕೂ ಕೃತಿಗೂ ನಮ್ಮನ್ನು ಒಪ್ಪಿಸಿಕೊಳ್ಳುತ್ತೇವೆ. ಆಚಾರ್ಯರ ಗಾನದಲ್ಲಿ ಭಾವದ ದಟ್ಟಣೆಯಾಗಲಿ ತೀವ್ರತೆಯಾಗಲಿ ಎಂದೂ ಆ ಮಟ್ಟವನ್ನು ತಲಪಲಿಲ್ಲ. (ತಲಪಬೇಕಾಗಿತ್ತೆಂದು ನಾನು ಸೂಚಿಸುತ್ತಿಲ್ಲ.) ಆದರೂ ಸ್ವಲ್ಪ ಕೆಳಮಟ್ಟದಲ್ಲಿ ಅದರ ಪರಿಣಾಮ ಮೇಲೆ ಹೇಳಿದಂತೆಯೇ ಆಗುತ್ತಿತ್ತು. ಅಂದರೆ, ಕಿವಿಯೊಂದೇ ಹೆಚ್ಚು ಕ್ರಿಯಾಶೀಲವಾಗುತ್ತಿತ್ತು; ನಮ್ಮನ್ನು ನಾವು ಗಾನಕ್ಕೆ ಒಪ್ಪಿಸಿಬಿಡುತ್ತಿದ್ದೆವು.

ಹೀಗೆ ನಾವು ನಾಟಕವನ್ನು ಮರೆತು ಪರ-ವಶರಾಗಬೇಕಾದರೆ ಆ 'ಪರ' (ಸಂಗೀತ) ಉತ್ತಮಗುಣವುಳ್ಳದ್ದೇ ಆಗಬೇಕು. ಆಚಾರ್ಯರ ಗಾನದಲ್ಲಿ ಆ ಮಟ್ಟದ ಗುಣವಿತ್ತು. ಇದು ಆ ಗಾನಕ್ಕೆ ಸಲ್ಲಬೇಕಾದ ಪ್ರಶಂಸೆ; ಮತ್ತು ಅದರಲ್ಲಿ ಕಂಡು ಬರುವ ದೋಷ! ದೋಷ ಎನ್ನುವುದಕ್ಕೆ ಕಾರಣ: ನಾವು ರಂಗಮಂದಿರಕ್ಕೆ ಹೋದದ್ದು ನಾಟಕವನ್ನು ನೋಡುವುದಕ್ಕೆ. ನಾಟಕದ ಸನ್ನಿವೇಶಗಳಿಗೆ ಗಾನ ಪುಷ್ಟಿ ಕೊಡುವಂತಿರಬೇಕೇ ಹೊರತು ಅವನ್ನು ಮರೆಸುವಂತಿರಬಾರದು; ನಾಟಕದ ಅಂಗವಾಗಿ ಬರಬೇಕೇ ಹೊರತು ಅದರ ಸ್ಥಾನವನ್ನು ತಾನೇ ಆಕ್ರಮಿಸಬಾರದು. ಈ ಬಗೆಯ ವಿಚಿತ್ರದೋಷ—ಗುಣದಿಂದ ಉದ್ಭವಿಸಿದ ದೋಷ—ಕಾಣಬೇಕಾದರೆ ವರದಾಚಾರ್ಯರಂಥ ಪ್ರತಿಭಾಶಾಲಿಗಳಲ್ಲಿ ಮಾತ್ರ. ಅವರು ಈ ವಿಷಯದಲ್ಲಿ ಆದರ್ಶದ ಮಟ್ಟಕ್ಕೆ ಏರಲಿಲ್ಲ; ಆದರೆ ಆದರ್ಶಕ್ಕೆ ಅವರಷ್ಟು ಹತ್ತಿರ ಮತ್ತಾರೂ ಬರಲಿಲ್ಲ—ಒಬ್ಬರ ಹೊರತು.

ಆ ಒಬ್ಬರು: ಆಂಧ್ರಪ್ರದೇಶದ ಪ್ರಸಿದ್ಧ ನಟರಾದ ಸ್ಥಾನಂ ನರಸಿಂಹರಾಯರು. ಅವರು 'ರಾಣಿ ಪಾರ್ಟು' (ಅಂದರೆ ನಾಟಕದಲ್ಲಿ ಮುಖ್ಯವಾದ ಸ್ತ್ರೀಪಾತ್ರ, ಅದು

ಾಣೆಯಮಾಗಲಿ ಆಗದಿರಲಿ) ವಹಿಸುತ್ತಿದ್ದರು. ಆವರ ಕಂಪೆನಿಯವರು ಆಡಿದ ಎರಡು ಾಟಕಗಳನ್ನು ನಾನು ನೋಡಿದ್ದೆ. ಒಂದರ ಹೆಸರು: 'ಶ್ರೀಕೃಷ್ಣಪಾರಿಜಾತ'. (ನನ್ನ ೆನಪನ್ನು ಪೂರ್ತಿ ನೆಚ್ಚಲಾರೆ). ನರಸಿಂಹರಾಯರು ಸತ್ಯಭಾಮೆಯ ಪಾರ್ಟು ಾಡುತ್ತಿದ್ದರು. ಅವರು ಹಾಡುತ್ತಿದ್ದ ಮಟ್ಟುಗಳಲ್ಲಿ 'ಮೀರಜಾಲಗಲಡಾ, ನಾಯಾ ತಿ' ಎಂಬುದು ಈಗಲೂ ನೆನಪಿನಲ್ಲಿ ನಿಂತಿದೆ. ಅದನ್ನು ಅವರು (ಮೋಹನ ರಾಗದಲ್ಲಿ) ಾಡಿದಾಗ ನಾವು—ಪ್ರೇಕ್ಷಕರು—ನಾಟಕವನ್ನು ನೋಡುತ್ತಲೂ ಇದ್ದೆವು, ಕೇಳು ್ತಲೂ ಇದ್ದೆವು. ಹಾಡುಗಾರಿಕೆಯಲ್ಲಿ ನಾಟಕ ಅವಿಭಾಜ್ಯವಾಗಿ ಸೇರಿತ್ತು. ಆ ಾನವೂ ಶಾಸ್ತ್ರೀಯ ಸಂಗೀತದ ಕಚೇರಿಗೆ ಹೊಂದತಕ್ಕದ್ದಲ್ಲ; ಆದರೆ ನಾಟಕಕ್ಕೆ ೊಗಸಾಗಿ ಹೊಂದುತ್ತಿತ್ತು. ಸಂಗೀತಕ್ಕೆ ನಾಟಕದ ಗುಣವನ್ನು ಯಶಸ್ವಿಯಾಗಿ ಾನ ಮಾಡುವುದರಲ್ಲಿ, ಗಾನ–ನಾಟಕಗಳ ಹದವಾದ ಮಿಲನವನ್ನು ಸಾಧಿಸುವುದರಲ್ಲಿ, ರಸಿಂಹರಾಯರು ವರದಾಚಾರ್ಯರನ್ನು ಮೀರಿಸಿದರು.

ನಾನು ಕಂಡ ನಟರಲ್ಲಿ ಪ್ರಥಮ ದರ್ಜೆಯವರೆಂದರೆ ವರದಾಚಾರ್ಯರು ಮತ್ತು ್ಥಾನಂ ನರಸಿಂಹರಾಯರು. ಇಬ್ಬರಲ್ಲೂ ಉನ್ನತ ಮಟ್ಟದ ಪ್ರತಿಭೆಯಿತ್ತು. ತಾವು ಭಿನಯಿಸುತ್ತಿದ್ದ ಪಾತ್ರವನ್ನು ತಮ್ಮ ಮನಸ್ಸಿನಲ್ಲಿ ಸೃಷ್ಟಿ ಮಾಡಿಕೊಳ್ಳುವ, ಮತ್ತು ಸೃಷ್ಟಿ ಪ್ರೇಕ್ಷಕರ ಮನಸ್ಸಿನಲ್ಲಿ ಪುನಃ ಸೃಷ್ಟಿಯಾಗುವಂತೆ ಅಭಿನಯಿಸುವ ಶಕ್ತಿಯನ್ನು ಬ್ಬರೂ ಪಡೆದಿದ್ದರು. ಆ ಶಕ್ತಿಗೆ ಒಂದು ಉದಾಹರಣೆಯೆಂದರೆ 'ಪ್ರಹ್ಲಾದ ಚರಿತ್ರೆ'ಯ ಂದು ಸಂದರ್ಭದಲ್ಲಿ ಆಚಾರ್ಯರು ಅಭಿನಯಿಸಿದ ರೀತಿ. ಹಿರಣ್ಯಕಶಿಪು ರೋಷದಿಂದ ್ರಹ್ಲಾದನನ್ನು "ನಿನ್ನ ಹರಿ ಎಲ್ಲ ಕಡೆಯಲ್ಲೂ ಇದ್ದಾನೆ ಎಂದೆಯಲ್ಲ, ಕಂಬದಲ್ಲಿ ್ದಾನೊ?" ಎಂದು ಕೇಳುತ್ತ ಕಂಬವನ್ನು ಒದೆಯುತ್ತಾನೆ. ಆಗ ಒಂದು 'ಕಟ್‌ಸೀನ್': ಂಬ ಇಬ್ಭಾಗವಾಗಿ ನರಸಿಂಹನ ಭಯಂಕರ ಮೂರ್ತಿ ಕಾಣಿಸಿಕೊಳ್ಳುತ್ತದೆ. ಹಿರಣ್ಯ ಶಿಪು ಹೆದರಿಯಲ್ಲ; ಹಿಂದೆ ಮುಂದೆ ನೋಡದೆ ಕಾಳಗಕ್ಕೆ ನುಗ್ಗುತ್ತಾನೆ, ಸಾಯುತ್ತಾನೆ —ವರದಾಚಾರ್ಯರು ಹೀಗೆ ಅಭಿನಯಿಸಿದ್ದನ್ನು ನಾನು ಒಂದೆರಡು ಸಾರಿ ನೋಡಿದ್ದೆ. ್ವಲ್ಪ ಕಾಲ ಕಳೆದಮೇಲೆ ಮತ್ತೆ ಅದೇ ನಾಟಕವನ್ನು ನೋಡಿದಾಗ ಆಚಾರ್ಯರು ತಮ್ಮ ಅಭಿನಯದಲ್ಲಿ ಒಂದು ಬದಲಾವಣೆ ಮಾಡಿಕೊಂಡಿದ್ದರು. ನರಸಿಂಹನನ್ನು ಂಡೊಡನೆ ಅವನ ಮೇಲೆ ನುಗ್ಗುವಂತೆ ಒಂದು ಹೆಜ್ಜೆಯಿಟ್ಟರು. ಅನಂತರ ಅರೆ ಕ್ಷಣ ್ತಬ್ಧರಾಗಿ, ಪ್ರಹ್ಲಾದನ ಕಡೆ ನೋಡಿ, ಅವನನ್ನು ಎತ್ತಿ ಮುದ್ದಿಟ್ಟು ಮತ್ತೆ ನರಸಿಂಹನ ಡೆಗೆ ನುಗ್ಗಿದರು. ನರಸಿಂಹನನ್ನು ಕಂಡ ಕ್ಷಣವೇ ತನ್ನ ಕಥೆ ಮುಗಿಯಿತೆಂದು ಹಿರಣ್ಯ ಶಿಪುವಿಗೆ ತಿಳಿಯಿತು. ಪ್ರಹ್ಲಾದನಮೇಲೆ ಹಿಂದೆ ಎಷ್ಟೇ ಕೋಪಗೊಂಡಿರಲಿ, ಅವನು ತನ್ನ ಮಗ; ವ್ಯಾಮೋಹ ಇದ್ದೇ ಇತ್ತು. ಇನ್ನು ಮುಂದೆ ಅವನನ್ನು ನೋಡುವಂತಿಲ್ಲ. ೊನೆಯ ಮುತ್ತೊಂದನ್ನು ಸೆಳೆದುಕೊಳ್ಳುವ ಆಸೆ—ಈ ಭಾವನೆಗಳಿಗೆಲ್ಲ ಆಚಾರ್ಯರು ಭಿವ್ಯಕ್ತಿ ಕೊಟ್ಟರು. ಹಿಂದೆ ಆಚಾರ್ಯರಿಗೆ ಹಿರಣ್ಯಕಶಿಪುವಿನ ಪಾತ್ರ ಪೂರ್ತಿ ರ್ಥವಾಗಿರಲಿಲ್ಲ. ಅವನ ದರ್ಪ, ಅಹಂಕಾರ, ಅಂಧಶ್ರದ್ಧೆಗಳಿಂದ ಮುಚ್ಚಿಹೋಗಿದ್ದ ಾನವತೆಯ ಅರಿವು ಆಚಾರ್ಯರಲ್ಲಿ ಅವತ್ತು ಜಾಗ್ರತವಾಯಿತು. ಹಿರಣ್ಯಕಶಿಪುವಿನ ಾತ್ರದ ಸೃಷ್ಟಿ ಅಂದು ಪೂರ್ಣವಾಯಿತು.

೧೯೫೪–೫೫ ರ ಸುಮಾರಿನಲ್ಲಿ ಗುಬ್ಬಿವೀರಣ್ಣನವರು 'ದಶಾವತಾರ' ನಾಟಕದ ಪ್ರದರ್ಶನವನ್ನು ಬೆಂಗಳೂರಿನಲ್ಲಿ ಆರಂಭಿಸಿದಾಗ (ಅದೇ ಆ ನಾಟಕದ ಮೊದಲ ಪ್ರದರ್ಶನವೋ ಅಥವಾ ಆ 'ಸೀಸನ್'ಗೆ ಅದು ಮೊದಲ ಪ್ರದರ್ಶನವೋ, ಸರಿಯಾಗಿ ನೆನಸಿಲ್ಲ) ಅಧ್ಯಕ್ಷತೆ ವಹಿಸಲು ನನ್ನನ್ನು ಆಹ್ವಾನಿಸಿದ್ದರು. ಅವತ್ತು ನಾನು ಮಾತಾಡಿದಾಗ ಮೇಲಿನ ಪ್ರಸಂಗವನ್ನು ಉದಾಹರಿಸಿದೆ. ವೀರಣ್ಣನವರು "ಬಹಳ ಒಳ್ಳೆಯ ಉದಾಹರಣೆ ಕೊಟ್ಟಿರಿ, ನಾಟಕ ಬರೆದವನು ಪಾತ್ರಗಳನ್ನು ಅರ್ಧ ಮಾತ್ರ ಸೃಷ್ಟಿ ಮಾಡಿರುತ್ತಾನೆ. ಆ ಕೆಲಸವನ್ನು ಪೂರೈಸುವುದು ನಟನಿಗೆ ಸೇರಿದ್ದು" ಎಂದರು.

ಸ್ಥಾನಂ ನರಸಿಂಹರಾಯರು ಬಂದಿದ್ದಾಗ ನನ್ನ ಹಿರಿಯ ಮತ್ತು ಆಪ್ತ ಸ್ನೇಹಿತರಾದ ರಾಳ್ಲಪಲ್ಲಿ ಅನಂತಕೃಷ್ಣ ಶರ್ಮರ ಸೂಚನೆಯಂತೆ ಮೈಸೂರಿನ ಯೂನಿವರ್ಸಿಟಿ ಯೂನಿಯನ್ನಿನವರೋ ಅಥವಾ ಕರ್ಣಾಟಕ ಸಂಘದವರೋ ರಾಯರ ಭಾಷಣವನ್ನು ಏರ್ಪಡಿಸಿದರು. ಭಾಷಣ ಬಹಳ ವಿಚಾರ ಪ್ರಚೋದಕವಾಗಿತ್ತು. ಅವರು "ಯಾವ ಕಲೆಯಲ್ಲೇ ಆಗಲಿ, ಭಾವಕ್ಕೆ ಅಭಿವ್ಯಕ್ತಿ ಕೊಡುವಾಗ 'ನಿರೋಧ'ದ ಅಂಶ ಇರಬೇಕು" ಎಂದು ಹೇಳಿದ್ದು ನೆನಪಿನಲ್ಲಿದೆ. ಭಾಷಣದ ವಿವರಗಳು ಮರೆತುಹೋಗಿವೆ; ಆದರೆ ರಾಯರು ಪ್ರತಿಪಾದಿಸಿದ 'ನಿರೋಧ' ತತ್ವವನ್ನು ನಾನು ಒಪ್ಪುವವನು. ಅವರು ಬಳಸಿದ 'ನಿರೋಧ' ಎಂಬ ಪದಕ್ಕೆ ಅವರ ಮನಸ್ಸಿನಲ್ಲಿದ್ದ ಅರ್ಥ 'ಸಂಪೂರ್ಣವಾಗಿ ತಡೆ ಹಾಕುವುದು' ಎಂದಲ್ಲ, ಅದು ಸ್ಪಷ್ಟ. ಬಹುಶಃ ಆ ಪದಕ್ಕೆ ಬದಲಾಗಿ 'ನಿಯಂತ್ರಣ' ಎಂಬ ಪದವನ್ನು ಬಳಸುವುದು ಉತ್ತಮ. ಯಾವ ಭಾವವಾಗಲಿ ಎರಡು ಮೂರು ನಿಮಿಷ ಅಸ್ತಿತ್ವದಲ್ಲಿದ್ದರೆ, ಅದು ಸರಳು ಹೊಡೆದಂತೆ ನೇರವಾಗಿ ಸಾಗಿ ಜ್ವಲಿಸುತ್ತಿರುವುದಿಲ್ಲ. ಕೆಟ್ಟ ದಾರಿಗೆ ಬಿದ್ದ ಮಗನ ಮೇಲೆ ತಂದೆ ಕೋಪಗೊಂಡಿದ್ದಾನೆ ಎಂದಿಟ್ಟುಕೊಳ್ಳೋಣ. ತಂದೆ ಮಾತಾಡುವಾಗ ಅವನ ಮನಸ್ಸಿನಲ್ಲಿರುವ ಭಾವ ಬೆರಕೆಯಿಲ್ಲದ, ತಡೆಯಿಲ್ಲದ, ಅಪ್ಪಟ ಕೋಪವಾಗಿರುವುದಿಲ್ಲ. ನಡುವೆ ಸಮಾಧಾನ ಹೇಳುವ ಪ್ರವೃತ್ತಿ ಅನುನಯ, ಮರುಕ, ಕಹಿನಗೆ, —ಇವೆಲ್ಲ ಸಂಚಾರಿಗಳಾಗಿ ಸುಳಿದು ಹೊರಟುಹೋಗುತ್ತವೆ. ಅವು ಕೋಪದಿಂದ ಪ್ರಭಾವಿತವಾಗಿರುತ್ತವೆ, ಕೋಪ ಅವುಗಳಿಂದ ಪ್ರಭಾವಿತವಾಗುತ್ತದೆ. ನಟ ಇವೆಲ್ಲಕ್ಕೂ ಅಭಿವ್ಯಕ್ತಿಕೊಡಬೇಕು. ಭಾವ ನೇರವಾಗಿ ಬೆರಕೆಯಿಲ್ಲದೆ ಜ್ವಲಿಸಿದಾಗಲೂ ನಟ ಅದರಲ್ಲಿ ಲೀನನಾಗದೆ ದೂರ ನಿಂತು ಅದನ್ನು ನಿಯಂತ್ರಿಸಬೇಕು. ಇಲ್ಲದಿದ್ದರೆ ಭಾವ ಅವನನ್ನು ನಿಯಂತ್ರಿಸುತ್ತದೆ; ಅವನಿಗೆ ಸೃಷ್ಟಿಕಾರ್ಯ ಸಾಧ್ಯವಾಗುವುದಿಲ್ಲ.

ಇವೆಲ್ಲ ನರಸಿಂಹರಾಯರ ಮನಸ್ಸಿನಲ್ಲಿದ್ದಿರಬೇಕು. ಷೇಕ್‌ಸ್ಪಿಯರ್‌ನ 'ಒಥೆಲೊ' ನಾಟಕದ ಪ್ರದರ್ಶನವೊಂದರಲ್ಲಿ ಪ್ರಸಿದ್ಧ ನಟ ಹೆನ್ರಿ ಅರ್ವಿಂಗ್ ಒಥೆಲೋವಿನ ಪಾರ್ಟುಮಾಡುತ್ತಿದ್ದ; ಎಲನ್ ಟೆರಿ ಡೆಸ್ಡಿಮೋನಳ ಪಾರ್ಟು ಮಾಡುತ್ತಿದ್ದಳು. ಈಗ ನಮಗೆ ಪ್ರಸಕ್ತವಾದ ಸಂದರ್ಭ (ನನಗೆ ನೆನಪಿರುವಮಟ್ಟಿಗೆ) ಇದು: ಒಥೆಲೊ ಡೆಸ್ಡಿಮೋನಳನ್ನು ಕೊಲ್ಲಬೇಕೆಂದು ನಿಶ್ಚಯಿಸಿದ್ದಾಗಿದೆ. ನಿದ್ರಿಸುತ್ತಿರುವ ಡೆಸ್ಡಿಮೋನಳ ಮುಖದೆಡೆಗೆ ಬಾಗಿ ಕಣ್ಣೀರು ಕರೆಯುತ್ತಲೇ ಅವಳಿಗೆ ಮುತ್ತಿಟ್ಟು ಒಥೆಲೋ ಹೇಳುತ್ತಾನೆ:

So sweet was ne'er so fatal. I Must weep,
But they are cruel tears. This sorrow's heavenly;
It strikes where it doth love. (v, ii, 13ff)

ಪ್ರೇಕ್ಷಕಾಂಗಣದಲ್ಲಿ ಎಳ್ಳುಕಾಳು ಬಿದ್ದರೂ ಕೇಳಿಸುವಂಥ ಮೌನ; ಪ್ರೇಕ್ಷಕರೆಲ್ಲ ಕಣ್ಣೀರು ಸುರೆಯುವಂಥ ಸನ್ನಿವೇಶ. ಅರ್ವಿಂಗ್–ಒಥೆಲೊ ಎಲನ್ ಟೆರಿ–ಡೆಸ್ಡಿಮೋನಳ ಮುಖದ ಬಳಿ ಬಾಗಿದ್ದಾಗ ಅವನು ಏನು ಯೋಚನೆ ಮಾಡುತ್ತಿದ್ದ? ತಾನು ಹೇಳಬೇಕಾಗಿದ್ದ ಪಂಕ್ತಿಗಳನ್ನು ಹೇಳಿದ ಮೇಲೆ ಅವನು ಎಲನ್‌ಟೆರಿಯನ್ನು ಪಿಸುಮಾತಿನಲ್ಲಿ "ನಿಮ್ಮಮ್ಮ ಇವತ್ತು ಏನು ಅಡಿಗೆ ಮಾಡಿದ್ದಾಳೆ?" ಎಂದು ಕೇಳಿದನಂತೆ! ಅವನಿಗೆ ಸನ್ನಿವೇಶದ ಮೇಲೆ, ಅದಕ್ಕೆ ಸಂಬಂಧಪಟ್ಟ ಭಾವದ ಮೇಲೆ, ಸಂಪೂರ್ಣ ಪ್ರಭುತ್ವವಿತ್ತು. ಅವನು ತನ್ನ ಮುಖ, ತುಟಿನಾಲಗೆಗಳು, ಕಣ್ಣು—ಇವಕ್ಕೆಲ್ಲ "ನೀವು ಹೀಗೆ ನಡೆದುಕೊಳ್ಳಬೇಕು" ಎಂದು ಆಜ್ಞೆ ಮಾಡಿದ; ಅವು ತಮ್ಮ ಪಾಡಿಗೆ ತಾವು ಆ ಆಜ್ಞೆಯನ್ನು ಪಾಲಿಸುತ್ತಿದ್ದವು; ಅವನ ಮನಸ್ಸು ಮಾತ್ರ ಅಲಕ್ಕಾಗಿಯೇ ಇತ್ತು. ಅವನು ಮನಸ್ಸನ್ನು ನಿರ್ಲಿಪ್ತವಾಗಿಟ್ಟುಕೊಂಡು ಸನ್ನಿವೇಶದ ಹೊರಗೆ ನಿಂತು ಅದನ್ನು ರೂಪಿಸುತ್ತಿದ್ದ. ನರಸಿಂಹರಾಯರಿಗೆ ಈ ಪ್ರಸಂಗ ತಿಳಿದಿತ್ತೊ ಇಲ್ಲವೋ ಕಾಣೆ. ಆದರೆ ಅವರು 'ನಿರೋಧ'ದ ಪ್ರಸ್ತಾಪ ಮಾಡಿದಾಗ ಇಂಥ ನಿರ್ಲಿಪ್ತತೆ, ನಿಯಂತ್ರಣ ಶಕ್ತಿ, ಭಾವದ ಮೇಲಿನ ಪ್ರಭುತ್ವ, ನಟನಲ್ಲಿ ಇರಬೇಕು ಎಂಬುದನ್ನು ಮನಸಿನಲ್ಲಿಟ್ಟುಕೊಂಡಿದ್ದರು ಎನ್ನಿಸುತ್ತದೆ. ಅವರು ಮಾತಾಡುತ್ತಿದ್ದಾಗ ನಾನು ಅರ್ವಿಂಗ್–ಟೆರಿ ಪ್ರಸಂಗವನ್ನು ನೆನೆದುಕೊಂಡೆ.

ಈ ನಿರ್ಲಿಪ್ತತೆ, ತಮ್ಮ ಕಲೆಯಲ್ಲಿ ಮುಳುಗಿಹೋಗದೆ ಅದರ ಮೇಲೆ ಪ್ರಭುತ್ವವನ್ನು ಸಾಧಿಸಿದ್ದು—ವರದಾಚಾರ್ಯರ ಮತ್ತು ಸ್ಥಾನಂ ನರಸಿಂಹರಾಯರ ಅಭಿನಯದಲ್ಲಿ ಕಾಣುತ್ತಿತ್ತು. ನನ್ನ ಅನುಭವದ ಮಿತಿಯಲ್ಲಿ ಹೇಳಬಹುದಾದರೆ, ಆ ಕಾಲದ ಮತ್ತು ಈಗಿನ ರಂಗಸ್ಥಳದ ನಟರ ಮತ್ತು ಸಿನಿಮಾನಟರ ಪೈಕಿ ಮುಕ್ಕಾಲು ಮೂರು ವೀಸಪಾಲು ಜನ ಮೇಲೆ ಹೇಳಿದ ಪ್ರಭುತ್ವವನ್ನು ಸಾಧಿಸಿಲ್ಲ. ಪಾತ್ರ ನಿರ್ವಹಣೆಯಲ್ಲಿ ಅತ್ಯಭಿನಯದ ಸಂಕಟತಾಂಡವ. ಹಿಂದಿನ ಕಾಲದ ಕೆಲವು ಪ್ರಸಿದ್ಧನಟರಲ್ಲೂ ಈ ದೋಷವನ್ನು ಕಂಡಿದ್ದೇನೆ. ಬಳ್ಳಾರಿ ರಾಘವಾಚಾರ್ಯರು ಕೂಡ ಆ ಪ್ರಭುತ್ವವನ್ನು ಸಾಧಿಸಿರಲಿಲ್ಲ. ಹಾಸ್ಯನಟರಲ್ಲಂತೂ ಕಲಾತ್ಮಕವಾದ, ನಿಯಂತ್ರಣಕ್ಕೆ ಒಳಪಟ್ಟ ಅಭಿನಯ ಇಲ್ಲವೇ ಇಲ್ಲವೇನೊ ಎನ್ನಿಸುತ್ತದೆ. ವರದಾಚಾರ್ಯರ ಕಂಪೆನಿಯಲ್ಲಿ ('ರತ್ನಾವಳಿ ಥಿಯೆಟ್ರಿಕಲ್ ಕಂಪೆನಿ'ಯಲ್ಲಿ) ಹಾಸ್ಯಪಾತ್ರಗಳನ್ನು ನಿರ್ವಹಿಸುತ್ತಿದ್ದ ಕೃಷ್ಣಮೂರ್ತಿ ಎಂಬವರು ಆಗಿನ ಹಾಸ್ಯನಟರಲ್ಲಿ ಅಗ್ರಗಣ್ಯರೆನ್ನಿಸಿಕೊಂಡಿದ್ದರು. ಅವರಲ್ಲಿ ಕೂಡ ಅತ್ಯಭಿನಯದ ದೋಷ ಇದ್ದೇ ಇತ್ತು. ಬಹುಶಃ ಅದಕ್ಕೆ ಮುಖ್ಯ ಕಾರಣ ನಮ್ಮ ನಾಟಕಗಳಲ್ಲಿದ್ದ ಹಾಸ್ಯದ ಮಟ್ಟವೇ ಕೆಳದರ್ಜೆಯದಾಗಿದ್ದದ್ದು. ಬಹುಶಃ ಪ್ರಪಂಚದ ಎಲ್ಲ ದೇಶಗಳ ನಾಟಕಗಳಲ್ಲೂ ವಿದೂಷಕನ ಪಾತ್ರಚಿತ್ರಣದಲ್ಲಿ ಉತ್ಪ್ರೇಕ್ಷೆಯ ದೋಷವಿರುತ್ತದೆ. ನಮ್ಮಲ್ಲಿ ಅದು ಸ್ವಲ್ಪ ಪೆಚ್ಚೇನೊ, ಸ್ವಲ್ಪ ಮಂದಬುದ್ಧಿಯವನ ಪಾತ್ರವನ್ನು ನಿರ್ವಹಿಸಬೇಕಾದರೆ ನಟ ಅವನನ್ನು ಮಿದುಳೇ ಇಲ್ಲದ ಶತಮಡ್ಡಿಯಾಗಿ ಮಾರ್ಪಡಿಸುತ್ತಾನೆ. ಹೆಂಡತಿಗೆ ಹೆದರುವ

ಗಂಡ ರಂಗಸ್ಥಳದ ಮೇಲೆ ಶುದ್ಧ ಕೋಡಂಗಿ (buffoon) ಆಗುತ್ತಾನೆ. ಇದು ಸಾಲ ದೆಂಬಂತೆ "ರಾಜನ ಮನೆಯಲಿ ಭೋಜನವೆಂದರೆ ಯೋಜನವಾದರು ನಾಂ ಪೋಪೆ" ಎಂದು ವಕ್ರ ವಕ್ರವಾಗಿ ಹಾಡಿಕೊಂಡು ಬರುವ ಬ್ರಾಹ್ಮಣ (ಬ್ರಾಹ್ಮಣ ಎಂದ ಮೇಲೆ ಅವನು ಹೊಟ್ಟೆಬಾಕನಾಗಲೇ ಬೇಕು!); ಬಡಪೆಟ್ಟಿಗೆ ಕಾಸು ಬಿಚ್ಚದ ಸೆಟ್ಟಿ (ಸೆಟ್ಟಿ ಎಂದ ಮೇಲೆ ಅವನು ಜಿಪುಣನಾಗಿಯೇ ತೀರಬೇಕು!); "ಈಚಲಮರದವ್ವ ಈಚಲಮರದವ್ವ ಈಚಲಮರದವ್ವಾ। ಕಾಸು ಕೊಟ್ಟವರಿಗೆ ಕೈಲಾಸ ತೋರ್ತವಳೆ ಈಚಲಮರದವ್ವಾ॥" ಎಂದು ತೂರಾಡುತ್ತ ಹಾಡಿಕೊಂಡು ಬರುವ ಹೆಂಡಕುಡುಕ—ಇಂಥ ಮುಗ್ಗಿದ, ಬೂಷ್ಟು ಬೆಳೆದ ಹಳಸಲು ಪಾತ್ರಗಳು—ಅವರಿಗೂ ನಾಟಕಕ್ಕೂ ಏನಾದರೂ ಸಂಬಂಧ ವಿರಬೇಕು ಎಂಬ ನಿಯಮವೂ ಇಲ್ಲ! ಇವರನ್ನು ಕಟ್ಟಿಕೊಂಡು ಕೃಷ್ಣಮೂರ್ತಿ ಏನು ತಾನೆ ಮಾಡಿಯಾರು! ಅವರಿಂದ ಉಕ್ಕಿಸಬಹುದಾದ ಹಾಸ್ಯ ಯಾವ ಮಟ್ಟದ್ದು! ಒಂದು ನಾಟಕದಲ್ಲಿ—ಅದು ಯಾವುದೋ ನೆನಪಿಲ್ಲ—ಕೃಷ್ಣಮೂರ್ತಿ "ಅರಸರ ಕಾಟ, ಅಗಸರ (ಅಲಸರ ?) ಕೂಟ, ಅದರಿಂ ಬದುಕೇ ಬಂಡಾಟ। ಷರಾಯಿ ಅಂಗರೇಖು...." ಎಂದು ಹಾಡಿಕೊಂಡು ರಂಗಸ್ಥಳದ ಮೇಲೆ ಬಂದರು. ಜನ ಬಿದ್ದು ಬಿದ್ದು ನಕ್ಕದ್ದೂ ನಕ್ಕದ್ದೇ. ಏಕೆ ನಕ್ಕರು ಎಂಬುದು ನನಗೆ ಅರ್ಥವಾಗಲೊಲ್ಲದು. "ಕೃಷ್ಣಮೂರ್ತಿ ನಟರಾಗಿ ಬಂದರೆ ನಗಿಸುವುದಕ್ಕೆ ಬರುತ್ತಾರೆ, ಆದ್ದರಿಂದ ನಗುವುದು ಕರ್ತವ್ಯ" ಎಂದು ಕೊಂಡರೇನೊ. ನನಗೆ ಅವತ್ತು "ಕೃಷ್ಣಮೂರ್ತಿಯಂಥ ಒಳ್ಳೆಯ ನಟರ ಶಕ್ತಿ ಇಷ್ಟರಲ್ಲೇ ಪರ್ಯವಸಾನವಾಯಿತಲ್ಲ!" ಎಂದು ವ್ಯಥೆಯಾಯಿತು.

ನಾನು ಐದನೆಯ ದಶಕದಲ್ಲಿ ನೋಡಿದ (ಗುಬ್ಬಿ ಕಂಪನಿಯವರು ಆಡುತ್ತಿದ್ದ) 'ಸಾಹುಕಾರ' (?) ಎಂಬ ನಾಟಕದಲ್ಲಿ ಇತರ ಕೊರತೆಗಳಿದ್ದರೂ ಭಾಷೆ ಗ್ರಾಂಥಿಕ ವಾಗಿರದೆ ಸಹಜತೆಯನ್ನು ಸಾಧಿಸಿತ್ತು; ಹಾಸ್ಯ ಅಪ್ರಸಕ್ತವಾಗಿರಲಿಲ್ಲ; ಅಭಿನಯವೂ ಚೆನ್ನಾಗಿತ್ತು. ನಟರ ಹೆಸರು ಮರೆತುಹೋಗಿದೆ. ಆರನೆಯ ದಶಕದಲ್ಲಿ ನೋಡಿದ 'ಲಂಚಾವತಾರ' (ಮಾಸ್ಟರ್ ಹಿರಿಯಣ್ಣಯ್ಯನವರ ಮಂಡಲಿ ಆಡಿದ ನಾಟಕ)ದಲ್ಲೂ ಭಾಷೆ ಸ್ವಾಭಾವಿಕವಾಗಿತ್ತು. ಅಲ್ಲಲ್ಲಿ ಬಂದ ಚತುರೋಕ್ತಿಗಳು ತಿನಿಕಿತಿನಿಕಿ ತಂದವಾಗಿರದೆ ಮೊನೆಯುಳ್ಳವಾಗಿದ್ದವು. ಹಾಸ್ಯದ ಗುಣವೂ ಹಿಂದಿನ ನಾಟಕಗಳಲ್ಲಿದ್ದದ್ದಕ್ಕಿಂತ ಚೆನ್ನಾಗಿತ್ತು. ವೃತ್ತಿನಾಟಕಮಂಡಲಿಯವರು ಆಡಿದ ಯಾವ ನಾಟಕವನ್ನೂ ನಾನು ಅಲ್ಲಿಂದೀಚೆಗೆ ನೋಡಿಲ್ಲ. ವೃತ್ತಿಯವರು ಆಡಿದ ನಾಟಕಗಳಲ್ಲಿ ಹಾಸ್ಯ ಮೇಲುಮಟ್ಟಕ್ಕೆ ಏರಲೇ ಇಲ್ಲ ಎಂಬ ಮಾತಿಗೆ ಮೇಲೆ ಹೆಸರಿಸಿದ ಎರಡು ನಾಟಕಗಳು ಸ್ವಲ್ಪಮಟ್ಟಿ ಗಾದರೂ ವಿನಾಯಿತಿಗಳು. ಅದಕ್ಕೆ ಹೊಗಳಿಕೆ ಸಲ್ಲಬೇಕು. ಆದರೆ ಇವೆರಡು ನಾಟಕ ಗಳೂ ಬಂದದ್ದು : ಕೈಲಾಸಂ ನಮ್ಮನ್ನು ಗ್ರಾಂಥಿಕಭಾಷೆಯ ಮತ್ತು ಪೌರಾಣಿಕ ನಾಟಕ ಗಳ ಸೆರೆಯಿಂದ ಬಿಡಿಸಿದ ಮೇಲೆ, ವಾಸ್ತವಿಕ ಜೀವನದಿಂದ ಹಾಸ್ಯ ಸ್ವಾಭಾವಿಕವಾಗಿ ಉದ್ಭವಿಸಬಹುದು ಎಂಬುದನ್ನು ತೋರಿಸಿಕೊಟ್ಟಮೇಲೆ, ಚತುರೋಕ್ತಿಗಳಿಗೆ ನಾವೀನ್ಯ ವನ್ನು ತುಂಬಿದ ಮೇಲೆ, ಇದು ನಿಜವೆಂದರೂ ಗುಬ್ಬಿಕಂಪೆನಿಯವರೂ ಹಿರಣ್ಣಯ್ಯನವರ ಮಂಡಲಿಯವರೂ (ಮೇಲೆ ಹೆಸರಿಸಿದ ನಾಟಕಗಳಲ್ಲಿ) ಕೈಲಾಸಂ ಹಾಕಿಕೊಟ್ಟ ಹೊಸ ಸಂಪ್ರದಾಯದಿಂದ ಪ್ರಯೋಜನ ಪಡೆದರೆಂಬುದಕ್ಕಾಗಿ ಅವರನ್ನು ಅಭಿನಂದಿಸಬೇಕು.


ಮುಂದುವರಿಯುವುದು

ಪುಸ್ತಕ ವಿಭಾಗ

ಲಿಯೋ ಟಾಲ್‌ಸ್ಟಾಯ್ ಅವರ ಮಹಾ ಕಾದಂಬರಿ

ಯುದ್ಧ ಮತ್ತು ಶಾಂತಿ

ಅನುವಾದ
ಪ್ರೊ|| ದೇಜಗೌ



ಟಾಲ್‌ಸ್ಟಾಯ್ ಅವರ ಕೊನೆಯ ಚಿತ್ರ 1910

'ಒಳ್ಳೆಯ ಸುದ್ದಿ !....ಗಾಡಿ ಹೊಡೆ' ಎಂದವನು ಚಾಲಕನಿಗೆ ಕೂಗಿ ಹೇಳಿದನು. ಗಾಡಿ ವೇಗವಾಗಿ ಧಾವಿಸಿತು.

ಬ್ರೂನ್ ನಗರದ ಸಮಗ್ಯೆದ ರಸ್ತೆಗಳಲ್ಲಿ ರಾಜಕುಮಾರನ ಗಾಡಿ ಠಪಪಟಿಸಿದಾಗ ಕತ್ತಲಾಗಿತ್ತು. ಸಂಗ್ರಾಮ ಜೀವನದನಂತರ ನಗರದ ಚಟುವಟಿಕೆಯ ವಾತಾವರಣ ಸಾಮಾನ್ಯವಾಗಿ ಸೈನಿಕನಿಗೆ ಅತ್ಯಂತಾಕರ್ಷಕವಾಗಿರುತ್ತದೆ. ಅಲ್ಲಿಯ ಗಗನಚುಂಬಿತ ಸೌಧಗಳು, ಅಂಗಡಿ ಮುಂಗಟ್ಟುಗಳ ವರ್ಣರಂಜಿತ ದೀಪರಾಜಿಗಳು ಹಾಗೂ ಸುಂದರ ವಾಹನಗಳು ರಾಜಕುಮಾರನ ಮನಸ್ಸಿಗೆ ಉಲ್ಲಾಸವುಂಟುಮಾಡಿದುವು. ರಾತ್ರಿಯೆಲ್ಲ ನಿದ್ದೆಯಿಲ್ಲದಿದ್ದರೂ ಅವಸರವಾಗಿ ಪ್ರಯಾಣಮಾಡಿ ಬಂದಿದ್ದರೂ ಅವನು ಆಯಾಸ ಗೊಂಡಂತೆ ಕಾಣಲಿಲ್ಲ. ಅರಮನೆ ಸಮೀಪಿಸುತ್ತಿದ್ದಂತೆ ಅವನ ನಾಡಿನಾಡಿಗಳಲ್ಲಿ ನವ ಚೈತನ್ಯ ಸ್ಫುರಿಸುತ್ತಿತ್ತಲ್ಲದೆ, ಹಿಂದಿನ ದಿನಗಳಿಗಿಂತ ಮಿಗಿಲಾಗಿ ಜಾಗರೂಕನಾಗಿದ್ದಂತೆ ಭಾಸವಾಗುತ್ತಿತ್ತು. ಅವನ ಕಣ್ಣುಗಳಲ್ಲಿ ಉದ್ವೇಗ ಮಿನುಗುತ್ತಿದ್ದರೂ ಆಲೋಚನೆಗಳು ಮಾತ್ರ ಸುಸ್ಪಷ್ಟವಾಗಿ, ಪುಂಖಾನುಪುಂಖವಾಗಿ ಒಂದಾದ ಮೇಲೊಂದು ಪ್ರವಹಿಸು ತ್ತಿದ್ದುವು. ಅವನು ಮತ್ತೆ ಯುದ್ಧದ ವಿವರಗಳನ್ನು ನೆನೆಸಿಕೊಂಡು, ಅವುಗಳನ್ನು ಸುಸ್ಪಷ್ಟವಾಗಿಯೂ ಸಂಕ್ಷೇಪವಾಗಿಯೂ ಚಕ್ರವರ್ತಿ ಫ್ರಾನ್ಸಿಸ್‌ನಿಗೆ ನಿರೂಪಿಸುತ್ತಿದ್ದಂತೆ ಕಲ್ಪಿಸಿಕೊಂಡನು. ಚಕ್ರವರ್ತಿ ನಡುನಡುವೆ ಕೇಳಬಹುದಾದ ಪ್ರಶ್ನೆಗಳನ್ನೂ, ಅವುಗಳಿಗೆ ಕೊಡಬೇಕಾದ ಉತ್ತರಗಳನ್ನೂ ಅವನು ಊಹಿಸಿಕೊಂಡನು. ತಾನು ಕೂಡಲೇ ಸಾರ್ವಭೌಮರ ಸಮಕ್ಷಮದಲ್ಲಿ ನಿಲ್ಲಬೇಕಾಗುತ್ತದೆಂದು ನಿರೀಕ್ಷಿಸಿದನು. ಅರಮನೆಯ ಪ್ರಮುಖದ್ವಾರದಲ್ಲಿ ಅವನನ್ನು ಸ್ವಾಗತಿಸುವ ಸಲುವಾಗಿ ಅಧಿಕಾರಿಯೊಬ್ಬ ಓಡೋಡಿ ಬಂದನು. ಆಗಂತುಕ ವಿಶೇಷ ನಿಯೋಗಿಯೆಂದು ತಿಳಿದಾಗ ಅಧಿಕಾರಿ ಅವನನ್ನು ಬೇರೊಂದು ದ್ವಾರದೆಡೆಗೆ ಕರೆದೊಯ್ದನು.

'ಮೊಗಸಾಲೆಯ ಬಲಗಡೆಗೆ ತಿರುಗಿ. ಅಲ್ಲೀ ಪತ್ರಾಧಿಕಾರಿ ಇದ್ದಾರೆ. ಅವರು ನಿಮ್ಮನ್ನು ಸಮರ ಸಚಿವರ ಬಳಿಗೆ ಕರೆದೊಯ್ಯುತ್ತಾರೆ' ಎಂದು ಅಧಿಕಾರಿ ಸೂಚಿಸಿದನು.

ಕೆಲಸದ ಮೇಲಿದ್ದ ಪತ್ರಾಧಿಕಾರಿ ರಾಜಕುಮಾರನನ್ನು ಕೂರಿಸಿ, ಯುದ್ಧ ಸಚಿವರ ಬಳಿ ಹೋದನು. ಐದು ನಿಮಿಷಗಳ ನಂತರ ಅವನು ಹಿಂದಿರುಗಿ, ವಿಶೇಷ ಗೌರವದಿಂದ ರಾಜಕುಮಾರನನ್ನು ವಂದಿಸಿ, ನಡುವೆಯ ಮೂಲಕ ಸಚಿವಾಲಯಕ್ಕೆ ಅವನನ್ನು ಕರೆದೊಯ್ದನು. ರಷ್ಯನ್ ನಿಯೋಗಿ ಆ ಸನ್ನಿವೇಶದಲ್ಲಿ ತೋರಿಸಬೇಕಾದ ಮರ್ಯಾದೆಯನ್ನು ಪತ್ರಾಧಿಕಾರಿ ತನ್ನ ವರ್ತನೆಯ ಮೂಲಕ ಮನವರಿಕೆ ಮಾಡಿ ಕೊಡಲು ಹವಣಿಸಿದನು.

ಸಚಿವಾಲಯದ ದ್ವಾರ ಸನ್ನಿಹಿತವಾಗುತ್ತಿದ್ದಂತೆ ರಾಜಕುಮಾರನ ಸಂತೋಷ ಇಳಿಮುಖವಾಗುತ್ತಿತ್ತು. ಅವನ ಮನಸ್ಸಿಗೆ ಕಿರಿಕಿರಿಯಾಯಿತು. ಪತ್ರಾಧಿಕಾರಿಗೆ ಗೊತ್ತಾಗದಂತೆ ಅವನ ಕಿರಿಕಿರಿತನ ತಿರಸ್ಕಾರವಾಗಿ ಪರಿಣಮಿಸಿತು. ಅದು ಅನಗತ್ಯ ವಾಗಿತ್ತು. ಫಲವತ್ತಾದ ಅವನ ತಲೆಯಲ್ಲಿ ಒಡನೆಯೆ ಹೊಸ ಅಭಿಪ್ರಾಯ ಮೂಡಿತು. ಅದರ ಪ್ರಕಾರ ಅವನು ಪತ್ರಾಧಿಕಾರಿ ಮತ್ತು ಸಚಿವರನ್ನು ಕಡೆಗಣಿಸುವ ಹಕ್ಕು ಪಡೆದಿದ್ದನು. 'ಮದ್ದಿನ ವಾಸನೆ ಮೂಗಿಗಡರದೆಯೆ ಜಯವನ್ನು ಸುಲಭವಾಗಿ ಗಳಿಸ

ಬಹುದೆಂದು ಈ ಜನ ಪ್ರಾಯಶಃ ಎಣಿಸಿಕೊಂಡಿರಬೇಕು' ಎಂದವನು ಗುಣಿಸಿಕೊಂಡನು. ತಿರಸ್ಕಾರದಿಂದ ಅವನ ಕಣ್ಣುಗಳು ಕಿರಿದಾದುವು; ಅವನು ಸಾವಧಾನವಾಗಿ ಹೆಜ್ಜೆಯಿಡುತ್ತ ಸಚಿವಾಲಯವನ್ನು ಪ್ರವೇಶಿಸಿದನು. ಮೂರ್ನಾಲ್ಕು ನಿಮಿಷ ತನ್ನನ್ನು ಲಕ್ಷಿಸದೆಯೆ, ಕಾಗದ ಪತ್ರಗಳನ್ನೋದುತ್ತ, ಅವುಗಳ ಮೇಲೆ ಸೀಸದ ಕಡ್ಡಿಯಿಂದ ಟಿಪ್ಪಣಿಗಳನ್ನು ಮಾಡಿಕೊಳ್ಳುತ್ತ ದೊಡ್ಡ ಮೇಜಿನ ಮುಂದೆ ಕುಳಿತಿದ್ದ ಸಚಿವನನ್ನು ಕಂಡಾಗ ಅವನ ತಿರಸ್ಕಾರ ತೀಕ್ಷ್ಣವಾಯಿತು. ಬೂದಿ ಬಣ್ಣದ ಗಂಡಸ್ಥಳವುಳ್ಳ ಮಂತ್ರಿಯ ನಗ್ನನತಶಿರದ ಎರಡು ಪಕ್ಕಗಳಲ್ಲಿ ಮೋಂಬತ್ತಿಗಳಿದ್ದುವು. ಬಾಗಿಲು ತೆರೆದಕಡೆಗೆ ಕಣ್ಣೆತ್ತದೆ, ಹೆಜ್ಜೆಗಳ ಸಪ್ಪಳಕ್ಕೆ ಕಿವಿಗೊಡದೆ ಅವನು ಕೊನೆತನಕ ಓದುತ್ತಿದ್ದನು.

'ಇಕೊ, ಈ ಕಾಗದವನ್ನು ಮುಟ್ಟಿಸು' ಎಂದವನು ಪತ್ರಾಧಿಕಾರಿಯ ಕೈಗೆ ಅದನ್ನು ಕೊಡುತ್ತ ನುಡಿದನು. ಆಗಲೂ ವಿಶೇಷ ನಿಯೋಗಿಯ ಕಡೆಗೆ ಅವನ ಲಕ್ಷ್ಯ ಹರಿಯಲಿಲ್ಲ.

ತನಗೆ ಸಂಬಂಧಿಸಿದ ಇತರ ವಿಷಯಗಳಲ್ಲಿದ್ದ ಸಚಿವನ ಆಸಕ್ತಿ ಕುತುಜೊವನ ಸೈನಿಕ ಕಾರ್ಯಾಚರಣೆಯಲ್ಲಿರಲಾರದೆಂದೋ ಅಥವಾ ನಿಯೋಗಿಯ ಮನಸ್ಸಿನಲ್ಲಿ ಅಂಥ ಅಭಿಪ್ರಾಯವನ್ನು ಮೂಡಿಸಬೇಕೆಂದೋ ಅವನ ಅಪೇಕ್ಷೆಯಿದ್ದಿರಬೇಕೆಂದು ಆಂಡ್ರೂ ಆಲೋಚಿಸಿದನು. 'ಆದರೆ ಅದಾವುದೂ ನನಗೆ ಸಂಬಂಧಿಸಿದ್ದಲ್ಲ' ಎಂದವನು ಮನದಂದನು. ಉಳಿದ ವ್ಯವಹಾರ ಪತ್ರಗಳನ್ನು ಮಂತ್ರಿ ಹತ್ತಿರಕ್ಕೆಳೆದುಕೊಂಡು, ನೀಟಾಗಿ ಜೋಡಿಸಿಕೊಂಡನಂತರ, ಕತ್ತೆತ್ತಿ ನೋಡಿದನು. ಅವನ ಮುಖದಲ್ಲಿ ಬುದ್ಧಿವಂತಿಕೆಯೂ ವಿಶಿಷ್ಟಕಾಂತಿಯೂ ಹೊರಸೂಸುತ್ತಿದ್ದುವು. ರಾಜಕುಮಾರ ಆಂಡ್ರೂ ಕಣ್ಣಿಗೆ ಬಿದ್ದ ಕೂಡಲೇ ಅವನ ಮುಖ ವಿಕಾರವಾಯಿತು. ಅವನ ಮುಖ ಮೂರ್ಖತನದ ಕೃತಕಹಾಸವನ್ನು ಧರಿಸಿತು. ಆ ಕೃತಕತೆಯನ್ನು ಮರೆಮಾಚುವ ಪ್ರಯತ್ನವೂ ನಡೆಯಲಿಲ್ಲ. ಒಬ್ಬರಾದ ಮೇಲೊಬ್ಬರಂತೆ ಅವಿಚ್ಛಿನ್ನವಾಗಿ ಸಂದರ್ಶನಕಾರರನ್ನು ಬರಮಾಡಿಕೊಂಡವನ ಗತ್ತು ಆ ಹಾಸದಲ್ಲಿ ಸೂಸುತ್ತಿತ್ತು.

'ಮಹಾದಂಡನಾಯಕ ಕುತುಜೊವ್‌ರ ಕಡೆಯಿಂದಲೆ?' ಎಂದವನು ಪ್ರಶ್ನಿಸಿದನು. 'ಸುದ್ದಿ ಶುಭವಾದುದಿರಬೇಕಲ್ಲವೆ? ಮಾರ್ಟಿಯರ್‌ನ ಸೈನ್ಯದೊಡನೆ ಕೈಕೈ ಮಿಲಾವಣೆಯಾಯಿತಲ್ಲವೆ? ವಿಜಯ ದೊರಕಿತಲ್ಲವೆ? ಆದರೂ ವಿಲಂಬವಾಯಿತು!'

ತನ್ನ ಹೆಸರಿಗಿದ್ದ ಪತ್ರವನ್ನೆಳೆಸಿಕೊಂಡು, ಶೋಕಾಕುಲನಾಗಿ ಓದತೊಡಗಿದನು. 'ಅಯ್ಯೋ ದೇವರೆ! ಏನಾಗಿಹೋಯ್ತು? ಸ್ಮಿಟ್!' ಎಂದವನು ಜರ್ಮನ್ ಭಾಷೆಯಲ್ಲಿ ಉದ್ಗರಿಸಿದನು. 'ಎಂಥ ವಿಪತ್ತೊದಗಿತು? ಭರಿಸಲಾಗದ ವಿಪತ್ತು!'

ಕಾಗದದ ಮೇಲೆ ಕಣ್ಣಾಡಿಸಿದನಂತರ ಅದನ್ನು ಮೇಜಿನ ಮೇಲಿರಿಸಿದನು; ಏನನ್ನೋ ಯೋಚಿಸುತ್ತ ಆಂಡ್ರೂ ಕಡೆಗೆ ಕಣ್ಣು ಹಾಯಿಸಿದನು.

'ಆಹ, ಎಂಥ ವಿಪತ್ತೊದಗಿತು! ಆ ಘಟನೆ ನಿರ್ಣಾಯಕವೆಂದು ಹೇಳುವಿರಾ? ಆದರೆ ಮಾರ್ಟಿಯರ್ ಸೆರೆ ಸಿಕ್ಕಿಲ್ಲ'. ಅವನು ತುಸು ಹೊತ್ತು ಆಲೋಚನಾಮಗ್ನನಾದನು. 'ಸ್ಮಿಟ್ಟರ ಸಾವಿನ ಮೂಲಕ ವಿಜಯಕ್ಕಾಗಿ ತೆರಬೇಕಾದ ಬೆಲೆ ಅಪಾರವಾಗಿದ್ದರೂ, ನೀವು ಒಳ್ಳೆಯ ಸುದ್ದಿ ತಂದಿದ್ದೀರೆಂದೇ ನನಗೆ ಹರ್ಷವಾಗಿದೆ. ಸಾರ್ವಭೌಮರು

ನಿಮ್ಮನ್ನು ಖಂಡಿತ ನೋಡಬಯಸುತ್ತಾರೆ. ಆದರೆ ಈ ದಿನ ಸಾಧ್ಯವಾಗದು. ನಿಮಗೆ ಧನ್ಯವಾದಗಳು. ನಿಮಗೆ ವಿಶ್ರಾಂತಿ ಬೇಕಾಗಿದೆ. ನಾಳೆ ಮೆರವಣಿಗೆಯನಂತರ ದರ್ಬಾರು ಮಂದಿರದಲ್ಲಿ ಕಾದಿರಿ. ಯಾವುದಕ್ಕೂ ನಿಮಗೆ ತಿಳಿಸುತ್ತೇನೆ'.

ಮಾತಾಡುತ್ತಿದ್ದಾಗ ಮುಖದಿಂದ ಮರೆಯಾಗಿದ್ದ ಮೂರ್ಖಹಾಸ ಮತ್ತೆ ಮರುಕೊಳಿಸಿತು.

'ಮತ್ತೆ ಭೇಟಿಯಾಗೋಣ. ನಿಮಗೆ ಅನೇಕ ಧನ್ಯವಾದಗಳು. ಪ್ರಾಯಶಃ ಸಾರ್ವಭೌಮರು ನಿಮ್ಮನ್ನು ನೋಡಲಿಷ್ಟವುಳ್ಳವರಾಗಿದ್ದಾರೆಂದು ತೋರುತ್ತದೆ.' ಎಂದವನು ನುಡಿದು ತಲೆ ಬಾಗಿದನು.

ಅರಮನೆಯನ್ನು ಬಿಡುತ್ತಿದ್ದಂತೆ, ವಿಜಯದಿಂದ ಸಂಪ್ರಾಪ್ತವಾಗಿದ್ದ ಸುಖಾಸಕ್ತಿ ನಿರೀಕ್ಷೆಗಳು ಯುದ್ಧ ಸಚಿವ ಹಾಗೂ ಪತ್ರಾಧಿಕಾರಿಯ ಉಪೇಕ್ಷೆಯ ಮನೋಭಾವವನ್ನವಲಂಬಿಸಿವೆಯೆಂಬ ಭಾವನೆ ಅವನ ಮನಸ್ಸಿನಲ್ಲುದಿಸಿತು. ಅವನ ಆಲೋಚನೆಯ ರೀತಿಯೇ ಇದ್ದಕ್ಕಿದ್ದಂತೆ ಬದಲಾವಣೆ ಹೊಂದಿತು. ಯುದ್ಧ ಬಹುದೂರದ ಭೂತ ಕಾಲದಲ್ಲಿ ನಡೆದ ಘಟನೆಯ ನೆನಪೆಂಬಂತೆ ತೋರಿತು.

ಅಧ್ಯಾಯ ೧೦

ಬ್ರೂನ್ ನಗರದಲ್ಲಿದ್ದಾಗ ಆಂಡ್ರೂ ರಾಯಭಾರಿ ಸೇವೆಯಲ್ಲಿದ್ದ ರಷ್ಯನ್ ದೋಸ್ತಿ ಬಿಲೀಬಿನ್ನನ ಮನೆಯಲ್ಲುಳಿದುಕೊಂಡಿದ್ದನು.

'ಪ್ರಿಯ ರಾಜಕುಮಾರರೆ, ಒಳಗೆ ದಯಮಾಡಿ. ನಿಮ್ಮಂಥ ಅತಿಥಿಯನ್ನು ಪಡೆದ ಈ ದಿನವೇ ನನಗೆ ಸುದಿನವಾಗಿದೆ.' ಎಂದು ಬಿಲೀಬಿನ್ ಬಾಗಿಲಲ್ಲಿ ಆಂಡ್ರೂವನ್ನು ಸಂಧಿಸಿ ಸ್ವಾಗತಿಸಿದನು. 'ಫ್ರಾಂಜ್, ರಾಜಕುಮಾರರ ಸಾಮಾನುಗಳನ್ನು ನನ್ನ ಮಲಗುಕೋಣೆಯಲ್ಲಿಡು' ಎಂದವನು ಬಲ್ಕೋನ್‌ಸ್ಕಿಯನ್ನು ಒಳಗೆ ಕರೆತರುತಿದ್ದ ಸೇವಕನಿಗೆ ಆಜ್ಞಾಪಿಸಿದನು. 'ವಿಜಯೋತ್ಸವವನ್ನು ಸಾರುವ ಹರಿಕಾರರಲ್ಲವೆ, ನೀವು? ಶಹಬ್ಬಾಸ್! ನೀವು ಕಂಡಂತೆ, ಹುಷಾರಿಲ್ಲದೆ ನಾನಿಲ್ಲಿ ಕುಳಿತಿದ್ದೇನೆ.'

ಮೊಹ ಮಡಿಗಳನಂತರ ರಾಜಕುಮಾರ ಆಂಡ್ರೂ ರಾಯಭಾರಿಯ ವೈಭವೋಪೇತ ಅಧ್ಯಯನಕಕ್ಷ್ಯವನ್ನು ಪ್ರವೇಶಿಸಿ, ಅವನಿಗೆಂದೇ ಅಣಿಗೊಂಡಿದ್ದ ಭೋಜನಕ್ಕಾಗಿ ಕುಳಿತನು. ಬಿಲೀಬಿನ್ ಅಗ್ಗಿಷ್ಟಿಕೆಯ ಬಳಿ ಸಲೀಸಾಗಿ ತಳವೂರಿದನು.

ದಂಡಯಾತ್ರೆ ಹಾಗೂ ಸಂಗ್ರಾಮ ಸಮಯದಲ್ಲಿ ಮೊಹ ಮಡಿಗಳ ಸೌಲಭ್ಯವಾಗಲೀ ಜೀವನದ ಸುಖ ಸೌಕರ್ಯಗಳಾಗಲೀ ಅವನಿಗೆ ದೊರಕುವಂತಿರಲಿಲ್ಲ. ಅವನು ಬಾಲ್ಯದಿಂದ ಶ್ರೀಮಂತ ಸಹಜವಾದ ಭೋಗ ವೈಭವಗಳಿಗೊಗ್ಗಿಕೊಂಡಿದ್ದವನು. ಅಂಥದೇ ಸನ್ನಿವೇಶದಲ್ಲೀಗ ಅವನು ವಿಶ್ರಾಂತಿ ಸುಖದ ಆನಂದವನ್ನನುಭವಿಸುತ್ತಿದ್ದನು. ಜತೆಗೆ ಕೆಲವು ದಿನಗಳಿಂದೀಚೆಗೆ ಕೇವಲ ಆಸ್ಟ್ರಿಯನ್ ಸತ್ಕಾರದ ರುಚಿಯನ್ನನುಭವಿಸಿದ ಅವನಿಗೆ ರಷ್ಯನ್ ಸತ್ಕಾರ ಮಹದಾನಂದವನ್ನು ನೀಡಿತ್ತು. ರಷ್ಯನ್ ಅಲ್ಲದಿದ್ದರೂ, ಫ್ರೆಂಚ್ ಭಾಷೆಯಲ್ಲಿ ಮಾತಾಡುವ ಅವಕಾಶ ದೊರೆತಿದ್ದುದೂ ಆನಂದ ಸಂವರ್ಧನೆಗೆ ಹೇತುವಾಗಿತ್ತು. ಆಸ್ಟ್ರಿಯಾ ಮತ್ತು ರಷ್ಯಾ ಜನರ ನಡುವೆ ಎಂದೂ ಬಗೆಹರಿಯದ

ವೈರವಿರುತ್ತಿತ್ತು. ಆ ಬಗ್ಗೆ ತನ್ನ ಅನುಭವವನ್ನು ಮಿತ್ರನೊಡನೆ ಹಂಚಿಕೊಳ್ಳುವ ಅವಕಾಶ ದೊರೆತದ್ದರಿಂದ ಅವನ ಮನಸ್ಸಿಗೆ ತುಂಬ ಹಿತವಾಗಿತ್ತು.

ಬಿಲೀಬಿನ್ ಮೂವತ್ತೈದುವರ್ಷದ ಬ್ರಹ್ಮಚಾರಿ. ಅವರಿಬ್ಬರೂ ಒಂದೇ ಅಂತಸ್ತಿಗೆ ಸೇರಿದವರು. ಪೀಟರ್ಸ್‌ಬರ್ಗ್ ನಗರದಲ್ಲಿದ್ದಾಗಲೇ ಅವರು ಪರಸ್ಪರವಾಗಿ ಅರಿತುಕೊಂಡಿದ್ದರು. ಆಂಡ್ರೂ ವಿಯನ್ನಾದಲ್ಲಿ ಕುತುಜೋವನ ಸಂಗ ಸೇರಿದಾಗಿನಿಂದ ಅವರಿಬ್ಬರ ಅನ್ಯೋನ್ಯತೆ ಅಧಿಕಗೊಂಡಿತ್ತು. ಸೈನಿಕ ವೃತ್ತಿಯಲ್ಲಿ ಆಂಡ್ರೂವಿಂತ ಮೇಲೇರಬಹುದಾದ ಅವಕಾಶ ಪಡೆದಿದ್ದನೋ ಅಂತೆಯೇ, ಏಕೆ ಅವನಿಗಿಂತ ಒಂದು ಕೈ ಮಿಗಿಲಾಗಿಯೇ, ಬಿಲೀಬಿನ್ ರಾಯಭಾರಿ ಸೇವೆಯಲ್ಲಿ ಅಪಾರ ನಿರೀಕ್ಷೆಯನ್ನು ಮೂಡಿಸಿದ್ದನು. ಅವನು ಪ್ರಾಯದಿಂದ ಚಿಕ್ಕವನಾದರೂ ವ್ಯವಹಾರ ಕೌಶಲದಿಂದ ಕಿರಿಯನೆನ್ನುವಂತಿರಲಿಲ್ಲ. ಅವನು ಸೇವೆಗೆ ಸೇರಿದ್ದು ಷೋಡಶ ಪ್ರಾಯದವನಾಗಿದ್ದಾಗ. ಪ್ಯಾರಿಸ್ ಮತ್ತು ಕೋಪನ್ ಹೇಗನ್‌ಗಳಲ್ಲಿ ಕಾರುಬಾರು ನಡಸಿದ್ದನು; ಈಗಂತು ವಿಯನ್ನಾದಲ್ಲಿ ಬಹುಪ್ರಾಮುಖ್ಯವಾದ ಹುದ್ದೆಯಲ್ಲಿದ್ದನು. ವಿಯನ್ನಾದಲ್ಲಿಯು ನಮ್ಮ ರಾಯಭಾರಿ ಮತ್ತು ವಿದೇಶಾಂಗ ಸಚಿವರಿಬ್ಬರೂ ಅವನ ಮಾತಿಗೆ ತುಂಬ ಬೆಲೆ ಕೊಡುತ್ತಿದ್ದರು. ಅನೇಕ ರಾಯಭಾರಿಗಳು ನೇತ್ಯರ್ಥಕ ಗುಣಸ್ವಭಾವಗಳಿಂದಾಗಿ, ಕೆಲವು ಸಂಗತಿಗಳಿಂದ ದೂರವಿದ್ದುದರಿಂದ, ಫ್ರೆಂಚ್ ಭಾಷೆಯಲ್ಲಿ ಸಲೀಸಾಗಿ ಮಾತಾಡುತ್ತಿದ್ದುದರಿಂದ ಗೌರವಾರ್ಹರಾಗಿದ್ದುದುಂಟು. ಆದರೆ ಬಿಲೀಬಿನ್ ಆ ವರ್ಗಕ್ಕೆ ಸೇರಿದವನಲ್ಲ. ಅವನಿಗೆ ಕೆಲಸ ಇಷ್ಟವಾಗಿದ್ದುದು ಮಾತ್ರವಲ್ಲ, ಅದನ್ನು ನಿರ್ವಹಿಸುವ ವಿಧಾನವೂ ಗೊತ್ತಿತ್ತು. ಅವನು ಅಲಸ ಸ್ವಭಾವದವನಾದರೂ ಕೆಲವೊಮ್ಮೆ ಇಡೀ ರಾತ್ರಿ ಬರೆಮೇಜಿನ ಮುಂದೆ ಕಾಲ ಕಳೆಯುತ್ತಿದ್ದನು. ಕೆಲಸದ ಪ್ರಾಮುಖ್ಯವೇನೇ ಇರಲಿ, ಅದನ್ನು ಶ್ರದ್ಧೆಯಿಂದ ಮಾಡಿ ಪೂರೈಸುತ್ತಿದ್ದನು. 'ಏತಕ್ಕಾಗಿ' ಎನ್ನುವ ಪ್ರಶ್ನೆ ಅವನಿಗೆ ಮುಖ್ಯವಾಗಿರಲಿಲ್ಲ; 'ಹೇಗೆ?' ಎಂಬ ಪ್ರಶ್ನೆಯಲ್ಲಿ ಅವನಿಗೆ ಆಸಕ್ತಿ ಹೆಚ್ಚು. ರಾಜನೈತಿಕ ವಿಷಯ ಯಾವುದೇ ಇರಲಿ, ಅದರ ಬಗ್ಗೆ ಅವನಿಗೆ ಲಕ್ಷ್ಯವಿರಲಿಲ್ಲ. ಸುತ್ತೋಲೆಯನ್ನಾಗಲೀ, ಟಿಪ್ಪಣಿಯನ್ನಾಗಲೀ, ವರದಿಯನ್ನಾಗಲೀ ಸುಂದರವಾಗಿ ಸ್ಪಷ್ಟವಾಗಿ ಹಾಗೂ ಶಕ್ತಿಯುತವಾಗಿ ಸಿದ್ಧಗೊಳಿಸುವ ಅವಕಾಶವನ್ನದು ಅವನಿಗೊದಗಿಸಿತ್ತು. ಅವನ ಸೇವೆ ಪ್ರಶಂಸನೀಯವಾದದ್ದು. ಕೇವಲ ಬರೆವಣಿಗೆಯಿಂದಲ್ಲ, ಉನ್ನತಸ್ಥಾನದಲ್ಲಿದ್ದವರೊಡನೆ ನಡಸುತ್ತಿದ್ದ ಸಂಭಾಷಣಾಕೌಶಲದಿಂದ ಮತ್ತು ಅವರೊಡನೆ ನಡಸುತ್ತಿದ್ದ ವ್ಯವಹಾರನೈಪುಣ್ಯದಿಂದ.

ಕೆಲಸದಂತೆ ಸಂಭಾಷಣೆಯೂ ಬಿಲೀಬಿನ್‌ನಿಗೆ ಪ್ರಿಯವಾದುದಾಗಿತ್ತು. ಸ್ವಾರಸ್ಯ ಚಮತ್ಕಾರಗಳು ಸಾಧ್ಯವೆನ್ನುವಾಗ ಮಾತ್ರ ಅವನು ಸಂಭಾಷಣೆಯಲ್ಲಿ ತೊಡಗುತ್ತಿದ್ದನು. ಸಮಾಜದಲ್ಲಿದ್ದಾಗ ಅವನು ಯಾವಾಗಲೂ ಗಮನ ಸೆಳೆಯುವಂತೆ ಮಾತಾಡಬಹುದಾದ ಸಂದರ್ಭಕ್ಕಾಗಿ ಕಾಯುತ್ತಿದ್ದನು. ಅಂಥ ಸಂಭಾಷಣೆಯಲ್ಲಿ ಮಾತ್ರ ಅವನು ಭಾಗವಹಿಸುತ್ತಿದ್ದನು. ಅವನ ಸಂಭಾಷಣೆ ಅಸಲು ಚಮತ್ಕಾರದಿಂದ ಹಾಗೂ ಸರ್ವಾಕರ್ಷಕವಾದ ಆಣಿ ಮುತ್ತಿನಂಥ ಮಾತುಗಳಿಂದ ಪರಿಮಳಿಸುತ್ತಿತ್ತು. ಆ ನುಡಿಮುತ್ತುಗಳು ಅವನ ಚಿತ್ತಾಂತರಂಗದ ಪ್ರಯೋಗಶಾಲೆಯಲ್ಲಿ ಉದ್ದೇಶಪೂರ್ವಕವಾಗಿಯೆಂಬಂತೆ ವಹಸೀಯ ರೀತಿಯಲ್ಲಿ ಸಿದ್ಧಗೊಳ್ಳುತ್ತಿದ್ದುವು. ಸಮಾಜದ ಸಾಮಾನ್ಯಜನ ಅವುಗಳನ್ನು ದಿವಾನ

ಖಾನೆಯಿಂದ ದಿವಾನಖಾನೆಗೆ ಪಸರಿಸುತ್ತಿದ್ದರು. ವಾಸ್ತವವಾಗಿ ಅವನ ಚಮತ್ಕಾರೋಕ್ತಿಗಳು ವಿಯನ್ನಾದ ದಿವಾನಖಾನೆಗಳಲ್ಲಿ ಚಲಾಮಣಿಯಾಗುತ್ತಿದ್ದವು. ಅಷ್ಟೇ ಅಲ್ಲ, ಅವು ಹಲವು ಪ್ರಮುಖ ಸಂಗತಿಗಳ ಮೇಲೆ ಪ್ರಭಾವ ಬೀರುತ್ತಿದ್ದುವು.

ಕಂದು ಹಳದಿ ಬಣ್ಣದ ಕೃಶವಾದ ಅವನ ಮುಖದಲ್ಲೆಲ್ಲ ಆಳವಾದ ಸುಕ್ಕುಗಳಿದ್ದುವು. ಅವು ಯಾವಾಗಲೂ ಚೊಕ್ಕಟವಾಗಿರುತ್ತಿದ್ದುವು. ಈ ಸುಕ್ಕುಗಳ ಚಲನೆ ಅವನ ವದನರಂಗದ ಭಾವಾಭಿನಯಕ್ಕೆ ಮಾಧ್ಯಮವಾಗಿತ್ತು. ಒಮ್ಮೆ ಹುಬ್ಬು ಮೇಲೇರಿಸಿ ಹಣೆಯನ್ನು ಸಂಕುಚಿತಗೊಳಿಸಿದಾಗ ಆಳವಾದ ಮಡಿಕೆಗಳು ರಚನೆಯಾಗುತ್ತಿದ್ದುವು; ಮತ್ತೊಮ್ಮೆ ಹುಬ್ಬು ಕೆಳಗಿಳಿಸಿದಾಗ ಕೆನ್ನೆಗಳು ನಿರಿನಿರಿಯಾಗಿ ಕಾಣುತ್ತಿದ್ದುವು. ಅವನ ಸಣ್ಣ ಗುಳಿಗಣ್ಣುಗಳು ಸದಾ ಮಿನುಗುತ್ತಿದ್ದುವು ಮತ್ತು ನೇರವಾಗಿ ನಾಟುತ್ತಿದ್ದುವು.

'ಎಲ್ಲಿ, ಈಗ ನಿಮ್ಮ ಸಾಹಸದ ಕತೆಯನ್ನು ವಿವರಿಸಿ' ಎಂದವನು ನುಡಿದನು.

ಒಮ್ಮೆಯೂ ಸ್ವಂತ ವಿಷಯವನ್ನು ಪ್ರಸ್ತಾಪಿಸದೆ ಬಲ್ಕೊನ್‌ಸ್ಕಿ ಅತ್ಯಂತ ವಿನಯದಿಂದ ಯುದ್ಧ ಸಚಿವನ ಸ್ವಾಗತ ಸಂದರ್ಶನಗಳನ್ನು ವರ್ಣಿಸಿದನು.

'ಸ್ಕಿಟಲ್ ಆಟದಲ್ಲಿ ನಾಯಿಯನ್ನು ಸ್ವಾಗತಿಸುವಂತೆ![1] ಅವರು ನನ್ನನ್ನೂ ನಾನು ತಂದ ವಾರ್ತೆಯನ್ನೂ ಮನ್ನಿಸಿದರು' ಎಂದವನು ಮಾತು ಮುಕ್ತಾಯಗೊಳಿಸಿದನು.

ಬಿಲೀಬಿನ್ ಮುಗುಳುನಗೆ ಬೀರಿದನು. ಅವನ ಮುಖದ ಸುಕ್ಕುಗಳು ಮಾಯವಾದುವು. ತುಸುದೂರದಿಂದ ತನ್ನ ಉಗುರುಗಳನ್ನು ಪರೀಕ್ಷಿಸುತ್ತ, ಎಡಗಣ್ಣುಗಳ ಮೇಲಣ ಚರ್ಮವನ್ನು ಸುಕ್ಕುಗೊಳಿಸುತ್ತ 'ಸಂಪ್ರದಾಯ ಬದ್ಧವಾದ ರಷ್ಯಾ ಸೈನ್ಯದ ಬಗ್ಗೆ ನನಗೆ ಗೌರವವಿದೆ. ಆದರೆ ಪ್ರಿಯಮಿತ್ರರೆ, ನಿಮ್ಮ ಜಯ ಜಯವಲ್ಲವೆಂದೇ ಹೇಳಬೇಕಾಗಿದೆ' ಎಂದವನು ಪ್ರತಿಕ್ರಿಯೆ ವ್ಯಕ್ತಪಡಿಸಿದನು.

ಇದೇ ರೀತಿ ಫ್ರೆಂಚ್ ಭಾಷೆಯಲ್ಲಿ ಅವನು ಮಾತು ಮುಂದುವರಿಸಿದನು. ತಾತ್ಪರದ ಅವಧಾರಣೆಗಾಗಿ ಮಾತ್ರ ಅವನು ನಡುನಡುವೆ ರಷ್ಯನ್ ಪದಗಳನ್ನು ಬಳಸುತ್ತಿದ್ದನು. 'ಈಗ ನೋಡಿ! ನಿಮ್ಮ ಸೈನ್ಯವನ್ನೆಲ್ಲ ಒಗ್ಗೂಡಿಸಿಕೊಂಡು, ಅದೃಷ್ಟ ಹೀನ ಮಾರ್ಟಿಯರ್ ಮೇಲೆ; ಹಾಗೂ ಅವನ ಪಡೆಯ ಮೇಲೆ ಆಕ್ರಮಣ ನಡೆಸಿದ್ದೀರಿ. ಇಷ್ಟಾದರೂ ಅವನು ನಿಮ್ಮ ಬೆರಳೆಡೆಯಲ್ಲಿ ನುಸುಳಿಕೊಂಡಿದ್ದಾನೆ. ಇದನ್ನು ಜಯವೆನ್ನೋಣವೆ?'

'ಈಗ ಲಾಘವತೆ ಸಲ್ಲದು. ನಾನು ಜಂಬಕೊಚ್ಚಿಕೊಳ್ಳುತ್ತಿಲ್ಲ. ಒಟ್ಟಿನಲ್ಲಿ ಉಲ್ಮ ಕದನದ ಫಲಿತಾಂಶಕ್ಕಿಂತ ಇಂದಿನ ಜಯ ಮೇಲೆನಿಸುತ್ತದೆ'....ಎಂದು ಆಂಡ್ರೂ ವಿಶದಪಡಿಸಿದನು.

'ಒಬ್ಬ ಸೇನಾಪತಿಯನ್ನಾದರೂ ಏಕೆ ಸೆರೆಹಿಡಿಯಲಿಲ್ಲ?'

'ಯಾರೊಬ್ಬನ ನಿರೀಕ್ಷೆಯಂತೆ ಅಥವಾ ಮೆರವಣಿಗೆಯಷ್ಟು ಸಲೀಸಾಗಿ ಘಟನೆಗಳು ಸಂಭವಿಸುವುದಿಲ್ಲ. ನಾನು ಮೊದಲೇ ತಿಳಿಸಿದಂತೆ ಬೆಳಗ್ಗೆ ಏಳು ಗಂಟೆಯೊಳಗಾಗಿ ಅವರ ಹಿಂಗಡೆಯನ್ನು ತಲುಪಬಹುದೆಂದು ನಿರೀಕ್ಷಿಸಿದ್ದೆವು. ಆದರೆ ಅಪರಾಹ್ನ ಐದು ಗಂಟೆಯಾದರೂ ನಾವದನ್ನು ಮುಟ್ಟಿರಲಿಲ್ಲ.'

---

1 ಇದೊಂದು ಫ್ರೆಂಚ್ ಗಾದೆ.

'ಬೆಳಗ್ಗೆ ಏಳು ಗಂಟೆಯೊಳಗಾಗಿ ನಿಮ್ಮ ನಿರೀಕ್ಷೆಯನ್ನೇಕೆ ಕಾರ್ಯಗತಗೊಳಿಸಲಿಲ್ಲ? ಗೊತ್ತಾದ ವೇಳೆಯೊಳಗಾಗಿ ನೀವಲ್ಲಿರಬೇಕಾಗಿತ್ತು' ಎಂದು ಬಿಲೀಬಿನ್ ಸಕ್ಕನು.

'ಜಿನೋವ ತ್ಯಜಿಸುವುದುಚಿತವೆಂದು ರಾಜತಾಂತ್ರಿಕ ವಿಧಾನಗಳ ಮೂಲಕ ಬೋನಪಾರ್ಟೆಯ ಮೇಲೆ ಪ್ರಭಾವ ಬೀರುವಲ್ಲಿ ನೀವೇಕೆ ಯಶಸ್ವಿಯಾಗಲಿಲ್ಲ?' ಎಂದು ರಾಜಕುಮಾರ ಆಂಡ್ರ್ಯೂ ಮುಯ್ಯಿಗೆ ಮುಯ್ಯಿ ಎಂಬಂತೆ ಉತ್ತರ ಕೊಟ್ಟನು.

'ಅಗ್ಗಿಷ್ಟಿಕೆ ಬಳಿಯ ಸೋಫಾದ ಮೇಲೆ ಕುಳಿತಿರುತ್ತ ಸೇನಾಪತಿಗಳನ್ನು ವಶಪಡಿಸಿಕೊಳ್ಳಬಹುದೆಂದು ನೀವು ತಿಳಿದಿರುವಂತಿದೆ! ಅದು ನಿಜ. ಆದರೆ, ನೀವೇಕೆ ಅವನನ್ನು ಸೆರೆ ಹಿಡಿಯಲಿಲ್ಲ? ಆದ್ದರಿಂದ ಯುದ್ಧಸಚಿವರಾಗಲೀ ಮಹಾಘನತೆವೆತ್ತ ಚಕ್ರವರ್ತಿ ಫ್ರಾನ್ಸಿಸ್‌ರಾಗಲೀ ನಿಮ್ಮ ವಿಜಯದಿಂದ ಸಂತೃಪ್ತರಾಗದಿದ್ದರೆ ನೀವು ಸೋಜಿಗಗೊಳ್ಳಬೇಕಾಗಿಲ್ಲ. ರಷ್ಯನ್ ರಾಯಭಾರಿ ಕಚೇರಿಯಲ್ಲಿ ನಾನೊಬ್ಬ ಯಃಕಶ್ಚಿತ್ ಕಾರ್ಯದರ್ಶಿ. ಇದು ಹರ್ಷಪಡಬೇಕಾಗಿರುವ ಘಟನೆಯೆಂದು ನನಗನಿಸುವುದಿಲ್ಲ.' ಎಂದು ಬಿಲೀಬಿನ್ ನಡುವೆ ಬಾಯಿ ಹಾಕಿದನು.

ಅವನು ನೇರವಾಗಿ ರಾಜಕುಮಾರನನ್ನು ದಿಟ್ಟಿಸಿದನು; ಮರುಕ್ಷಣದಲ್ಲಿಯೇ ಅವನ ಹಣೆಯ ಸುಕ್ಕು ಮಾಯವಾಯಿತು.

'ಪ್ರಿಯಮಿತ್ರರೆ, ಅದು ಏಕೆ?' ಎಂದು ಪ್ರಶ್ನಿಸುವ ಸರದಿ ನನ್ನ ಪಾಲಿಗೊದಗಿದೆ. 'ಅದೆಲ್ಲ ನನಗರ್ಥವಾಗುವುದಿಲ್ಲವೆಂದು ಒಪ್ಪಿಕೊಳ್ಳುತ್ತೇನೆ. ಪ್ರಾಯಶಃ ನನ್ನ ಅಲ್ಪಬುದ್ಧಿಗೆ ಅರ್ಥವಾಗದ ರಾಜತಾಂತ್ರಿಕ ಸೂಕ್ಷ್ಮಗಳು ಇಲ್ಲಿರಬಹುದು. ಇಡೀ ಸೈನ್ಯವನ್ನು ಮ್ಯಾಕ್ ಬಲಿಗೊಟ್ಟ; ಆರ್ಚ್‌ಡ್ಯೂಕ್ ಫರ್ಡಿನೆಂಡ್ ಮತ್ತು ಆರ್ಚ್‌ಡ್ಯೂಕ್ ಕಾರ್ಲ್ ಜೀವಂತವಾಗುಳಿದಿರುವ ಸುಳಿವೆ ತೋರದು; ಅವರು ಪ್ರಮಾದದ ಮೇಲೆ ಪ್ರಮಾದ ವೆಸಗಿದ್ದಾರೆ. ಫ್ರೆಂಚರ ಅಜೇಯತೆಯ ಭ್ರಮೆಯನ್ನು ನಿರಸನಗೊಳಿಸಿ, ಒಬ್ಬಂಟಿಗನಾಗಿ ವಿಜಯದುಂದುಭಿಯನ್ನು ಮೊಳಗಿದವನು ಕುತುಜೊವ್. ವಿವರ ತಿಳಿದುಕೊಳ್ಳುವಷ್ಟು ತಾಳ್ಮೆ ಯುದ್ಧಸಚಿವನಿಗಿಲ್ಲ.' ಎಂದು ಬಲ್ಕೋನ್‌ಸ್ಕಿ ನಿರವಿಸಿದನು.

'ಅದು ಸರಿ, ಗೆಳೆಯರೆ. ಅದು ತ್ಸಾರ್ ಚಕ್ರವರ್ತಿಗಳಿಗೆ, ರಷ್ಯಾಕ್ಕೆ, ಸಂಪ್ರದಾಯಬದ್ಧವಾದ ಗ್ರೀಕ್ ಧರ್ಮಕ್ಕೆ ಪ್ರಾಸ್ತವಾದ ವಿಜಯವೇ ಸೈ! ಅದೆಲ್ಲ ಚೆನ್ನು. ಆದರೆ ನಾವು, ಅಂದರೆ ಆಸ್ಟ್ರಿಯಾದ ಆಸ್ಥಾನ ನಿಮ್ಮ ಮಾಲೆಯನ್ನು ಮೆಚ್ಚುವುದೆ? ಆರ್ಚ್‌ಡ್ಯೂಕ್ ಕಾರ್ಲ್ ಅಥವಾ ಫರ್ಡಿನೆಂಡರ ವಿಜಯವಾರ್ತೆಯನ್ನು ತನ್ನಿ. ನಿಮಗೆ ತಿಳಿದಂತೆ, ಅವರಿಬ್ಬರೂ ಒಬ್ಬರಿಗಿಂತೊಬ್ಬರು ಸಜ್ಜನರು. ಬೋನಪಾರ್ಟೆಯ ಅಗ್ನಿಶಾಮಕದಳದ ಮೇಲೆ ವಿಜಯಸಾಧಿಸುವುದಾದರೂ ಆ ಕತೆಯೇ ಬೇರೆಯಾಗುತ್ತದೆ. ಆಗ ಮಾತ್ರ ಗೆಲ್ಗುಂಡು ಹಾರಿಸಬಹುದು. ನಮ್ಮನ್ನು ಗಾಬರಿಗೊಳಿಸುವ ಉದ್ದೇಶದಿಂದ ಇಂಥ ಕೆಲಸ ಪೂರೈಸಿದಂತಿದೆ. ಆರ್ಚ್‌ಡ್ಯೂಕ್ ಕಾರ್ಲ್ ಏನನ್ನೂ ಎಸಗುವಂತಿಲ್ಲ, ಫರ್ಡಿನೆಂಡ್ ಅಪಯಶಸ್ಸಿಗೆ ಗುರಿಯಾಗುತ್ತಾನೆ. ವಿಯನ್ನಾವನ್ನು ತ್ಯಜಿಸಿ, ಅದರ ರಕ್ಷಣೆಯನ್ನು ನಿರಾಕರಿಸಿ. "ಸ್ವರ್ಗ ನಮ್ಮಲ್ಲಿದೆ; ಆದರೆ ದೇವರು ನಿಮ್ಮನ್ನು ನಿಮ್ಮ ರಾಜಧಾನಿಯನ್ನು ಕಾಪಾಡಲಿ" ಎಂಬ ಹೇಳಿಕೆಯುಂಟಷ್ಟೆ. ನಾವೆಲ್ಲರೂ ಪ್ರೀತಿಸುತ್ತಿದ್ದ ಸೇನಾನಿ ಎಂದರೆ ಸ್ಮಿಟ್. ಅವರನ್ನು ಗುಂಡಿಗೆ ಗುರಿಮಾಡಿದಿರಿ; ಜತೆಜತೆಗೆ ವಿಜಯಲಾಭಕ್ಕಾಗಿ ನಮ್ಮನ್ನು

ಅಭಿನಂದಿಸುತ್ತಿದ್ದೀರಿ. ನೀವು ತಂದಿರುವ ವಾರ್ತೆಯಿದೆಯಲ್ಲ, ಅದಕ್ಕಿಂತ ಕೋಪಕಾರಕವಾದುದನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲವೆಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಉದ್ದೇಶ ಪೂರ್ವಕವಾಗಿಯೇ ಇದನ್ನೆಲ್ಲ ನಿಯೋಜಿಸಿದಂತಿದೆ. ನೀವು ಅದ್ಭುತ ವಿಜಯವನ್ನು ಪಡೆದಿರೆಂದೇ ಭಾವಿಸೋಣ, ಆರ್ಚ್‌ಡ್ಯೂಕ್ ಕಾರ್ಲ್ ಜಯಪತಾಕೆಯನ್ನು ಹಾರಿಸಿದರೆಂದೇ ತಿಳಿಯೋಣ, ಸಾಮಾನ್ಯ ಘಟನಾವಳಿಗಳ ಮೇಲೆ ಅದರ ಪರಿಣಾಮವೇನಾಗುತ್ತದೆ? ಫ್ರೆಂಚ್ ಸೈನ್ಯ ವಿಯನ್ನಾನಗರವನ್ನು ಆಕ್ರಮಿಸಿಕೊಂಡಿರುವಾಗ, ಕಾಲ ಮೀರಿದನಂತರ ಕೈಗೊಳ್ಳುವ ಹವಣುಗಳೆಲ್ಲ ನಿಷ್ಪ್ರಯೋಜಕವಾಗುತ್ತವೆ.'

'ಏನು? ಆಕ್ರಮಣವೆ? ವಿಯನ್ನಾ ಶತ್ರುವಿಗೆ ವಶವಾಯಿತೆ?'

'ಆಕ್ರಮಣ ಮಾತ್ರವಲ್ಲ; ಬೋನಪಾರ್ಟೆ ಷಾನ್‌ಬ್ರೂನ್‌ನಲ್ಲಿದ್ದಾನೆ. ನಮ್ಮ ಅಚ್ಚುಮೆಚ್ಚಿನ ಶ್ರೀಮಂತ ವ್ರೂಬ್ನ ಆಜ್ಞೆಗಾಗಿ ಅವನ ಬಾಗಿಲ ಬಳಿ ಕಾದಿರುತ್ತಾನೆ.'

ಪ್ರಯಾಣದ ಶ್ರಮಾಯಾಸಗಳನಂತರ, ಸ್ವಾಗತ ಭೋಜನಗಳು ಮುಗಿದ ಮೇಲೆ ತಾನು ಕೇಳಿಸಿಕೊಳ್ಳುತ್ತಿದ್ದ ಮಾತುಗಳ ಸಂಪೂರ್ಣಾರ್ಥ ಮನವರಿಕೆಯಾಗುತ್ತಿರಲಿಲ್ಲವೆಂದು ಬಲ್ಕೋನ್‌ಸ್ಕಿ ಭಾವಿಸಿದನು.

'ಶ್ರೀಮಂತ ಲಿಚನ್‌ಫೆಲ್ಸ್ ಬೆಳಗ್ಗೆ ಇಲ್ಲಿದ್ದರು. ವಿಯನ್ನಾದಲ್ಲಿ ಫ್ರೆಂಚ್ ಸೈನ್ಯ ನಡೆಯಿಸಿದ ಕವಾಯಿತಿನ ಪೂರ್ಣ ವರ್ಣನೆಯುಳ್ಳ ಪತ್ರವೊಂದನ್ನು ನನಗೆ ತೋರಿದರು ....ಅತಿಶಯವಾಗಿ ಸಂತೋಷಪಡುವಂಥ ಅಥವಾ ನಿಮ್ಮನ್ನು ರಕ್ಷಕರೆಂದು ಸ್ವಾಗತಿಸುವಂಥ ಮಹಾವಿಜಯವನ್ನು ನೀವು ಸಾಧಿಸಿಲ್ಲ, ತಿಳಿಯಿತೆ?'

'ನಿಜಕ್ಕೂ ನಾನು ಆ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ; ಆ ಬಗ್ಗೆ ಚಿಂತಿಸುವುದಿಲ್ಲ' ಎಂದು ರಾಜಕುಮಾರ ನುಡಿದು ಆಸ್ಟ್ರಿಯಾ ರಾಜಧಾನಿಯ ಪತನದ ಮುಂದೆ ಕ್ರೆಮ್ಸ್ ಕದನದ ವಿಜಯ ಕ್ಷುದ್ರವಾದುದೆಂದೆಣಿಸತೊಡಗಿದನು. 'ವಿಯನ್ನಾ ವಶಪಡಿಸಿಕೊಂಡದ್ದು ಹೇಗೆ? ಆ ಸೇತುವೆಯ ಗತಿ ಏನಾಯಿತು? ರಾಜಕುಮಾರ ಆಸ್ಪರ್ಗ್ (Auersperg) ಯಾವ ಸ್ಥಿತಿಯಲ್ಲಿದ್ದಾರೆ? ಅವರು ವಿಯನ್ನಾ ರಕ್ಷಣೆಯ ಹೊಣೆ ಹೊತ್ತಿದ್ದಾರೆಂದು ಕೇಳಿದ್ದೆವಲ್ಲ?' ಎಂದವನು ಪ್ರಶ್ನೆಗರೆದನು.

'ರಾಜಕುಮಾರ ಆಸ್ಪರ್ಗ್ ನದಿಯಾಚೆಯ ದಡದಲ್ಲಿ ನಾವಿರುವ ಕಡೆ ರಕ್ಷಣಾ ಪ್ರಯತ್ನದಲ್ಲಿದ್ದಾರೆ. ಆದರೆ ಅವರ ಪ್ರಯತ್ನ ಸಮರ್ಪಕವಾಗಿಲ್ಲ. ವಿಯನ್ನಾ ನದಿಯ ಆಚೆಯಿರುವ ಸೇತುವೆ ನಮಗೆ ವಶವಾಗುವಂತಿಲ್ಲ. ಅದನ್ನು ಹಿಡಿಸುವಂತೆ ಆಜ್ಞೆಯಾಗಿದೆ. ಅದಿಲ್ಲದಿದ್ದರೆ ನಾವು ಬಹುಹಿಂದೆಯೇ ಬೊಹೀಮಿಯಾದ ಬೆಟ್ಟಗಳಲ್ಲಿ ಠಾಣೆ ಹೂಡಬಹುದಿತ್ತು; ನೀವು ಮತ್ತು ನಿಮ್ಮ ಸೈನ್ಯ ಅಗ್ನಿದ್ವಯಗಳನಡುವೆ ಕಾಲುಗಂಟೆ ಚಿತ್ರಹಿಂಸೆಯನ್ನನುಭವಿಸಬೇಕಾಗುತ್ತಿತ್ತು.'

'ಇಷ್ಟಕ್ಕೇ ದಂಡಯಾತ್ರೆ ಮುಗಿಯಿತೆಂದು ತಿಳಿಯಬೇಕಾಗಿಲ್ಲ' ಎಂದು ಆಂಡ್ರೂ ಸ್ಪಷ್ಟಪಡಿಸಿದನು.

'ಮುಗಿದಿದೆಯೆಂದೇ ನನ್ನ ಭಾವನೆ. ಇಲ್ಲಿಯ ಗಣ್ಯರೂ ಹಾಗೆಯೇ ಭಾವಿಸಿದ್ದಾರೆ. ಆದರೆ ಬಾಯಿಬಿಡಲು ಅವರಿಗೆ ಧೈರ್ಯವಿಲ್ಲ. ನಾನು ಯುದ್ಧಕ್ಕೆ ಮೊದಲೇ ತಿಳಿಸಿದಂತೆ, ಡೂರೆನ್‌ಸ್ಟೀನ್ ಕಾಳಗದಂತೆ ಇದು ಸ್ವಲ್ಪದರಲ್ಲಿಯೇ ಮುಗಿಯುವಂತಿಲ್ಲ, ಮದ್ದು

ಗುಂಡುಗಳಿಂದಲೂ ಅಂತಿಮನಿರ್ಣಯ ಸಾಧ್ಯವಾಗುವಂತಿಲ್ಲ; ಯಾರಿದಕ್ಕೆ ಕಾರಣರೋ ಅವರೇ ನಿರ್ಣಯಿಸಬೇಕಾಗಿದೆ' ಎಂದು ಬಿಲೀಬಿನ್ ತನ್ನದೇ ಚುಟಕವನ್ನು ಉದ್ಧರಿಸಿ, ಮಾತು ನಿಲ್ಲಿಸಿದಾಗ ಅವನ ಹಣೆಯ ಸುಕ್ಕುಗಳು ಸರಿಹೋದುವು. 'ಬರ್ಲಿನ್ನಿನಲ್ಲಿ ಚಕ್ರವರ್ತಿ ಅಲೆಕ್ಸಾಂಡರ್ ಮತ್ತು ಪ್ರಷ್ಯಾ ದೊರೆಗಳ ನಡುವೆ ನಡೆಯುತ್ತಿರುವ ಸಂಧಾನದ ಫಲಿತಾಂಶವೇನೆಂಬುದೇ ನಮ್ಮ ಮುಂದಿರುವ ಈಗಿನ ಪ್ರಶ್ನೆ. ಪ್ರಷ್ಯಾ ಮಿತ್ರ ಕೂಟವನ್ನು ಸೇರಿದ್ದಾದರೆ ಆಸ್ಟ್ರಿಯಾ ಅನಿವಾರ್ಯವಾಗಿ ಯುದ್ಧ ಕಣಕ್ಕಿಳಿಯಬೇಕಾಗುತ್ತದೆ. ಅದಿಲ್ಲ, ಹೊಸಬಿಡದಿಗೆ ಸಂಬಂಧಿಸಿದ ಪೂರ್ವಭಾವಿ ಕಾರ್ಯಕ್ರಮಗಳ ನಿರ್ಣಯದ ಪ್ರಶ್ನೆ ಮಾತ್ರ ಉಳಿಯುತ್ತದೆ.'

ತನ್ನ ಮುಷ್ಟಿಯಿಂದ ಮೇಜನ್ನು ಗುದ್ದುತ್ತ 'ಎಂಥ ಮಹಾಪ್ರತಿಭಾಶಾಲಿ ! ಅವನ ಅದೃಷ್ಟಕ್ಕಂತು ಎಣೆಯೇ ಇಲ್ಲ' ಎಂದು ರಾಜಕುಮಾರ ಆಂಡ್ರ್ಯೂ ಮರುಕ್ಷಣವೇ ಉದ್ಗಾರ ತೆಗೆದನು.

'ಬೂನಪಾರ್ಟೆ ?' ಎಂದು ಬಿಲೀಬಿನ್ ಅನ್ವೇಷಕ ದೃಷ್ಟಿಯಿಂದ, ಯಾವುದೋ ಚತುರೋಕ್ತಿಯನ್ನು ಅಭಿವ್ಯಕ್ತಗೊಳಿಸುವ ರೀತಿಯಲ್ಲಿ ತನ್ನ ಹಣೆಯನ್ನು ಸಂಕುಚಿಸಿದನು. 'ಊ' ಅಕ್ಷರದ ಮೇಲೆ ಒತ್ತುಕೊಟ್ಟು 'ಬೂನಪಾರ್ಟೆ ?' ಎಂದು ಪುನರುಕ್ತಿಸಿದನು. 'ಅವನೀಗ ಷಾನ್‌ಬ್ರನ್‌ನಿಂದ ಇಡೀ ಆಸ್ಟ್ರಿಯಾಕ್ಕೆ ಶಾಸನರಚನೆ ಮಾಡುತ್ತಿರುವ ಸಲುವಾಗಿ 'ಊ' ಅಕ್ಷರದಿಂದ ಅವನನ್ನು ಬಿಡುಗಡೆಮಾಡಬೇಕಾಗಿದೆ. ನಾನು ಖಂಡಿತವಾಗಿ ಬದಲಾವಣೆಯನ್ನು ಸ್ವೀಕರಿಸಿ, ಅವನನ್ನು ಬೋನಪಾರ್ಟೆ ಎಂದೇ ಕರೆಯುತ್ತೇನೆ.'

'ಸದ್ಯಕ್ಕೆ ಅಣಕಬೇಡ. ಸಂಗ್ರಾಮ ಮುಗಿದಿದೆಯೆಂದು ನೀವು ತಿಳಿದಿರುವಿರಾ ?' ಎಂದು ರಾಜಕುಮಾರ ಆಂಡ್ರ್ಯೂ ಪ್ರಶ್ನಿಸಿದನು.

'ಅದೇ ನನ್ನ ತಿಳಿವಳಿಕೆ. ಆಸ್ಟ್ರಿಯಾ ಈಗ ಅಣಕದ ವಸ್ತುವಾಗಿದೆ. ಮುಂದೆ ಅದು ಸೇಡು ತೀರಿಸಿಕೊಳ್ಳುತ್ತದೆ. ಮೊದಲನೆಯದಾಗಿ ಪವಿತ್ರ ರಷ್ಯನ್ ಸೈನ್ಯ ಅದರ ರಾಜ್ಯಗಳನ್ನು ಲೂಟಿಮಾಡಿ, ಅದನ್ನು ಲೇವಡಿಗೆ ಗುರಿಮಾಡಿದೆ. ಎರಡನೆಯದಾಗಿ ಅದರ ಸೈನ್ಯವನ್ನು ನಾಶಗೈದು, ರಾಜಧಾನಿಯನ್ನು ವಶಪಡಿಸಿಕೊಂಡಾಗಿದೆ. ಇದೆಲ್ಲ ಘನತೆವೆತ್ತ ಸಾರ್ಡಿನಿಯಾ ಸಮ್ರಾಟರ ಮನೋಹರ ನೇತ್ರಗಳಿಗಾಗಿ. ಮುಂದಾಡುವ ಮಾತು ನಮ್ಮಿಬ್ಬರಿಗೇ ಸೀಮಿತವಾಗಿರಲಿ. ನಮ್ಮನ್ನು ವಂಚಿಸಲಾಗುತ್ತಿದೆಯೆಂಬ ಅರಿವು ಬಗೆಯಲ್ಲಿ ಮೂಡುತ್ತಿದೆ. ಫ್ರಾನ್ಸಿಸ್‌ನೊಡನೆ ಸಂಧಾನಗಳನ್ನು ನಡಸಬೇಕು ; ಪ್ರತ್ಯೇಕವಾಗಿ ಶಾಂತಿ ಒಪ್ಪಂದಗಳನ್ನು ರಹಸ್ಯವಾಗಿ ಕುದುರಿಸಬೇಕು.'

'ಅದು ಸಾಧ್ಯವಿಲ್ಲ. ಅದಕ್ಕಿಂತ ನೀಚತನ ಮತ್ತೊಂದಿಲ್ಲ' ಎಂದು ಆಂಡ್ರ್ಯೂ ಅಬ್ಬರಿಸಿದನು.

'ನಾವು ಬದುಕಿದ್ದರೆ ನೋಡುತ್ತೇವೆ' ಎಂದು ಬಿಲೀಬಿನ್ ಉತ್ತರಿಸಿದನು. ಸಂಭಾಷಣೆ ಕೊನೆಗೊಂಡುದರ ಕುರುಹಾಗಿ ಅವನ ಮುಖ ಮತ್ತೆ ನಯವಾಯಿತು.

ರಾಜಕುಮಾರ ಆಂಡ್ರ್ಯೂ ತನಗಾಗಿಯೇ ಅಣಿಗೊಂಡಿದ್ದ ಕೋಣೆಯನ್ನು ಪ್ರವೇಶಿಸಿ ಸ್ವಚ್ಛವಾದ ಪರ್ಸ್ಟು ತೊಟ್ಟುಕೊಂಡೇ, ಹಂಸತೂಲಿಕಾತಲ್ಪದ ಸುಗಂಧಯುಕ್ತವಾದ ಬೆಚ್ಚನೆಯ ತಲೆದಿಂಬಿನ ಮೇಲೊರಗಿದನು. ತಾನು ಯಾವ ಸಂಗ್ರಾಮದ ಸಮಾಚಾರ

ವನ್ನು ತಂದಿದ್ದನೋ, ಅದು ತನ್ನಿಂದ ದೂರ, ಬಹುದೂರವಿದ್ದಂತೆ ಭಾವಿಸಿಕೊಂಡನು. ಪ್ರಸ್ಯಾದ ಮೈತ್ರಿ, ಆಸ್ಟ್ರಿಯಾದ ವಿಶ್ವಾಸಘಾತಕತನ, ಬೋನಪಾರ್ಟೆಯ ವಿಶೇಷ ವಿಜಯ, ನಾಳೆಯ ಸುಪ್ರಭಾತದ ಸ್ವಾಗತ ಮತ್ತು ಪ್ರದರ್ಶನ ಹಾಗೂ ಚಕ್ರವರ್ತಿ ಫ್ರಾನ್ಸಿಸ್‌ರೊಡನೆಯ ಭೇಟಿ ಅವನ ಮನಸ್ಸನ್ನೆಲ್ಲ ವ್ಯಾಪಿಸಿಕೊಂಡಿದ್ದುವು.

ಅವನು ಕಣ್ಣುಮುಚ್ಚಿದ ಕೂಡಲೇ ಗುಂಡಿನ ಸುರಿಮಳೆಯು ಹಾಗೂ ಬಂದೂಕುಗಳ ಶಬ್ದವೂ, ರಥಚಕ್ರಗಳ ಚೀತ್ಕಾರವೂ ಅವನ ಕಿವಿಗಳನ್ನು ತುಂಬಿಕೊಂಡಂತೆ ತೋರುತ್ತಿತ್ತು. ಬಂದೂಕಿನ ದಳ ವಿರಳ ವಿರಳವಾಗಿ ಪರ್ವತಾಗ್ರದಿಂದ ಇಳಿಯುತ್ತಿದ್ದಂತೆ, ಫ್ರೆಂಚ್ ಸೈನ್ಯ ಗುಂಡು ಹಾರಿಸುತ್ತಿದ್ದಂತೆ ಭಾಸವಾಗುತ್ತಿತ್ತು. ಸ್ಮಿಟ್‌ನ ಪಕ್ಕದಲ್ಲಿ, ಗುಂಡುಗಳ ಆರ್ಭಟದ ನಡುವೆ ಅವನು ಮುಂದೆ ಮುಂದೆ ಧಾವಿಸುತ್ತಿದ್ದಾಗ ಅವನ ಎದೆ ಡವಡವಗುಟ್ಟುತ್ತಿದ್ದಂತೆ ಅನುಭವವಾಗುತ್ತಿತ್ತು. ಶೈಶವದಿಂದ ಅನುಭವಿಸಲಾರದಿದ್ದ ಸಂತೋಷ ಅವನ ಹೃದಯವನ್ನು ತುಂಬಿಕೊಂಡಿತ್ತು.

ಅವನು ಎಚ್ಚರಗೊಂಡನು....

'ನಿಜ, ಅದೆಲ್ಲ ನಡೆಯಿತು!' ಎಂದಂದುಕೊಂಡನು. ಹಸುಗೂಸಿನಂತೆ ಅವನು ತನ್ನೊಳಗೆ ತಾನು ನಸುನಗುತ್ತ ಗಾಢ ನಿದ್ರೆಯಲ್ಲಿ ಮುಳುಗಿದನು.

ಅಧ್ಯಾಯ ೧೧

ಮಾರನೆಯ ಬೆಳಗ್ಗೆ ಅವನು ತಡವಾಗಿ ಹಾಸುಗೆಯಿಂದೆದ್ದನು. ಇತ್ತೀಚಿನ ಅನುಭವಗಳನ್ನು ಮೆಲುಕುಹಾಕುತ್ತಿದ್ದಾಗ ಅವನ ಮನಸ್ಸಿನಲ್ಲಿ ಮೂಡಿದ ಮೊದಲನೆಯ ಆಲೋಚನೆಯೆಂದರೆ ಆ ದಿನ ಚಕ್ರವರ್ತಿ ಫ್ರಾನ್ಸಿಸ್‌ನ ಸಂದರ್ಶನವನ್ನು ಪಡೆಯುವ ವಿಚಾರ. ಯುದ್ಧ ಸಚಿವನನ್ನೂ, ಸೌಜನ್ಯಶೀಲನಾದ ಆಸ್ಟ್ರಿಯನ್ ಸಹಾಯಾಧಿಕಾರಿ ಬಿಲೀಬಿನ್‌ನನ್ನೂ, ಹಿಂದಿನ ರಾತ್ರಿಯ ಸಂಭಾಷಣೆಯನ್ನೂ ಅವನು ನೆನೆಪುಕೊಂಡನು. ಆಸ್ಥಾನೋಚಿತವಾದ ಪ್ರದರ್ಶನಸಮಯದ ಸಮವಸ್ತ್ರವನ್ನವನು ಧರಿಸಿದ್ದನು. ಬಹುಕಾಲದ ತನಕ ಅವನದನ್ನು ಧರಿಸಿರಲಿಲ್ಲ. ತೋಳಿಗೆ ಪಟ್ಟಿ ಕಟ್ಟಿತ್ತು. ಚೈತನ್ಯೋತ್ಸಾಹಗಳಿಂದ ಅವನು ಬಿಲೀಬಿನ್‌ನ ಅಧ್ಯಯನ ಕಕ್ಷೆಯನ್ನು ಪ್ರವೇಶಿಸಿದನು. ಅಲ್ಲಿ ರಾಯಭಾರಿವರ್ಗಕ್ಕೆ ಸೇರಿದ್ದ ನಾಲ್ವರು ಗಣ್ಯವ್ಯಕ್ತಿಗಳಿದ್ದರು. ಕುರಾಗಿನ್ ಮತ್ತು ಬಲ್ಕೋನ್‌ಸ್ಕಿಯರು ಮೊದಲೇ ಅವನಿಗೆ ಪರಿಚಯವಾಗಿದ್ದರು. ಬಿಲೀಬಿನ್ ಅವನಿಗೆ ಇತರರನ್ನು ಪರಿಚಯಿಸಿಕೊಟ್ಟನು.

ಬಿಲೀಬಿನ್ ಭವನದಲ್ಲಿ ಸೇರಿದ್ದ ಆ ಗಣ್ಯರೆಲ್ಲ ಯುವಕರು, ಶ್ರೀಮಂತರು, ಕುಲೀನರು, ಉಲ್ಲಾಸಶೀಲರು. ವಿಯನ್ನಾದಲ್ಲಿದ್ದಂತೆ ಅವರಿಲ್ಲಿ ಬಿಲೀಬಿನ್‌ನ ನಾಯಕತ್ವದಲ್ಲಿ ವಿಶಿಷ್ಟ ಕೂಟವನ್ನು ರಚಿಸಿಕೊಂಡಿದ್ದರು. ಬಿಲೀಬಿನ್ ಅವರನ್ನು ನಮ್ಮವರೆಂದೇ ಕರೆಯುತ್ತಿದ್ದನು. ಈ ತಂಡದಲ್ಲಿದ್ದವರೆಲ್ಲ ರಾಯಭಾರಕುಶಲಿಗಳು. ಯುದ್ಧ ಅಥವಾ ರಾಜಕೀಯದಲ್ಲಿ ಅವರಿಗೆ ಆಸ್ಥೆಯಿರಲಿಲ್ಲ. ಅವರಿಗಿದ್ದ ಆಸಕ್ತಿಯೆಲ್ಲ ಉಚ್ಚಸಮಾಜಕ್ಕೆ, ಕೆಲವು ನಮೂನೆಯ ಹೆಣ್ಣುಗಳಿಗೆ ಮತ್ತು ಸೇವಾಕ್ಷೇತ್ರದ ಅಧಿಕಾರ ಭಾಗಕ್ಕೆ ಸಂಬಂಧಿಸಿದುದಾಗಿತ್ತು. ಆಂಡ್ರೂ ತಮ್ಮೊಳ್ಳಬ್ಬನೆಂದೇ ಭಾವಿಸಿ ಅವರು ಅವನನ್ನು ಸ್ವಾಗತಿಸಿದರು.

ಇತರರಿಗೆ ಅಂಥ ಮರ್ಯಾದೆಯನ್ನವರು ಸಲ್ಲಿಸುತ್ತಿರಲಿಲ್ಲ. ಸಭ್ಯ ಸಂಪ್ರದಾಯದಂತೆ ಕುಶಲ ಪ್ರಶ್ನೆಗಳಾದ ನಂತರ ಅವರ ಸಂಭಾಷಣೆ ಪ್ರಾರಂಭವಾಯಿತು. ಯುದ್ಧ ಮತ್ತು ಸೈನ್ಯಗಳ ಬಗೆಗೆ ಅವನಿಗೆ ಅವರು ಕೆಲವು ಪ್ರಶ್ನೆ ಹಾಕಿದರು. ಅನಂತರ ಮಾತು ಹರಟೆ ಹಾಸ್ಯಗಳ ಕಡೆಗೆ ತಿರುಗಿತು.

ಅವರಲ್ಲೊಬ್ಬ ಸೋದರ ರಾಯಭಾರಿಯ ದುರದೃಷ್ಟವನ್ನು ನೆನೆದು 'ಇಗೋ ನೋಡಿ, ಲಂಡನ್ನಿಗೆ ಮಾಡಿರುವ ಅವನ ನೇಮಕ ಬಡ್ತಿಯೆಂದು ಚಾನ್ಸಲರ್ ಸ್ಪಷ್ಟವಾಗಿ ನುಡಿದರಂತೆ. ಅವನ ಸ್ಥಿತಿಯನ್ನೂಹಿಸಿಕೊಳ್ಳಬಲ್ಲಿರಾ?' ಎಂದು ನುಡಿದನು. 'ಪಾಪ, ಅದರಿಂದಾಗಿ ಆ ಮನುಷ್ಯ ತುಂಬ ಹಿಂಸೆಗೊಳಗಾಗಿದ್ದಾನೆ. ದಾನ್‌ಜುವಾನ್ ಇದ್ದಾನಲ್ಲ, ಅವನು ತುಂಬ ಕೆಟ್ಟವ. ಅದನ್ನು ತನ್ನ ಪ್ರಯೋಜನಕ್ಕೆ ಬಳಸಿಕೊಳ್ಳುತ್ತಿದ್ದಾನೆ. ಅದೇನೇ ಇರಲಿ, ಕುರಾಗಿನ್‌ನನ್ನು ನಿಮಗೊಪ್ಪಿಸಿದ್ದೇನೆ' ಎಂದವನು ಮಾತು ಮುಂದು ವರಿಸಿದನು.

ರಾಜಕುಮಾರ ಹಿಪ್ಪೊಲೈಟ್ ಕುರಾಗಿನ್ ಆರಾಮುಶಾಲೆಯ ಕುರ್ಚಿಯ ತೋಳು ಗಳ ಮೇಲೆ ಕಾಲುಚಾಚಿ, ಜೋಲಾಡಿಸುತ್ತಿದ್ದನು. ಅವನು ನಗುತ್ತ 'ಆ ವಿಷಯ ಮತ್ತಷ್ಟು ವಿವರಿಸು' ಎಂದು ನುಡಿದನು.

'ನೀನೊಂದು ಹಾವು. ಹಾಗಂತ ಕರೀತಿರೋದು ನಿನ್ನನ್ನ, ಡಾನ್ ಜುವಾನ್' ಎಂಬುದಾಗಿ ಅನೇಕ ಧ್ವನಿಗಳು ಕೂಗಿಕೊಂಡುವು.

ಬಿಲೀಬಿನ್ ರಾಜಕುಮಾರ ಆಂಡ್ರೂ ಕಡೆಗೆ ತಿರುಗಿಕೊಂಡು, ಬಲ್ಕೋನ್‌ಸ್ಕಿ ಯನ್ನುದ್ದೇಶಿಸಿ, 'ನಿಮಗೆ ಗೊತ್ತಿಲ್ಲ, ಈ ಮನುಷ್ಯ ಮಹಿಳೆಯರ ಮೇಳದಲ್ಲಿ ನಡಸು ತ್ತಿರುವ ಆಟಪಾಟಗಳನ್ನು ಹೋಲಿಸಿದಾಗ, ಫ್ರೆಂಚ್ ಸೈನ್ಯದ ನೀಚವರ್ತನೆ ಏನೇನೂ ಇಲ್ಲವೆಂದೇ ಹೇಳಬೇಕಾಗುತ್ತದೆ.' ಎಂದು ನುಡಿದನು.

'ಹೆಂಗಸು ಗಂಡಸಿನ ಸಂಗಾತಿ' ಎಂದು ರಾಜಕುಮಾರ ಹಿಪ್ಪೊಲೈಟ್ ಕನ್ನಡಕದ ಮೂಲಕ ಕುರ್ಚಿಯ ತೋಳುಗಳ ಮೇಲಿದ್ದ ಕಾಲುಗಳ ಕಡೆಗೆ ನೋಡುತ್ತಿದ್ದನು.

ಬಿಲೀಬಿನ್ ಮತ್ತು ಇತರ 'ನಮ್ಮವರು' ಹಿಪ್ಪೊಲೈಟನ ಮುಖ ನೋಡಿಕೊಂಡು ಬಿದ್ದುಬಿದ್ದು ನಗುತ್ತಿದ್ದರು. ಹಿಪ್ಪೊಲೈಟನ ಬಗ್ಗೆ ಅವನ ಮಡದಿಯ ಸಲುವಾಗಿ ರಾಜಕುಮಾರ ಆಂಡ್ರೂ ಮಾತ್ಸರ್ಯ ಹೊಂದಿದ್ದನು. ಆ ಗುಂಪಿನ ತಮಾಷೆಯ ಗುರಿ ಹಿಪ್ಪೊಲೈಟ್ ಎಂಬ ಸಂಗತಿ ಆಂಡ್ರೂಗೆ ಮನವರಿಕೆಯಾಯಿತು.

'ನಿಮಗೆ ನಾನೊಂದು ಔತಣ ಏರ್ಪಡಿಸಬೇಕಾಗಿದೆ. ರಾಜಕೀಯ ವಿಚಾರ ಕುರಿತು ಚರ್ಚಿಸುವಾಗ ಕುರಾಗಿನ್ ಮನೋಹರವಾಗಿ ಕಾಣುತ್ತಾನೆ. ಆಗವರ ಗಾಂಭೀರ್ಯವನ್ನು ಗಮನಿಸಬೇಕು' ಎಂದು ಬಿಲೀಬಿನ್ ಬಲ್ಕೋನ್‌ಸ್ಕಿ ಕಡೆ ಮುಖವಾಗಿ ಪಿಸುಗುಟ್ಟಿದನು.

ಅವನು ಹಿಪ್ಪೊಲೈಟ್ ಪಕ್ಕಕ್ಕೆಸರಿದು, ಹಣೆಯನ್ನು ಸುಕ್ಕುಗಟ್ಟಿಸಿಕೊಂಡು, ರಾಜಕೀಯ ಸಂಗತಿಗಳನ್ನು ಪ್ರಸ್ತಾಪಿಸ ತೊಡಗಿದನು. ರಾಜಕುಮಾರ ಆಂಡ್ರೂ ಮತ್ತಿತರರು ಆ ಇಬ್ಬರನ್ನು ಸುತ್ತುಗಟ್ಟಿದರು. ಹಿಪ್ಪೊಲೈಟ್ ತನ್ನ ಪ್ರಾಮುಖ್ಯವನ್ನು ಸೂಚಿಸಲೆನ್ನುವಂತೆ ಇತರರ ಕಡೆಗೆ ದಿಟ್ಟಗಣ್ಣಾಗಿ 'ಬರ್ಲಿನ್ ಸಚಿವಸಂಪುಟ ಮೈತ್ರಿ ಭಾವವನ್ನು ಪ್ರಕಟಿಸಲಾರದು.' ಎಂದು ತನ್ನ ಮಾತು ಮುಂದುವರಿಸಿದನು. 'ಹಿಂದಿನ

ಟಿಪ್ಪಣಿಯಲ್ಲಿದ್ದಂತೆ....ಅಭಿವ್ಯಕ್ತಿಯನ್ನು ನೀಡದೆ....ನಿಮಗೆ ಗೊತ್ತಿದೆಯಲ್ಲ....ಜತೆಗೆ ಘನತೆವೆತ್ತ ಸಾರ್ವಭೌಮರು ಮೈತ್ರಿ ತತ್ವದಿಂದ ಹಿಂಜರಿಯದಿದ್ದರೆ....'

'ಸ್ವಲ್ಪ ತಡಿ. ನಾನಿನ್ನೂ ಮುಗಿಸಿಲ್ಲ....' ಎಂದವನು ಆಂಡ್ರೂವಿನ ತೋಳು ಹಿಡಿದುಕೊಂಡು ವಾಗ್‌ಲಹರಿ ಹರಿಸಿದನು. 'ಮಧ್ಯಪ್ರವೇಶ ಅಮಧ್ಯಪ್ರವೇಶಕ್ಕಿಂತ ಪ್ರಬಲವಾಗಿರುತ್ತದೆ. ಮತ್ತು....' ಎಂದವನು ತುಸುಮಾತು ತಡೆದನು. 'ಕೊನೆಯದಾಗಿ ನವೆಂಬರ್ ೧೮ರ ಪತ್ರ ತಲುಪದಿದ್ದುದಕ್ಕಾಗಿ ಯಾರೂ ಆರೋಪ ಹೊರಿಸುವಂತಿಲ್ಲ. ಅದು ಕೊನೆಗೊಳ್ಳುವುದೆ ಹೀಗೆ' ಎಂದವನು ಮಾತು ಮುಕ್ತಾಯಗೊಳಿಸಿದ ಸೂಚನೆಗಾಗಿ ಬಲ್‌ಕೋನ್‌ಸ್ಕಿಯ ಭುಜದಿಂದ ತನ್ನ ಕೈ ಹಿಂತೆಗೆದುಕೊಂಡನು.

'ನಿಮ್ಮ ಉತ್ಕೃಷ್ಟವಾದ ಬಾಯಲ್ಲಿ ಎಂಥ ಮುತ್ತುರತ್ನಗಳು ಹುದುಗಿವೆ ಎಂಬ ಕಾರಣದಿಂದ ನಿಮ್ಮನ್ನರಿತುಕೊಂಡಿದ್ದೇನೆ, ಡೆಮಾಸ್ತನೀಸ್.' ಎಂದು ಬಿಲೀಬಿನ್ ನುಡಿಯುವಾಗ ಅವನ ತಲೆಯ ಮೇಲಣ ಕೂದಲಣಿಗೆ ಸಂತೃಪ್ತಭಾವದಿಂದ ಚಲಿಸುತ್ತಿತ್ತು.'

ಪ್ರತಿಯೊಬ್ಬರೂ ನಕ್ಕರು. ಹಿಪ್ಪೊಲೈಟನ ನಗುವಂತು ರಭಸವಾಗಿತ್ತು. ಮನೋವೇದನೆಯಿಂದಾಗಿ ಅವನ ಉಸಿರಾಟ ಕಷ್ಟವಾಗಿತ್ತು. ಆದರೆ ಅವನು ಬಿರಿನಗುವನ್ನು ತಡೆಯಲಾಗಲಿಲ್ಲ. ಅದರಿಂದಾಗಿ ಭಾವನಾರಹಿತವಾದ ಅವನ ಮುಖಚರ್ಯೆ ಸಂಕ್ಷೋಭೆಗೊಳಗಾಯಿತು.

'ಮಿತ್ರರೆ, ಬಲ್ಕೋನ್‌ಸ್ಕಿ ಈ ಮನೆಯಲ್ಲೀಗ ನನ್ನ ಅತಿಥಿಯಾಗಿದ್ದಾರೆ. ಇವರ ಸಲುವಾಗಿ ಶಕ್ತಿಮೀರಿ ವೈಭವ ಪೂರ್ಣವಾದ ಔತಣವನ್ನು ವ್ಯವಸ್ಥೆಗೊಳಿಸಬೇಕಾಗಿದೆ. ನಾವು ವಿಯನ್ನಾದಲ್ಲಿದ್ದಿದ್ದರೆ ಏರ್ಪಾಡು ಸುಲಭವಾಗುತ್ತಿತ್ತು. ಗತಿಗೆಟ್ಟ ಈ ಕೊಂಪೆಯಲ್ಲಿ ಅದೆಲ್ಲ ಕಷ್ಟ. ನೀವು ನನ್ನ ಸಹಾಯಕ್ಕೆ ನಿಲ್ಲಬೇಕಾಗಿದೆ. ಬ್ರೂನ್ ಊರಿನ ಆಕರ್ಷಣೆಗಳನ್ನೆಲ್ಲ ಅವರಿಗೆ ತೋರಿಸಬೇಕಾಗಿದೆ. ನಿಮಗೆ ರಂಗಮಂದಿರದ ಹೊಣೆಗಾರಿಕೆಯಿರಲಿ, ನಾನು ಗೋಷ್ಠಿಯ ವ್ಯವಸ್ಥೆ ನೋಡಿಕೊಳ್ಳುತ್ತೇನೆ, ಮಹಿಳೆಯರ ಮೇಲ್ವಿಚಾರಣೆ ಹಿಪ್ಪೊಲೈಟರಿಗಿರಲಿ.' ಎಂದು ಬಿಲೀಬಿನ್ ಕಾರ್ಯಕ್ರಮವನ್ನು ಅವರ ಮುಂದಿಟ್ಟನು.

'ಇವರಿಗೆ ಅಮಿಲಿಯನ್ನು ತೋರಿಸಬೇಕು. ಅವಳು ತುಂಬ ಚೆಲುವೆ' ಎಂದು ನಮ್ಮವರಲ್ಲೊಬ್ಬ ನುಡಿದು, ಅವನ ಬೆರಳುತುದಿಗೆ ಮುತ್ತಿಟ್ಟನು.

'ಒಟ್ಟಿನಲ್ಲಿ ರಕ್ತ ಪಿಪಾಸೆಯ ಈ ಯೋಧನನ್ನು ಮಾನವೀಯ ಆಸಕ್ತಿಗಳ ಕಡೆಗೆ ತಿರುಗಿಸಬೇಕು.' ಎಂದು ಬಿಲೀಬಿನ್ ನಗೆಯಾಡಿದನು.

ರಾಜಕುಮಾರ ಆಂಡ್ರೂ ತನ್ನ ಗಡಿಯಾರ ನೋಡಿಕೊಂಡು 'ನಿಮ್ಮ ಆತಿಥ್ಯ ಸ್ವೀಕಾರಕ್ಕೀಗ ಪುರಸೊತ್ತಿಲ್ಲ, ಮಿತ್ರರೆ. ನಾನೀಗ ಹೋಗಬೇಕು, ಹೊತ್ತಾಯ್ತು.' ಎಂದು ಉತ್ತರಿಸಿದನು.

'ಎಲ್ಲಿಗೆ?'

'ಸಾರ್ವಭೌಮರ ಬಳಿಗೆ'

'ಅಹಹ! ಒಹೊಹೊ!'

'ನಮಸ್ಕಾರ, ಬಲ್ಕೋನ್‌ಸ್ಕಿಯವರೆ! ನಮಸ್ತೇ, ರಾಜಕುಮಾರರೆ! ಭೋಜನಕ್ಕೆ

ಬೇಗ ಬಂದುಬಿಡಿ. ನಿಮಗಾಗಿ ಕಾದಿರುತ್ತೇವೆ!' ಎಂದು ಹಲವು ಧ್ವನಿಗಳು ಮೊಳವಿಸಿದುವು.

'ಚಕ್ರವರ್ತಿಗಳೊಡನೆ ಮಾತಾಡುವಾಗ, ಸಾಮಾನು ಸರಂಜಾಮುಗಳ ಸರಬರಾಜಿನ ಬಗ್ಗೆ ಹಾಗೂ ಸೂಚಿತ ಮಾರ್ಗಗಳ ವಿಷಯವಾಗಿ ಸಾಧ್ಯವಾದಷ್ಟು ಮೆಚ್ಚುಗೆ ನುಡಿಗಳನ್ನೆ ಬಳಸಿ' ಎಂದು ಬಿಲೀಬಿನ್ ಸಲಹೆ ನೀಡುತ್ತ, ಅಂಗಳದ ತನಕ ಅವನೊಡನೆ ಹೋದನು.

'ಅವುಗಳ ಬಗ್ಗೆ ಒಳ್ಳೆಯ ಮಾತಾಡಬೇಕೆಂಬುದೇ ನನ್ನ ಅಪೇಕ್ಷೆ. ಆದರೆ ನನಗೆ ಸತ್ಯಾಂಶಗಳು ತಿಳಿದಿರುವುದರಿಂದ ಮಾತು ಕಟ್ಟುತ್ತದೆ' ಎಂದು ಬಲ್ಕೊನ್‌ಸ್ಕಿ ಮಂದಹಾಸ ಬೀರಿದನು.

'ಹೇಗಾದರಾಗಲಿ, ನೀವು ಇಚ್ಛಿಸಿದ್ದನ್ನೆಲ್ಲ ಹೇಳಿಬಿಡಿ. ಹೇಳಿದ್ದನ್ನು ಕೇಳಿಕೊಂಡು ಕುಳಿತಿರುವುದೆಂದರೆ ಅವರಿಗೆ ತುಂಬ ಇಷ್ಟ. ತಾವೇ ಮಾತಾಡುವುದೆಂದರೆ ಅವರಿಗಾಗದು. ನೀವೇ ನೋಡುವಿರಂತೆ.

ಅಧ್ಯಾಯ ೧೨

ಮೊದಲೇ ನಿಗದಿಯಾಗಿದ್ದಂತೆ ರಾಜಕುಮಾರ ಆಂಡ್ರ್ಯೂ ಸ್ವಾಗತದರ್ಬಾರಿನಲ್ಲಿ ಆಸ್ಟ್ರಿಯಾದ ಅಧಿಕಾರಿಗಳ ಸಾಲಿನಲ್ಲಿ ನಿಂತಿದ್ದನು. ಚಕ್ರವರ್ತಿ ಫ್ರಾನ್ಸಿಸ್ ಅವನ ಮುಖದಲ್ಲಿ ದಿಟ್ಟಿನಾಟಿ, ತನ್ನ ಲಂಬವಾದ ತಲೆಯನ್ನು ತೂಗಿದನು. ಔಪಚಾರಿಕ ಕಾರ್ಯಕ್ರಮ ಮುಗಿದನಂತರ, ಹಿಂದಿನ ದಿನ ಕಂಡಿದ್ದ ಸಹಾಯಾಧಿಕಾರಿ ಅವನ ಬಳಿ ಬಂದು, ಚಕ್ರವರ್ತಿಗಳ ಅಪ್ಪಣೆಯಾಗಿದೆಯೆಂದು ತಿಳಿಸಿದನು. ಕೋಣೆಯ ನಡುವೆ ನಿಂತುಕೊಂಡು ಚಕ್ರವರ್ತಿಗಳು ಅವನನ್ನು ಬರಮಾಡಿಕೊಂಡರು. ಸಂಭಾಷಣೆ ಪ್ರಾರಂಭವಾಗುವ ಮುನ್ನವೇ, ಚಕ್ರವರ್ತಿಯ ದಿಗ್ಭ್ರಮ ಪರಿಸ್ಥಿತಿಯಿಂದ ಹಾಗೂ ವಾಕ್ ಶೂನ್ಯತೆಯಿಂದ ಅವನು ಅಚ್ಚರಿಗೊಂಡನು.

'ಕದನ ಪ್ರಾರಂಭವಾದದ್ದು ಯಾವಾಗ?' ಎಂದವನು ಆತುರಾತುರವಾಗಿ ಪ್ರಶ್ನಿಸಿದನು.

ರಾಜಕುಮಾರ ಆಂಡ್ರ್ಯೂ ಉತ್ತರ ನೀಡಿದನು: ಅನಂತರ ಅಷ್ಟೇ ಸರಳವಾದ ಪ್ರಶ್ನೆಗಳು ಹಿಂಬಾಲಿಸಿದುವು. 'ಕುತೂಜೊವ್ ಆರೋಗ್ಯವೆ? ಅವರು ಯಾವಾಗ ಕ್ರೆಮ್ಸ್ ಬಿಟ್ಟರು?' ಇತ್ಯಾದಿ ಇತ್ಯಾದಿ. ನಿರ್ದಿಷ್ಟ ಸಂಖ್ಯೆಯ ಪ್ರಶ್ನೆಗಳನ್ನು ಕೇಳುವುದೇ ಮುಖ್ಯೋದ್ದೇಶವಾಗಿದ್ದಂತೆ ಅವನ ಮಾತಿನಿಂದ ವ್ಯಕ್ತವಾಗುತ್ತಿತ್ತು. ಉತ್ತರಗಳು ಅವನಿಗೆ ಹಿಡಿಸಿದಂತೆ ತೋರುತ್ತಿರಲಿಲ್ಲ.

'ಯುದ್ಧ ಎಷ್ಟು ಗಂಟೆಗೆ ಪ್ರಾರಂಭವಾಯಿತು?' ಎಂದು ಚಕ್ರವರ್ತಿ ಕೇಳಿದನು.

'ಮುಂಚೂಣಿಯ ಕದನ ಎಷ್ಟು ಹೊತ್ತಿಗೆ ಪ್ರಾರಂಭವಾಯಿತೆಂಬುದನ್ನು ಪ್ರಭುಗಳಿಗೆ ತಿಳಿಸಲಾರದವನಾಗಿದ್ದೇನೆ. ನಾನಿದ್ದ ಕಡೆ ಎಂದರೆ ದೂರೆನ್‌ಸ್ಟೀನ್‌ನಲ್ಲಿ ಅಪರಾಹ್ನ ಐದುಗಂಟೆಗೆ ನಮ್ಮ ಆಕ್ರಮಣ ಶುರುವಾಯಿತು.' ಎಂದು ಬಲ್ಕೊನ್‌ಸ್ಕಿ ನೂರ್ನುಡಿದನು. ಮಾತು ಮಾತಿಗೂ ಅವನ ಉತ್ತರ ಕಾವೇರುತ್ತಿತ್ತು. ತಾನು ನೋಡಿದ್ದ

ಮತ್ತು ತಿಳಿದಿದ್ದ ಸಂಗತಿಗಳು ಅಭಿವ್ಯಕ್ತಿಗಾಗಿ ಹಾತೊರೆಯುತ್ತಿದ್ದುವು. ಅಂಥದೊಂದು ಅವಕಾಶಕ್ಕಾಗಿ ಅವನು ಕಾಯುತ್ತಿದ್ದನು. ಚಕ್ರವರ್ತಿ ಮುಗುಳುನಗೆ ಬೀರಿ, 'ಎಷ್ಟು ಮೈಲಿಯಿದೆ?' ಎಂದು ನಡುವೆ ಬಾಯಿ ಹಾಕಿದನು.

'ಎಲ್ಲಿಂದೆಲ್ಲಿಗೆ? ಖಾವಂದ್'

'ದೂರೆನ್‌ಸ್ಟೀನ್‌ನಿಂದ ಕ್ರೆಮ್ಸ್‌ವರೆಗೆ?'

'ಮೂರೂವರೆ ಮೈಲಿ, ಬುದ್ಧಿ'

'ಫ್ರೆಂಚ್ ಸೈನ್ಯ ಎಡದಡವನ್ನು ತ್ಯಜಿಸಿದೆಯೆ?'

'ನಮ್ಮ ಬೇಹುಗಾರರ ಪ್ರಕಾರ ಅವರು ರಾತ್ರಿಯ ವೇಳೆ ತೇಲುದಿಮ್ಮಿಗಳ ಮೇಲೆ ನದಿ ದಾಟಿದರು.'

'ಕ್ರೆಮ್ಸ್‌ನಲ್ಲಿ ಸಾಕಷ್ಟು ಮೇವಿದೆಯೆ?'

'ಎಷ್ಟು ಬೇಕೋ ಅಷ್ಟು ಮೇವು....'

'ಸೇನಾನಿ ಸ್ಮಿಟ್ ಹತಗೊಂಡಾಗ ಎಷ್ಟು ಗಂಟೆ?' ಎಂದು ಚಕ್ರವರ್ತಿ ನಡುವೆ ಮಾತುತೆಗೆದನು.

'ಪ್ರಾಯಶಃ ಏಳು ಗಂಟೆ.'

'ಏಳುಗಂಟೆಯಲ್ಲಿ? ನಿಜಕ್ಕೂ ವಿಷಾದಕರ!'

ಚಕ್ರವರ್ತಿ ರಾಜಕುಮಾರ ಆಂಡ್ರ್ಯೂಗೆ ಧನ್ಯವಾದ ಹೇಳಿ, ಮಣಿದನು. ರಾಜಕುಮಾರ ಹೊರಗೆ ನಡೆದನು. ಒಡನೆಯೇ ಆಸ್ಥಾನಿಕರು ಅವನನ್ನು ಸುತ್ತಮುತ್ತ ಬಳಸಿದರು. ಎಲ್ಲಿ ನೋಡಿದರೂ ಸ್ನೇಹದೃಷ್ಟಿಗಳೆ ಕಾಣುತ್ತಿದ್ದುವು, ಪ್ರಿಯ ಶಬ್ದಗಳೆ ಕೇಳಿಸುತ್ತಿದ್ದುವು. ಅರಮನೆಯಲ್ಲುಳಿಯದಿದ್ದುದಕ್ಕಾಗಿ ಸಹಾಯಾಧಿಕಾರಿ ಆಕ್ಷೇಪವೆತ್ತಿ, ತನ್ನ ಮನೆಯಲ್ಲಿಯೇ ತಂಗಬಹುದೆಂದು ಒತ್ತಾಯಿಸಿದನು. ಯುದ್ಧಸಚಿವ ಅವನ ಕೈಕುಲುಕಿ, ಚಕ್ರವರ್ತಿಗಳು ದಯಪಾಲಿಸಲಿದ್ದ ತೃತೀಯ ದರ್ಜೆಯ ಮೇರಿಯಾ ಥರೀಸಾ ಪ್ರಶಸ್ತಿಗಾಗಿ ಅಭಿನಂದಿಸಿದನು. ದರ್ಬಾರುಭಕ್ಷಿ ಚಕ್ರವರ್ತಿನಿಯ ಆಹ್ವಾನ ವನ್ನು ಅವನಿಗೆ ಮುಟ್ಟಿಸಿದನು. ಚಕ್ರವರ್ತಿಯ ಮಗಳು ಅವನನ್ನು ನೋಡಲಪೇಕ್ಷಿಸಿ ದಳು. ಯಾರಿಗೆ ಏನು ಉತ್ತರ ಹೇಳಬೇಕೆಂಬುದೇ ತಿಳಿಯದೆ ಕೆಲವು ಕ್ಷಣ ಅವನಿಗೆ ಕಕಮಕ ಹಿಡಿದಂತಾಯಿತು. ಕಕಮಕದಿಂದ ಚೇತರಿಸಿಕೊಳ್ಳುವಷ್ಟರಲ್ಲಿ ರಷ್ಯನ್ ರಾಯಭಾರಿ ಅವನನ್ನು ಬರಸೆಳೆದು, ಕಿಟಕಿಯ ಬಳಿಗೊಯ್ದು, ಮಾತಾಡತೊಡಗಿದನು.

ಬಿಲೀಬಿನ್‌ನ ಮುನ್ಸೂಚನೆಗೆ ವಿರುದ್ಧವಾಗಿ ಅವನು ತಂದಿದ್ದ ಸುದ್ದಿಗೆ ಸಂತೋಷ ಯುಕ್ತವಾದ ಸ್ವಾಗತ ದೊರಕಿತು. ಧನ್ಯವಾದ ಸಮರ್ಪಣೆಯ ಸಮಾರಂಭ ಏರ್ಪಾಡಾಗಿ, ಕುತೂಜೊವ್‌ಗೆ ಮೇರಿಯಾಥರಿಸಾ ವಿಶಿಷ್ಟ ಪ್ರಶಸ್ತಿ ಲಭಿಸಿತು. ಸಮಸ್ತ ಸೈನ್ಯಕ್ಕೆ ಹಲವಾರು ಪ್ರಶಸ್ತಿಗಳು ದೊರೆತುವು. ಎಲ್ಲರೂ ಅವನನ್ನು ಕರೆಯುವವರೆ. ಆಸ್ಟ್ರಿಯಾದ ಪ್ರಮುಖ ಗಣ್ಯರ ಭೇಟಿಯಲ್ಲಿ ಬೆಳಗಿನ ಹೊತ್ತು ಸಮೆಯಿತು. ಎಲ್ಲ ಕರೆಗಳನ್ನು ಪೂರೈಸಿದ ತರುವಾಯ, ಅಪರಾಹ್ನ ನಾಲ್ಕೈದು ಗಂಟೆಯೊಳಗಾಗಿ ಬಿಲೀಬಿನ್ ಭವನಕ್ಕೆ ಹಿಂದಿರುಗಿದನು. ದಾರಿಯಲ್ಲಿ ಬರುವಾಗ ಯುದ್ಧಕ್ಕೆ ಸಂಬಂಧಿಸಿದ ಸಂಗತಿ ಗಳನ್ನು, ಬ್ರೂನ್ ಭೇಟಿಯ ವಿವರಗಳನ್ನು ಕಾಗದದ ಮೂಲಕ ತಂದೆಗೆ ತಿಳಿಸಬೇಕೆಂದು

ಆಲೋಚಿಸುತ್ತಿದ್ದನು. ಬಾಗಿಲಲ್ಲಿ ಅರ್ಧದಷ್ಟು ಸಾಮಾನು ತುಂಬಿದ ಗಾಡಿ ಕಣ್ಣಿಗೆ ಬಿತ್ತು. ಬಿಲೀಬಿನ್‌ನ ಆಳು ಫ್ರಾಂಜ್ ಚರ್ಮದ ಚೀಲವೊಂದನ್ನು ಮುಂಬಾಗಿಲಿಂದ ಹೊರಗೆ ಅತಿ ಕಷ್ಟದಿಂದ ಸರಿಸುತ್ತಿದ್ದನು.

ಬಿಲೀಬಿನ್ ಮನೆಗೆ ಹಿಂದಿರುಗುವ ಮುನ್ನ ಆಂಡ್ರೂ ಪುಸ್ತಕದಂಗಡಿಗೆ ಹೋಗಿ, ಕೆಲ ಕಾಲ ಕಳೆದನು. ದಂಡಯಾತ್ರೆಯ ಕಾಲದ ಅಧ್ಯಯನಕ್ಕೆಂದು ಅವನು ಕೆಲವು ಪುಸ್ತಕಗಳನ್ನು ಖರೀದಿಸಿದ್ದನು.

ಫ್ರಾಂಜಿನ ಫಜೀತಿಯನ್ನು ನೋಡಿದ ಅವನು 'ಏನದು'? ಎಂದು ಪ್ರಶ್ನಿಸಿದನು.

ಫ್ರಾಂಜ್ ಚೀಲವನ್ನು ವಾಹನಕ್ಕೆ ಕಷ್ಟದಿಂದುರುಳಿಸುತ್ತ 'ನಾವು ಮತ್ತಷ್ಟು ಮುಂದೆ ಸಾಗಬೇಕಾಗಿದೆ, ಬುದ್ಧಿ. ಆ ಫಟಿಂಗ ನಮ್ಮ ಬೆನ್ನಹಿಂದೆಯೇ ಬರುತ್ತಿದ್ದಾನೆ.' ಎಂದು ನುಡಿದನು.

'ಏನಾಗಿದೆ?' ಎಂದು ಆಂಡ್ರೂ ಪ್ರಶ್ನಿಸಿದನು.

ಅವನನ್ನು ಸ್ವಾಗತಿಸುವ ಸಲುವಾಗಿ ಬಿಲೀಬಿನ್ ಹೊರಗೆ ಬಂದನು. ಸದಾ ಶಾಂತಿಯಿಂದ ಕೂಡಿರುತ್ತಿದ್ದ ಅವನ ಮುಖದಲ್ಲಿ ಉದ್ರೇಕ ತಾಂಡವವಾಡುತ್ತಿತ್ತು. 'ಇಗೋ, ಇದು ಹರ್ಷದಾಯಕವಾದ ಸಂಗತಿಯೆಂದು ತಿಳಿಯಿರಿ. ಯಾವುದಂತೀರಿ? ವಿಯನ್ನಾದ ಥಾಬರ್ ಸೇತುವೆಯ ವ್ಯವಹಾರ....ಪ್ರತಿರೋಧವಿಲ್ಲದೆಯೇ ಅವರು ನದಿ ದಾಟಿದ್ದಾರೆ!'

ರಾಜಕುಮಾರ ಆಂಡ್ರೂವಿಗೆ ಆ ಮಾತು ಅರ್ಥವಾಗಲಿಲ್ಲ.

'ಪಟ್ಟಣದ ಪ್ರತಿಯೊಬ್ಬ ಟಾಂಗಾವಾಲನಿಗೂ ಈ ವಿಷಯ ತಿಳಿದಿದೆ. ನಿಮಗದು ತಿಳಿದಿಲ್ಲವೆಂದರೆ, ನೀವು ಬಂದದ್ದೆಲ್ಲಿಂದ ಎಂದು ಕೇಳಬೇಕಾಗುತ್ತದೆ.'

'ಸಾರ್ವಭೌಮ ಕುಮಾರಿಯ ಮನೆಯಿಂದ ಬಂದೆ. ಅಲ್ಲಿ ಯಾವ ಸಮಾಚಾರವೂ ಕಿವಿಯ ಮೇಲೆ ಬೀಳಲಿಲ್ಲ.'

'ಪ್ರತಿಯೊಬ್ಬರೂ ಗಂಟುಮೂಟೆ ಕಟ್ಟುತ್ತಿರುವುದು ನಿನಗೆ ಕಾಣಿಸುವುದಿಲ್ಲವೆ?'

'ಇಲ್ಲ....ಇದೆಲ್ಲ ಏನು?' ಎಂದು ರಾಜಕುಮಾರ ಭಾವಾವೇಶದಿಂದ ಕೇಳಿದನು.

'ಇದೆಲ್ಲ ಏನೆಂದು ಕೇಳಿದಿರಾ? ಆಸ್ಪರ್ಗ್ ರಕ್ಷಿಸುತ್ತಿದ್ದ ಸೇತುವೆಯನ್ನು ಫ್ರೆಂಚ್ ಸೈನ್ಯ ದಾಟಿದೆ. ಸೇತುವೆಯನ್ನು ಸಿಡಿಸಿಲ್ಲ. ಬ್ರೂನ್ ಮಾರ್ಗದಲ್ಲಿ ಮುರತ್ ನುಗ್ಗುತ್ತಿದ್ದಾನೆ; ಒಂದೆರಡು ದಿನಗಳಲ್ಲಿ ಆವನು ಇಲ್ಲಿರುತ್ತಾನೆ.'

'ಏನು? ಇಲ್ಲಿಗೆ? ಸಿಡಿಮದ್ದಿಟ್ಟಿದ್ದರೆ ಸೇತುವೆಯನ್ನೇಕೆ ಅವರು ಸಿಡಿಸಲಿಲ್ಲ?'

'ನನ್ನದೂ ಅದೇ ಪ್ರಶ್ನೆ. ಬೋನಪಾರ್ಟೆಗೂ ಆ ಕಾರಣ ತಿಳಿದಿಲ್ಲ.'

ಬಲ್ಕೋನ್‌ಸ್ಕಿ ತನ್ನ ಭುಜಗಳನ್ನು ಕುಣಿಸಿ, 'ಸೇತುವೆಯನ್ನು ದಾಟಿದ ನಂತರ ಸೈನ್ಯ ನಾಶವಾದಂತೆಯೇ ಸರಿ!' ಎಂದು ನುಡಿದನು.

'ನಾನು ಹೇಳುವುದೂ ಅದೇಯೆ. ಈಗ ನೋಡಿ, ನಾನು ಈ ಮೊದಲೇ ತಿಳಿಸಿದಂತೆ ಫ್ರೆಂಚ್ ಸೈನ್ಯ ವಿಯನ್ನಾವನ್ನು ಪ್ರವೇಶಿಸಿದೆ. ಮಾರನೆಯ ದಿನವೇ, ಅಂದರೆ ನಿನ್ನೆಯ ದಿನ, ಮುರತ್, ಲೇನ್ಸ್, ಬೆಲಿಯರ್ಡ್ ಮೊದಲಾದ ಗಣ್ಯರು ಸೇತುವೆಯನ್ನು ತಲುಪಿದರು. ಆ ಮೂವರೂ ಗ್ಯಾಸ್ಕಾನ್ ಪ್ರದೇಶದವರೆಂಬುದನ್ನು ಮರೆಯಲಾಗದು.

ಅವರಲ್ಲೊಬ್ಬ ಹೇಳುತ್ತಾನೆ : "ಮಹಾಶಯರೆ, ಥಾಬರ್ ಸೇತುವೆಗೆ ಸಿಡಿಮದ್ದಿಡಲಾಗಿದೆ. ಅದರ ಮುಂದಲೆಯಲ್ಲಿ ದುರ್ಗಮವಾದ ರಕ್ಷಣಾವ್ಯವಸ್ಥೆಗಳಿವೆ. ಸೇತುವೆಯನ್ನು ಸಿಡಿಸಿ, ನಾವು ನದಿಯನ್ನು ದಾಟದಂತೆ ತಡೆಯುವುದಕ್ಕಾಗಿ ಹದಿನೈದು ಸಾವಿರ ಸೈನ್ಯ ವನ್ನು ನಿಲ್ಲಿಸಲಾಗಿದೆ. ಈ ಸೇತುವೆಯನ್ನು ವಶಪಡಿಸಿಕೊಂಡದ್ದಾದರೆ ನಮ್ಮ ಪ್ರಭು ಚಕ್ರವರ್ತಿ ನೆಪೋಲಿಯನ್ನರಿಗೆ ಸಂತೋಷವಾಗುತ್ತದೆ. ಆದ್ದರಿಂದ ನಾವು ಮೂವರೂ ಮುನ್ನುಗ್ಗಿ ಅದನ್ನು ವಶಪಡಿಸಿಕೊಳ್ಳೋಣ." "ಅಹುದು, ವಶಪಡಿಸಿಕೊಳ್ಳಲೇಬೇಕು" ಎಂಬುದಾಗಿ ಇತರರು ದನಿಗೂಡಿಸುತ್ತಾರೆ. ಅವರು ಧಾಳಿ ನಡೆಸಿ, ಸೇತುವೆಯನ್ನಾ ಕ್ರಮಿಸಿಕೊಂಡು, ನದಿಯನ್ನು ದಾಟಿ, ತಮ್ಮ ಇಡೀ ಸೈನ್ಯದೊಡನೆ ಡಾನ್ಯೂಬ್ ನದಿಯ ಈ ದಡವನ್ನು ಸೇರಿದ್ದಾರೆ. ನಮ್ಮ, ನಿಮ್ಮ ಹಾಗೂ ನಿಮ್ಮ ಸಂಪರ್ಕ ಮಾಧ್ಯಮಗಳ ಮೇಲೆ ಆಕ್ರಮಣ ನಡೆಸುತ್ತಾರೆ' ಎಂದು ಬಿಲೀಬಿನ್ ಮಾರ್ನುಡಿ ದನು.

'ತಮಾಷೆ ಮಾಡಬೇಡಿ' ಎಂದು ರಾಜಕುಮಾರ ದುಃಖಮಿಶ್ರಿತ ಗಾಂಭೀರ್ಯದಿಂದ ನುಡಿದನು. ಈ ಸುದ್ದಿಯಿಂದ ಸಂಕಟ ಸಮಾಧಾನಗಳೆರಡೂ ಏಕಕಾಲದಲ್ಲಿ ಉದ್ಭವ ವಾದುವು. ರಷ್ಯನ್ ಸೈನ್ಯ ದುಸ್ಥಿತಿಯಲ್ಲಿದೆಯೆಂದು ತಿಳಿದಾಗ, ಅದನ್ನು ಆ ಸ್ಥಿತಿಯಿಂದ ಪಾರುಮಾಡಬಹುದಾದ ಅವಕಾಶ ತನಗಾಗಿಯೇ ಮೀಸಲಾಗಿರಬಹುದೆಂದು ಅವನು ಆಲೋಚಿಸಿದನು. ಅಜ್ಞಾತ ಯೋಧರ ದರ್ಜೆಯಿಂದ ಮೇಲೆತ್ತಿ, ವಿಜಯದ ಪ್ರಥಮ ಸೋಪಾನವನ್ನು ಮೆಟ್ಟುವ ಅವಕಾಶಕ್ಕೆ ತೂಲನ್ ತನಗೆ ಎಡೆ ಮಾಡಿಕೊಡುತ್ತದೆಂದ ವನು ಬಗೆದನು. ಸ್ವಸ್ಥಾನಕ್ಕೆ ಹಿಂದಿರುಗಿದ ಕೂಡಲೆ, ಸೈನ್ಯವನ್ನುಳಿಸುವ ಉಪಾಯ ವನ್ನು ತಾನು ಯುದ್ಧಸಮಿತಿಯಲ್ಲಿ ಸೂಚಿಸಬಹುದೆಂದೂ, ಆ ಸೂಚನೆಯನ್ನು ಕಾರ್ಯಗತಗೊಳಿಸುವ ಹೊಣೆಗಾರಿಕೆಯನ್ನು ತನಗೆ ವಹಿಸಬಹುದೆಂದೂ ಬಿಲೀಬಿನ್‌ನ ವಾಕ್ಪ್ರವಾಹ ಹರಿಯುತ್ತಿದ್ದಾಗ ಅವನು ಕಲ್ಪನೆಯ ನಾವೆಯಲ್ಲಿ ತೇಲುತ್ತಿದ್ದನು.

'ತಮಾಷೆ ನಿಲ್ಲಿಸಿ' ಎಂದವನು ಪುನರುಕ್ತಿಸಿದನು.

'ನಾನು ತಮಾಷೆ ಮಾಡುತ್ತಿಲ್ಲ.' ಎಂದು ಬಿಲೀಬಿನ್ ಮಾತು ಮುಂದುವರಿಸಿ ದನು. ಇದಕ್ಕಿಂತ ದುಃಖಕರವಾದ ಅಥವಾ ಸತ್ಯತರವಾದ ಸಂಗತಿ ಬೇರೊಂದಿಲ್ಲ. ಈ ಗಣ್ಯರು ತಾವು ಮಾತ್ರ ಸೇತುವೆಯ ಬಳಿ ಹೋಗಿ, ಬಿಳಿಯ ಕರವಸ್ತ್ರಗಳನ್ನು ಅಲ್ಲಾಡಿಸು ತ್ತಾರೆ. ರಾಜಕುಮಾರ ಆಸ್ಪರ್ಗ್‌ರೊಡನೆ ಸಂಧಾನ ನಡೆಸುವ ಸಲುವಾಗಿ ನಮ್ಮ ಸೇನಾಧಿಕಾರಿಗಳು ಹೊರಟಿದ್ದಾರೆಂದು ಅವರು ಅಲ್ಲಿ ಹಾಜರಿದ್ದ ಅಧಿಕಾರಿಗೆ ಭರವಸೆ ನೀಡುತ್ತಾರೆ. ಸೇತುವೆಯ ಮುಂದಂಡೆಗೆ ಹೋಗಲು ಅವನು ಅವರಿಗೆ ಅನುಮತಿ ನೀಡು ತ್ತಾನೆ. ಯುದ್ಧ ಕೊನೆಗೊಂಡಿತೆಂದೂ, ಚಕ್ರವರ್ತಿ ಫ್ರಾನ್ಸಿಸ್ ನೆಪೋಲಿಯನ್‌ನನ್ನು ಭೇಟಿ ಮಾಡುವುದಾಗಿಯೂ, ತಾವು ರಾಜಕುಮಾರ ಆಸ್ಪರ್ಗ್‌ನನ್ನು ಸಂಧಿಸುವು ದಾಗಿಯೂ, ಇಂತೆಯೇ ಅವರು ನೂರಾರು ಸುಳ್ಳುಗಳನ್ನು ನೇಯ್ದು ಅವನನ್ನು ಮರಳು ಮಾಡುತ್ತಾರೆ. ಅಧಿಕಾರಿ ಆಸ್ಪರ್ಗನಿಗೆ ಹೇಳಿಕಳಿಸುತ್ತಾನೆ. ಈ ಗಣ್ಯರು ಅಧಿಕಾರಿ ಗಳನ್ನಪ್ಪಿಕೊಳ್ಳುತ್ತಾರೆ, ಹಾಸ್ಯದ ಚಟಾಕಿ ಹಾರಿಸುತ್ತಾರೆ, ಫಿರಂಗಿಯ ಮೇಲೆ ಕುಳಿತು ಕೊಳ್ಳುತ್ತಾರೆ; ಅಷ್ಟರಲ್ಲಿ ಫ್ರೆಂಚ್ ದಳದ ತುಕಡಿಯೊಂದು ಯಾರಿಗೂ ಗೊತ್ತಾಗದಂತೆ

ಸೇತುವೆಯ ಬಳಿಸಾರಿ, ಸಿಡಿಮದ್ದಿನ ಚೀಲಗಳನ್ನು ನೀರಿನೊಳಗೆ ಬಿಸಾಡಿ, ಸೇತುವೆಯ ಮುಂದಂಡೆ ಸೇರುತ್ತದೆ. ಕೊನೆಗೆ ನಮ್ಮ ಪ್ರೀತಿಗೆ ಪಾತ್ರರಾದವರೂ ಲೆಫ್ಟಿನೆಂಟ್ ಜನರಲ್ಲರೂ ಆದ ರಾಜಕುಮಾರ ಆಸ್ಪರ್ಗ್ ವಾನ್ ಮೌತರ್ನ್‌ರೇ ಕಾಣಿಸಿಕೊಳ್ಳು ತ್ತಾರೆ. 'ಒಲವಿನ ಹಗೆಗಳೇ, ಆಸ್ಟ್ರಿಯಾ ಸೈನ್ಯದ ಸುಮಗಳೇ, ತುರ್ಕಿ ಯುದ್ಧಗಳ ವೀರರೇ! ನಮ್ಮ ಕಲಹಗಳಿಗೆ ಇದೇ ಕೊನೆ. ನಂನಮ್ಮ ಕೈಕುಲುಕುವ ಸಮಯವೊದ ಗಿದೆ....ರಾಜಕುಮಾರ ಆಸ್ಪರ್ಗರ ಸ್ನೇಹಕ್ಕಾಗಿ ಸಾರ್ವಭೌಮ ನೆಪೋಲಿಯನ್ನರು ತೀವ್ರವಾಗಿ ಹಾತೊರೆಯುತ್ತಿದ್ದಾರೆ.' ಒಂದು ಮಾತಿನಲ್ಲಿ ಹೇಳುವುದಾದರೆ ಆ ಗಣ್ಯ ಗ್ಯಾಸ್ಕನ್‌ರು ಸಿಹಿಮಾತುಗಳಿಂದ ಅವನನ್ನು ದಿಗ್ಭ್ರಮೆಗೊಳಿಸುತ್ತಾರೆ. ಫ್ರೆಂಚ್ ಅಧಿಕಾರಿಗಳ ಅವಸರದ ಆಪ್ತತ್ವದಿಂದ ಅವನು ಉಬ್ಬಿಹೋಗುತ್ತಾನೆ; ಮುರತ್‌ನ ಮೇಲಂಗಿ ಮತ್ತು ಉಷ್ಟ್ರಪಕ್ಷಿಯ ಗರಿಗಳು ಅವನನ್ನು ಕಕ್ಕಾಬಿಕ್ಕಿಗೊಳಿಸುತ್ತವೆ; ಅವರ ಉತ್ಸಾಹ ಅವನ ಕಣ್ಣು ಕುಕ್ಕುತ್ತದೆ. ಹಗೆಯ ಮೇಲೆ ಗುಂಡು ಹಾರಿಸ ಬೇಕೆಂಬ ಅರಿವು ಮರೆಯಾಗುತ್ತದೆ. ತನ್ನ ಚತುರೋಕ್ತಿಗೆ ಮೆಚ್ಚುಗೆ ಸಲ್ಲ ಬೇಕೆಂಬ ಭಾವನೆಯನ್ನು ಬಿಲೀಬಿನ್ ಮರೆಯಲಿಲ್ಲ. ಅದಕ್ಕಾಗಿ ಅವನು ಕ್ಷಣಕಾಲ ತನ್ನ ವಾಕ್ಪ್ರವಾಹವನ್ನು ತಡೆಗಟ್ಟಿದನು. 'ಫ್ರೆಂಚ್ ಸೈನ್ಯದ ತುಕಡಿ ಸೇತುವೆಯ ಮುಂದಲೆಗೆ ಧಾವಿಸಿ, ಅದನ್ನು ವಶಪಡಿಸಿಕೊಳ್ಳುತ್ತಾರೆ. ಎಲ್ಲಕ್ಕಿಂತ ಮಿಗಿಲಾದ ಸಂಗತಿಯೆಂದರೆ, ಫಿರಂಗಿಗಳ ಮೇಲ್ವಿಚಾರಣೆಯಲ್ಲಿದ್ದ ಸಾರ್ಜೆಂಟು ಸೇತುವೆಯ ಕಡೆಗೆ ಧಾವಿಸುತ್ತಿದ್ದ ಫ್ರೆಂಚ್ ಸೈನ್ಯದ ಮೇಲೆ ಗುಂಡು ಹಾರಿಸಲು ಸನ್ನದ್ಧನಾದಾಗ, ಲೇನ್ಸ್ ಹಿಂದಿನಿಂದ ಬಂದು ಅವನ ಕೈತಡೆಯುತ್ತಾನೆ. ತನ್ನ ಸೇನಾನಿಗಿಂತ ಹೆಚ್ಚು ವಿವೇಕಶಾಲಿಯಾದ ಸಾರ್ಜೆಂಟು ಆಸ್ಪರ್ಗ್ ಬಳಿ ಹೋಗಿ "ರಾಜಕುಮಾರರೆ, ನೀವು ಮೋಸಹೋಗಿದ್ದೀರಿ. ಫ್ರೆಂಚ್ ಸೈನ್ಯದ ನಡುವೆ ಸಿಕ್ಕಿಕೊಂಡಿದ್ದೇವೆ" ಎಂದು ಎಚ್ಚರಿಸು ತ್ತಾನೆ. ಸಾರ್ಜೆಂಟನಿಗೆ ಮಾತಾಡಲವಕಾಶ ನೀಡಿದ್ದಾದರೆ ಸರ್ವನಾಶವಾಗುತ್ತದೆಂದು ಮುರತ್ ಯೋಚಿಸುತ್ತಾನೆ. ಅವನು ಆಸ್ಪರ್ಗನ ಕಡೆ ತಿರುಗಿ, ನಿಜವಾದ ಗ್ಯಾಸ್ಕನ್ ನಂತೆ ಕಪಟ ವಿಸ್ಮಯವನ್ನಭಿನಯಿಸುತ್ತ "ರಾಜಕುಮಾರರೆ, ಶಿಸ್ತಿಗೆ ಆಸ್ಟ್ರಿಯಾ ಜಗತ್ತಿನ ಲ್ಲೆಲ್ಲ ಹೆಸರಾಗಿದೆ. ನಿಮ್ಮ ಕೆಳಗಣ ಅಧಿಕಾರಿ ನಿಮ್ಮೊಡನೆ ಇಷ್ಟು ಸಲುಗೆಯಿಂದ ಮಾತಾಡುವುದಾದರೆ, ಶಿಸ್ತಿನ ಬಗೆಗೆ ನನ್ನ ನಂಬುಗೆ ಕಳಚಿಹೋಗುತ್ತದೆ" ಎಂದು ನುಡಿದನು. ಆ ಮಾತಿನಲ್ಲಿ ಪ್ರತಿಭೆಯ ಮಿಂಚು ಪಳಂಚಿತು. ತನ್ನ ಗೌರವಕ್ಕೆ ಚ್ಯುತಿ ಯೊದಗಿತೆಂದು ಭಾವಿಸಿದ ರಾಜಕುಮಾರ ಸಾರ್ಜೆಂಟನ ಬಂಧನಕ್ಕೆ ಆಜ್ಞೆಯಿಯುತ್ತಾನೆ. ಥಾಬರ್ ಸೇತುವೆಯ ವ್ಯವಹಾರ ರಂಜನೀಯವಾದದ್ದೆಂದು ನೀವು ಒಪ್ಪಿಕೊಳ್ಳಬೇಕಾ ಗಿದೆ! ಅದನ್ನು ಅವಿವೇಕವೆನ್ನಬಹುದೆ? ಅಥವಾ ವಂಚನೆಯೆನ್ನಬಹುದೆ? ನಿಖರವಾಗಿ ಹೇಳಲಾಗದು....'

ಬೂದುಬಣ್ಣದ ಮೇಲಂಗಿಗಳನ್ನೂ, ವ್ರಣಗಳನ್ನೂ, ಮದ್ದಿನ ವಾಸನೆಯನ್ನೂ, ಫಿರಂಗಿಗಳ ಶಬ್ದವನ್ನೂ, ತನಗಾಗಿ ಕಾದುಕೊಂಡಿದ್ದ ಯಶೋಲಕ್ಷ್ಮಿಯನ್ನೂ ರಾಜ ಕುಮಾರ ಆಂಡ್ರೂ ಸ್ಪಷ್ಟವಾಗಿ ಕಲ್ಪಿಸಿಕೊಳ್ಳುತ್ತ 'ಅದು ದ್ರೋಹವೇ ಸರಿ' ಎಂದು ನುಡಿದನು.

'ಅದಾವುದೂ ಅಲ್ಲ. ಅದರಿಂದ ಆಸ್ಥಾನವನ್ನು ಕತ್ತಲಲ್ಲಿಟ್ಟಂತಾಗುತ್ತದೆ. ಅದು ದ್ರೋಹವೂ ಅಲ್ಲ, ವಂಚನೆಯೂ ಅಲ್ಲ, ಅವಿವೇಕವೂ ಅಲ್ಲ: ಉಲ್ಮ್ ನಲ್ಲಾದ ಘಟನೆಯಂತಿದೆ ಇದು....ಇದು....' ಎಂದು ಬಿಲೀಬಿನ್ ಸರಿಯಾದ ಮಾತಿಗಾಗಿ ತಡವರಿಸಿದನು. 'ಅದೊಂದು ಬಟ್ಟೆಯ ತುಂಡು....ನಾವದಕ್ಕೆ ಸಮನಾದಂತಾಯಿತು' ಎಂದವನು ತನ್ನ ಮಾತನ್ನು ಪೂರ್ಣಗೊಳಿಸಿ, ಮೇಲಿಂದ ಮೇಲೆ ಮೆಲುಕು ಹಾಕಬಹುದಾದ ಉತ್ತಮ ಚಾಟೂಕ್ತಿಯನ್ನು ಸೃಷ್ಟಿಸಿದವನಂತೆ ಆನಂದತುಂದಿಲನಾದನು. ಆ ಆನಂದದ ಗುರುತಾಗಿ ಹುಬ್ಬುಗಂಟಿಕ್ಕಿದ ಅವನ ಹಣೆ ಮತ್ತೆ ನಯವಾಯಿತು. ಮುಗುಳುನಗೆ ಸೂಸುತ್ತ, ತನ್ನ ಉಗುರುಗಳ ಮೇಲೆ ಕಣ್ಣಾಡಿಸುತ್ತಿದ್ದನು.

'ಎಲ್ಲಿಗೆ ಹೋಗುತ್ತೀರಿ ?' ಎಂದವನು ಒಡನೆಯೇ ಮೇಲೆದ್ದು, ತನ್ನ ಕೋಣೆಯ ಕಡೆಗೆ ಹೋಗುತ್ತಿದ್ದ ಆಂಡ್ರೂನನ್ನು ಕೇಳಿದನು.

'ನಾನು ಹೊರಡುತ್ತೇನೆ.'

'ಎಲ್ಲಿಗೆ?'

'ಸೈನ್ಯದೆಡೆಗೆ.'

'ಇನ್ನೆರಡು ದಿನ ಇಲ್ಲಿಯೇ ಇರುವುದಾಗಿ ತಿಳಿಸಿದ್ದಿರಿ.'

'ಇಗೋ ಈ ಕೂಡಲೇ ಹೊರಟೆ' ಎಂದು ರಾಜಕುಮಾರ ತನ್ನ ಕೋಣೆ ಕಡೆಗೆ ಮುಖವಾದನು.

'ಮಿತ್ರರೆ, ನಾನು ನಿಮ್ಮ ವಿಷಯವನ್ನೇ ಕುರಿತು ಆಲೋಚಿಸುತ್ತಿದ್ದೇನೆ. ಇಷ್ಟು ಬೇಗ ಹೊರಟದ್ದೇಕೆ ?' ಎಂದು ಬಿಲೀಬಿನ್ ಅವನ ಹಿಂದೆಯೇ ಹೆಜ್ಜೆ ಹಾಕಿದನು. ತನ್ನ ಅಭಿಪ್ರಾಯ ನಿರ್ಣಾಯಕವೆಂಬುದನ್ನು ಸೂಚಿಸುವಂತೆ ಅವನ ಹಣೆಯ ಸುಕ್ಕುಗಳು ಮಾಯವಾದುವು.

ರಾಜಕುಮಾರ ಆಂಡ್ರೂ ಅನ್ವೇಷಕಭಾವದಿಂದ ಅವನನ್ನು ದಿಟ್ಟಿಸಿದನೆ ಹೊರತು, ಪ್ರತ್ಯುತ್ತರ ನೀಡಲಿಲ್ಲ.

'ನೀವು ಹೋಗುವುದೇಕೆ ? ಅಪಾಯ ಸ್ಥಿತಿಯಲ್ಲಿರುವ ಸೈನ್ಯಕ್ಕೆ ಬೆಂಬಲ ನೀಡುವುದು ನಿಮ್ಮ ಕರ್ತವ್ಯವೆಂದು ತಿಳಿದಿರುವಿರಲ್ಲವೆ ? ಅದು ನನಗರ್ಥವಾಗುತ್ತದೆ. ಮಹಾಶಯರೆ, ಅದೇ ಮಹಾಸಾಹಸ, ನಿಜ !'

'ಖಂಡಿತ ಅಲ್ಲ' ಎಂದು ರಾಜಕುಮಾರ ನುಡಿದನು.

'ನೀವು ತತ್ತ್ವಜ್ಞಾನಿಗಳಾದ್ದರಿಂದ ನಿಮ್ಮ ನಡತೆಯಲ್ಲಿ ಸಾಮರಸ್ಯವಿರಬೇಕಾಗಿದೆ. ಪ್ರಸಕ್ತ ಪ್ರಶ್ನೆಯ ಮತ್ತೊಂದು ಮುಖವನ್ನು ಮರೆಯಕೂಡದು. ಆತ್ಮರಕ್ಷಣೆಯೇ ಆ ಮುಖ. ಯಾವುದಕ್ಕೂ ಸಲ್ಲದ ಜನರಿಗೆ ಆ ಚಿಂತೆಯಿರಲಿ....ಹಿಂದಿರುಗಬೇಕೆಂದಾಗಲಿ, ಇಲ್ಲಿಂದ ಹೊರಡಬೇಕೆಂದಾಗಲೀ ಯಾರೂ ನಿಮಗೆ ಆಜ್ಞಾಪಿಸಿಲ್ಲ. ಆದ್ದರಿಂದ ನೀವು ನಮ್ಮೊಡನೆ ನಿಲ್ಲಿ. ನಮ್ಮ ಅದೃಷ್ಟ ಎಲ್ಲೆಲ್ಲಿಗೊಯ್ಯುತ್ತದೆಯೋ ಅಲ್ಲೆಲ್ಲ ನೀವು ನಮ್ಮೊಡನಿರಿ. ನಾವು ಓಲ್‌ಮೂತ್ ನಗರಕ್ಕೆ ಹೋಗುವುದಾಗಿ ಹೇಳುತ್ತಾರೆ. ಅದು ಸಭ್ಯತೆಗೆ ಹೆಸರಾದ ನಗರ. ನಾವಿಬ್ಬರೂ ಸುಖವಾಗಿ ನನ್ನ ತೆರೆದ ಗಾಡಿಯಲ್ಲಿ ಪ್ರಯಾಣ ಮಾಡೋಣ.'

'ಈ ವಿನೋದ ಸಾಕುಮಾಡಿ, ಬಿಲೀಬಿನ್' ಎಂದು ಬಲ್ಕೊನ್‌ಸ್ಕಿ ಕುಪಿತ ಗೊಂಡನು.

'ನೀವು ನನ್ನ ಗೆಳೆಯರೆಂದು ಪ್ರಾಮಾಣಿಕವಾಗಿ ಸಲಹೆ ನೀಡುತ್ತಿದ್ದೇನೆ. ಅವನ್ನು ನಿರ್ಲಕ್ಷಿಸಬೇಡಿ. ಇಲ್ಲಿಯೇ ಸುರಕ್ಷಿತವಾಗಿ ತಂಗಬಹುದಾದ ಅವಕಾಶವಿರುವಾಗ, ಎಲ್ಲಿಗೆ, ಏಕೆ ಹೋಗುತ್ತೀರೆಂಬುದನ್ನು ಪರ್ಯಾಲೋಚಿಸಿ' ಎಂದು ಹೇಳುವಾಗ ಅವನ ಕಪೋಲದ ಚರ್ಮ ಸುಕ್ಕುಗಟ್ಟಿತು. 'ನೀವೀಗ ಎರಡು ಸಂಗತಿಗಳನ್ನೆದುರಿಸಬೇಕಾಗುತ್ತದೆ: ಒಂದೆ, ಶಾಂತಿ ಸಂಧಾನ ಪೂರ್ಣವಾಗುವವರೆಗೆ ನೀವು ನಿಮ್ಮ ತುಕಡಿಯನ್ನು ಸೇರಲಾರಿರಿ; ಇಲ್ಲ, ಕುತುಜೋವ್‌ರ ಸಮಸ್ತ ಸೈನ್ಯದೊಡನೆ ಅವಮಾನ ಅಪಜಯಗಳನ್ನನುಭವಿಸಬೇಕಾಗುತ್ತದೆ.' ಆ ಇಕ್ಕಟ್ಟಿನ ಪ್ರಶ್ನೆಗೆ ಪರಿಹಾರವಿಲ್ಲವೆಂಬ ಭಾವನೆ ತಲೆ ಹಾಕುತ್ತಿದ್ದಂತೆ ಬಿಲೀಬಿನ್ ಕಪೋಲದ ತೆರೆ ಹಿಂಜರಿಯಿತು.

'ಆ ಬಗ್ಗೆ ನಾನು ವಾದ ಮಾಡಲಾರೆ' ಎಂದು ಆಂಡ್ರ್ಯೂ ನೀರಸವಾಗಿ ಉತ್ತರಿಸಿದನು; ಸೈನ್ಯವನ್ನು ತಾನು ರಕ್ಷಿಸುವುದಾಗಿ ಅವನು ಆಲೋಚಿಸಿದನು.

'ಪ್ರಿಯ ಮಿತ್ರರೆ, ನೀವೊಬ್ಬರು ಮಹಾ ಸಾಹಸಿ!' ಎಂದು ಬಿಲೀಬಿನ್ ಮಾರ್ನುಡಿದನು.

ಅಧ್ಯಾಯ ೧೩

ಅದೇ ರಾತ್ರಿ ಬಲ್ಕೊನ್‌ಸ್ಕಿ ಯುದ್ಧ ಸಚಿವರಿಂದ ಬೀಳ್ಕೊಂಡು ಸೇನೆ ಸೇರುವ ಸಲುವಾಗಿ ಹೊರಟನು. ಅವನಿಗೆ ಸೇನೆಯ ನೆಲೆ ಗೊತ್ತಿರಲಿಲ್ಲ. ಕ್ರೆಮ್ಸ್‌ಗೆ ಹೋಗುವ ದಾರಿಯಲ್ಲಿ ತಾನು ಫ್ರೆಂಚ್ ಸೈನ್ಯದ ಬಂದಿಯಾಗಬಹುದೆಂಬ ಹೆದರಿಕೆಯೂ ಅವನಿಗಿತ್ತು.

ಬ್ರೂನ್ ನಗರದಲ್ಲಿ ಆಸ್ಥಾನಕ್ಕೆ ಸೇರಿದ ಪ್ರತಿಯೊಬ್ಬ ವ್ಯಕ್ತಿಯೂ ಗಂಟುಮೂಟೆ ಕಟ್ಟುತ್ತಿದ್ದನು. ಮೊದಲೇ ಭಾರಿ ಸಾಮಾನುಗಳನ್ನು ಓಲ್‌ಮೂತ್ ನಗರಕ್ಕೆ ಸಾಗ ಹಾಕಲಾಗಿತ್ತು. ಹೆಜಿಲ್‌ಡಾರ್ಫ್ ನಗರದ ಬಳಿ ಆಂಡ್ರ್ಯೂವಿಗೆ ಹೆದ್ದಾರಿ ಸಿಕ್ಕಿತು. ರಷ್ಯನ್ ಸೈನ್ಯ ಬೇಗ ಬೇಗನೆ, ಅವ್ಯವಸ್ಥಿತವಾಗಿ ಅದೇ ಮಾರ್ಗದಲ್ಲಿ ಚಲಿಸುತ್ತಿತ್ತು. ರಸ್ತೆಯಲ್ಲಿ ಗಾಡಿಗಳಿಂದ ಎಷ್ಟು ಅಡಚಣೆಯಾಗುತ್ತಿತ್ತೆಂದರೆ, ರಾಜಕುಮಾರನ ವಾಹನ ಅವುಗಳನ್ನು ಹಿಮ್ಮೆಟ್ಟಿ ಮುಂದುವರಿಯುವಂತಿರಲಿಲ್ಲ. ದಾರಿಯಲ್ಲಿ ಸಿಕ್ಕಿದ ಅಶ್ವಾರೋಹಿ ದಳದಿಂದ ಒಂದು ಕುದುರೆಯನ್ನೂ ಒಬ್ಬ ಅಶ್ವಾರೋಹಿಯನ್ನೂ ಸಂಪಾದಿಸಿಕೊಂಡು, ಸರಂಜಾಮು ಬಂಡಿಗಳನ್ನು ಹಿಂದಕ್ಕೆ ಹಾಕಿ, ಮಹಾಸೇನಾನಿಯನ್ನೂ ತನ್ನ ಸಾಮಾನನ್ನೂ ಹುಡುಕಿಕೊಂಡು ದೌಡಾಯಿಸಿದನು. ಅವನು ಮುಂದೆ ಮುಂದೆ ಸಾಗುತ್ತಿದ್ದಂತೆ, ಸೈನ್ಯಕ್ಕೆ ಸಂಬಂಧಿಸಿದಂತೆ ಅಶುಭಸೂಚಕವಾದ ವರದಿಗಳು ಕಿವಿಯ ಮೇಲೆ ಬೀಳುತ್ತಿದ್ದುವು. ಸೈನ್ಯದ ಅವ್ಯವಸ್ಥಿತವಾದ ಪಲಾಯನ ಈ ಗಾಳಿಸುದ್ದಿಗಳಿಗೆ ಸಮರ್ಥನೆ ನೀಡುತ್ತಿತ್ತು. ಬ್ರಿಟನ್ನಿನ ಚಿನ್ನದಾಸೆಗಾಗಿ ಮೂಲೆ ಮೂಲೆಗಳಿಂದ ಜನ ನೂಕುನುಗ್ಗಲಾಗಿ ಬಂದು ಬೆಳೆದಿರುವ ರಷ್ಯಾ ಸೈನ್ಯಕ್ಕೆ ಉಲ್ಮ್ ಕದನದ ಗತಿಯನ್ನು ಕಾಣಿಸಬೇಕಾಗಿದೆಯೆಂಬುದು ನೆಪೋಲಿಯನ್ನನ ಸಂಕಲ್ಪವಾಗಿತ್ತು. ಧಾಳಿಯ ಪ್ರಾರಂಭ

ದಲ್ಲಿಯೇ ತನ್ನ ಸೈನ್ಯವನ್ನು ಕುರಿತು ಮಾಡಿದ ಭಾಷಣದಲ್ಲಿ ಅವನು ಈ ವಿಷಯ ಸೂಚಿಸಿದ್ದನು. ಈ ಮಾತುಗಳನ್ನು ನೆನೆದಾಗ ಆ ವೀರ ಸಾಹಸಿಯ ಪ್ರತಿಭೆಯ ಬಗ್ಗೆ ರಾಜಕುಮಾರ ಸ್ವೈರಗಾದನು. ಅದೇ ಸಮಯದಲ್ಲಿ ಅವನ ಹೆಮ್ಮೆಗೆ ಆಘಾತವಾದಂತಾಯಿತಲ್ಲದೆ, ಕೀರ್ತಿಯ ಆಶೆಯೂ ಮರುಕೊಳಿಸಿತು. 'ಈಗ ಮರಣ ವಿನಾ, ಬೇರೆ ಉಪಾಯವಿಲ್ಲವೆ? ಆಗಲಿ, ಅದು ಅತ್ಯವಶ್ಯವೆನಿಸಿದರೆ, ಇತರರಿಗಿಂತ ನಾನೇ ಮುಂದಾಗಿ ಮರಣವನ್ನಪ್ಪುತ್ತೇನೆ' ಎಂದವನು ನಿರ್ಣಯಿಸಿಕೊಂಡನು.

ಒಂದನ್ನೊಂದು ಹಿಂದೆ ಹಾಕುತ್ತ, ಕೆಸರು ಹಾದಿಯಲ್ಲಿ ತಡೆಯಾಗುತ್ತ, ಕೊನೆಯಿಲ್ಲದ ಗೊಂದಲದ ಮುದ್ದೆಯಂತೆ ಕಾಣುತ್ತಿದ್ದ ಸೇನಾತುಕಡಿಗಳು, ಬಂಡಿಗಳು, ಬಂದೂಕಗಳು, ಫಿರಂಗಿಗಳು, ಸಾಮಾನುಗಾಡಿಗಳು ಮತ್ತು ಹಲವು ಬಗೆಯ ವಾಹನಗಳು ಇವೇ ಮೊದಲಾದುವನ್ನು ಅವನು ತಿರಸ್ಕಾರದೃಷ್ಟಿಯಿಂದ ನೋಡುತ್ತಿದ್ದನು. ಹಿಂದೆ ಮುಂದೆ, ಎಲ್ಲ ಕಡೆಗಳಿಂದ ಕಿವಿ ಮುಟ್ಟುವವರೆಗೆ ಚಕ್ರಗಳ ಚೀತ್ಕಾರ, ಬಂಡಿಗಳ ಮತ್ತು ಬಂದೂಕ ವಾಹನಗಳ ಕರ್ಕಶಸ್ವನ, ಕುದುರೆಗಳ ಖುರಪುಟಧ್ವನಿ, ಚಾವಟಿಗಳ ಚಟತ್ಕಾರ, ಅಶ್ವಗಳ ಹೇಷಾರವ, ಸೈನಿಕರ, ಸೈನಾತಿಗಳ ಮತ್ತು ಅಧಿಕಾರಿಗಳ ಆಣೆ ಭಾಷೆಗಳ ಅಬ್ಬರ ಕೇಳಿಸುತ್ತಿದ್ದುವು. ರಸ್ತೆಯ ಮಗ್ಗುಲುಗಳಲ್ಲಿ ಉದ್ದಕ್ಕೂ ಕಾಲುಮುರಿದು ಬಿದ್ದಿದ್ದ, ಅಂತೆಯೇ ಚರ್ಮಸುಲಿದಿದ್ದ ಕುದುರೆಗಳ, ಮುರಿದಿದ್ದ ಬಂಡಿಗಳ, ಏತಕ್ಕೋ ಕಾಯ್ದುಕೊಂಡು ಅವುಗಳ ಮೇಲೆ ಒಂಟಿಯಾಗಿ ಕುಳಿತಿದ್ದ ಸೈನಿಕರ, ಚೆಲ್ಲಾಪಿಲ್ಲಿಯಾಗಿ ಅಡ್ಡಾಡುತ್ತಿದ್ದ ಯೋಧರ, ನೆರೆ ಹಳ್ಳಿಗಳಿಗೆ ಹೋಗಿ ಕೋಳಿಕುರಿ ಹುಲ್ಲು ಮತ್ತು ತುಂಬಿದ ಚೀಲಗಳನ್ನು ಎಳೆದುಕೊಂಡು ಬರುತ್ತಿದ್ದ ಗುಂಪುಗಳ ದೃಶ್ಯ ಕಣ್ಣೆರಿಯುವಂತಿತ್ತು. ರಸ್ತೆಯ ಏರುತಗ್ಗುಗಳಲ್ಲಿ ಗುಂಪುಗಳು ಹೆಚ್ಚು ದಟ್ಟವಾಗಿದ್ದು, ಬೊಬ್ಬಿರಿತದ ಸದ್ದು ಅವಿಚ್ಛಿನ್ನವಾಗಿ ಕಿವಿದೆರೆಯನ್ನು ಮೀಟುತ್ತಿತ್ತು. ಕಣ ಕಾಲು ಆಳದ ಕೆಸರಿನಲ್ಲಿ ಸೈನಿಕರು ಒದ್ದಾಡಿಕೊಂಡು, ತಾವಾಗಿಯೇ ಬಂದೂಕಗಳನ್ನು ಗಾಡಿಗಳನ್ನು ನೂಕುತ್ತಿದ್ದರು. ಚಾವಟಿಗಳು ಚಟಕರಿಸಿದುವು, ಗೊರಸುಗಳು ಜಾರಿದುವು, ಪಕ್ಕದ ಸರಪಣಿಗಳು ಮುರಿದುವು, ಕಿರಿಚಿನಿಂದಾಗಿ ಶ್ವಾಸಕೋಶಗಳು ಬಳಲಿದುವು. ಪ್ರಗಮನವನ್ನು ನಿರ್ದೇಶಿಸುತ್ತಿದ್ದ ಅಧಿಕಾರಿಗಳು ಬಂಡಿಗಳ ಮಧ್ಯೆ ಹಿಂದಕ್ಕೂ ಮುಂದಕ್ಕೂ ಠಾಯಿಸುತ್ತಿದ್ದರು. ಗುಂಪಿನ ಬೊಬ್ಬೆಯ ನಡುವೆ ಅವರ ಧ್ವನಿಗಳು ಪುಸಿಯಾಗಿ ಕೇಳಿಸುತ್ತಿದ್ದವು. ಅವ್ಯವಸ್ಥೆಯನ್ನು ಕ್ರಮಪಡಿಸಲಾಗದೆಂಬ ನಿರಾಶಾಭಾವನೆ ಅವರ ಮುಖಗಳಲ್ಲಿ ಅಚ್ಚೊತ್ತಿದಂತಿತ್ತು.

ಬಿಲೀಬಿನ್ನನ ಮಾತುಗಳನ್ನು ಸ್ಮೃತಿಪಥಕ್ಕೆ ತಂದುಕೊಳ್ಳುತ್ತ 'ಇದೇ ನಮ್ಮ ಪ್ರೀತಿಗೆ ಪಾತ್ರವಾದ ಸಾಂಪ್ರದಾಯಕ ರಷ್ಯನ್ ಸೈನ್ಯ' ಎಂದು ಬಲ್ಕೋನ್‌ಸ್ಕಿ ಮನಸ್ಸಿನಲ್ಲಿ ಮೆಲುಕು ಹಾಕಿಕೊಂಡನು.

ಮಹಾಸೇನಾನಿಯ ಗೊತ್ತನ್ನು ತಿಳಿಯುವ ಸಲುವಾಗಿ ಅವನು ರಕ್ಷಣಾದಳದ ಸೈನಿಕನ ಬಳಿಗೆ ಸವಾರಿಸಿದನು. ಸಾಧಾರಣ ಬಂಡಿ, ತೆರೆದ ಬಂಡಿ ಮತ್ತು ಸವಾರಿಬಂಡಿಗಳಿಗೆ ಮಧ್ಯಸ್ಥವಾಗಿದ್ದು ವಿಚಿತ್ರವಾಗಿ ಕಾಣುತ್ತಿದ್ದ ಏಕಾಶ್ವ ವಾಹನವೊಂದು ಅವನಿಗೆ ದೂರಾಗಿ ಬಂದಿತು. ಅದರೊಳಗಿದ್ದ ಸಾಮಾನುಗಳನ್ನು ಸೈನಿಕರು ಮೋಸದಿಂದ ಅಪಹರಿಸಿ

ದಂತಿತ್ತು. ಸೈನಿಕನೊಬ್ಬ ಗಾಡಿಯನ್ನು ನಡಸುತ್ತಿದ್ದ. ಹೆಂಗಸೊಬ್ಬಳು ಶಾಲು ಹೊದ್ದು ಕೊಂಡು, ವಾಹನದ ಹೆಡೆಯಡಿ, ಮುಂದಂಡೆಯ ತೆರೆಯ ಹಿಂದೆ ಕುಳಿತಿದ್ದಳು. ಸೈನಿಕ ನೊಡನೆ ಮಾತಾಡುತ್ತಿದ್ದ ರಾಜಕುಮಾರ ಆಂಡ್ರೂವಿನ ಗಮನವನ್ನು ಆ ಹೆಂಗಸಿನ ನಿರಾಶೆಯ ಚೀರಾಟ ಸೆಳೆಯಿತು. ಇತರ ಗಾಡಿಗಳನ್ನು ಹಿಂದೆ ಹಾಕುವ ಸಲುವಾಗಿ ಸ್ಪರ್ಧಿಸುತ್ತಿದ್ದ ಹೆಂಗಸಿನ ಬಂಡಿಯ ಚಾಲಕನನ್ನು ಸಾರಿಗೆ ಉಸ್ತುವಾರಿಯ ಅಧಿಕಾರಿ ಯೊಬ್ಬ ಬಡಿಯುತ್ತಿದ್ದನು. ಅವನ ಚಾವಟಿಯ ಏಟುಗಳು ಮುಂದಂಡೆಯ ತೆರೆಯ ಮೇಲೆ ಬೀಳುತ್ತಿದ್ದುವು. ಹೆಂಗಸಿನ ಅಳು ಎದೆಯಿರಿಯುವಂತಿತ್ತು. ರಾಜಕುಮಾರನನ್ನು ಕಂಡ ಅವಳು ತೆರೆಯ ಹಿಂದಿನಿಂದ ತಲೆಯನ್ನು ಚಾಚಿ, ಉಣ್ಣೆಯ ಶಾಲಿನೊಳಗಿನಿಂದ ಅಸಿದೋಳನ್ನಲ್ಲಾಡಿಸುತ್ತ 'ಸೇನಾಪತಿಗಳೆ! ಸೇನಾಪತಿಗಳೆ!....ಧರ್ಮದ ದೃಷ್ಟಿ ಯಿಂದ ನನ್ನನ್ನು ಕಾಪಾಡಿ! ನಮಗೇನಾಗುತ್ತದೋ ಕಾಣೆ. ನಾನು ಸಪ್ತಮ ಪದಾತಿ ದಳಕ್ಕೆ ಸೇರಿದ ವೈದ್ಯರ ಮಡದಿ....ಅವರು ನಮಗೆ ದಾರಿ ಬಿಡುತ್ತಿಲ್ಲ. ನಾವು ಹಿಂದುಳಿದಿದ್ದೇವೆ. ನಮ್ಮ ಜನರಿಂದ ತಪ್ಪಿಹೋಗಿದ್ದೇವೆ....'

'ಈ ಹೊಲಸು ಹೆಂಗಸನ್ನು ಕರೆದುಕೊಂಡು ಹಿಂದಿರುಗು. ಇಲ್ಲವಾದರೆ ನಿನ್ನನ್ನು ದೋಸೆಯಂತೆ ಚಪ್ಪಟೆಗೊಳಿಸುತ್ತೇನೆ' ಎಂದು ಕೋಪೋಗ್ರನಾದ ಅಧಿಕಾರಿ ಬೊಬ್ಬಿರಿ ದನು.

'ಸೇನಾಪತಿಗಳೆ ನನ್ನನ್ನು ರಕ್ಷಿಸಿ....ಇದೆಲ್ಲ ಸರಿಯೆ?' ಎಂದು ವೈದ್ಯನ ಮಡದಿ ಗೋಳ್ಗರೆದಳು.

'ದಯಮಾಡಿ ಈ ಬಂಡಿಯನ್ನು ಮುಂದೆ ಬಿಡು. ಇವಳು ಹೆಂಗಸೆಂಬುದು ನಿನಗೆ ತಿಳಿಯಲಿಲ್ಲವೆ?' ಎಂದು ಆಂಡ್ರೂ ಅಧಿಕಾರಿಯ ಬಳಿಗೈದಿ ಕೇಳಿಕೊಂಡನು.

ಅಧಿಕಾರಿ ಅವನ ಕಡೆಗೆ ದಿಟ್ಟಿ ಜಾರಿಸಿ, ಪ್ರತ್ಯುತ್ತರ ನೀಡದೆಯೆ, ಸೈನಿಕನ ಕಡೆಗೆ ತಿರುಗಿ 'ನಿನಗೆ ಸರಿಯಾಗಿ ಪಾಠ ಕಲಿಸುತ್ತೇನೆ....ಹಿಂದಕ್ಕೆ ಹೋಗುವಿಯೋ ಇಲ್ಲವೋ?' ಎಂದು ರೇಗಾಡಿದನು.

'ಅವರನ್ನು ಮುಂದೆ ಬಿಡು' ಎಂದು ರಾಜಕುಮಾರ ತುಟಿಗಳನ್ನು ಚೂಪಿಸಿ ದನು.

'ನೀವು ಯಾರ್ರಿ?' ಎಂದು ಅಧಿಕಾರಿ ಅವನ ಕಡೆ ತಿರುಗಿಕೊಂಡು ಅಮಲುಸಿಡುಕು ಕಾರಿದನು. 'ಯಾರ್ರಿ ನೀವು ನನಗೆ ಹೇಳೋಕೆ? ನಿಮಗೇನು ಅಧಿಕಾರವಿದೆ? ಇಲ್ಲಿ ನಾನು ಕಮ್ಯಾಂಡರೇ ಹೊರತು ನೀವಲ್ಲ, ತಿಳಿಯಿತೆ? ಹಿಂದಕ್ಕೆ ಹೊಡಿ, ಇಲ್ಲವಾದರೆ ನಿನ್ನನ್ನು ಅಪ್ಪಚ್ಚಿಮಾಡಿಬಿಡುತ್ತೇನೆ' ಎಂದವನು ಮರುನುಡಿದನು. ಆ ಮಾತಿನಿಂದ ಅವನು ಒಳಗೊಳಗೆ ಹರ್ಷಗೊಂಡನು.

'ಈ ನವಸೇನಾಪತಿಗೆ ಸರಿಯಾಗಿ ಛೀಮಾರಿಯಾಯಿತು' ಎಂಬೊಂದು ಧ್ವನಿ ಹಿಂದಿನಿಂದ ಕೇಳಿಸಿತು.

ಕುದಿಕೋಪದ ಅಮಲಿನಲ್ಲಿ ತನ್ನನ್ನು ತಾನು ಮರೆತ ವಿವೇಕ ರಹಿತನಂತಿದ್ದ ಆ ಅಧಿಕಾರಿಯ ಬಗ್ಗೆ ರಾಜಕುಮಾರನ ಮನಸ್ಸಿನಲ್ಲಿ ಜುಗುಪ್ಸೆ ಮೂಡಿತು. ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡಿದ್ದ ವೈದ್ಯನ ಮಡದಿಯನ್ನು ಪಾರುಮಾಡಿದ್ದಾದರೆ ಲೋಕ ತನ್ನ ತಲೆಯ

ಮೇಲೆ ಗುಬ್ಬಿಕೂರಿಸಿ, ಅಪಹಾಸ್ಯಕ್ಕೆ ಗುರಿಮಾಡಬಹುದೆಂದು ಹೆದರಿದನು. ಆದರೂ ಅವನ ಸಹಜಪ್ರವೃತ್ತಿಯ ಪ್ರೇರಣೆ ಅದಮ್ಯವಾಗಿತ್ತು. ಅಧಿಕಾರಿ ತನ್ನ ವಾಕ್ಯವನ್ನು ಮುಗಿಸುವ ಮುನ್ನವೇ, ಕೋಪದಿಂದ ಮುಖ ವಿಕಾರವಾಗಿದ್ದ ರಾಜಕುಮಾರ ಆಂಡ್ರೂ ಅವನ ಸನಿಹಕ್ಕೆ ಹೋಗಿ, ಚಾವಟಿಯನ್ನು ಮೇಲೆತ್ತಿ 'ದಯೆಯಿಟ್ಟು... ಅವರನ್ನು ಮುಂದೆ ಬಿಡು' ಎಂದು ಅಬ್ಬರಿಸಿದನು.

ಅಧಿಕಾರಿ ತನ್ನ ತೋಳನ್ನು ಝುಳಪಿಸಿ, ಕ್ಷಿಪ್ರವಾಗಿ ದೌಡಾಯಿಸಿದನು. 'ಈಗಿನ ಅವ್ಯವಸ್ಥೆಗೆಲ್ಲ ಇಂಥ ಜನರ ಅಶಿಸ್ತೇ ಕಾರಣ. ನಿಮಗಿಷ್ಟಬಂದಂತೆ ಮಾಡಿ' ಎಂದವನು ಗೊಣಗಿಕೊಂಡನು.

ವೈದ್ಯನ ಹೆಂಡತಿ ತನ್ನನ್ನು ರಕ್ಷಕ ಎಂದು ಕೂಗುತ್ತಿದ್ದರೂ ಲಕ್ಷಿಸದೆ, ಆ ಕಡೆ ಕಣ್ಣು ಹಾಯಿಸದೆಯೆ, ರಾಜಕುಮಾರ ಕುದುರೆಯನ್ನು ದೌಡಾಯಿಸಿದನು. ಆ ಅವಮಾನಕರವಾದ ದೃಶ್ಯದ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ನೆನೆಸಿಕೊಂಡು ಜುಗುಪ್ಸೆಪಡುತ್ತ, ಮಹಾಸೇನಾನಿಯಿದ್ದ ಹಳ್ಳಿಗೆ ನಾಗಾಲೋಟವೆತ್ತಿದನು.

ಹಳ್ಳಿಯನ್ನು ತಲುಪಿದ ಕೂಡಲೇ ಅವನು ಕುದುರೆಯಿಂದಿಳಿದು, ಕೆಲವು ಕ್ಷಣಗಳಾದರೂ ವಿಶ್ರಾಂತಿ ತೆಗೆದುಕೊಳ್ಳುವ, ಏನನ್ನಾದರೂ ತಿನ್ನುವ, ಮತ್ತು ತನ್ನ ಚಿತ್ತವನ್ನು ಕದಡಿ, ಕಿತ್ತು ತಿನ್ನುತ್ತಿದ್ದ ಆಲೋಚನೆಗಳನ್ನು ಸರಿಹೊಂದಿಸಿಕೊಳ್ಳುವ ದೃಷ್ಟಿಯಿಂದ, ತೀರ ಹತ್ತಿರದ ಮನೆಗೆ ಹೋದನು. 'ಇದೊಂದು ನೀಚರ ಸಮೂಹವೇ ಹೊರತು ಸೈನ್ಯವಲ್ಲ' ಎಂದಂದುಕೊಂಡು ಅವನು ಮನೆಯ ಕಿಟಕಿಯ ಹತ್ತಿರ ನಡೆದನು. ಅಷ್ಟರಲ್ಲಿ ಸುಪರಿಚಿತ ಧ್ವನಿಯೊಂದು ಹೆಸರುಹಿಡಿದು ಅವನನ್ನು ಕರೆಯಿತು.

ಅವನು ತಿರುಗಿ ನೋಡಿದನು. ನೆಸ್‌ವೀತ್‌ಸ್ಕಿಯ ಸುಂದರ ವದನ ಚಿಕ್ಕ ಕಿಟಕಿಯಿಂದ ಹೊರಗೆ ಇಣುಕಿತು. ಏನನ್ನೋ ಅಗಿಯುತ್ತಿದ್ದ ನೆಸ್‌ವೀತ್‌ಸ್ಕಿ ತನ್ನ ತೇವದ ತುಟಿಗಳನ್ನಲುಗಿಸುತ್ತ, ತೋಳುಗಳನ್ನು ಬೀಸುತ್ತ ಒಳಗೆ ಬರುವಂತೆ ಕರೆದನು. 'ಬಲ್ಕೊನ್‌ಸ್ಕಿ! ಬಲ್ಕೊನ್‌ಸ್ಕಿ!........ನಿನಗೆ ಕೇಳಿಸುವುದಿಲ್ಲವೆ?....ಬಾ ಬೇಗ' ಎಂಡವನು ಕೂಗಿಕೊಂಡನು.

ಆಂಡ್ರೂ ಮನೆಯನ್ನು ಪ್ರವೇಶಿಸುತ್ತಿದ್ದಂತೆ, ನೆಸ್‌ವೀತ್‌ಸ್ಕಿ ಮತ್ತು ಬೇರೊಬ್ಬ ಸಹಾಯಾಧಿಕಾರಿಯ ಮುಂದಿದ್ದ ತಿನಿಸುಗಳು ಕಣ್ಣಿಗೆ ಬಿದ್ದುವು. ಏನಾದರೂ ಸುದ್ದಿ ಇದೆಯೇ ಎಂದವರು ಅವನ ಕಡೆಗೆ ಕಣ್ಣಾದರು. ಆ ಪರಿಚಯದ ಮುಖಗಳಲ್ಲಿ ಅವನು ತುಮುಲ ಭೀತಿಗಳನ್ನು ಗುರುತಿಸಿದನು. ಸದಾ ಹಸನ್ಮುಖಿಯಾಗಿದ್ದ ನೆಸ್‌ವೀತ್‌ಸ್ಕಿಯ ಹಣೆಯ ಮೇಲೆ ಅವುಗಳ ಸುಸ್ಪಷ್ಟ ಮುದ್ರೆಯನ್ನು ಕಾಣಬಹುದಿತ್ತು.

'ಮಹಾಸೇನಾನಿಯೆಲ್ಲಿ?' ಎಂದು ಬಲ್ಕೊನ್‌ಸ್ಕಿ ಕೇಳಿದನು.

'ಮಗ್ಗುಲಮನೆಯಲ್ಲಿದ್ದಾರೆ' ಎಂದು ಸಹಾಯಾಧಿಕಾರಿ ಉತ್ತರಿಸಿದನು.

'ಶಾಂತಿ ಕರಾರುನಾಮೆ ಸಿದ್ಧವಾಗುತ್ತಿದೆಯಂತೆ ನಿಜವೆ?' ಎಂದು ನೆಸ್‌ವೀತ್‌ಸ್ಕಿ ಪ್ರಶ್ನಿಸಿದನು.

'ನಾನೇ ಆ ಪ್ರಶ್ನೆ ಕೇಳೋಣವೆಂದುಕೊಂಡಿದ್ದೆ. ಇಲ್ಲಿಗೆ ಬರಲು ಮಾಡಿದ ಪ್ರಯತ್ನ ಹೊರತಾಗಿ ನನಗದೊಂದೂ ಗೊತ್ತಿಲ್ಲ.'

'ಪ್ರಿಯ ಮಿತ್ರ, ನಮ್ಮ ಪಾಡಂತು ಹೇಳತೀರದು. ನಾವು ಮ್ಯಾಕನ ಬಗ್ಗೆ ನಗೆಯಾಡುತ್ತಿದ್ದೆವು. ನಮ್ಮ ಸ್ಥಿತಿ ಇನ್ನೂ ಹೇಯವಾದದ್ದು. ಅದಿರಲಿ, ಇಲ್ಲಿ ಕುಳಿತು ಕೊಳ್ಳಿ. ಒಂದಿಷ್ಟು ತಿಂಡಿ ತಿನ್ನಿ' ಎಂದು ನೆಸ್‌ವಿತ್‌ಸ್ಕಿ ಬಳಿಗೆ ಕರೆದನು.

'ನಿಮ್ಮ ಗಂಟುಮೂಟೆಯಾಗಲೀ, ಬೇರಾವುದೇ ಸಾಮಾನಾಗಲೀ ನಿಮಗೀಗ ಸಿಗುವಂತಿಲ್ಲ, ರಾಜಕುಮಾರರೆ. ನಿಮ್ಮ ಪೀಟರ್ ಎಲ್ಲಿದ್ದಾನೋ ಭಗವಂತನಿಗೇ ಗೊತ್ತು' ಎಂದು ಸಹಾಯಾಧಿಕಾರಿ ನುಡಿದನು.

'ಕೇಂದ್ರ ಕಾರ್ಯಾಗಾರ ಎಲ್ಲಿದೆ?'

'ಜ್ನೈಮ್‌ನಲ್ಲಿ ನಾವು ಇರುಳು ನೂಕಬೇಕಾಗಿದೆ.'

'ಎರಡು ಕುದುರೆಗಳಿಗೆ ಸಾಕಾಗುವಷ್ಟನ್ನು ಗಂಟುಕಟ್ಟಿಸಿದ್ದೇನೆ. ಮೂಟೆ ಮಜಬೂತಾಗಿವೆ. ಬೊಹೀಮಿಯಾ ಪರ್ವತಗಳ ದಾಟಣೆಗೆ ಅವು ಸಾಕು. ಇದಕ್ಕೆಲ್ಲ ಎಚ್ಚರಿಕೆಯಿಲ್ಲದಿದ್ದುದೇ ಕಾರಣ, ಮಿತ್ರ. ಅದಿರಲಿ, ನಿನ್ನ ಸಮಾಚಾರವೇನು? ನಿನ್ನ ನಡುಕ ನೋಡಿದರೆ ಖಾಯಿಲೆಯಿರುವಂತೆ ಕಾಣುತ್ತಿದೆಯಲ್ಲ?' ಎಂದು ನೆಸ್‌ವಿತ್‌ಸ್ಕಿ ವಿದ್ಯುತ್‌ಸ್ಪರ್ಶದಿಂದ ಬೆಚ್ಚಿಬೀಳುವಂತೆ ನಡುಗುತ್ತಿದ್ದ ರಾಜಕುಮಾರನನ್ನು ಪ್ರಶ್ನಿಸಿದನು.

'ಅಂಥದೇನೂ ಇಲ್ಲ' ಎಂದು ರಾಜಕುಮಾರ ಮಾರ್ನುಡಿದನು. ಬೆಂಗಾವಲ ಪಡೆಯ ಅಧಿಕಾರಿ ಹಾಗೂ ವೈದ್ಯನ ಮಡದಿಯ ನಡುವೆ ನಡೆದಿದ್ದ ಹಗರಣ ಅದೇತಾನೆ ಅವನ ಚಿತ್ತವನ್ನು ಕಲಕುತ್ತಿತ್ತು.

'ಮಹಾಸೇನಾನಿ ಇಲ್ಲೇನು ಮಾಡುತ್ತಿದ್ದಾರೆ?' ಎಂದವನು ಕೇಳಿದನು.

'ನನಗೇನೂ ತಿಳಿಯದು' ಎಂದು ನೆಸ್‌ವಿತ್‌ಸ್ಕಿ ಉತ್ತರಿಸಿದನು.

'ನನಗೆ ತಿಳಿದದ್ದಿಷ್ಟೆ: ಎಲ್ಲವೂ ಅಸಹ್ಯ, ಅಸಹ್ಯ, ಅಸಹ್ಯ' ಎಂದು ರಾಜಕುಮಾರ ನುಡಿದು ಮಹಾಸೇನಾನಿ ಇದ್ದ ಮನೆಗೆ ನಡೆದನು.

ಕುತುಜೋವ್‌ನ ವಾಹನದ, ಅವನ ಪರಿವಾರದ ದಣಿದ ಸವಾರಿ ಕುದುರೆಗಳ ಮತ್ತು ಗಟ್ಟಿಯಾಗಿ ಮಾತಾಡಿಕೊಳ್ಳುತ್ತಿದ್ದ ಸವಾರರ ನಡುವೆ ಹಾದು ರಾಜಕುಮಾರ ನಡುವೆ ಓಣಿಯನ್ನು ಪ್ರವೇಶಿಸಿದನು. ರಾಜಕುಮಾರ ಬಗ್ರೇಷನ್ ಮತ್ತು ವೇರಾಥರ್ ಜತೆ ಕುತುಜೋವ್ ಸಮಾಲೋಚನೆ ನಡಸುತ್ತಿದ್ದುದಾಗಿ ಅವನಿಗೆ ತಿಳಿಯಿತು. ಆಸ್ಟ್ರಿಯಾ ಸೇನಾನಿ ವೇರಾಥರ್ ಸ್ಮಿಟ್ಟನ ಉತ್ತರಾಧಿಕಾರಿಯಾಗಿದ್ದನು. ಓಣಿಯಲ್ಲಿ ಕಿರಿಯ ಕೊಜ್ಲೋವ್‌ಸ್ಕಿ ಗುಮಾಸ್ತನೆದುರಾಗಿ ಕುಕ್ಕುರಗಾಲೂರಿ ಕುಳಿತಿದ್ದನು. ಗುಮಾಸ್ತ ಅಂಗಿಯ ತೋಳನ್ನು ಮೇಲೆತ್ತಿ ಸಿಕ್ಕಿಸಿಕೊಂಡು, ಅಂಡುಮೇಲಾದ ಟಬ್ಬಿನ ಮೇಲೆ ಅವಸರವಸರವಾಗಿ ಬರೆಯುತ್ತಿದ್ದನು. ರಾತ್ರಿಯೆಲ್ಲ ನಿದ್ದೆಯಿಲ್ಲದೆ ಕೊಜ್ಲೋವ್‌ಸ್ಕಿಯ ಮುಖ ಬಳಲಿದಂತಿತ್ತು. ರಾಜಕುಮಾರ ಅವನ ಕಣ್ಣಿಗೆ ಬಿದ್ದರೂ ಅವನು ತಲೆಸಹ ಅಲ್ಲಾಡಿಸಲಿಲ್ಲ.

'ಎರಡನೆಯ ಸಾಲು....ಮುಗಿಸಿದೆಯಾ?' ಎಂದವನು ಗುಮಾಸ್ತನಿಗೆ ಉಕ್ತ ಲೇಖನ ಮುಂದುವರಿಸಿದನು. 'ಕೀವ್ ನಗರದ ಸಿಡಿಗುಂಡು ಸಿಪಾಯಿಗಳು ಪೊಡೊಲಿಯಾನ್....'

'ಅಷ್ಟು ವೇಗವಾಗಿ ಯಾರೂ ಬರೆದುಕೊಳ್ಳಲಾರರು, ಸ್ವಾಮಿ' ಎಂದು ಕರಣಿಕ ಕೊಜ್ಲೋವ್‌ಸ್ಕಿಯ ಕಡೆಗೆ ಕೋಪಯುಕ್ತವಾದ ಅಗೌರವದ ದೃಷ್ಟಿ ಬೀರಿದನು.

ಬಾಗಿಲಿನ ಮೂಲಕ ಕುತುಜೋವ್‌ನ ಅತೃಪ್ತ ಆವೇಶ ಪೂರ್ಣ ಧ್ವನಿ ಕೇಳಿಸುತ್ತಿತ್ತು. ಆ ಧ್ವನಿಯ ನಡುನಡುವೆ ಅಪರಿಚಿತ ಸ್ವರವೂ ಅವನ ಕಿವಿಯ ಮೇಲೆ ಬೀಳುತ್ತಿತ್ತು. ಆ ಧ್ವನಿಗಳ ಚರ್ಯೆಯಿಂದ, ಕೊಜ್ಲೋವ್‌ಸ್ಕಿಯ ನಿರ್ಲಕ್ಷ್ಯ ದೃಷ್ಟಿಯಿಂದ, ದಣಿದ ಕರಣಿಕನ ಅಗೌರವ ವರ್ತನೆಯಿಂದ, ಮಹಾಸೇನಾನಿಗೆ ಸಮೀಪವಾಗಿ, ನೆಲ ಕಚ್ಚಿಕೊಂಡು ಕುಳಿತಿದ್ದ ಕೊಜ್ಲೋವ್‌ಸ್ಕಿ ಕರಣಿಕರ ಪರಿಸ್ಥಿತಿಯಿಂದ, ಕಿಟಕಿಯ ಬಳಿ ಕುದುರೆಗಳನ್ನು ಹಿಡಿದುಕೊಂಡು ನಿಂತಿದ್ದ ಸವಾರನ ನಗುವಿನಿಂದ, ಏನೋ ಅಪಾಯ ಕಾರಿಯಾದ ವಿಪತ್ತು ಸಂಭವಿಸಿದೆಯೆಂದು ರಾಜಕುಮಾರ ಊಹಿಸಿಕೊಂಡನು.

ಅವನು ಕೊಜ್ಲೋವ್‌ಸ್ಕಿಗೆ ಕೆಲವು ಜರೂರು ಪ್ರಶ್ನೆಗಳನ್ನು ಹಾಕಿದನು.

'ಈಗಿಂದೀಗಲೆ, ರಾಜಕುಮಾರರೆ, ಬಗ್ರೇಷನ್ನರಿಗಾಗಿ ಇಷ್ಟೆಲ್ಲ ಸಜ್ಜು' ಎಂದು ಕೊಜ್ಲೋವ್‌ಸ್ಕಿ ನುಡಿದನು.

'ಸಂಧಾನವೇನಾಯ್ತು ?'

'ಅಂಥಾದ್ದೇನೂ ಇಲ್ಲ. ಯುದ್ಧ ಮುಂದುವರಿಕೆಗೆ ಆಜ್ಞೆಯಾಗಿದೆ.'

ಧ್ವನಿಗಳು ಕೇಳಿಸುತ್ತಿದ್ದ ಬಾಗಿಲಿನ ಕಡೆಗೆ ಆಂಡ್ರೂ ನಡೆದನು. ಅವನು ಕದ ತೆಗೆಯುತ್ತಿದ್ದಂತೆ ಧ್ವನಿ ನಿಂತುವು. ಹದ್ದು ಮೂಗಿನ ಉಬ್ಬುಮುಖದ ಕುತುಜೋವ್ ಬಾಗಿಲಲ್ಲಿ ಕಾಣಿಸಿಕೊಂಡನು. ಅವನಿಗೆದುರಾಗಿ ಬಲಗಡೆಯಲ್ಲಿ ಆಂಡ್ರೂ ನಿಂತು ಕೊಂಡನು. ಆದರೆ ಚಿಂತೆಕಾತರತೆಗಳಿಂದ ಮಹಾಸೇನಾನಿಯ ಮನಸ್ಸು ಆಕ್ರಾಂತ ಗೊಂಡಂತಿದ್ದು, ಆ ವ್ಯಗ್ರತೆ ಅವರು ಸುಷ್ಮ ನೇತ್ರವೊಂದರಲ್ಲಿ ಪ್ರತಿಬಿಂಬಗೊಂಡಿತ್ತು. ಆದ್ದರಿಂದ ರಾಜಕುಮಾರನ ಕಡೆಗೆ ಅವನ ಕಣ್ಣು ಹಾಯಲಿಲ್ಲ. ತನ್ನ ಸಹಾಯಾಧಿ ಕಾರಿಯನ್ನೆ ನೋಡುತ್ತ ಅವನು 'ಮುಗಿಸಿದೆಯಾ ?' ಎಂದು ಪ್ರಶ್ನಿಸಿದನು.

'ಒಂದೇ ಒಂದು ಕ್ಷಣ, ಪ್ರಭು.'

ಮಧ್ಯವಯಸ್ಸಿನ, ಕೃಶಗಾತ್ರದ, ಸಾಧಾರಣಮಟ್ಟದ, ಪೌರ್ವಾತ್ಯರೀತಿಯ ನಿಶ್ಚಲ ನಿರ್ವಿಕಾರ ಮನೋಭಾವದ ಬಗ್ರೇಷನ್ ಮಹಾಸೇನಾನಿಯ ಹಿಂದೆ ಬಂದನು.

'ತಮ್ಮ ಸಂದರ್ಶನಾರ್ಥವಾಗಿ ಬಂದಿದ್ದೇನೆ' ಎಂದು ಆಂಡ್ರೂ ದನಿ ಎತ್ತರಿಸಿ ನುಡಿದು, ಅವನ ಕೈಗೊಂದು ಲಕೋಟೆಯನ್ನಿತ್ತನು.

'ಓಹೋ, ವಿಯನ್ನಾದಿಂದ ಬಂದದ್ದೇ ? ಭೇಷ್. ಸ್ವಲ್ಪತಾಳಿ' ಎಂದು ಕುತು ಜೋವ್ ಬಗ್ರೇಷನ್ ಒಡನೆ ದ್ವಾರಮಂಟಪದ ಕಡೆಗೆ ಹೊರಟನು.

'ನಮಸ್ಕಾರ, ರಾಜಕುಮಾರರೆ ಹೋಗಿ ಬನ್ನಿ, ನಿಮಗೆ ನನ್ನ ಹರಕೆಗಳು. ನಿಮ್ಮ ಸಾಹಸೋದ್ಯಮದಲ್ಲಿ ಕ್ರಿಸ್ತ ಸದಾ ನಿಮ್ಮ ಜತೆಗಿರಲಿ' ಎಂದು ಬಗ್ರೇಷನ್‌ನ ಕಣ್ಣಲ್ಲಿ ಕಣ್ಣಿರಿಸಿದನು. ಅವನ ಮುಖ ಕೂಡಲೇ ಮೃದುವಾಯಿತು. ಕಣ್ಣುಗಳು ಅಶ್ರುಮಯ ವಾದುವು. ತನ್ನ ಎಡಗೈಯಿಂದ ಬಗ್ರೇಷನನ್ನು ಸನಿಹಕ್ಕೆಳೆದುಕೊಂಡನು. ಉಂಗುರವಿದ್ದ ಬಲಗೈಯಿಂದ ಅವನ ಮುಂದೆ ಕ್ರೂಸಾಕಾರದಲ್ಲಿ ಸನ್ನೆಮಾಡಿ, ವಾಡಿಕೆಯಂತೆ

ಉಬ್ಬಿದ ಮುಖವನ್ನು ಮುಂದೆ ಚಾಚಿದನು. ಆದರೆ ಬಗ್ರೇಷನ್ ಕೆನ್ನೆಗೆ ಬದಲಾಗಿ ಕೊರಳನ್ನು ಚುಂಬಿಸಿದನು.

'ಕ್ರಿಸ್ತನ ಕೃಪೆ ನಿಮ್ಮ ಮೇಲೆ ಸದಾ ನೆಲಸಿರಲಿ!' ಎಂದು ಕುತುಜೋವ್ ಪುನರುಕ್ತಿಸಿ, ತನ್ನ ವಾಹನದ ಕಡೆಗೆ ಹೆಜ್ಜೆ ಹಾಕಿದನು. 'ಬನ್ನಿ ಒಳಗೆ ಬನ್ನಿ' ಎಂದವನು ಬಲ್ಕೋನ್‌ಸ್ಕಿಯನ್ನು ಕರೆದನು.

'ನಾನಿಲ್ಲಿ ಸೇವೆ ಸಲ್ಲಿಸುವ ಸಲುವಾಗಿ ಬಂದಿದ್ದೇನೆ, ಮಹಾಸ್ವಾಮಿ. ರಾಜಕುಮಾರ ಬಗ್ರೇಷನ್ನರ ದಳದಲ್ಲಿರುವಂತೆ ನನಗೆ ಕೃಪೆಮಾಡಿ.'

'ಬನ್ನಿ ಒಳಗೆ' ಎಂದು ಕುತುಜೋವ್ ಮತ್ತೆ ನುಡಿದನು. ಬಲ್ಕೋನ್‌ಸ್ಕಿಯ ವಿಲಂಬ ವರ್ತನೆಯನ್ನು ಗಮನಿಸಿದ ಅವನು 'ಉತ್ತಮ ಅಧಿಕಾರಿಗಳು ನನಗೆ ಬೇಕಾಗಿದೆ. ನನಗೆ ಅವರ ಆವಶ್ಯಕತೆ ಹೆಚ್ಚಾಗಿದೆ' ಎಂದು ಸ್ಪಷ್ಟಪಡಿಸಿದನು.

ಇಬ್ಬರೂ ರಥವೇರಿದರು. ಅದು ಮುಂದೆ ಚಲಿಸಿತು. ಕೆಲವು ನಿಮಿಷ ಮೌನ ತಾಂಡವವಾಡುತ್ತಿತ್ತು.

'ಇನ್ನೂ ಅಗಾಧವಾಗಿದೆ, ನಮ್ಮ ಮುಂದೆ ಬಹಳವಿದೆ' ಎಂದು ಕುತುಜೋವ್ ವೃದ್ಧನ ಸೂಕ್ಷ್ಮಗ್ರಹಣ ಶಕ್ತಿಯಿಂದ ಬಲ್ಕೋನ್‌ಸ್ಕಿಯ ಚಿತ್ತವನ್ನರಿತವನಂತೆ ನುಡಿದನು. 'ಅವನ ದಳದ ಹತ್ತರಲ್ಲೊಂದು ಭಾಗ ಹಿಂದಿರುಗಿದರೆ ಸಾಕು, ನಾನು ಭಗವಂತನಿಗೆ ವಂದನೆ ಸಲ್ಲಿಸುತ್ತೇನೆ.' ಎಂದವನು ತನಗೆ ತಾನೆ ಮಾತಾಡಿಕೊಳ್ಳುವಂತೆ ಮುಂದುವರಿಸಿದನು.

ತನ್ನಿಂದ ಒಂದೇ ಒಂದು ಅಡಿ ದೂರದಲ್ಲಿದ್ದ ಕುತುಜೋವನ ಮುಖದ ಮೇಲೆ ಆಂಡ್ರೂ ಕಣ್ಣಾಡಿಸಿದನು. ಎಚ್ಚರಿಕೆಯಿಂದ ತೊಳೆದಿದ್ದ ಕಪೋಲದ ಬಳಿಯ ಗಾಯದ ಗುರುತುಗಳನ್ನವನು ಅನೈಚ್ಛಿಕವಾಗಿಯೆಂಬಂತೆ ಗಮನಿಸಿದನು. ಎಲುಬನ್ನು ಕೊರೆದು ಕಣ್ಣುಗೂಡನ್ನು ಹೊಕ್ಕಿದ್ದ ಗುಂಡಿನ ಕಲೆ ಅವನ ಕಣ್ಣಿಗೆ ಬಿತ್ತು. 'ನಿಜ, ಸತ್ತವರ ಬಗ್ಗೆ ಶಾಂತಿಯಿಂದ ಮಾತಾಡುವ ಹಕ್ಕು ಅವನಿಗಿದೆ' ಎಂದು ಬಲ್ಕೋನ್‌ಸ್ಕಿ ಎಣಿಕೆ ಹಾಕಿಕೊಂಡನು.

'ಆ ಕಾರಣಕ್ಕಾಗಿಯೇ ನನ್ನನ್ನು ಆ ತುಕಡಿಗೆ ಕಳಿಸಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ' ಎಂದವನು ನುಡಿದನು.

ಕುತುಜೋವ್ ಉತ್ತರಿಸಲಿಲ್ಲ. ತಾನು ಹೇಳುತ್ತಿದ್ದ ವಿಷಯದ ಸೂತ್ರ ಮರೆತು ಹೋಗಿದ್ದಂತೆ ತೋರಿತು. ಐದು ನಿಮಿಷ ಆಲೋಚನಾ ಮಗ್ನನಾಗಿದ್ದು ರಥದ ಮೆತ್ತನೆಯ ಎಗರು ಹಲಗೆಯ ಮೇಲೆ ನಿಧಾನವಾಗಿ ವಾಲಿಕೊಂಡು, ರಾಜಕುಮಾರ ಆಂಡ್ರೂವಿನ ಕಡೆಗೆ ತಿರುಗಿದನು. ಅವನ ಮುಖದ ಮೇಲೆ ಕ್ಷೋಭೆಯ ಚಿಹ್ನೆ ಲವಲೇಶವೂ ಕಾಣಲಿಲ್ಲ. ಚಕ್ರವರ್ತಿಯೊಡನೆ ಅವನು ನಡೆಸಿದ ಸಂದರ್ಶನದ ವಿವರಗಳ ಬಗ್ಗೆ, ಕ್ರೆಮ್ಸ್ ವ್ಯವಹಾರಗಳಿಗೆ ಸಂಬಂಧಿಸಿದಂತೆ ಆಸ್ಥಾನದಲ್ಲವನು ಕೇಳಿಸಿಕೊಂಡ ಟೀಕೆ ಟಿಪ್ಪಣಿಗಳ, ಅಂತೆಯೇ ತಮಗಿಬ್ಬರಿಗೂ ಗೊತ್ತಿದ್ದ ಲಾವಣ್ಯವತಿಯರ ವಿಚಾರಗಳ ಬಗ್ಗೆ ಅವನು ನವುರಾದ ಹಾಸ್ಯ ಬೆರೆತ ಶೈಲಿಯಲ್ಲಿ ರಾಜಕುಮಾರನಿಗೆ ಪ್ರಶ್ನೆ ಹಾಕಿದನು.

ಅಧ್ಯಾಯ ೧೪

ತನ್ನ ನಿಯಂತ್ರಣದಲ್ಲಿದ್ದ ಸೈನ್ಯದ ಪರಿಸ್ಥಿತಿ ಶೋಚನೀಯವಾಗಿತ್ತೆಂದು ನವೆಂಬರ್ ಒಂದರಂದು ಕುತುಜೋವನಿಗೆ ಬೇಹುಗಾರನಿಂದ ಸುದ್ದಿ ಬಂದಿತ್ತು. ರಷ್ಯಾದಿಂದ ಬರುತ್ತಿದ್ದ ಮತ್ತು ಕುತುಜೋವನ ಸೈನ್ಯಗಳ ನಡುವಣ ಸಂಪರ್ಕವನ್ನು ತಪ್ಪಿಸುವ ಸಲುವಾಗಿ ಫ್ರೆಂಚರು ಅಧಿಕ ಸೈನ್ಯದೊಡನೆ ಮುನ್ನುಗ್ಗುತ್ತಿದ್ದುದಾಗಿ ಬೇಹುಗಾರ ವರದಿ ಮಾಡಿದ್ದನು. ಕುತುಜೋವ್ ಕ್ರೆಮ್ಸ್‌ನಲ್ಲಿಯೇ ನಿಲ್ಲಲು ನಿಶ್ಚಯಿಸಿದ್ದರೆ ನೆಪೋಲಿಯನ್ನನ ಒಂದೂವರೆ ಲಕ್ಷ ಸೈನ್ಯ ಶಕ್ತಿಹೀನವೂ ಉತ್ಸಾಹ ಶೂನ್ಯವೂ ಆದ ಅವನ ನಲವತ್ತು ಸಾವಿರ ಸೈನ್ಯವನ್ನು ಸುತ್ತುಗಟ್ಟುತ್ತಿತ್ತು. ಆಗ ಉಲ್ಮ್ ಕ್ಷೇತ್ರದಲ್ಲಿ ಮ್ಯಾಕ್ ಅನುಭವಿಸಿದ ಗತಿಯೇ ಕುತುಜೋವನಿಗೂ ಸಂಭವಿಸುತ್ತಿತ್ತು. ರಷ್ಯಾದಿಂದ ಬರುತ್ತಿದ್ದ ಸೈನ್ಯದ ಮಾರ್ಗವನ್ನವನು ತ್ಯಜಿಸಿದ್ದರೆ, ಮಾರ್ಗರಹಿತವಾದ ಬೊಹೀಮಿಯಾ ಪರ್ವತಗಳ ಅಜ್ಞಾತ ಪ್ರದೇಶದಲ್ಲಿ ಸುತ್ತ ಬೇಕಾಗುತ್ತಿತ್ತು. ಬಕ್ಸ್‌ಹೌಡನ್ ಸಂಪರ್ಕದ ಆಶೆಯನ್ನುಳಿದು, ಅತ್ಯಂತ ಪ್ರಬಲವಾದ ಶತ್ರು ಸೈನ್ಯವನ್ನೆದುರಿಸಬೇಕಾಗುತ್ತಿತ್ತು. ಕ್ರೆಮ್ಸ್-ಓಲ್ಮೂತ್ಸ್ ರಸ್ತೆಯಲ್ಲಿ ಹಿಮ್ಮೆಟ್ಟಿ ರಷ್ಯಾದಿಂದ ಬರುತ್ತಿದ್ದ ಸೈನ್ಯವನ್ನು ಸೇರಿಕೊಳ್ಳುವುದಾದರೂ ಫ್ರೆಂಚ್ ಸೈನ್ಯದ ಕಾಟ ತಪ್ಪಿದ್ದಲ್ಲ. ತನ್ನದಕ್ಕಿಂತ ಮೂರು ಪಟ್ಟು ದೊಡ್ಡದಾದ ಆ ಸೈನ್ಯ ಎರಡು ಕಡೆಗಳಿಂದ ಧಾಳಿ ನಡಸಬಹುದಿತ್ತು.

ಕುತುಜೋವ್ ಕೊನೆಯ ದಾರಿಯನ್ನಾರಿಸಿಕೊಂಡನು.

ಗೂಢಚಾರನ ವರದಿಯ ಪ್ರಕಾರ, ಫ್ರೆಂಚ್‌ಸೈನ್ಯ ವಿಯನ್ನಾ ಸೇತುವೆಯನ್ನು ದಾಟಿದ ನಂತರ ಜ್ನಾಯಿಮ್ ಕಡೆಗೆ ವೇಗವೇಗವಾಗಿ ಧಾವಿಸುತ್ತಿತ್ತು. ಕುತುಜೋವ್ ಸಾಗುತ್ತಿದ್ದ ದಾರಿಯಲ್ಲಿ ಅದರ ಅಂತರ ಎಪ್ಪತ್ತೈದು ಮೈಲಿಗಳಷ್ಟಿತ್ತು. ಫ್ರೆಂಚ್ ಸೈನ್ಯಕ್ಕೆ ಮುಂಚೆಯೇ ಆ ಊರನ್ನು ತಲುಪಿದ್ದಾದರೆ ತನ್ನ ಸೈನ್ಯವನ್ನುಳಿಸಬಹುದೆಂಬ ಆಸೆ ಅವನಲ್ಲಿ ಪ್ರಬಲವಾಗಿತ್ತು. ಅದಕ್ಕೆ ಬದಲಾಗಿ ಫ್ರೆಂಚರೇ ಅದನ್ನು ಮೊದಲು ಸೇರಿದ್ದಾದರೆ, ಇಡೀ ಸೈನ್ಯ ಉಲ್ಮ್ ಹಗರಣದಂತೆ ಅವಮಾನಕ್ಕೆ ಗುರಿಯಾಗುತ್ತಿತ್ತು, ಇಲ್ಲವೆ ಲಯ ಹೊಂದುತ್ತಿತ್ತು. ಇಡೀ ಸೈನ್ಯ ಫ್ರೆಂಚರಿಗೆ ಮುಂಚೆ ತಲುಪುವುದಂತು ಅಸಾಧ್ಯವಾದ ಸಂಗತಿಯಾಗಿತ್ತು. ಫ್ರೆಂಚ್ ಸೈನ್ಯ ಬರುತ್ತಿದ್ದ ವಿಯನ್ನಾಜ್ನಾಯಿಮ್ ರಸ್ತೆ ರಷ್ಯನ್ ಸೈನ್ಯ ಬರುತ್ತಿದ್ದ ಕ್ರೆಮ್ಸ್-ಜ್ನಾಯಿಮ್ ರಸ್ತೆಗಿಂತ ಹತ್ತಿರವಾಗಿತ್ತು ಮಾತ್ರವಲ್ಲ, ಉತ್ತಮವಾಗಿತ್ತು.

ಸುದ್ದಿ ತಲುಪಿದ ರಾತ್ರಿ ಕುತುಜೋವ್ ನಾಲ್ಕುಸಾವಿರ ಸಂಖ್ಯೆಯ ಮುಂಗಾಪು ದಳವನ್ನು ಬಗ್ರೇಷನ್ ನೇತೃತ್ವದಲ್ಲಿ ಕ್ರೆಮ್ಸ್-ಜ್ನಾಯಿಮ್ ಮತ್ತು ವಿಯನ್ನಾ-ಜ್ನಾಯಿಮ್ ರಸ್ತೆಗಳ ನಡುವಣ ಪರ್ವತಸ್ತೋಮದ ಮೂಲಕ ರವಾನಿಸಿದನು. ವಿಶ್ರಾಂತಿಯಿಲ್ಲದೆ ಬಗ್ರೇಷನ್ ಆ ಯಾತ್ರೆಯನ್ನು ಪೂರೈಸಬೇಕಾಗಿತ್ತು. ಜ್ನಾಯಿಮ್ ನಗರವನ್ನು ಬೆನ್ನಿನಲ್ಲಿರಿಸಿಕೊಂಡು, ವಿಯನ್ನಾಕ್ಕೆದುರಾಗಿ ಸೈನ್ಯವನ್ನು ನಿಲ್ಲಿಸಬೇಕಾಗಿತ್ತು. ಫ್ರೆಂಚರಿಗೆ ಮುಂಚೆಯೇ ಆಯಕಟ್ಟಿನ ಜಾಗವನ್ನು ಸೇರಿ, ಸಾಧ್ಯವಾದಷ್ಟು ಕಾಲ ಅವರನ್ನು ತಡೆಯಬೇಕಾಗಿತ್ತು. ಕುತುಜೋವ್ ಸಹ ಎಲ್ಲ ಸಾರಿಗೆ ವಾಹನಗಳೊಡನೆ ಜ್ನಾಯಿಮ್ ಮಾರ್ಗ ಹಿಡಿದನು.

ಆ ಘೋರ ಪ್ರಕ್ಷುಬ್ಧ ರಾತ್ರಿ. ಬಗ್ರೇಷನ್ ಹರುಕುಮೋಕ್ಟಿಯ ಹಸಿವು ಬಳಲಿಕೆಯ ಸೈನ್ಯದೊಡನೆ ಮೂವತ್ತು ಮೈಲಿ ದೂರದ ಮಾರ್ಗರಹಿತ ಪರ್ವತಗಳನ್ನು ದಾಟಿ, ಫ್ರೆಂಚ್ ಸೈನ್ಯ ಮುಟ್ಟುವುದಕ್ಕೆ ಕೆಲವು ಗಂಟೆಗಳ ಮುನ್ನವೇ ಹೊಲ್ಲಾಬ್ರೂನ್ ತಲುಪಿದನು. ದಾರಿಯಲ್ಲಿಯೇ ಮೂರನೆಯ ಒಂದು ಭಾಗ ಸೈನಿಕರು ಜೆಲ್ಲಾಪಿಲ್ಲಿಯಾಗಿ ತಲೆಮರೆಸಿಕೊಂಡರು. ಜ್ನಾಯಿಮ್ ತಲುಪಲು ಕುತುಜೋವ್‌ಗೆ ಇನ್ನು ಕೆಲವು ದಿನ ಬೇಕಾಗಿತ್ತು. ಆದ್ದರಿಂದ ಬಗ್ರೇಷನ್ ನಾಲ್ಕು ಸಾವಿರ ದಣಿದ ಸೈನಿಕರೊಡನೆ ಕೆಲವು ದಿನ ಇಡೀ ಶತ್ರುಸೈನ್ಯವನ್ನು ತಡೆಹಿಡಿಯಬೇಕಾಗಿತ್ತು. ಅದು ಕಷ್ಟಸಾಧ್ಯವಾದ ಕಾರ್ಯ. ಆದರೆ ವಿಧಿಯ ಕೈವಾಡದಿಂದಾಗಿ ಅಘಟನ ಘಟನೆ ಘಟನೀಯವಾಯಿತು. ಹೋರಾಟವಿಲ್ಲದೆ ವಿಯನ್ನಾ ಸೇತುವೆಯನ್ನು ಉಪಾಯಾಂತರದಿಂದ ಮುರತ್ ವಶಪಡಿಸಿಕೊಂಡದ್ದು ಸರಿಯಷ್ಟೆ. ಅಂಥದೇ ಹೂಟದ ಮೂಲಕ ಕುತುಜೋವನನ್ನು ಬಲಿಗೆ ಹಾಕಿಕೊಳ್ಳಲು ಅವನು ಪ್ರಯತ್ನಿಸಿದನು. ಬಗ್ರೇಷನ್ನನ ದುರ್ಬಲ ಸೈನ್ಯವನ್ನು ಕಂಡಾಕ್ಷಣ ಅದೇ ಕುತುಜೋವನ ಸಮಸ್ತ ಸೈನ್ಯವೆಂದು ಬಗೆದನು. ಹಿಂದೆ ಬರುತ್ತಿದ್ದ ಸೈನ್ಯ ತನ್ನನ್ನು ಕೂಡಿಕೊಳ್ಳಲನುವಾಗುವಂತೆ ಸಮಯ ಸಾಧಿಸುವ ಸಲುವಾಗಿ ಅವನು ಮೂರು ದಿನಗಳ ಶಾಂತಿಯ ಕರಾರನ್ನು ಸೂಚಿಸಿದನು. ಆ ಸಂದರ್ಭದಲ್ಲಿ ಎರಡು ಕಡೆಯ ಸೈನ್ಯಗಳು ಅತ್ತಿತ್ತಲುಗದೆ ಏಕದೇಶದಲ್ಲಿ ನಿಲ್ಲಬೇಕೆಂಬುದು ಅವನ ಶರತ್ತಾಗಿತ್ತು. ಆ ಮೊದಲೇ ಶಾಂತಿಸಂಧಾನದ ಮಾತುಕತೆಗಳು ನಡೆಯುತ್ತಿದ್ದುದರಿಂದ, ಅನಾವಶ್ಯಕವಾದ ರಕ್ತಪಾತವನ್ನು ತಪ್ಪಿಸುವ ಸಲುವಾಗಿ ಮುರತ್ ಹಂಗಾಮಿ ವ್ಯವಸ್ಥೆಯನ್ನು ಸೂಚಿಸಿದ್ದನು. ಸೈನ್ಯದ ಮುನ್ನೆಲೆಯಲ್ಲಿದ್ದ ಆಸ್ಟ್ರಿಯಾ ಸೇನಾನಿ ಕೌಂಟ್ ನೋಸ್ಟಿಜ್ ಮುರತ್‌ನ ಸಂದೇಶವನ್ನು ನಂಬಿ, ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟನು. ಬಗ್ರೇಷನ ಸೈನ್ಯವೊಂದೇ ಅಪಾಯವನ್ನೆದುರಿಸಬೇಕಾಯಿತು. ಸಂಧಾನಕ್ಕೆ ಪೂರ್ವಭಾವಿಯಾಗಿ ಮೂರು ದಿನಗಳ ಯುದ್ಧವಿರಾಮವನ್ನು ಘೋಷಿಸುವ ಸಲುವಾಗಿ ಮತ್ತೊಬ್ಬ ದೂತ ರಷ್ಯನ್ ಪಡೆಯ ಬಿಡದಿಗೆ ಧಾವಿಸಿದನು. ಯುದ್ಧವಿರಾಮ ಒಪ್ಪಂದವನ್ನು ಸ್ವೀಕರಿಸಲಾಗಲೀ ತಿರಸ್ಕರಿಸಲಾಗಲೀ ತನಗಧಿಕಾರವಿಲ್ಲವೆಂದು ಬಗ್ರೇಷನ್ ಮಾರುತ್ತರವಿತ್ತು, ಆ ನಿವೇದನೆಯ ಬಗ್ಗೆ ವರದಿಮಾಡಲು ತನ್ನ ಸಹಾಯಾಧಿಕಾರಿಯನ್ನು ಕುತುಜೋವನ ಬಳಿಗೆ ಕಳಿಸಿಕೊಟ್ಟನು.

ಸಮಯಸಾಧನೆಗಾಗಿ, ಬಗ್ರೇಷನ್ನನ ಬಳಲಿದ ಪಡೆಯ ವಿಶ್ರಾಂತಿಗಾಗಿ, ಸಾಮಾನು ಸರಂಜಾಮುಗಳ ಮತ್ತು ಬೆಂಗಾವಲ ಪಡೆಯ ಸಾಗಾಣಿಕೆಗಾಗಿ ಕುತುಜೋವನಿಗಿದ್ದ ಅವಕಾಶವೆಂದರೆ ಯುದ್ಧವಿರಾಮವೊಂದೇ. ಚಮೂರಕ್ಷಣೆಗೆ ಅವನಿಗಿದ್ದ ಏಕಮಾತ್ರ ದಾರಿಯೆಂದರೆ ಅನಿರೀಕ್ಷಿತ ಯುದ್ಧವಿರಾಮ ಘೋಷಣೆ. ಸುದ್ದಿ ತಿಳಿದ ಕೂಡಲೇ ಅವನು ತನ್ನ ಬಳಿಯಿದ್ದ ಸಹಾಯಾಧಿಕಾರಿ ವಿಂಟ್‌ಜಿನ್‌ಗೆರೋಡನನ್ನು ಹಗೆಯ ಬಿಡದಿಗೆ ಕಳಿಸಿಕೊಟ್ಟನು. ಯುದ್ಧವಿರಾಮದ ಜತೆಗೆ ಶಾಂತಿಸಂಧಾನದ ಶರತ್ತುಗಳ ನಿವೇದನೆಗೂ ಸಹಾಯಾಧಿಕಾರಿಗೆ ಅನುಮತಿ ದೊರಕಿತು. ಕ್ರೆಮ್ಸ್–ಜ್ನಾಯಿಮ್ ರಸ್ತೆಯಲ್ಲಿ ಸಾರಿಗೆಯ ಮತ್ತು ಸೈನ್ಯದ ಚಲನವನ್ನು ಕ್ಷಿಪ್ರಗೊಳಿಸುವ ಸಲುವಾಗಿ ಕುತುಜೋವ್ ಇತರ ಸಹಾಯಾಧಿಕಾರಿಗಳನ್ನಟ್ಟಿದನು. ತನಗಿಂತ ಎಂಟುಪಟ್ಟು

ದೊಡ್ಡದಾಗಿದ್ದ ಶತ್ರುಸೈನ್ಯಕ್ಕೆದುರಾಗಿ ಬಗ್ರೇಷನ್ನನ ಸೈನ್ಯವೊಂದೇ ಸ್ಥಿರವಾಗಿ ನಿಲ್ಲಬೇಕಾಗಿತ್ತು.

ಶಾಂತಿಸಂಧಾನದ ಸೂಚನೆಗಳಿಗೆ ಕುತುಜೋವ್ ಬದ್ಧನೆನ್ನುವಂತಿರಲಿಲ್ಲ. ಆದರೆ ಅವುಗಳಿಂದ ತನ್ನ ಕಾರ್ಯನಿರ್ವಹಣೆಗೆ ಸಾಕಷ್ಟು ಅವಕಾಶ ದೊರೆಯುವುದೆಂದೂ, ಮುರತ್‌ನ ತಪ್ಪು ಬಹುಬೇಗ ಬಯಲಾಗುವುದೆಂದೂ ಅವನು ನಿರೀಕ್ಷಿಸಿದ್ದ. ಅವನ ನಿರೀಕ್ಷೆ ಸರಿಯೆಂದು ಸಾಬೀತಾಯಿತು. ಆಗ ಬೋನಪಾರ್ಟೆ ಹೊಲ್ಲಾಬ್ರೂನ್‌ನಿಂದ ಹದಿನಾರುಮೈಲಿ ದೂರದಲ್ಲಿದ್ದ ಷಾನ್‌ಬ್ರೂನ್‌ನಲ್ಲಿದ್ದನು. ಮುರತ್‌ನ ಯುದ್ಧ ವಿರಾಮದ ಪತ್ರ ಬಂದೊಡನೆಯೆ ಕುಯುಕ್ತಿಯು ಅರಿವಾಗಿ, ಬೋನಪಾರ್ಟೆ ಅವನಿಗೊಂದು ಪತ್ರ ಬರೆದನು :

ಷಾನ್‌ಬ್ರೂನ್, ಬ್ರುಮೈರ್[1] ೨೫, ೧೮೦೫
ಬೆಳಗ್ಗೆ ೮ ಗಂಟೆ

'ರಾಜಕುಮಾರ ಮುರತ್ ಅವರಿಗೆ,

'ನಿಮ್ಮ ಬಗ್ಗೆ ನನ್ನ ಅಸಂತೋಷವನ್ನು ವ್ಯಕ್ತಪಡಿಸಲು ಬೇಕಾದ ಮಾತುಗಳು ನನ್ನ ಕೋಶದಲ್ಲಿಲ್ಲ. ಮುನ್ನೆಲೆಯ ಪಡೆಯ ನಿಯಂತ್ರಣವೊಂದೇ ನಿಮ್ಮ ಕರ್ತವ್ಯ. ನನ್ನ ಅನುಮತಿಯಿಲ್ಲದೆ ಶಸ್ತ್ರವಿರಾಮ ಒಪ್ಪಂದವನ್ನು ರೂಢಿಸುವ ಹಕ್ಕು ನಿಮಗಿಲ್ಲ. ನಿಮ್ಮಿಂದಾಗಿ ವಿಜಯದ ಫಲ ಕೈಬಿಟ್ಟುಹೋಗುತ್ತಿದೆ. ಈ ಕೂಡಲೇ ಒಪ್ಪಂದವನ್ನು ಮುರಿದು, ಶತ್ರುವಿನ ಮೇಲೆ ಧಾಳಿಮಾಡಿ. ರಷ್ಯಾದ ಚಕ್ರವರ್ತಿ ವಿನಾ, ಸಂಧಾನಕ್ಕೆ ಸಹಿ ಮಾಡುವ ಹಕ್ಕು ಸೇನಾನಿಗಿಲ್ಲವೆಂದು ಸಂಬಂಧಪಟ್ಟವರಿಗೆ ತಿಳಿಸಿ.

'ಒಂದು ಪಕ್ಷ ರಷ್ಯಾ ಚಕ್ರವರ್ತಿ ಏನಾದರೂ ಆ ಒಪ್ಪಂದವನ್ನನುಮೋದಿಸುವುದಾದರೆ, ನಾನದಕ್ಕೆ ಅಂಗೀಕಾರ ಮುದ್ರೆಯೊತ್ತಲು ಸಿದ್ಧ. ಅದೊಂದು ಕಪಡುತಂತ್ರ ಮಾತ್ರವಾಗಿದೆ. ಮುನ್ನುಗ್ಗಿ, ರಷ್ಯಾಸೈನ್ಯವನ್ನು ನೆಲಸಮ ಮಾಡಿ....ಅದರ ಮದ್ದುಗುಂಡು ಸಾಮಾನುಗಳನ್ನು ಕಸಿದುಕೊಳ್ಳುವ ಅವಕಾಶ ನಿಮಗಿದೆ.

'ರಷ್ಯನ್ ಚಕ್ರವರ್ತಿಯ ಸೇನಾಪತಿ ಸಹಾಯಕ ಬರಿಯ ಮೋಸಗಾರ. ಅಧಿಕಾರವಿಲ್ಲದ ಅಧಿಕಾರಿಗಳು ಕೇವಲ ಶೂನ್ಯ. ಇವನಿಗೆ ಯಾವ ಅಧಿಕಾರವೂ ಇಲ್ಲ.... ವಿಯನ್ನಾ ಸೇತುವೆಯನ್ನು ದಾಟುವಾಗ ಆಸ್ಟ್ರಿಯಾ ಸೈನ್ಯ ಮೋಸಹೋಯಿತು ; ಚಕ್ರವರ್ತಿಯ ಸಹಾಯಾಧಿಕಾರಿಯ ಮೋಸದ ಬಲೆಗೆ ನೀವೀಗ ಬಿದ್ದಿದ್ದೀರಿ.'

ನೆಪೋಲಿಯನ್'

ಬೋನಪಾರ್ಟೆಯ ಸಹಾಯಾಧಿಕಾರಿ ತರ್ಜನೆಯ ಪತ್ರದೊಡನೆ ಮುರತ್‌ನ ಬಳಿಗೆ ನಾಗಾಲೋಟದಿಂದ ಧಾವಿಸಿದನು. ಸುಲಭವಾಗಿ ಸಿಕ್ಕಿರುವ ಯಜ್ಞಪಶು ತಪ್ಪಿಸಿ

1 ಪ್ರಥಮ ಫ್ರೆಂಚ್ ಗಣರಾಜ್ಯದ ಕ್ಯಾಲೆಂಡರ್ ಪ್ರಕಾರ ದ್ವಿತೀಯ ಮಾಸ: ಅಕ್ಟೋಬರ್ ೨೩ ರಿಂದ ನವೆಂಬರ್ ೨೧ ರವರೆಗೆ.

ಕೊಂಡೀತೆಂಬ ಭಯದಿಂದ, ತನ್ನ ಸೇನಾನಿಗಳನ್ನು ಸಂಬದೆ, ಬೋನಪಾರ್ಟೆ ತನ್ನ ರಕ್ಷಣಾದಳದೊಡನೆ ಸ್ವಯಂ ಯುದ್ಧರಂಗಕ್ಕೆ ಹೋದನು. ಬಗ್ರೇಷನ್ನನ ಸೈನಿಕರು ಹರ್ಷೋನ್ಮತ್ತರಾಗಿ ಶಿಬಿರಾಗ್ನಿಯನ್ನು ಹಚ್ಚಿದರು, ಕೈಕಾಲು ಬಟ್ಟೆಗಳನ್ನು ಬೆಚ್ಚಗೆ ಮಾಡಿಕೊಂಡರು; ಮೂರು ದಿನಗಳ ನಂತರ ಮೊಟ್ಟ ಮೊದಲಿಗೆ ಗಂಜಿಮಾಡಿ ಕುಡಿದರು; ಭವಿಷ್ಯದಲ್ಲಿ ತಮಗೇನು ಕಾದಿದೆಯೆಂಬ ಸಂಗತಿ ಅವರಿಗರಿವಾಗಲಿಲ್ಲ, ಅವರ ಕಲ್ಪನೆಗೂ ಸಹ ನಿಲುಕಲಿಲ್ಲ.

ಅಧ್ಯಾಯ ೧೫

ಒತ್ತಾಯದಿಂದ ಕುತುಜೊವನ ಅನುಮತಿಯನ್ನು ದೊರಕಿಸಿಕೊಂಡು ಆಂಡ್ರ್ಯೂ ಅಪರಾಹ್ನ ಮೂರು ಮತ್ತು ನಾಲ್ಕು ಗಂಟೆಯ ನಡುವೆ ಗ್ರಂಥ್ ಸೇರಿ, ಬಗ್ರೇಷನ್ನನ ಮುಂದೆ ಹಾಜರಾದನು. ಬೋನಪಾರ್ಟೆಯ ಸಹಾಯಾಧಿಕಾರಿ ಮುರತ್‌ನ ಬಿಡದಿಯನ್ನು ಇನ್ನೂ ತಲುಪಿರಲಿಲ್ಲ; ಸಂಗ್ರಾಮ ಪ್ರಾರಂಭವಾಗಿರಲಿಲ್ಲ. ಬಗ್ರೇಷನ್ನನ ಸೈನ್ಯದಲ್ಲಿ ಯಾರಿಗೂ ಮುಂದೇನಾಗಬಹುದೆಂಬ ಸಂಗತಿ ತಿಳಿದಿರಲಿಲ್ಲ. ಅವರು ಶಾಂತಿಯ ವಿಷಯ ಕುರಿತು ಕೆಲವರು ಪ್ರಸ್ತಾಪಿಸುತ್ತಿದ್ದರು; ಆದರೆ ಅದರ ಸಾಧ್ಯತೆಯ ಬಗ್ಗೆ ಅವರಿಗೆ ನಂಬಿಕೆಯಿರಲಿಲ್ಲ; ಮತ್ತು ಕೆಲವರು ಯುದ್ಧ ಸಾಧ್ಯತೆಯ ಬಗ್ಗೆ ಚರ್ಚೆ ನಡಸಿದರೂ ಅದು ಹತ್ತಿರವಿರಲಾರದೆಂದು ನಂಬಿದರು. ಅಚ್ಚುಮೆಚ್ಚಿನವನೂ ವಿಶ್ವಾಸಪಾತ್ರನೂ ಆದ ಬಲ್ಕೋನ್‌ಸ್ಕಿಯನ್ನು ಬಗ್ರೇಷನ್ ಅತ್ಯಂತ ಗೌರವಾದರಗಳಿಂದ ಸ್ವಾಗತಿಸಿದನು. ಆ ದಿನವೋ ಮಾರನೆಯ ದಿನವೋ ಯುದ್ಧ ಸಂಭವಿಸುವ ನಿರೀಕ್ಷೆಯಿದೆಯೆಂದು ತಿಳಿಸಿ, ಸಂಗ್ರಾಮ ಸಮಯದಲ್ಲಿ ತನ್ನೊಡನಿರುವ ಅಥವಾ ಹಿಂಚೂಣಿಯಲ್ಲಿರುವ ಸ್ವಾತಂತ್ರ್ಯ ಅವನಿಗಿದೆಯೆಂದು ಸ್ಪಷ್ಟಪಡಿಸಿದನು. ಹಿಂಜರಿತದ ಸಂಗತಿಯೂ ಪ್ರಮುಖವಾದ್ದರಿಂದ, ಅದರ ಮೇಲೆ ಕಣ್ಣಿಡುವ ಸಲುವಾಗಿ ಹಿನ್ನೆಲೆಯ ಉಸ್ತುವಾರಿಯೂ ಅತ್ಯಾವಶ್ಯವೆಂದು ನುಡಿದನು. 'ಏನೇ ಆಗಲಿ, ಈ ಹೊತ್ತಂತೂ ಧಾಳಿ ನಡೆಯಲಾರದು' ಎಂದು ಬಗ್ರೇಷನ್ ಭರವಸೆಯಿತ್ತನು.

'ಇವನೇನಾದರೂ ಪ್ರಶಸ್ತಿಗಳಿಸಬೇಕೆಂಬಾಸೆಯುಳ್ಳ ಸಾಮಾನ್ಯ ಸೊಗಸುಗಾರನಾದ ಪಕ್ಷಕ್ಕೆ ಹಿಂಗಾಪಿನ ನೆಲೆಯಲ್ಲಿದ್ದರೂ ಬಹುಮಾನ ಗಿಟ್ಟಿಸಿಕೊಳ್ಳುತ್ತಾನೆ; ನನ್ನೊಡನೆಯೇ ಇರಬೇಕೆನ್ನುವುದಾದರೆ ಇರಲಿ....ಇವನು ಧೈರ್ಯವುಳ್ಳ ಆಸಾಮಿಯಾದರೆ ಇಲ್ಲಿ ಇವನಿಂದ ಪ್ರಯೋಜನವಾಗಬಹುದು' ಎಂದು ಬಗ್ರೇಷನ್ ಮನಸ್ಸಿನಲ್ಲಂದುಕೊಂಡನು. ಆಂಡ್ರ್ಯೂ ಮರುಮಾತಾಡದೆ ಸೇನಾವ್ಯೂಹವನ್ನು ನೋಡಿಬರಲಿಕ್ಕಾಗಿ ಅವನ ಅನುಮತಿಯನ್ನಪೇಕ್ಷಿಸಿದನು. ತಾನೇ ಕಾರ್ಯಾಚರಣೆಗಿಳಿಯಬೇಕಾದ ಸಂದರ್ಭವೊದಗಿದ್ದಾದರೆ ಸೈನ್ಯದ ಸ್ಥಿತಿಗತಿಗಳನ್ನರಿತಿರುವುದೊಳ್ಳೆಯದೆಂದು ಅವನು ಭಾವಿಸಿದನು. ಸುಂದರನೂ, ನಾಜೋಕಾದ ಉಡುಗೆಯುಳ್ಳವನೂ, ತೋರುಬೆರಳಿದಲ್ಲಿ ವಜ್ರದುಂಗುರ ಧರಿಸಿದವನೂ ಆದ ಬಿಳಿಯ ಅಧಿಕಾರಿಯೊಬ್ಬ ರಾಜಕುಮಾರನಿಗೆ ಸೈನ್ಯವನ್ನು ತೋರಿಸಿಕೊಂಡು ಬರುವುದಾಗಿ ಮುಂದಾದನು. ತಪ್ಪುತಪ್ಪಾಗಿಯಾದರೂ ಫ್ರೆಂಚ್ ಭಾಷೆಯಲ್ಲಿಯೇ ಮಾತಾಡಬೇಕೆನ್ನುವ ಚಪಲ ಅವನದು.

ಎಲ್ಲಿ ನೋಡಿದರೂ ಮಳೆಯಿಂದ ತೊಯ್ದು, ನಿರುತ್ಸಾಹ ವದನದ, ಏನನ್ನೋ ಹುಡುಕುವಂತೆ ತೋರುತ್ತಿದ್ದ ಸೈನಿಕರೆ ಕಣ್ಣಿಗೆ ಬೀಳುತ್ತಿದ್ದರು. ಅವರಲ್ಲಿ ಹಲವರು ಹಳ್ಳಿಯಿಂದ ಬೆಂಚು ಬಾಗಿಲು ಬೇಲಿ ಸಾಮಾನುಗಳನ್ನೆಳೆದುಕೊಂಡು ಬರುತ್ತಿದ್ದರು.

'ಅಗೋ ಅಲ್ಲಿ ನೋಡಿ, ರಾಜಕುಮಾರರೆ! ಆ ಜನರನ್ನು ತಡೆಯಲಾಗದು. ಅಧಿಕಾರಿಗಳು ಅವರನ್ನು ಹತೋಟಿಯಲ್ಲಿಟ್ಟುಕೊಳ್ಳಲಾರರು' ಎಂದು ಅಧಿಕಾರಿ ಸೈನಿಕರ ಕಡೆಗೆ ಬೆರಳು ಮಾಡಿದನು. ದಂಡಿನ ಹರದನ ಗುಡಾರದ ಕಡೆ ತೋರಿಸಿ 'ಅಲ್ಲಿ ನೋಡಿ, ಅವರೆಲ್ಲ ಅಲ್ಲಿ ಗುಂಪು ಕೂಡುತ್ತಾರೆ. ಬೆಳಗ್ಗೆ ತಾನೆ ಅವರನ್ನೆಲ್ಲ ಆಚೆಗಟ್ಟಿದೆ. ಮತ್ತೆ ಗುಡಾರ ಭರ್ತಿಯಾಗಿದೆ. ಅಲ್ಲಿಗೆ ಹೋಗಿ, ಅವರನ್ನು ತುಸು ಹೆದರಿಸಿ ಬರುತ್ತೇನೆ. ಒಂದೇ ಒಂದು ಕ್ಷಣ ಸಾಕು' ಎಂದು ನುಡಿದನು.

'ನಾವೂ ಒಳಗೆ ಹೋಗೋಣ. ನಾನೂ ಒಂದಿಷ್ಟು ರೊಟ್ಟಿ ವೊಸರು ಬೆಣ್ಣೆ ತೆಗೆದುಕೊಳ್ಳುತ್ತೇನೆ. ಬೆಳಗಿನಿಂದ ತಿಂಡಿ ತಿನ್ನಲು ಪುರಸೊತ್ತೇ ಆಗಿಲ್ಲ' ಎಂದು ರಾಜಕುಮಾರ ನುಡಿದನು.

'ಮೊದಲೇ ಏಕೆ ಹೇಳಲಿಲ್ಲ, ರಾಜಕುಮಾರರೆ? ನಾನೇ ಏನಾದರೂ ಕೊಡುತ್ತಿದ್ದೆನಲ್ಲ.'

ಅವರು ಕುದುರೆಯಿಂದಿಳಿದು, ಗುಡಾರವನ್ನು ಪ್ರವೇಶಿಸಿದರು. ಬಳಲಿದ ಹಾಗೂ ಕೆಂಪೇರಿದ ವದನಗಳ ಅಧಿಕಾರಿಗಳು ಮೇಜಿನ ಮುಂದೆ ಕುಳಿತು ತಿಂಡಿ ತೀರ್ಥಗಳಲ್ಲಿ ತಲ್ಲೀನರಾಗಿದ್ದರು.

'ಇದೆಲ್ಲ ಏನು? ಗೆಳೆಯರೆ' ಎಂದು ಮೇಲಧಿಕಾರಿ ಪ್ರಶ್ನಿಸಿದನು. ಅವನು ಹಲವು ಸಾರಿ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದುದರಿಂದ ಅವನ ಆಗಿನ ಧ್ವನಿಯಲ್ಲಿ ನಿಂದೆ ಬೇಸರಗಳೆರಡೂ ಎದ್ದು ಕಾಣುತ್ತಿದ್ದುವು. 'ಈ ರೀತಿ ನಿಮ್ಮ ಜಾಗಗಳನ್ನು ಬಿಟ್ಟು ಬರಬಾರದೆನ್ನುವ ವಿಷಯ ನಿಮಗೆ ಗೊತ್ತಿಲ್ಲವೆ? ರಾಜಕುಮಾರರ ಆಜ್ಞೆಯನ್ನು ಧಿಕ್ಕರಿಸಬಹುದೆ? ರೀ, ಕ್ಯಾಪ್ಟನ್' ಎಂದವನು ತೆಳ್ಳನೆಯ, ಕೊಳಕಿಡಿದ, ಕೃಶಗಾತ್ರದ ಫಿರಂಗಿದಳದ ಅಧಿಕಾರಿಯ ಕಡೆಗೆ ತಿರುಗಿದನು. ಅವರು ಒಳಗೆ ಪ್ರವೇಶಿಸುತ್ತಿದ್ದಂತೆ ಕಷ್ಟದಿಂದ ಮುಗುಳುನಗೆ ಪ್ರದರ್ಶಿಸುತ್ತ ಮೇಲೆದ್ದನು. ಅವನ ಕಾಲುಗಳಲ್ಲಿ ಚೀಲಗಳಿದ್ದುವೇ ಹೊರತು ಬೂಟುಗಳಿರಲಿಲ್ಲ. ಕಾವು ಕೊಡಲೆಂದು ಹೋಟಲು ಮಾಲೀಕನ ಬಳಿ ಅವನ್ನು ಬಿಟ್ಟಿದ್ದನು.

'ಏನ್ರಿ ತೂಷಿನ್, ನಿಮಗೆ ನಾಚಿಕೆಯಾಗುವುದಿಲ್ಲವೆ? ಅಧಿಕಾರಿಯಾದವನು ಇತರರಿಗೆ ಮಾದರಿಯಾಗಿರುತ್ತಾನೆಂದು ಜನ ತಿಳಿದಿರುತ್ತಾರೆ. ಈಗ ನೋಡಿದರೆ ನೀವು ಬೂಟೀ ಹಾಕಿಕೊಂಡಿಲ್ಲ. ಇದ್ದಕ್ಕಿದ್ದಂತೆ ಸನ್ನಾಹದ ಕರೆ ಬಂದರೆ ನೀವು ಪೇಚಿಗೆ ಸಿಕ್ಕಿಕೊಳ್ಳುತ್ತೀರಿ' ಎಂದು ಮೇಲಧಿಕಾರಿ ಮಾತು ಮುಂದುವರಿಸಿದಾಗ ತೂಷಿನ್ ಹುಸಿನಕ್ಕನು. 'ಗೆಳೆಯರೆ, ನೀವೀಗ ದಯೆಯಿಟ್ಟು ನಿಂನಿಮ್ಮ ಜಾಗಗಳಿಗೆ ತೆರಳಿರಿ. ಹ್ಞಾ, ನೀವೆಲ್ಲ, ಎಲ್ಲರೂ' ಎಂದು ಮೇಲಧಿಕಾರಿ ಹುಕುಮಿಸಿದನು.

ತೂಷಿನ್ ಕಡೆ ನೋಡುತ್ತಿದ್ದ ರಾಜಕುಮಾರ ಆಂಡ್ರೂ ಅನೈಚ್ಛಿಕವಾಗಿ ನಗೆ

ಸೂಸಿದನು. ತೂಷಿನ್ ನಕ್ಕನೇ ಹೊರತು ಮಾತಾಡಲಿಲ್ಲ. ಅವನ ವಿಶಾಲವಾದ ನೇತ್ರಗಳಲ್ಲಿ ಬುದ್ಧಿ ಕೃಪೆಗಳು ಮುಕ್ಕುಳಿಸುತ್ತಿದ್ದುವು. ರಾಜಕುಮಾರರಿಂದ ಒಡಿದು ಮೇಲಧಿಕಾರಿಯ ಕಡೆಗೆ ಅವನು ಅನ್ವೇಷಕ ದೃಷ್ಟಿ ಹರಿಸಿದನು.

'ಬೂಟಿಲ್ಲದಿರುವುದೆ ಸರಾಗವೆಂಬುದು ಸೈನಿಕರ ಅಭಿಮತ' ಎಂದು ತೂಷಿನ್ ನಕ್ಕನು. ಆ ನಗುವಿನಲ್ಲಿ ಲಜ್ಜೆಮುಜುಗರಗಳಿದ್ದುವು. ಹಾಸ್ಯದ ಗತ್ತಿನಲ್ಲಿ ಮಾತಾಡಬೇಕೆಂಬುದೇ ಅವನ ಅಪೇಕ್ಷೆಯಾಗಿತ್ತು. ಮಾತು ಮುಗಿಸುವ ಮುನ್ನವೇ ವಿನೋದ ಅವರಿಗೆ ಹಿಡಿಸಲಾರದೆಂದರಿತುಕೊಂಡನು. ಅವನು ಕಕ್ಕಾಬಿಕ್ಕಿಯಾದನು.

ಸ್ಟಾಫ್ ಅಧಿಕಾರಿ ತನ್ನ ಗಾಂಭೀರ್ಯವನ್ನು ಮರೆಯದೆ 'ದಯೆಯಿಟ್ಟು ನಿಂನಿಮ್ಮ ಜಾಗೆಗಳಿಗೆ ತೆರಳಿರಿ' ಎಂದು ತಾಕೀತು ಮಾಡಿದನು.

ರಾಜಕುಮಾರ ಅಂಡ್ರೂ ಮತ್ತೊಮ್ಮೆ ಫಿರಂಗಿ ದಳದ ಅಧಿಕಾರಿಯ ಕುಬ್ಜ ದೇಹದ ಕಡೆಗೆ ಕಣ್ಣು ಹಾಯಿಸಿದನು. ಅದರಲ್ಲವನಿಗೆ ಹಾಸ್ಯ ಪ್ರವೃತ್ತಿ ಕಂಡಿತೇ ಹೊರತು, ಯೋಧ ಸಹಜವಾದ ಲಕ್ಷಣಗಳು ಕಾಣಲಿಲ್ಲ. ಆದರೆ ಅದರ ಆಕರ್ಷಕತೆಗವನು ಬೆರಗಾದನು.

ಸ್ಟಾಫ್ ಅಧಿಕಾರಿ ಮತ್ತು ರಾಜಕುಮಾರರು ಕುದುರೆಯೇರಿ, ಸವಾರಿಸಿದರು.

ನಿರಂತರವಾಗಿ ಹಲವು ತುಕಡಿಗಳ ಯೋಧರನ್ನೂ ಅಧಿಕಾರಿಗಳನ್ನೂ ಸಂದರ್ಶಿಸುತ್ತ, ಅವರನ್ನು ಹಿಂದೆ ಹಾಕುತ್ತ, ಹಳ್ಳಿಯಿಂದ ದೂರ ಸರಿದಾಗ, ಎಡಗಡೆಗೆ ಕೆಲವು ಕಂದಕಗಳು ಅವರ ಕಣ್ಣಿಗೆ ಬಿದ್ದುವು. ಮಣ್ಣಿನ ಕೆಂಪು ಬಣ್ಣದಿಂದಾಗಿ ಅವನ್ನು ಅದೆ ತಾನೆ ತೋಡಿರಬಹುದೆಂದು ಊಹಿಸಬಹುದಾಗಿತ್ತು. ಸೈನಿಕರು ಗೆಜ್ಜಲು ಹುಳುಗಳಂತೆ ಕಂದಕಗಳಲ್ಲಿ ಕಿಕ್ಕಿರಿದಿದ್ದರು. ಚುಚ್ಚುವ ಕೊರೆತದಲ್ಲಿಯೂ ಅವರು ಷರಟು ಮಾತ್ರ ತೊಟ್ಟಿದ್ದರು. ದಡದ ಹಿಂದಿನಿಂದ ಕಾಣದಕೈಗಳು ಗುದ್ದಲಿಯಿಂದ ಕೆಮ್ಮಣ್ಣನ್ನು ಎಡೆಬಿಡದೆ ಎಸೆಯುತ್ತಿದ್ದುವು. ಆಂಡ್ರೂ ಮತ್ತು ಅಧಿಕಾರಿ ಆ ಕಡೆಗೆ ಕಣ್ಣು ಹೊರಳಿಸಿ, ಮುಂದೆ ಹಾಯ್ದರು. ಹಿಂದೆಯೇ ಕೆಲವು ಸೈನಿಕರು ಕಂದಕದಿಂದ ಓಡಿಹೋದರು. ಬೇರೆ ಸೈನಿಕರು ಅವರ ಜಾಗಗಳನ್ನಾಕ್ರಮಿಸಿಕೊಂಡರು. ಅಧಿಕಾರಿ ಮತ್ತು ರಾಜಕುಮಾರರು ಈ ಕಕ್ಕಸುಗಳ ದುರ್ವಾತದಿಂದ ಪಾರಾಗುವ ಸಲುವಾಗಿ ಮೂಗು ಮುಚ್ಚಿಕೊಂಡು, ಕುದುರೆಗಳನ್ನು ಕುಲುಕೋಟಕ್ಕಣಿಮಾಡಲು ಬೆನ್ನು ಚಪ್ಪರಿಸಬೇಕಾಯಿತು.

'ಬಿಡದಿಯ ಈ ಸುಖ ಮತ್ತೆಲ್ಲಿಯೂ ಸಿಗಲಾರದು' ಎಂದು ಸ್ಟಾಫ್ ಅಧಿಕಾರಿ ನುಡಿದನು.

ಅವರು ಎದುರಿನ ಬೆಟ್ಟದವರೆಗೆ ಸವಾರಿಸಿದರು. ಅಲ್ಲಿಂದ ಫ್ರೆಂಚ್ ಸೈನ್ಯವನ್ನು ಕಾಣಬಹುದಿತ್ತು. ಆಂಡ್ರೂ ನಿಂತುಕೊಂಡು, ನೆಲೆಯನ್ನು ಅಜಮಾಯಿಷಿಮಾಡ ತೊಡಗಿದನು.

ಅಧಿಕಾರಿ ಉನ್ನತ ಸ್ಥಳವನ್ನು ತೋರಿಸುತ್ತ 'ಅದೇ ನಮ್ಮ ಬತೇರಿ, ಅದು ಬೂಟಿಲ್ಲದ ವಿಚಿತ್ರವ್ಯಕ್ತಿಯ ಉಸ್ತುವಾರಿಯಲ್ಲಿದೆ. ಆ ಜಾಗದಿಂದ ಸುತ್ತಮುತ್ತೆಲ್ಲ ಕಾಣುತ್ತದೆ. ಅಲ್ಲಿಗೆ ಹೋಗೋಣ' ಎಂದು ಹೇಳಿದನು.

ಆ ಅಧಿಕಾರಿಯ ಸಹವಾಸದಿಂದ ವಿಮುಕ್ತನಾಗುವ ಸಲುವಾಗಿ 'ನಿಮಗೆ ಧನ್ಯ

ವಾದಗಳು. ನಾನೊಬ್ಬನೇ ಹೋಗುತ್ತೇನೆ. ನೀವು ತೊಂದರೆ ತೆಗೆದುಕೊಳ್ಳುವುದು ಬೇಡ. ಇಷ್ಟೇ ಸಾಕು' ಎಂದು ರಾಜಕುಮಾರ ಸೊಲ್ಲಿಸಿದನು.

ಅಧಿಕಾರಿ ಹಿಂದುಳಿದನು; ರಾಜಕುಮಾರ ಏಕಾಕಿಯಾಗಿ ಸವಾರಿಸಿದನು. ಮುಂದೆ ಮುಂದೆ ಸಾಗಿ, ಶತ್ರು ಸೈನ್ಯ ಹತ್ತಿರವಾದಂತೆಲ್ಲ, ಸ್ವಸೈನ್ಯ ಕ್ರಮಬದ್ಧವಾಗಿ ಉಲ್ಲಾಸದಿಂದಿದ್ದುದು ಕಂಡುಬಂತು. ಬೆಳಗ್ಗೆ ಜ್ನಾಯಿಮ್ ರಸ್ತೆಯಲ್ಲಿ ಬರುತ್ತಿದ್ದಾಗ ಫ್ರೆಂಚ್ ಸೈನ್ಯಕ್ಕೆ ಏಳು ಮೈಲಿಗಳ ದೂರದಲ್ಲಿದ್ದ ಸಾರಿಗೆ ಸೈನ್ಯದಲ್ಲಿ ಗೋಚರಿಸಿದ ಅವ್ಯವಸ್ಥೆ, ನಿರುತ್ಸಾಹಗಳನ್ನು ಅವನೆಂದೂ ಕಂಡಿರಲಿಲ್ಲ. ಗ್ರಂಥ್ ನಗರದಲ್ಲಿಯೂ ಭಯ ಕಳವಳಗಳನ್ನು ಗಮನಿಸಬಹುದಿತ್ತು. ಆದರೆ ಫ್ರೆಂಚ್ ಸೈನ್ಯ ಸನಿಹವಾದಂತೆಲ್ಲ ತನ್ನ ಸೈನ್ಯದಲ್ಲಿ ಅಧಿಕ ಆತ್ಮಪ್ರತ್ಯಯವನ್ನು ಗುರುತಿಸುತ್ತಿದ್ದನು. ನಿಲುವಂಗಿಯ ಸೈನಿಕರನ್ನು ಸಾಲಾಗಿ ನಿಲ್ಲಿಸಲಾಗಿತ್ತು. ಸಾರ್ಜಂಟ್ ಮೇಜರರು ಮತ್ತು ಕಂಪನಿ ಅಧಿಕಾರಿಗಳು ಅವರನ್ನೆಣಿಸುತ್ತಿದ್ದರು; ಕೋಲ್ಕೊನೆಯು ಯೋಧನ ಪಕ್ಕೆಲುಬುಗಳನ್ನು ತಿವಿದು, ಕೈ ಮೇಲಕ್ಕೆತ್ತುವಂತೆ ಅಜ್ಞಾಪಿಸುತ್ತಿದ್ದರು. ಇಡೀ ಪ್ರದೇಶದಲ್ಲಿ ಹರಡಿಕೊಂಡಿದ್ದ ಸೈನಿಕರು ಮರದ ತುಂಡು ಕುರುಚಲು ಗಿಡಗಳನ್ನು ಕಲೆಹಾಕಿ, ವಿನೋದದ ಹರಟೆ ನಗುಗಳ ನಡುವೆ ನೆರಳುಗಳನ್ನು ಕಟ್ಟಿಕೊಳ್ಳುತ್ತಿದ್ದರು. ಸವಸ್ತ್ರರೂ ವಸ್ತ್ರಹೀನರೂ ಅಗ್ನಿಕುಂಡದ ಸುತ್ತನೆರೆದು, ತಂತಮ್ಮ ಷರಟುಗಳನ್ನೂ ಕಾಲುಪಟ್ಟಿಗಳನ್ನೂ ಒಣಗಿಸಿಕೊಳ್ಳುತ್ತಿದ್ದರು; ಬೂಟು ಮತ್ತು ಮೇಲಂಗಿಗಳನ್ನು ರಿಪೇರಿಮಾಡುತ್ತಿದ್ದರು, ಹಂಡೆ ಮತ್ತು ಗಂಜಿದಪ್ಪಲೆಗಳ ಬಳಿ ಠರಾಯಿಸುತ್ತಿದ್ದರು. ಒಂದು ತಂಡದಲ್ಲಿ ಅಡುಗೆ ಸಿದ್ಧವಾಗಿತ್ತು. ಹಬೆ ಹೊಮ್ಮುತ್ತಿದ್ದ ಹಂಡೆಯ ಕಡೆಗೆ ಸೈನಿಕರು ಕಾತರತೆಯಿಂದ ಬಿಡುಗಣ್ಣಾಗಿ ನೋಡುತ್ತಿದ್ದರು. ಮೇಲಧಿಕಾರಿ ರುಚಿನೋಡಿ, ಹುಕುಂಮಾಡುವ ತನಕ ಅವರು ಕಾಯಬೇಕಾಗಿತ್ತು. ಗೋಟಿನಮುಂದೆ ಮರದ ತುಂಡಿನ ಮೇಲೆ ಕುಳಿತಿದ್ದ ಅಧಿಕಾರಿಯೆಡೆಗೆ ಸಾರ್ಜಂಟನೊಬ್ಬ ಮರದ ಬೋಗುಣಿಯಲ್ಲಿ ಮಾದರಿತಿನಿಸುಗಳನ್ನು ಕೊಂಡೊಯ್ಯುತ್ತಿದ್ದನು.

ಎಲ್ಲ ತಂಡಗಳಿಗೂ ಮೋದ್ಕ ಲಭಿಸುತ್ತಿರಲಿಲ್ಲ. ಅದೃಷ್ಟವಿದ್ದ ಪಡೆಗೆ ಮಾತ್ರ ಅದು ಲಭ್ಯವಾಗುತ್ತಿತ್ತು, ಒಂದು ತಂಡದ ಪದಾತಿಗಳು ವಿಶಾಲಭುಜಗಳ, ಗೋರದ ಮಚ್ಚೆಯ ಸಾರ್ಜಂಟ್ ಮೇಜರನ ಸುತ್ತ ಗುಂಪುಕೂಡಿದ್ದರು. ಅವನು ಸಣ್ಣ ಪೀಪಾಯಿಯನ್ನು ವಾಲಿಸಿ, ಒಂದಾದ ಮೇಲೊಂದರಂತೆ ತನ್ನ ಮುಂದೆ ಹಿಡಿದ ಪಾತ್ರೆಯ ಮುಚ್ಚಳಗಳಿಗೆ ಮೋದ್ಕ ಸುರಿಯುತ್ತಿದ್ದನು. ಸೈನಿಕರು ಗೌರವ ಪೂರ್ಣ ಕೃತಜ್ಞತಾ ಭಾವನೆಯಿಂದ ಮುಚ್ಚಳಗಳನ್ನು ತುಟಿಗಳಿಗೊತ್ತಿ ಹಿಡಿದು, ಮೋದ್ಕ ಹೀರುತ್ತಿದ್ದರು. ಅದು ಮುಗಿದನಂತರ ತುಟಿ ನೆಕ್ಕಿಕೊಂಡು, ನಿಲುವಂಗಿಯ ತೋಳ ತುದಿಯಿಂದ ಒರಸಿಕೊಳ್ಳುತ್ತಿದ್ದರು. ತಾವು ತಂತಮ್ಮ ಮನೆಗಳಲ್ಲಿದ್ದಂತೆ ಶಾಂತಿಯುತವಾದ ಬಾಳಿಯುವನ್ನು ಪ್ರವೇಶಿಸುತ್ತಿದ್ದಂತೆ ಅವರ ಮುಖಗಳ ಮೇಲೆ ಗಂಭೀರ ಭಾವನೆ ಸುಳಿದಾಡುತ್ತಿತ್ತು. ಕಾರ್ಯಾಚರಣೆಗೆ ಸಿದ್ಧವಾಗಿ ನಿಂತಿರುವ ಶತ್ರು ಸೈನ್ಯದ ಮುಂದೆ ತಾವಿದ್ದುದೆಂಬ ಭಾವನೆ ಅವರಿಗೆ ಹೊಳೆಯಲಿಲ್ಲ. ರಾಜಕುಮಾರ ಆಂಡ್ರೂ ದಳಪತಿಯ ಶಿಬಿರದ ಮುಂದೆ ಸದ್ದುಗದ್ದಲಗಳಿಲ್ಲದೆ ಪಾನಾಸಕ್ತರಾಗಿದ್ದ ಪದಾತಿ ದಳವನ್ನು ದಾಟಿ, ಬಿಡಿಮದ್ದು ಗುಂಡಿನ ಪಡೆಯನ್ನು ಸಮೀಪಿಸಿದನು. ಇಬ್ಬರು ಯೋಧರು ನಗ್ನ ವ್ಯಕ್ತಿ

ಯೊಬ್ಬನನ್ನು ಹಿಡಿದುಕೊಂಡಿದ್ದರು. ಮತ್ತಿಬ್ಬರು ಚಡಿಗಳನ್ನು ಝಳಪಿಸುತ್ತ, ಒಬ್ಬರಾದ ಮೇಲೊಬ್ಬರು ಕ್ರಮವಾಗಿ ಅವನ ಬೆನ್ನಿನ ಮೇಲೆ ಹೊಡೆಯುತ್ತಿದ್ದರು. ನಗ್ನವ್ಯಕ್ತಿ ವಿಚಿತ್ರವಾಗಿ ಚೀರುತ್ತಿದ್ದನು. ಟೋಣೆಯ ಮೇಜರ್ ಒಬ್ಬ ಸೈನಿಕರ ಸಾಲಿನಲ್ಲಿ ಹಿಂದೆ ಮುಂದೆ ಹೆಜ್ಜೆ ಹಾಕುತ್ತ, ಅವನ ಚೀರಾಟವನ್ನು ಲೆಕ್ಕಿಸದೆ, ಕೆಲವು ಮಾತುಗಳನ್ನು ಮೇಲಿಂದ ಮೇಲೆ ಉಚ್ಚರಿಸುತ್ತಿದ್ದನು.

'ಸೈನಿಕ ಕದಿಯುವುದೆಂದರೆ ಲಜ್ಜೆಗೇಡಿತನ. ಅವನು ಪ್ರಾಮಾಣಿಕನಾಗಿರಬೇಕು, ಗೌರವಾನ್ವಿತನಾಗಿರಬೇಕು, ಧೈರ್ಯಶಾಲಿಯಾಗಿರಬೇಕು. ಅವನು ನೆರೆಯವರ ಜೇಬಿಗೆ ಕತ್ತರಿ ಹಾಕುವುದಾದರೆ ಮಾನಮರ್ಯಾದೆ ಉಳಿಯುತ್ತದೆಯೆ? ಇವನೊಬ್ಬ ನೀಚ ಘಟಿಂಗ. ಚಡಿ ಸೇವೆ ನಡೆಯಲಿ!'

ಏಟುಗಳ ಚಟೀರ್‌ಸದ್ದೂ, ನಿರಾಶೆಯ ವಿಚಿತ್ರ ಆಕ್ರಂದನವೂ ಮುಂದುವರಿದುವು.

'ಹಾಕಿ ಹಾಕಿ; ಸೇವೆ ಸಾಗಲಿ' ಎಂದು ಮೇಜರ್ ಅಬ್ಬರಿಸುತ್ತಿದ್ದನು.

ಮುಖದ ಮೇಲೆ ದಿಗ್ಭ್ರಮೆ ದುಃಖಗಳು ಅಚ್ಚೊತ್ತಿದಂತಿದ್ದ ತರುಣ ಅಧಿಕಾರಿಯೊಬ್ಬ ಆ ವ್ಯಕ್ತಿಯಿಂದ ದೂರ ಸರಿದು, ಸಹಾಯಾಧಿಕಾರಿ ಸವಾರಿಸುತ್ತಿದ್ದಾಗ ಸುತ್ತಮುತ್ತ ಅನ್ವೇಷಕ ದೃಷ್ಟಿಯಿಂದ ಕಣ್ಣು ಹಾಯಿಸುತ್ತಿದ್ದನು.

ರಾಜಕುಮಾರ ಆಂಡ್ರೂ ಅಗ್ರಪಂಕ್ತಿಯ ಮುಂದೆ ಹಾದು ಹೋದನು. ಎಡ ಮತ್ತು ಬಲ ಪಾರ್ಶ್ವಗಳಲ್ಲಿ ರಷ್ಯನ್ ಸೈನ್ಯದ ಅಗ್ರಪಂಕ್ತಿಯ ಹಾಗೂ ಶತ್ರುಸೈನ್ಯದ ನಡುವಣ ಅಂತರ ಅಧಿಕವಾಗಿತ್ತು. ಮಧ್ಯಭಾಗದಲ್ಲಿ, ಎಂದರೆ ಬೆಳಗ್ಗೆ ತಾನೆ ಸೈನಿಕರು ಯುದ್ಧ ವಿರಾಮ ಕೇತನಗಳನ್ನು ಹೊತ್ತು ಮೆರೆದಿದ್ದ ಕಡೆ, ಆ ಈ ಸಾಲುಗಳು ಎಷ್ಟು ಹತ್ತಿರವಾಗಿದ್ದುವೆಂದರೆ, ಜನ ಪರಸ್ಪರ ಮುಖಗಳನ್ನು ನೋಡಬಹುದಿತ್ತು ಮಾತ್ರವಲ್ಲ, ಒಬ್ಬರಿಗೊಬ್ಬರು ಮಾತಾಡಿಕೊಳ್ಳಬಹುದಿತ್ತು. ಎರಡೂ ಕಡೆ ಗಡಿಸಾಲಿನಲ್ಲಿದ್ದ ಪಹರೆಯವರ ಪಕ್ಕದಲ್ಲಿ ಅನೇಕ ಪ್ರೇಕ್ಷಕರು ನೆರೆದಿದ್ದರು. ಅವರು ಹಾಸ್ಯಹಾಸಗಳಲ್ಲಿ ಆಸಕ್ತರಾಗಿರುತ್ತ, ಅಪರಿಚಯಸ್ಥರಾದ ವಿದೇಶೀಯ ಶತ್ರುಗಳಕಡೆ ದುರುಗುಟ್ಟಿಕೊಂಡು ನೋಡುತ್ತಿದ್ದರು.

ಗಡಿಸಾಲಿನ ಬಳಿ ಯಾರೂ ಬರಕೂಡದೆಂಬ ಕಟ್ಟಳೆಯಿದ್ದರೂ ಅಧಿಕಾರಿಗಳು ಬೆಳಗಿನಿಂದ ಪ್ರೇಕ್ಷಕರನ್ನು ದೂರವಿರಿಸುವ ಕಾರ್ಯದಲ್ಲಿ ಹತಾಶರಾಗಿದ್ದರು. ಕೌತುಕ ವಸ್ತುವನ್ನು ಪ್ರದರ್ಶಿಸುವಂತಿದ್ದ ಪಹರೆಯಾಳುಗಳು ಫ್ರೆಂಚರನ್ನು ಮರೆತು, ಪ್ರೇಕ್ಷಕರ ಕಡೆಗೆ ಕಣ್ಣಾಗಿದ್ದರು. ಅವರು ಬಹಳ ಹೊತ್ತು ನಿಂತು ಸುಸ್ತಾಗಿ, ಬಿಡುಗಡೆಗೋಸ್ಕರ ಹಾತೊರೆಯುತ್ತಿದ್ದರು.

'ಅಲ್ನೋಡು, ಅಲ್ನೋಡು' ಎಂದೊಬ್ಬ ಸೈನಿಕ ರಷ್ಯಾದ ಬಂದೂಕಧಾರಿ ಸಿಪಾಯಿಯ ಕಡೆಗೆ ಮತ್ತೊಬ್ಬನ ಗಮನ ಸೆಳೆದನು. ಆ ಸಿಪಾಯಿ ಅಧಿಕಾರಿಯೊಡನೆ ಗಡಿಸಾಲಿನವರೆಗೆ ಹೋಗಿ, ಅವಸರವಸರವಾಗಿ ಭಾವೋದ್ರೇಕದಿಂದ ಫ್ರೆಂಚ್‌ದಳದ ಸಿಡಿಮದ್ದುಗುಂಡಿನ ಸೈನಿಕನೊಡನೆ ಮಾತಾಡುತ್ತಿದ್ದನು. 'ಅವನೇನೋ ಲೊಚಗುಟ್ತಾ ಅವನೆ ಕೇಳು! ಭೇಷಾಗಿದೆಯಲ್ವೆ? ಫ್ರೆಂಚ್ ಭಾಷೆ ಬರೋದರಿಂದ ಅವನ ಜತೇಲಿ ಸಲೀಸಾಗಿ ಮಾತಾಡ್ತಾ ಅವ್ನೆ. ಅಗೋ, ಸಿದರೋವ್!'

'ತುಸು ತಡಿ. ಸುಮ್ಮನೆ ಕೇಳು. ಸೊಗಸಾಗಿದೆ' ಎಂದು ಸಿದರೋವ್ ಉತ್ತರಿಸಿದನು. ಅವನು ಫ್ರೆಂಚ್ ಭಾಷೆಯಲ್ಲಿ ನಿಪುಣನೆಂಬ ಸಂಗತಿ ಸರ್ವರಿಗೂ ಗೊತ್ತಿತ್ತು.

ನಗೆಗಾರರ ಗುರಿಯಲ್ಲಿದ್ದ ಯೋಧನೇ ದೋಲಖೊವ್. ಆಂಡ್ರೂ ಅವನನ್ನು ಗುರುತಿಸಿ, ಅವನ ಮಾತನ್ನಾಲಿಸುವ ಸಲುವಾಗಿ ನಿಂತನು. ಎಡಪಾರ್ಶ್ವದಲ್ಲಿದ್ದ ತನ್ನ ತುಕಡಿಯಿಂದ ದೋಲಖೊವ್ ತನ್ನ ಕಫ್ತಾನನೊಡನೆ ಬಂದಿದ್ದನು.

'ಸರಿ, ಸರಿ. ಮುಂದೆ ಸಾಗಲಿ!' ಎಂದು ಅಧಿಕಾರಿ ತನಗರ್ಥವಾಗದಿದ್ದ ಮಾತಿನ ಯಾವೊಂದು ಪದವೂ ನುಸುಳಿಹೋಗದಂತೆ ಪ್ರಯತ್ನಿಸುವ ಸಲುವಾಗಿ ಮುಂದೆ ಬಾಗಿದನು. 'ಸರಿ, ಸರಿ. ಮುಂದೆ ನಡೆಯಲಿ! ಅವನೇನು ಹೇಳ್ತಾ ಇದ್ದಾನೆ?'

ದೋಲಖೊವ್ ಉತ್ತರಿಸಲಿಲ್ಲ; ಫ್ರೆಂಚರ ಕಡೆಯ ಸಿಡಿಮದ್ದಿನ ಸಿಪಾಯಿಯೊಡನೆ ಬಿಸಿಬಿಸಿ ಚರ್ಚೆಯಲ್ಲಿ ತಲ್ಲೀನನಾಗಿದ್ದನು. ಅವರು ಸಹಜವಾಗಿಯೇ ಧಾಳಿಯ ಬಗ್ಗೆ ಮಾತುಕತೆ ನಡಸುತ್ತಿದ್ದರು. ಆಸ್ಟ್ರಿಯನ್ನರೇ ರಷ್ಯನ್ನರೆಂದು ತಿಳಿದ ಫ್ರೆಂಚ್ ಯೋಧ ರಷ್ಯನ್ನರು ಶರಣಾಗತರಾಗಿ, ಉಲ್ಮ್ ರಣಕ್ಷೇತ್ರದಿಂದ ಪಲಾಯನ ಮಾಡಿದುದಾಗಿ ಸಮರ್ಥಿಸುತ್ತಿದ್ದನು. ರಷ್ಯನರು ಶರಣಾಗತರಾಗುವ ಪ್ರಶ್ನೆಯೇ ಇಲ್ಲವೆಂದೂ, ಫ್ರೆಂಚರಿಗೆ ಹೊಡೆತ ಕೊಟ್ಟಿದ್ದರೆಂದೂ ದೋಲಖೊವ್ ವಾದಿಸುತ್ತಿದ್ದನು. 'ಇಲ್ಲಿಂದ ನಿಮ್ಮನ್ನಟ್ಟಲು ನಮಗೆ ಆಜ್ಞೆಯಾಗಿದೆ. ಓಡಿಸುವುದಂತು ಖಂಡಿತ' ಎಂದವನು ಘೋಷಿಸಿದನು.

'ನೀನು ಮತ್ತು ನಿನ್ನ ಪಡೆಯಾಳುಗಳು ಸೆರೆಯಾಗದಂತೆ ಎಚ್ಚರಿಕೆಯಿಂದಿರಿ' ಎಂದು ಫ್ರೆಂಚ್ ದಳದ ಫಿರಂಗಿ ಸಿಪಾಯಿ ನುಡಿದನು. ಫ್ರೆಂಚ್ ಪ್ರೇಕ್ಷಕರು ಮತ್ತು ಶ್ರೋತೃಗಳು ನಕ್ಕರು.

'ಸುವೊರೊವ್ ನೇತೃತ್ವದಲ್ಲಿ ನಿಮ್ಮನ್ನು ಕುಣಿಸಿದಂತೆ ಈಗಲೂ ಕುಣಿಸುತ್ತೇನೆ' ಎಂದು ದೋಲಖೊವ್ ನುಡಿದನು.

'ಅವನು ಯಾವ ವಿಷಯ ಕುರಿತು ಹಾಡ್ತಾ ಇದ್ದಾನೆ?' ಎಂದು ಫ್ರೆಂಚ್ ಯೋಧ ಪ್ರಶ್ನಿಸಿದ.

ಅದು ಪೂರ್ವಕಾಲದ ಯುದ್ಧಕ್ಕೆ ಸಂಬಂಧಿಸಿದುದೆಂದು ಊಹಿಸಿದ ಮತ್ತೊಬ್ಬ ವ್ಯಕ್ತಿ 'ಅದು ಪ್ರಾಚೀನ ಚರಿತ್ರೆಯ ವಿಷಯವಿರಬೇಕು. ಚಕ್ರವರ್ತಿ ಇತರರಿಗೆ ಕಲಿಸಿರುವಂತೆ ನಿಮ್ಮ ಸವಾರನಿಗೂ ಪಾಠ ಕಲಿಸುತ್ತಾನೆ....' ಎಂದು ಹೇಳಿದನು.

'ಬೋನಪಾರ್ಟೆ....' ಎಂದು ದೋಲಖೊವ್ ಪ್ರಾರಂಭಿಸುವಷ್ಟರಲ್ಲಿ ಫ್ರೆಂಚರವನು ನಡುವೆ ಬಾಯಿ ಹಾಕಿ ಬೋನಪಾರ್ಟೆಯಲ್ಲ. ಅವರು ಚಕ್ರವರ್ತಿ. ಅದೊಂದು ಪವಿತ್ರ ನಾಮ....' ಎಂದು ಕೆರಳಿದನು.

'ನಿಮ್ಮ ಚಕ್ರವರ್ತಿ ಹಾಳಾಗಲಿ' ಎಂದು ದೋಲಖೊವ್ ಸೈನಿಕನ ಒರಟು ರಷ್ಯನ್ ಭಾಷೆಯಲ್ಲಿ ಶಪಿಸಿ, ತನ್ನ ಬಂದೂಕವನ್ನು ಹೆಗಲಮೇಲೆ ಹೊತ್ತುಕೊಂಡು ನಡೆದನು.

'ನಾವೀಗ ಹೋಗೋಣ, ಐವಾನ್ ಲುಕೀಚರೆ' ಎಂದವನು ಕಫ್ತಾನನನ್ನು ಕರೆದನು.

'ಫ್ರೆಂಚ್ ಮಾತಾಡುವುದೇ ಹಾಗೆ. ಈಗ, ಸಿದರೋವ್, ನಿಮ್ಮ ಸರದಿ. ಮಾತಾಡಿ' ಎಂದು ಪಹರೆಯವರು ಪುಸಲಾಯಿಸಿದರು.

ಸಿದರೊವ್ ಫ್ರೆಂಚರ ಕಡೆ ತಿರುಗಿ, ಕಣ್ಣು ಮಿಟುಕಿಸಿದನು. ಅರ್ಥಹೀನ ಶಬ್ದಗಳನ್ನು ಬಿರುಬಿರನೆ ಗೊಜಗುಟ್ಟಿದನು. ಕರಿ, ತಫ, ಮಾಲಾ, ಸಫಿ, ಕಸ್ಕಾ ಇವೇ ಮೊದಲಾದ ಪದಗಳನ್ನು ವಿಚಿತ್ರ ಗತ್ತಿನಿಂದ ಉಚ್ಚರಿಸುತ್ತಿದ್ದನು.

'ಹೊ, ಹೋ ಹೋ!, ಅಹಾ ಹಾ ಹಾ!' ಎಂಬ ಕಾಕು ಕೇಕೆಗಳು ಸೈನಿಕರ ಕಡೆಯಿಂದ ಮೊಳಗಿದುವು. ಆ ಕೇಕೆ ಅನೈಚ್ಛಿಕವೆಂಬಂತೆ ಫ್ರೆಂಚ್ ಸೈನ್ಯದಲ್ಲಿಯೂ ಸಾಂಕ್ರಾಮಿಕವಾಗಿ ಪರಿಣಮಿಸಿತು. ಅದರ ಫಲವಾಗಿ ಬಂದೂಕಗಳಿಂದ ತೋಟಾಗಳನ್ನು ಹೊರತೆಗೆದು, ಮದ್ದನ್ನು ಸುಟ್ಟು, ಆದಷ್ಟು ಬೇಗ ಮನೆಗಳಿಗೆ ಹಿಂದಿರುಗಬಹುದೆಂಬ ಭಾವನೆ ಅವರ ಮನಸ್ಸಿನಲ್ಲಿ ಉದಯವಾದಂತೆ ತೋರಿತು.

ಆದರೆ ಬಂದೂಕುಗಳು ಭರ್ತಿಯಾಗಿದ್ದುವು. ತಡೆಗೋಡೆಗಳ ಮತ್ತು ಕಂದಕಗಳ ಉದ್ದಗಂಡಿಗಳು ಅಂತೆಯೇ ಫಿರಂಗಿಗಾಡಿಗಳು ಎಂದಿನಂತೆ ಭಯಂಕರವಾಗಿ ಕಾಣಿಸುತ್ತಿದ್ದುವು.

ಅಧ್ಯಾಯ ೧೬

ಬಲದಿಂದ ಎಡಕ್ಕೆ ಇಡೀ ಸಾಲಿನುದ್ದಕ್ಕೂ ಸುತ್ತಾಡಿದ ರಾಜಕುಮಾರ ಆಂಡ್ರೂ ಬತೇರಿಯ ಕಡೆಗೆ ಹೊರಟನು. ಅವನಲ್ಲಿ ಕುದುರೆಯಿಂದಿಳಿದು, ಮುಂಭಾಗ ಜೋಡಿಸಿದ ನಾಲ್ಕು ಫಿರಂಗಿ ಗಾಡಿಗಳ ಪೈಕಿ ಕೊಟ್ಟಕೊನೆಯದರ ಬಳಿ ನಿಂತನು. ಬಂದೂಕಗಳ ಬಣಬೆಯ ಮುಂದೆ ಪಹರೆಯವ ಗಸ್ತು ತಿರುಗುತ್ತಿದ್ದ. ಅಧಿಕಾರಿ ಆಗಮಿಸಿದಾಗ ಆವನು ಗೌರವ ಸೂಚಕ ಭಂಗಿಯಲ್ಲಿ ನಿಂತನು. ಸನ್ನೆಬಂದ ಕೂಡಲೇ ಲಯಬದ್ಧವಾದ ಏಕತಾನಾತ್ಮಕವಾದ ಗಸ್ತನ್ನು ಪುನರಾರಂಭಿಸಿದನು. ಬಂದೂಕಗಳ ಹಿಂಬದಿಯಲ್ಲಿ ಫಿರಂಗಿಗಾಡಿಗಳ ಮುಂಭಾಗಗಳಿದ್ದುವು ; ಅವುಗಳ ಹಿಂದೆ ದೂರದಲ್ಲಿ ಗಡಿರಜ್ಜುಗಳೂ, ಉತ್ಸವಾಗ್ನಿಗಳೂ ಇದ್ದುವು. ಎಡಪಾರ್ಶ್ವದಲ್ಲಿ ಕೊನೆಯ ಫಿರಂಗಿಗಾಡಿಯ ಹತ್ತಿರದಲ್ಲಿ ಹೊಸದಾಗಿ ಕಟ್ಟಿಗೆಯಿಂದ ನಿರ್ಮಿಸಿದ ಸಣ್ಣ ಗುಡಿಸಿಲೊಂದಿತ್ತು. ಅದರೊಳಗಿಂದ ಸೋತ್ಕಂಠ ಸಂವಾದದಲ್ಲಿ ತೊಡಗಿದ್ದ ಅಧಿಕಾರಿಗಳ ಧ್ವನಿಗಳು ಕೇಳಿಸುತ್ತಿದ್ದುವು.

ಆ ಬತೇರಿಯಿಂದ ಎರಡು ಕಡೆಯ ಸೈನ್ಯಗಳ ದೃಶ್ಯ ಹೆಚ್ಚುಕಡಮೆ ಪೂರ್ಣವಾಗಿ ಕಾಣಿಸುತ್ತಿದ್ದುದು ನಿಜ. ಅದಕ್ಕಭಿಮುಖವಾಗಿ ಎದುರುಗಿರಿಯ ಶಿಖರದಲ್ಲಿ ಷಾನ್ ಗ್ರಾಬರ್ನ್ ಹಳ್ಳಿ ದೃಷ್ಟಿಗೋಚರವಾಗಿತ್ತು. ಅದೇ ಎಡೆ, ಎಡಬಲ ಬದಿಯ ಮೂರು ಜಾಗಗಳಲ್ಲಿ ಶಿಬಿರಾಗ್ನಿಯ ಹೊಗೆಯ ನಡುವೆ ಫ್ರೆಂಚ್ ಸೈನ್ಯಗಳನ್ನು ಕಾಣಬಹುದಿತ್ತು. ಆ ಸೈನ್ಯದ ಬಹುಭಾಗ ಆ ಹಳ್ಳಿಯಲ್ಲಿ, ಅಂತೆಯೇ ಬೆಟ್ಟದ ಬೆನ್ನಿನಲ್ಲಿ ಠಾಣೆ ಹೂಡಿತ್ತು. ಆ ಹಳ್ಳಿಯಿಂದ ಎಡಗಡೆಗೆ, ಧೂಮಲೀಲೆಯ ನಡುವೆ ಬತೇರಿಯನ್ನು ಹೋಲುವಂತಿದ್ದ ವಸ್ತುವೊಂದು ಮಸಕು ಮಸಕಾಗಿ ಕಾಣುತ್ತಿತ್ತು. ಅದು ಬರುಗಣ್ಣಿಗೆ ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ. ರಷ್ಯನ್ ಸೈನ್ಯದ ದಕ್ಷಿಣ ಪಾರ್ಶ್ವ ಕಡಿದಾದ ಇಳುಕಲಿನಲ್ಲಿದ್ದು, ಫ್ರೆಂಚ್ ಸೈನ್ಯದ ಪಾಳೆಯಕ್ಕಿಂತ ಉನ್ನತಸ್ಥಾನದಲ್ಲಿತ್ತು. ಪದಾತಿ ದಳ ಅದೇ ಜಾಗ

ದಲ್ಲಿದ್ದರೆ, ಅಶ್ವದಳ ದೂರದ ನೆಲೆಯಲ್ಲಿತ್ತು. ತೂಷಿನ್ನನ ಬತೇರಿ ಮಧ್ಯ ಬಿಂದುವಿನಲ್ಲಿ ಸಂಸ್ಥಾಪನೆಗೊಂಡಿತ್ತು. ರಾಜಕುಮಾರ ನಿಂತು ಸಮೀಕ್ಷೆ ನಡಸುತ್ತಿದ್ದುದು ಆ ಜಾಗ ದಿಂದಲೇ. ಅದು ಆ ಹಳ್ಳಿಗೂ ರಷ್ಯನ್ ಸೈನ್ಯಕ್ಕೂ ಮಧ್ಯದಲ್ಲಿದ್ದ ಹೊಳೆಯ ಕಡೆ ಯಿಂದ ಆರೋಹಣ ಅವರೋಹಣಗಳಿಗೆ ಅತ್ಯಂತ ಸರಾಗವಾಗಿತ್ತು. ಎಡಪಾರ್ಶ್ವದಲ್ಲಿದ್ದ ದಳಗಳು ಕುರುಚಲು ಕಾಡಿಗೆ ಸನಿಹದಲ್ಲಿದ್ದುವು. ಮರಗಳನ್ನು ಕೆಡವುತ್ತಿದ್ದ ಕಾಲಾಳು ಗಳು ಹಚ್ಚಿದ್ದ ಉತ್ಸವಾಗ್ನಿ ಆ ಕಾಡನ್ನು ಧೂಮಮಯವಾಗಿಸಿತ್ತು. ರಷ್ಯನ್ ಸೈನ್ಯಕ್ಕಿಂತ ಫ್ರೆಂಚ್ ಸೈನ್ಯದ ವ್ಯಾಪ್ತಿ ವಿಶಾಲವಾಗಿದ್ದುದರಿಂದ ಎರಡು ಕಡೆಗಳಿಂದಲೂ ಅದು ನಮ್ಮನ್ನು ಸುಲಭವಾಗಿ ಸೋಲಿಸಬಹುದಿತ್ತು. ನಮ್ಮ ಸೈನ್ಯದ ಹಿಂದುಗಡೆ ಕಡಿದಾದ ಪ್ರಪಾತವಿತ್ತು. ಫಿರಂಗಿ ಸೈನ್ಯವಾಗಲೀ ಅಶ್ವದಳವಾಗಲಿ ಹಿಂದು ಹಿಂದಕ್ಕೆ ಸರಿಯು ವಂತಿರಲಿಲ್ಲ. ರಾಜಕುಮಾರ ಟಿಪ್ಪಣಿ ಪುಸ್ತಕವನ್ನು ತೆಗೆದುಕೊಂಡು, ಫಿರಂಗಿಯ ಮೇಲೆ ವಾಲಿ, ನೆಲೆಯ ರಚನೆಯನ್ನು ರೇಖಿಸಿಕೊಂಡನು. ಬಗ್ರೇಷನ್‌ಗೆ ತಿಳಿಸುವ ಉದ್ದೇಶದಿಂದ ಅವನು ಎರಡು ವಿಷಯಗಳ ಬಗ್ಗೆ ಟಿಪ್ಪಣಿ ಮಾಡಿಕೊಂಡನು. ಗೋಲಂದಾಜ ದಳವನ್ನು ಮಧ್ಯ ಬಿಂದುವಿನಲ್ಲಿ ಕೇಂದ್ರೀಕರಿಸಿ, ಅಶ್ವದಳವನ್ನು ಪ್ರಪಾತದ ಮತ್ತೊಂದು ಪಕ್ಕದಲ್ಲಿ ನಿಲ್ಲಿಸಬೇಕೆಂಬುದೇ ಅವನ ಉದ್ದೇಶವಾಗಿತ್ತು. ಆಂಡ್ರೂ ಯಾವಾಗಲೂ ಮಹಾಸೇನಾನಿಯ ಬಳಿಯಿದ್ದುದರಿಂದ ಸೈನ್ಯದ ಚಲನವಲನ ಗಳನ್ನೂ ಸಾಧಾರಣ ನಿರೂಪಗಳನ್ನೂ ಅರಿತುಕೊಂಡಿದ್ದನು ; ಸಂಗ್ರಾಮಗಳ ಚಾರಿತ್ರಿಕ ವಿವರಗಳನ್ನು ಮನಸದಟ್ಟುಮಾಡಿಕೊಂಡಿದ್ದನು. ಈ ಅನುಭವದ ಫಲವಾಗಿ ಅವನು ಮುಂಬರುವ ಕಾರ್ಯಾಚರಣೆಯ ಘಟನಾವಳಿಗಳನ್ನು ಸ್ಥೂಲವಾಗಿ ಮನಸ್ಸಿನಲ್ಲಿ ಚಿತ್ರಿಸಿ ಕೊಂಡಿದ್ದನು. ಅವನು ಕಲ್ಪಿಸಿಕೊಂಡ ಪ್ರಮುಖವಾದ ಸಾಧ್ಯತೆಗಳಿವು : ಆರಾತಿಸೈನ್ಯ ದಕ್ಷಿಣ ಪಾರ್ಶ್ವದಿಂದ ಧಾಳಿಮಾಡಿದ್ದಾದರೆ, ಕೇಂದ್ರದಿಂದ ಮೀಸಲುಪಡೆಗಳು ಬರುವ ತನಕ ಕೀವ್ ಸಿಡಿಮದ್ದಿನ ದಳ ಮತ್ತು ಪದೋಲ್‌ಸ್ಕ್ ಪದಾತಿ ದಳಗಳು ಅದನ್ನೆದುರಿಸಿ ತಡೆಹಿಡಿಯತಕ್ಕದ್ದು. ಅಂಥ ಸಂದರ್ಭದಲ್ಲಿ ಅಶ್ವದಳ ಯಶಸ್ವಿಯಾಗಿ ಪಾರ್ಶ್ವಾಕ್ರಮಣ ನಡಸಬಹುದು. ಅವರು ಮಧ್ಯಭಾಗವನ್ನು ಮುತ್ತಿದ್ದಾದರೆ, ಉನ್ನತ ಸ್ಥಾನದಲ್ಲಿರುವ ನಮ್ಮ ಕೇಂದ್ರ ಬತೇರಿಯ ಮರೆಯಲ್ಲಿ ವಾಮ ಪಾರ್ಶ್ವದ ಸೈನ್ಯವನ್ನು ವಾಪಸು ಕರೆದುಕೊಂಡು, ಹಂತಹಂತವಾಗಿ ಕಂದಕದ ಕಡೆಗೆ ರವಾನಿಸಬಹುದು. ಇದು ಅವನ ವಿಚಾರಸರಣಿ....ಹೀಗೆ ವಿಚಾರದ ಗುಂಗಿನಲ್ಲಿರುವಾಗ ಅಧಿಕಾರಿಗಳ ಮಾತುಕತೆ ಗಳ ಸದ್ದು ಅವನ ಕಿವಿಯ ಮೇಲೆ ಬೀಳುತ್ತಿತ್ತು. ಆದರೆ ಅವನಿಗೊಂದು ಪದವೂ ಅರ್ಥವಾಗಿರಲಿಲ್ಲ. ಇದ್ದಕ್ಕಿದ್ದಂತೆ ಕುಟೆಯಿಂದ ಬಂದ ಧ್ವನಿಯೊಂದು ಅವನ ಗಮನ ಸೆಳೆಯಿತು. ಅದರಲ್ಲಿ ಪ್ರಾಮಾಣಿಕತೆಯ ನಾದ ಕಂಡುಬಂದದ್ದರಿಂದ ಆ ಕಡೆಗೆ ಕಿವಿಯಾದನು.

'ಹಾಗಲ್ಲ ಗೆಳೆಯ. ನನ್ನ ಇರಾದೆಯಿದು. ಮರಣದ ನಂತರ ಏನಾಗುತ್ತದೆಂಬು ದನ್ನು ತಿಳಿಯಲು ಸಾಧ್ಯವಾಗುವುದಾದರೆ, ಅದರ ಬಗ್ಗೆ ಯಾರೂ ಹೆದರುತ್ತಿರಲಿಲ್ಲ' ಎಂಬಂತೆ ರಾಜಕುಮಾರ ಕೇಳಿಸಿಕೊಂಡ ಮಾತುಗಳಲ್ಲಿ ಮನೋಹರವೂ ಸುಪರಿಚಯವೂ ಆದ ಧ್ವನಿ ಕಂಡುಬಂತು.

'ಹೆದರಿಕೆ ಉಂಟೋ ಇಲ್ಲವೋ, ನೀನದರಿಂದ ಹೇಗೂ ತಪ್ಪಿಸಿಕೊಳ್ಳುವಂತಿಲ್ಲ' ಎಂದು ಮತ್ತೊಂದು ತರುಣಧ್ವನಿ ಅವನ ಮಾತನ್ನು ತಡೆಗಡಿಯಿತು.

'ಒಟ್ಟಿನಲ್ಲಿ ಹೆದರಿಕೆ ಸಹಜ! ನೀವೆಲ್ಲ ಬುದ್ಧಿವಂತರು' ಎಂಬುದಾಗಿ ಮೂರನೆಯ ಪೌರುಷಧ್ವನಿ ಆ ಇಬ್ಬರ ನಡುವೆ ನುಸುಳಿತು. 'ನೀವಿದ್ದೀರಲ್ಲ, ಫಿರಂಗಿದಳದ ಜನ ತುಂಬ ಜಾಣರು. ನೀವು ಜತೇಲಿ ವೋದ್ಕ ಉಪಾಹಾರ ಮಾತ್ರವಲ್ಲ, ಏನು ಬೇಕಾದರೂ ಒಯ್ಯುಬಹುದು.'

ಪೌರುಷಧ್ವನಿಯ ವ್ಯಕ್ತಿ ಕಾವಲುಪಡೆಯ ಅಧಿಕಾರಿ. ಅವನು ಒಡನೆಯೇ ಗಹಗಹಿಸಿದನು.

'ಅಹುದು, ಅಂಜಲೇಬೇಕು. ಅಜ್ಞಾತ ವಸ್ತುವಿನ ಬಗ್ಗೆ ಅಂಜಿಕೆ ಸಹಜ. ಆಕಾಶಾಭಿಮುಖವಾಗಿ ಯಾತ್ರೆ ಕೈಗೊಳ್ಳುವ ಆತ್ಮದ ವಿಷಯ ನಾವೇನೇ ಹೇಳಲಿ ... ಆಕಾಶವಿಲ್ಲ, ವಾತಾವರಣ ಮಾತ್ರ ಉಂಟೆಂಬುದು ನಮಗೆ ತಿಳಿದಿದೆ' ಎಂದು ಮೊದಲು ಮಾತಾಡಿದವನ ಸುಪರಿಚಿತ ಧ್ವನಿ ಮರುಕಳಿಸಿತು.

ಪೌರುಷಧ್ವನಿ ಮತ್ತೆ ಗೋಲಂದಾಜದಳದ ಅಧಿಕಾರಿಯ ಮಾತಿನ ನಡುವೆ ತಲೆ ಹಾಕಿ 'ತೂಷಿನ್, ಒಂದಿಷ್ಟು ಮೂಲಿಕೆಯ ವೋದ್ಕ ಒದಗಿಸಪ್ಪ' ಎಂದಿತು.

'ಓಹೋ, ಬೂಟುಗಳಿಲ್ಲದೆ ಆ ಕೊಳಕಿಯ ಗುಡಿಸಲಲ್ಲಿ ನಿಂತಿದ್ದ ಕಫ್ತಾನ್ ಇವನೇ' ಎಂದು ರಾಜಕುಮಾರ ಆಂಡ್ರೂ ಅವನ ಗುರುತು ಹಿಡಿದನು. ಕಫ್ತಾನನ ತತ್ತ್ವೀಕರಣ ಧ್ವನಿ ಹಿತವಾಗಿ ಕಂಡಿತು.

'ಮೂಲಿಕೆಯ ವೋದ್ಕತಾನೆ? ಅದಕ್ಕೇನಂತೆ? ಆಗಲಿ! ಆದರೆ ಭವಿಷ್ಯ ಜನ್ಮದ ಬಗ್ಗೆ ಕಲ್ಪಿಸಿಕೊಳ್ಳುವುದೆಂದರೆ....' ಎಂದು ತೂಷಿನ್ ಮಾತು ತೆಗೆದನು.

ಅವನಿನ್ನೂ ಮಾತು ಮುಗಿಸಿರಲಿಲ್ಲ. ಅಷ್ಟರಲ್ಲಿ ಸಿಳ್ಳಿಯ ಸದ್ದು ವಾತಾವರಣವನ್ನು ಭೇದಿಸಿತು. ಫಿರಂಗಿ ಗುಂಡು ಕ್ರಮಕ್ರಮೇಣ ನಿಕಟಸ್ಥವಾಗಿ, ವೇಗವಾಗಿ, ಸಘೋಷವಾಗಿ, ಮಣ್ಣಿನ ಮುದ್ದೆಯನ್ನು ಬಗಿದೆಸೆಯುತ್ತ, ಅಮಾನುಷ ರಭಸದಿಂದ ಗುಡಿಸಲ ಬಳಿ ನೆಲಕ್ಕೆ ಅಪ್ಪಳಿಸಿತು. ಆ ಘೋರ ಕ್ರಿಯೆಯ ಪರಿಣಾಮವಾಗಿ ನೆಲ ನರಳುತ್ತಿದ್ದಂತೆ ಕಂಡಿತು.

ಬೌದ್ಧಿಕ ಕಾಂತಿಯಿಂದ ಮಿರುಗುತ್ತಿದ್ದ ತೂಷಿನ್ನನ ಮುಖ ಹಠಾತ್ತನೆ ಬಿಳಿಚಿಕೊಂಡಿತು. ಬಾಯಿಯ ಮೂಲೆಯಲ್ಲಿ ತುಂಡು ನಳಿಕೆಯಿದ್ದ ಅವನು ಗುಡಿಸಿಲಿನಿಂದ ಹೊರಗೆ ಧಾವಿಸಿದನು. ಅವನ ಹಿಂದೆಯೇ ರಭಸಸ್ವಭಾವದ, ಪೌರುಷಧ್ವನಿಯ ಪದಾತಿ ದಳದ ಅಧಿಕಾರಿ ಅಂಗಿಯ ಗುಂಡಿಗಳನ್ನು ಹಾಕಿಕೊಳ್ಳುತ್ತ ತನ್ನ ತಂಡದ ಕಡೆಗೆ ಓಡಿದನು.

ಅಧ್ಯಾಯ ೧೭

ರಾಜಕುಮಾರ ಆಂಡ್ರೂ ಮತ್ತೆ ಕುದುರೆಯನ್ನೇರಿ, ಬಂದೂಕದಿಂದ ಉಗಿಯುತ್ತಿದ್ದ ಹೊಗೆಯನ್ನೆ ನೋಡುತ್ತ, ಬತೇರಿಯ ಸುತ್ತಮುತ್ತ ಬಳಸಾಡುತ್ತಿದ್ದನು. ಇಡೀ ಪ್ರದೇಶವನ್ನೆಲ್ಲ ಅವನ ಕಣ್ಣುಗಳು ಜೀಗಜೀಗನೆ ಸಮಾಕ್ಷಿಸಿದುವು. ಆ ತನಕ ಚಲನ

ರಹಿತವಾಗಿದ್ದ ಫ್ರೆಂಚ್ ಸೈನ್ಯ ಸಚೇತನವಾದದ್ದನ್ನೂ, ಆದರ ಬಲಭಾಗದಲ್ಲಿ ಬತೇರಿಯಿದ್ದದ್ದನ್ನೂ ಅವನು ಗಮನಿಸಿದನು. ಅದರ ಮೇಲೆ ಸುತ್ತಿಕೊಂಡಿದ್ದ ಹೊಗೆ ಮಾಯವಾಗಿರಲಿಲ್ಲ. ಪ್ರಾಯಶಃ ಸಹಾಯಾಧಿಕಾರಿಗಳೆನ್ನಬಹುದಾಗಿದ್ದ ಇಬ್ಬರು ಫ್ರೆಂಚ್ ಅಶ್ವಾರೋಹಿಗಳು ಬೆಟ್ಟದ ಮೇಲೆ ದೌಡೋಡುತ್ತಿದ್ದರು. ಬಹುಶಃ ಮುಂಚೂಣಿಗೆ ಬೆಂಬಲವಾಗಿ ಸಣ್ಣ ಶತ್ರುವ್ಯೂಹವೊಂದು ಬೆಟ್ಟದ ಕೆಳಗಡೆಗೆ ಚಲಿಸುತ್ತಿತ್ತು. ಮೊದಲನೆಯ ಹೊಡೆತದ ಹೊಗೆ ಆರುವ ಮುನ್ನವೆ, ಮತ್ತೊಂದು ಹೊಗೆಯ ಸುರುಳಿ ಗೋಚರಿಸಿತು. ಅದರ ಹಿಂದೆಯೇ ಸಿಡಿತದ ಸದ್ದು ಕೇಳಿಸಿತು. ಕದನ ಪ್ರಾರಂಭವಾಗಿತ್ತು! ಬಗ್ರೇಷನ್‌ನನ್ನು ನೋಡುವ ಸಲುವಾಗಿ ಆಂಡ್ರೂ ಕುದುರೆಯನ್ನು ತಿರುಗಿಸಿ ಗ್ರಂಥ್ ಕಡೆಗೆ ದೌಡಾಯಿಸಿದನು. ತನ್ನ ಬೆನ್ನ ಹಿಂದೆ ಮೇಲಿಂದ ಮೇಲೆ ಮೊಳಗುತ್ತಿದ್ದ ಫಿರಂಗಿ ಶಬ್ದ ಅವನ ಕಿವಿದೆರೆಯನ್ನು ಅಪ್ಪಳಿಸುತ್ತಿತ್ತು. ವಾಸ್ತವವಾಗಿ ನಮ್ಮ ಬಂದೂಕಗಳು ಪ್ರತ್ಯುತ್ತರ ನೀಡುತ್ತಿದ್ದುವು. ಸಂಧಾನ ಸಭೆ ಜರುಗಿದ್ದ ಇಳುಕಲಿನ ತಳದಿಂದ ಬಂದೂಕಗಳ ಮೊಳಗು ತೂರಿಬರುತ್ತಿತ್ತು.

ಬೋನಪಾರ್ಟೆಯ ನಿಷ್ಠುರ ಪತ್ರದೊಂದಿಗೆ ಲೆಮರಾಯಿಸ್ ಅದೆ ತಾನೆ ಒಂದೆ ನಾಗಾಲೋಟದಲ್ಲಿ ಬಂದಿದ್ದನು. ಮುರತ್ ಅವಮಾನದ ಭಾರದಿಂದ ಕುಗ್ಗಿಹೋದನು. ತನ್ನ ತಪ್ಪಿಗೆ ತಕ್ಕ ಪ್ರಾಯಶ್ಚಿತ್ತ ಮಾಡಿಕೊಳ್ಳುವ ಕಾತರತೆಯಿಂದ ಅವನು ಕೂಡಲೇ ತನ್ನ ಸೈನ್ಯವನ್ನು ಮಧ್ಯಭಾಗದ ಮೇಲೆ ನುಗ್ಗಿಸಿದನು. ಸಂಜೆಯ ವೇಳೆಗೆ, ಚಕ್ರವರ್ತಿಯ ಆಗಮನಕ್ಕೆ ಮುಂಚೆಯೇ ಕ್ಷುದ್ರ ರಷ್ಯನ್ ಸೈನ್ಯದ ಎರಡು ಪಕ್ಷಗಳನ್ನು ಮುತ್ತಿ, ನುಗ್ಗುನುರಿ ಮಾಡಬೇಕೆಂಬುದೇ ಅವನ ಆಶಯವಾಗಿತ್ತು.

'ಇದಂತು ಈಗ ಶುರುವಾಗಿದೆ. ಆದರೆ ಎಲ್ಲಿ ಹೇಗೆ ನನ್ನ ಟೂಲನ್ ಬಂದು ಕಾಣಿಸಿಕೊಳ್ಳುತ್ತದೆಯೊ ತಿಳಿಯದು' ಎಂದು ರಾಜಕುಮಾರ ಆಂಡ್ರೂ ಆಲೋಚಿಸಿದಾಗ, ತನ್ನ ಹೃದಯಕ್ಕೆ ರಕ್ತ ನುಗ್ಗುತ್ತಿದ್ದಂತೆ ಭಾಸವಾಗುತ್ತಿತ್ತು.

ಕಾಲುಗಂಟೆಯ ಹಿಂದೆ ಸಂದರ್ಶಿಸಿದ್ದ ತುಕಡಿಗಳ ನಡುವೆ ಹಾದುಹೋಗುತ್ತಿದ್ದಾಗ, ಅವನು ಎಲ್ಲೆಲ್ಲಿಯೂ ಬಂದೂಕಗಳನ್ನಣಿಮಾಡಿಕೊಳ್ಳುತ್ತಿದ್ದ ಸೈನಿಕರ ಚಲನವಲನಗಳನ್ನು ದರ್ಶಿಸಿದನು; ತನ್ನ ಹೃದಯದಲ್ಲಿ ತುಂಬಿಕೊಂಡಿದ್ದ ಕಾತರತೆಯನ್ನೇ ಅವರ ಮುಖಗಳಲ್ಲಿ ಗುರುತಿಸಿದನು. 'ಇದಂತು ಶುರುವಾಗಿದೆ. ಈ ಘೋರನಾಟಕ ಭೀಕರವಾದುದಾದರೂ, ಆನಂದದಾಯಿಯಾಗಿದೆ' ಎಂಬ ವಾಕ್ಯ ಪ್ರತಿಯೊಬ್ಬ ಸೈನಿಕನ ಮತ್ತು ಅಧಿಕಾರಿಯ ಹಣೆಯಮೇಲೆ ಅಚ್ಚೊತ್ತಿದಂತಿತ್ತು.

ಅವನು ಒಡ್ಡುಗಳನ್ನು ಮುಟ್ಟುವುದಕ್ಕೆ ಮುಂಚೆಯೇ ಶರತ್ಕಾಲದ ಸಂಜೆಯ ನಸುಕಿನಲ್ಲಿ ಅಶ್ವಾರೋಹಿಗಳು ತನ್ನ ಕಡೆಗೆ ಬರುತ್ತಿದ್ದುದನ್ನು ಕಂಡನು. ತುರ್ಕಿಯೋಧನ ಸಮವಸ್ತ್ರವನ್ನೂ ಕುರಿಚರ್ಮದ ಟೋಪಿಯನ್ನೂ ಧರಿಸಿ, ಶ್ವೇತವಾಜಿಯನ್ನೇರಿ, ಸೈನ್ಯದ ಅಗ್ರಭಾಗದಲ್ಲಿ ಬರುತ್ತಿದ್ದವನೇ ರಾಜಕುಮಾರ ಬಗ್ರೇಷನ್. ಅವನು ತನ್ನ ಕುದುರೆಯ ಲಗಾಮನ್ನೆಳೆದು ನಿಲ್ಲಿಸಿ, ಆಂಡ್ರೂವಿಗೆ ತಲೆಯಲ್ಲಾಡಿಸಿದನು. ಅವನ ದೃಷ್ಟಿ ದೂರಗತವಾಗಿದ್ದಾಗ ಆಂಡ್ರೂ ತಾನು ನೋಡಿದ್ದನ್ನೆಲ್ಲ ಚಿತ್ರಿಸಿದನು.

'ಇಗೋ ಇಲ್ಲಿ, ಅದು ಶುರುವಾಗಿದೆ' ಎಂಬ ಭಾವನೆ ಬಗ್ರೇಷನ್ನನ ಅರೆಮುಚ್ಚಿದ

ಮಂಕು ಮಂಕಾದ ನಿದ್ದೆಗಣ್ಣುಗಳುಳ್ಳ ಕಂದು ಬಣ್ಣದ ಮುಖದ ಮೇಲೆ ಅಚ್ಚೊತ್ತಿ ದಂತಿತ್ತು. ರಾಜಕುಮಾರ ಆಂಡ್ರೂ ಆ ನೀರಸವಾದ ಮುಖವನ್ನು ಆತಂಕಯುಕ್ತವಾದ ಕೌತುಕದಿಂದ ದಿಟ್ಟಿಸಿದನು. ಆಕ್ಷಣ ಬಗ್ರೇಷನ್ನನ ಮನಸ್ಸಿನಲ್ಲಿ ಮುತ್ತಿಕೊಂಡಿದ್ದ ಭಾವಾಲೋಚನೆಗಳನ್ನು ಪ್ರತಪಡಿಸಬೇಕೆಂದು ಆಂಡ್ರೂ ಆಶಿಸಿದನು. 'ಆ ಭಾವವಿಹೀನ ವಾದ ಮುಖದ ಹಿಂದುಗಡೆ ಬೇರೇನಾದರೂ ಇರಬಹುದೆ?' ಎಂದು ಆಂಡ್ರೂ ಒಳಗೊಳಗೆ ಎಣಿಸಿಕೊಳ್ಳುತ್ತ, ಅವನ ಮುಖವನ್ನೆ ನೋಡುತ್ತಿದ್ದನು. ಆಂಡ್ರೂವಿನ ಕಥನ ಸರಿಯಾಗಿದೆ ಯೆಂದು ಸೂಚಿಸುವ ಸಲುವಾಗಿ ಬಗ್ರೇಷನ್ ತನ್ನ ತಲೆಯನ್ನು ಬಗ್ಗಿಸಿದನು. ಆಗ ನಡೆದದ್ದೆಲ್ಲ, ತನಗೆ ವರದಿಯಾದದ್ದೆಲ್ಲ ತನ್ನ ಭವಿಷ್ಯ ವಾಣಿಗನುಸಾರವಾಗಿದೆಯೆಂಬ ತನ್ನ ಇಂಗಿತವನ್ನು ಧ್ವನಿಯ ಮೂಲಕ ಸೂಚಿಸಲೆಂಬಂತೆ ಅವನು 'ಬಹಳ ಒಳ್ಳೇದು' ಎಂದು ನುಡಿದನು. ಕ್ಷಿಪ್ರಸವಾರಿಯ ಉಸಿರಾಟದಿಂದಾಗಿ ಆಂಡ್ರೂ ಅವಸರವಸರವಾಗಿ ಮಾತಾಡುತ್ತಿದ್ದನು. ಪೌರ್ವಾತ್ಯ ಸ್ವರಾಘಾತದ ರೀತಿಯಲ್ಲಿ ಪದಗಳನ್ನುಚ್ಚರಿಸುತ್ತಿದ್ದ ಬಗ್ರೇಷನ್ ಕಳವಳಕ್ಕೆ ಕಾರಣವಿಲ್ಲವೆಂಬ ಸಂಗತಿಯನ್ನು ಮನಗೊಳಿಸಲೆನ್ನುವಂತೆ ನಿಧಾನ ವಾಗಿ ಮಾತಾಡುತ್ತಿದ್ದನು. ತೂಷಿನ್ನನ ಫಿರಂಗಿದಿಣ್ಣೆಯ ದಿಕ್ಕಿನಲ್ಲಿ ಅವನು ತನ್ನ ಕುದುರೆಯನ್ನು ಕುಲುಕೋಟದಿಂದ ಓಡಿಸಿದನು. ಆಂಡ್ರೂ ಪರಿವಾರದೊಡನೆ ಅವನನ್ನು ಹಿಂಬಾಲಿಸಿದನು. ಬಗ್ರೇಷನ್ನನ ಬೆಂಗಡೆಯಲ್ಲಿ ಅವನ ಆಪ್ತಸಹಾಯಾಧಿಕಾರಿ ಝುಕೋರ್ವ್, ಪರಿವಾರದ ಅಧಿಕಾರಿ, ಮೊಂಡುಬಾಲದ ಕುದುರೆಯನ್ನೇರಿದ್ದ ಸಿಬ್ಬಂದಿಯ ಮೇಲ್ವಿಚಾರಕ ಮತ್ತು ಅಯೋಧನರ್ಗದ ಅಧಿಕಾರಿಯೊಬ್ಬ ಹೊರಟಿದ್ದರು. ಕೊನೆ ಯವನು ಲೆಕ್ಕಪತ್ರ ಇಲಾಖೆಗೆ ಸೇರಿದವನು. ರಣರಂಗವನ್ನು ನೋಡುವ ಕುತೂಹಲ ದಿಂದ ವಿಶೇಷಾನುಮತಿ ಪಡೆದುಬಂದಿದ್ದನು. ಸ್ಥೂಲಕಾಯದ, ದುಂಡುಮೊಗದ ಲೆಕ್ಕಿಗ ಸಂತೃಪ್ತಿಯ ನಿಷ್ಕಪಟಹಾಸದಿಂದ ಸುತ್ತಲೂ ಕಣ್ಣು ಹೊರಳಿಸಿದನು. ಅಶ್ವಾರೋಹಿಗಳ, ಕೊಸಾಕರ ಹಾಗೂ ಸಹಾಯಾಧಿಕಾರಿಗಳ ಗುಂಪಿನಲ್ಲಿ ಅವನು ವಿಚಿತ್ರವಾಗಿ ಕಾಣು ತ್ತಿದ್ದನು.

'ಅವರು ಯುದ್ಧ ನೋಡಬೇಕಂತೆ. ಆದರೆ ಅವರ ಹೊಟ್ಟೆಯ ಕುಳಿಯಲ್ಲಿ ಈಗಾಗಲೇ ನೋವು ಶುರುವಾಗಿದೆ' ಎಂದು ಝುಕೋರ್ವ್ ಅವನನ್ನು ಬಲ್ಕೋನ್ಸ್ಕಿಗೆ ಪರಿಚಯಿಸಿಕೊಟ್ಟನು.

'ಓ, ಸಾಕು, ಸಾಕು' ಎಂದು ಲೆಕ್ಕಿಗ ಪ್ರಕಾಶಮಾನವಾದ, ಆದರೆ ಕುಯುಕ್ತಿಯ ಮಂದಹಾಸವನ್ನು ಸೂಸಿದನು. ಝುಕೋರ್ವನ ವಿನೋದದ ವಸ್ತುವಾದದ್ದೇ ತನಗೆ ಸಂದ ಗೌರವವೆಂದವನು ಭಾವಿಸಿಕೊಂಡನು. ಉದ್ದೇಶಪೂರ್ವಕವಾಗಿಯೇ ಮಂಕನಂತೆ ತೋರಿಸಿ ಕೊಳ್ಳಲು ಪ್ರಯತ್ನಿಸಿದನು.

'ಇದೆಲ್ಲ ಬಲು ವಿಚಿತ್ರ, ಬುದ್ಧಿಯವರೆ' ಎಂದು ಸಿಬ್ಬಂದಿಯ ಮೇಲ್ವಿಚಾರಕ ನುಡಿದನು. ರಾಜಕುಮಾರನನ್ನು ಫ್ರೆಂಚ್ ಭಾಷೆಯಲ್ಲಿ ಸಂಬೋಧಿಸಲು ಪ್ರಯತ್ನಿಸಿ, ತಡವರಿಸಿದನು.

ಅವರು ಇನ್ನೇನು ತೂಷಿನ್ನನ ಫಿರಂಗಿ ದಿನ್ನೆಯನ್ನು ಮುಟ್ಟಬೇಕು, ಅಷ್ಟರಲ್ಲಿ ಅವರ ಮುಂಗಡೆಯೇ ಗುಂಡೊಂದು ನೆಲಕ್ಕಪ್ಪಳಿಸಿತು.

'ಅಲ್ಲಿ ಬಿದ್ದದ್ದೇನು?' ಎಂದು ಲೆಕ್ಕಿಗ ಹಸುಳೆ ನಗುಸೂಸಿದನು.

'ಅದೊಂದು ತೆರನ ಫ್ರೆಂಚ್ ದೋಸೆ' ಎಂದು ಝುರ್ಕೋವ್ ಉತ್ತರಿಸಿದನು.

'ಇದೇ ಅವರು ಯುದ್ಧದಲ್ಲಿ ಬಳಸುವ ಸಾಧನವಲ್ಲವೆ? ನಿಜಕ್ಕೂ ಭಯಂಕರ ವಾಗಿದೆ' ಎಂದು ಲೆಕ್ಕಿಗ ಉದ್ಗಾರ ತೆಗೆದನು.

ಅವನು ಸಂತೃಪ್ತಿಯಿಂದ ಉಬ್ಬಿದಂತೆ ಕಂಡನು. ಅವನು ಮಾತು ಮುಗಿಸುವುದಕ್ಕೆ ಮುಂಚೆಯೇ ಭೀಕರಗರ್ಜನೆ ಅವರ ಕಿವಿಯನ್ನಪ್ಪಳಿಸಿತು. ಆ ಗರ್ಜನೆ ತಾಡನದಲ್ಲಿ ಪರ್ಯವ ಸಾನಗೊಂಡಿತು. ಅವರ ಬಲ ಪಕ್ಕದಲ್ಲಿ ಲೆಕ್ಕಿಗನ ಹಿಂಗಡೆ ಸವಾರಿಸುತ್ತಿದ್ದ ಕೊಸಾಕ್ ತನ್ನ ಕುದುರೆಯೊಡನೆ ಕೆಳಗೆ ಕುಸಿದನು. ಝುರ್ಕೋವ್ ಮತ್ತು ಸಿಬ್ಬಂದಿಯ ಮೇಲ್ವಿಚಾರಕ ತಂತಮ್ಮ ಕಾಟರಗಳ ಮೇಲೆ ಬಗ್ಗಿಕೊಂಡು, ಕುದುರೆಗಳನ್ನು ಬೇರೆಡೆಗೆ ತಿರುಗಿಸಿದರು. ಲೆಕ್ಕಿಗ ಅಭಿನಿವಿಷ್ಟಕುತೂಹಲದಿಂದ ಕೊಸಾಕನನ್ನು ಪರೀಕ್ಷಿಸಿದನು. ಕೊಸಾಕ್ ಸತ್ತು ಹೋಗಿದ್ದ. ಅವನ ಕುದುರೆ ಬಾಳು ಸಾವುಗಳ ನಡುವೆ ಹೋರಾಟ ನಡಸಿತ್ತು.

ರಾಜಕುಮಾರ ಬಗ್ರೇಷನ್ ಕಿರುಗಣ್ಣಿಂದ ಸುತ್ತಲೂ ದೃಷ್ಟಿ ಹರಿಸಿ, ಗೊಂದಲದ ಕಾರಣವನ್ನು ಗ್ರಹಿಸಿ, 'ಕ್ಷುಲ್ಲಕ ಸಂಗತಿಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದು ತರವೆ?' ಎನ್ನುವಂತೆ ಉಪೇಕ್ಷೆಯಿಂದ ಬೇರೆಕಡೆಗೆ ಮುಖವಾದನು. ಅವನು ಕುಶಲಸವಾರನಂತೆ ಸರಾಗವಾಗಿ ಲಗಾಮನ್ನು ಹಿಡಿದೆಳೆದು, ಅವನ ಬಟ್ಟೆಗೆ ಸಿಕ್ಕಿಕೊಂಡಿದ್ದ ಬಾಗುಕತ್ತಿಯನ್ನು ಬಿಡಿಸಿಕೊಳ್ಳುವಸಲುವಾಗಿ ತುಸು ಓರೆಯಾದನು. ಅದು ಆಗ ಬಳಕೆಯಲ್ಲಿಲ್ಲದ ಹಳೆಯ ಕಾಲದ ಕತ್ತಿ. ಸುವೊರೊವ್ ಇಟಲಿಯಲ್ಲಿ ತನ್ನ ಕುಡುಗತ್ತಿಯನ್ನು ಬಗ್ರೇಷನ್ನನಿಗೆ ಕೊಟ್ಟ ಕತೆಯನ್ನು ಆಂಡ್ರೂ ಸ್ಮರಿಸಿಕೊಂಡನು. ಆ ಸ್ಮೃತಿ ಆ ಸಮಯದಲ್ಲಿ ಆನಂದ ದಾಯಕವಾಗಿತ್ತು. ಆಂಡ್ರೂ ಹಿಂದೆ ಅಡ್ಡಾಡಿದ್ದ ಬತೇರಿಯನ್ನವರು ತಲುಪಿದರು.

'ಇದು ಯಾರ ತುಕಡಿ?' ಎಂದು ಫಿರಂಗಿ ಬಂಡಿಯ ಬಳಿ ನಿಂತಿದ್ದ ಸಿಡಿಮದ್ದಿನ ಸಿಪಾಯಿಯನ್ನು ಬಗ್ರೇಷನ್ ಪ್ರಶ್ನಿಸಿದನು. ಆ ಪ್ರಶ್ನೆ ಕೇಳುವಾಗ ಬಗ್ರೇಷನ್ನನ ಮನಸ್ಸಿನಲ್ಲಿದ್ದ ಮತ್ತೊಂದು ಪ್ರಶ್ನೆಯೆಂದರೆ 'ನಿನಗಿಲ್ಲಿ ಭಯವಾಗುತ್ತದೆಯೆ?' ಎಂಬುದು. ಸಿಪಾಯಿಗೆ ಆ ಅನುಕ್ತಪ್ರಶ್ನೆ ಅರ್ಥವಾಯಿತು.

ಹುಷಾರಿಯಲ್ಲಿ ನಿಂತಿದ್ದ ಕೆಂಗೂದಲಿನ ಮಚ್ಚೆಮೆಯ್ಯ ಬಂದೂಕಧಾರಿ ಹರ್ಷದ ಧ್ವನಿಯಲ್ಲಿ 'ಇದು ಕ್ಯಾಪ್ಟನ್ ತೂಷಿನ್ ಅವರ ತುಕಡಿ, ಪ್ರಭು' ಎಂದು ಗಟ್ಟಿಯಾಗಿ ಉತ್ತರವಿತ್ತನು.

ಆಲೋಚನಾಮಗ್ನನಾದವನಂತೆ ಬಗ್ರೇಷನ್ 'ಅಹುದು ಅಹುದು' ಎಂದು ಗೊಣಗುತ್ತ, ದೂರದ ಫಿರಂಗಿ ಬಂಡಿಯ ಕಡೆಗೆ ಸವಾರಿಸಿದನು. ಅವನದರ ಬಳಿ ಸಮೀಪಿಸುತ್ತಿದ್ದಂತೆ, ಅವನನ್ನು ಮತ್ತು ಅವನ ಪರಿವಾರವನ್ನು ಕಿವುಡುಗೊಳಿಸುವ ಭಯಂಕರ ಸ್ಫೋಟ ಕೇಳಿಸಿತು. ಒಡನೆಯೆ ಫಿರಂಗಿಯನ್ನು ಸುತ್ತುವರಿದ ಹೊಗೆಯಲ್ಲಿ ಅದನ್ನು ಹಿಂದಿನ ಸ್ಥಾನಕ್ಕೆ ನೂಕುವ ಸಲುವಾಗಿ ಶ್ರಮಿಸುತ್ತಿದ್ದ ಫಿರಂಗಿ ಸಿಪಾಯಿಗಳನ್ನವರು ಕಾಣಬಹುದಿತ್ತು. ದಡಿಹಿಡಿದುಕೊಂಡು, ಕಾಲಗಲಿಸಿ ನಿಂತಿದ್ದ ಒಂದನೆಯ ನಂಬರಿನ ಪೀನಭುಜಗಳ ಭೀಮಗಾತ್ರದ ಫಿರಂಗಿಯೋಧ ಚಕ್ರದ ಕಡೆಗೆ ನೆಗೆದನು. ಎರಡನೆಯವನು ನಡುಗುವ ಕೈಗಳಿಂದ ಫಿರಂಗಿಯ ಬಾಯಿಗೆ ಮದ್ದು ಅಡೆಯುತ್ತಿದ್ದನು. ವೃತ್ತ ಬಾಹುಗಳ ಗುಜ್ಜಾರಿ

ಕ್ಯಾಪ್ಟನ್ ತೂಷಿನ್ ಬಂಡಿಯ ಹಿಂಭಾಗದ ಮೇಲೆ ಮುಗ್ಗರಿಸಿ, ಮುಂದೆ ಸರಿದನು. ಅವನು ಸೇನಾನಿಯು ಬರವನ್ನು ಗಮನಿಸದೆ, ಹಣೆಗೈಯಾಗಿ ಬಂಡಿಯಕಡೆ ನೋಡುತ್ತಿದ್ದನು.

'ಎರಡು ದಾರ ಮೇಲೆತ್ತಿದರೆ ಅದು ಸರಿ ಹೋಗುತ್ತದೆ' ಎಂದವನು ದುರ್ಬಲ ಧ್ವನಿಯಲ್ಲಿ ಉಸುರಿದನು. 'ಎರಡನೆಯ ನಂಬರು' ಎಂದವನು ರಭಸದಿಂದ ಕೂಗಿಕೊಂಡರೂ, ಅದು ಅವನ ಕೃಶಗಾತ್ರಕ್ಕೆ ಸರಿಹೊಂದದೆ, ಕೀಚುದನಿಯಾಗಿ ಪರಿಣಮಿಸಿತು. 'ಮೆದ್ವೆದೇವ್‌ನ ಕಡೆಗೆ ಗುರಿಯಿಡು' ಎಂದವನು ಆಜ್ಞಾಪಿಸಿದನು.

ಬಗ್ರೇಷನ್ ಅವನನ್ನು ಕರೆದನು. ತೂಷಿನ್ ಲಜ್ಜಾಸ್ಪದವೂ ವಿಕಾರಾತ್ಮಕವೂ ಆದ ಭಂಗಿಯಲ್ಲಿ ಟೋಪಿಯ ತನಕ ಮೂರು ಬೆರಳನ್ನೆತ್ತಿ ಹಿಡಿದನು. ಯೋಧೋಚಿತವಲ್ಲದ, ಪುರೋಹಿತನ ಸ್ವಸ್ತಿ ವಾಚನದಂತಿದ್ದ ಭಂಗಿಯಲ್ಲಿಯೇ ಅವನು ಸೇನಾನಿಯ ಮುಂದೆ ನಿಂತನು. ತೂಷಿನ್ನನ ಫಿರಂಗಿಗಳ ಗುರಿ ಕಣಿವೆಯಾಗಿತ್ತು. ಆದರೂ ಅವನು ಎದುರಿಗೆ ಕಾಣಿಸುತ್ತಿದ್ದ ಷಾನ್‌ಗ್ರಾಬರ್ನ್ ಹಳ್ಳಿಯ ಕಡೆಗೆ ಬೆಂಕಿ ಗುಂಡುಗಳನ್ನು ತೂರಿಸುತ್ತಿದ್ದನು. ಆ ಹಳ್ಳಿಯ ಮುಂದುಗಡೆಯಿಂದ ಫ್ರೆಂಚ್ ಸೈನ್ಯ ತನ್ನತ್ತಲಾಗಿ ಧಾವಿಸುತ್ತಿತ್ತು.

ಎಲ್ಲಿಗೆ, ಯಾವ ಕಡೆಗೆ ಗುಂಡು ಹಾರಿಸಬೇಕೆಂದು ಯಾರೂ ತೂಷಿನ್ನನಿಗೆ ಆಜ್ಞೆ ನೀಡಿರಲಿಲ್ಲ. ಆದರೆ ತನ್ನ ಗೌರವಕ್ಕೆ ಪಾತ್ರನಾಗಿದ್ದ ಸಾರ್ಜೆಂಟ್ ಮೇಜರ್ ಜಖರ್ ಚೆಂಕೊ ಬಳಿ ಸಮಾಲೋಚನೆ ನಡೆಸಿದ ನಂತರ, ಆ ಹಳ್ಳಿಯ ಮೇಲೆ ಗುಂಡು ಹಾರಿಸುವುದೆಂದು ಅವನು ನಿರ್ಧರಿಸಿದ್ದನು. ಅಧಿಕಾರಿಯ ವರದಿಗುತ್ತರವಾಗಿ ಬಗ್ರೇಷನ್ ಒಳ್ಳೆಯದೆಂದು ನುಡಿದು, ತನ್ನ ಮುಂದೆ ವಿಶಾಲವಾಗಿ ಹರಡಿದ್ದ ಯುದ್ಧ ಮೈದಾನವನ್ನು ಜಾಗರೂಕತೆಯಿಂದ ಸಮೀಕ್ಷಿಸತೊಡಗಿದನು. ಫ್ರೆಂಚ್ ಸೈನ್ಯ ನಮ್ಮ ಬಲಭಾಗದಲ್ಲಿ ಬಲು ಸನಿಹಕ್ಕೆ ಬಂದಿತ್ತು. ಕೀವ್ ತುಕಡಿ ನಿಂತಿದ್ದ ಉನ್ನತ ಸ್ಥಾನದ ಕೆಳಗೆ, ಅಂದರೆ ಹೊಳೆ ಹರಿಯುತ್ತಿದ್ದ ಕೋಚೆಯಲ್ಲಿ ಹೃದಯ ವಿದ್ರಾವಕಾರಿಯಾದ ಗುಂಡುಗಳ ಢಂಢಂ ಶಬ್ದ ಕೇಳಿಸುತ್ತಿತ್ತು. ಬಲಗಡೆ ಬಲುದೂರದಲ್ಲಿ, ಅಶ್ವದಳಗಳ ಆಚೆಕಡೆ ಪರಿವಾರದ ಅಧಿಕಾರಿ ಬಗ್ರೇಷನ್ನನಿಗೆ ಫ್ರೆಂಚ್ ತುಕಡಿ ನಮ್ಮ ಸೈನ್ಯವನ್ನು ಸೋಲಿಸುತ್ತಿದ್ದ ದೃಶ್ಯವನ್ನು ತೋರಿಸಿದನು. ಎಡಗಡೆಗೆ ದಿಗಂತದಲ್ಲಿ ಕಾಡು ಗಡಿಯಾಗಿತ್ತು. ಬಲ ಪಾರ್ಶ್ವದ ಸೈನ್ಯಕ್ಕೆ ಬೆಂಬಲ ನೀಡುವ ಸಲುವಾಗಿ ಕೇಂದ್ರದಿಂದ ಎರಡು ತುಕಡಿಗಳನ್ನು ರವಾನಿಸುವಂತೆ ಬಗ್ರೇಷನ್ ಆಜ್ಞಾಪಿಸಿದನು. ಈ ತುಕಡಿಗಳು ಕವಲಿದನಂತರ ಫಿರಂಗಿದಳ ನಿಸ್ಸಹಾಯಕ ಸ್ಥಿತಿಯಲ್ಲಿರಬೇಕಾಗುತ್ತದೆಂದು ಪರಿವಾರದ ಅಧಿಕಾರಿ ಧೈರ್ಯ ತಂದುಕೊಂಡು ರಾಜಕುಮಾರನಿಗೆ ತಿಳಿಸಿದನು. ಬಗ್ರೇಷನ್ ಅಧಿಕಾರಿಯ ಕಡೆಗೆ ಮುಖವಾಗಿ, ಮೌನವಾಗಿ ಅವನ ಕಡೆಗೆ ಮ್ಲಾನ ದೃಷ್ಟಿ ಹರಿಸಿದನು. ಅಧಿಕಾರಿಯ ಪ್ರತಿಕ್ರಿಯೆ ನ್ಯಾಯುವಾದದ್ದೆಂದೂ ಅದಕ್ಕೆ ಪ್ರತ್ಯುತ್ತರ ಸಾಧ್ಯವಿಲ್ಲವೆಂದೂ ಆಂಡ್ರೂವಿಗನ್ನಿಸಿತು. ಕಂದರ ಪ್ರದೇಶದ ಪಡೆವಳನಿಂದೊಂದು ಸಂದೇಶವನ್ನೂ, ಫ್ರೆಂಚರ ಸೈನ್ಯ ಅಪಾರ ಸಂಖ್ಯೆಯಲ್ಲಿ ಬರುತ್ತಲಿದ್ದು ತನ್ನ ಸೈನ್ಯ ಅಸ್ತವ್ಯಸ್ತವಾಗಿ ಕೀವ್ ಸಿಡಿಗುಂಡಾಳುಗಳ ಕಡೆಗೆ ಹಿಮ್ಮೆಟ್ಟುತ್ತಿತ್ತೆಂಬ ಸುದ್ದಿಯನ್ನೂ ಹೊತ್ತುಕೊಂಡು ಸಹಾಯಾಧಿಕಾರಿಯೊಬ್ಬ ಆ ಸಮಯಕ್ಕೆ ಸರಿಯಾಗಿ ನಾಗಾಲೋಟದಿಂದ ಬಂದನು. ರಾಜಕುಮಾರ ಬಗ್ರೇಷನ್

(ಮುಂದುವರಿಯುವುದು)

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

1. ಡಾ॥ ಕೃಷ್ಣಮೂರ್ತಿ ಚಂದರ್, ಅಧ್ಯಾಪಕ
ಇಂಗ್ಲಿಷ್ ವಿಭಾಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬
2. ಶಂಸ ಐತಾಳ
ನಂ. 616, 'ಚಂದನ', ಪಿ ಮತ್ತು ಟಿ ಬ್ಲಾಕ್, ಕುವೆಂಪುನಗರ,
ಮೈಸೂರು–೫೭೦ ೦೨೩
3. ಡಾ॥ ಸಿ. ಪಿ. ಕೃಷ್ಣಕುಮಾರ್
ಕನ್ನಡ ಪ್ರಾಧ್ಯಾಪಕ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬
4. ಲಕ್ಷ್ಮೀನಾರಾಯಣ ಅರೋರಾ, ಅಧ್ಯಾಪಕ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬
5. ಜಿ. ಎಸ್. ಶಿವರುದ್ರಪ್ಪ
"ಚೈತ್ರ" ನಂ. 867, 18ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–೫೬೦ ೦೭೦
6. ಜಿ. ಟಿ. ನಾರಾಯಣರಾವ್
"ಅತ್ರಿ", ನಂ. 8, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತಿಪುರಂ,
ಮೈಸೂರು–೫೭೦ ೦೦೯
7. ಕೆ. ಎಸ್. ಭಗವಾನ್
ಎಮ್ 10, ಹುಡ್ಕೊ ಮನೆಗಳು, ಕುವೆಂಪು ನಗರ, ಮೈಸೂರು–೫೭೦ ೦೨೩
8. ಟಿ. ಎಸ್. ಶಂಕರಲಿಂಗಪ್ಪ
ಆಡಳಿತಾಧಿಕಾರಿ
ರಾಜ್ಯ ಸಂಪನ್ಮೂಲ ಕೇಂದ್ರ, ಕೃಷ್ಣಮೂರ್ತಿಪುರಂ, ಮೈಸೂರು–೫೭೦ ೦೦೪
9. ರಾಜಾಹೊಸಮಾಳ
ಕಾರ್ಯಕ್ರಮ ಸಮನ್ವಯಾಧಿಕಾರಿ
ರಾಜ್ಯ ಸಂಪನ್ಮೂಲ ಕೇಂದ್ರ, ಕೃಷ್ಣಮೂರ್ತಿಪುರಂ, ಮೈಸೂರು–೫೭೦ ೦೦೪
10. ಪ್ರೊ॥ ಎ. ಎನ್. ಮೂರ್ತಿರಾವ್
25, ಕಾಳಿದಾಸ ರಸ್ತೆ, ವಿ. ವಿ. ಮೊಹಲ್ಲ, ಮೈಸೂರು–೫೭೦ ೦೦೨
11. ಪ್ರೊ॥ ದೇ. ಜವರೇಗೌಡ, ವಿಶ್ರಾಂತ ಉಪಕುಲಪತಿಗಳು
ಜಯಲಕ್ಷ್ಮೀಪುರಂ, ಮೈಸೂರು ೫೭೦ ೦೧೨

ವಿದ್ಯಾವಂತ ಕುಟುಂಬ ಸಮಾಜದ ಆಧಾರ
ವಿದ್ಯಾವಂತ ಮಹಿಳೆ ಕುಟುಂಬದ ಆಧಾರ

ಮಕ್ಕಳ ಶಿಕ್ಷಣ ಭಾವಿ ಪ್ರಜೆಗಳ ಶಿಕ್ಷಣ
ವಯಸ್ಕ ಶಿಕ್ಷಣ ಇಂದಿನ ಪ್ರಜೆಗಳ ಶಿಕ್ಷಣ

ಅನಕ್ಷರತೆಯಿಂದ ಪರಾವಲಂಬನೆ
ಸಾಕ್ಷರತೆಯಿಂದ ಸ್ವಾವಲಂಬನೆ



ಜಿ. ಎಸ್. ಶಿವರುದ್ರಪ್ಪ